



ಕರ್ನಾಟಕ ಕಾದಂಬರಿ ಸಂಗ್ರಹ

ನಾಗವರ್ಮ



languages all by himself, encouraged by the development of Oriental studies in the Ukraine in those days. I remember with special clarity Alexei Petrovich's account of how keen he had been on Gypsy culture and of how he had lived and roamed with a Gypsy clan, studying their language and customs and collecting and recording their floklore. At that time I read his works *Gypsies of the Ukraine* in Ukrainian and *The Gypsies of the USSR* in Russian, which he had written in the early 1930s. In them the young scholar dealt with the historical and cultural links of the Gypsies with the Indians and traced the relationship between the Gypsy language and the new Indian languages.

Alexei Petrovich spoke with great warmth and respect about his senior colleagues, the outstanding Russian scholars Academicians S.F. Oldenburg and F.I. Scherbatsky, connoisseurs of Sanskrit and students of ancient Indian culture.

It seems to me that working together with them for many years had promoted Barannikov's scholarly interests and served to combine his research on the past history of India with its present, and also medieval, new and present-day Indian culture. On several occasions I had the opportunity to attend the sittings of the Chair of Indian Philology he headed at Leningrad University's Department of Oriental Studies and the Indian Philology Department of the Academy of Sciences' Institute of Oriental Studies, the department Barannikov had also headed for

given a Russian voice to the *Ramayana* by Tulsidas. Chaturvedi was the same age as Barannikov, but he outlived him by many years and lived to a ripe old age. We had been close friends for many years and I am quite aware of the great contribution the Indian scholar has made to establishing understanding between our nations and propagating the scholarly heritage of Barannikov in India.

Barannikov's main work Tulsidas's *Ramayana* or *Ramacharitamanas: A sea of Rama's Feats* earned the author broad recognition and a fine reputation in India. He did the translation, and wrote the introductory article and the commentaries. It is a fundamental work, almost a thousand pages, which the scholar completed during World War II when he was living as an evacuee in a small place called Borovoye in Kazakhstan. Representing an important phase in the development of Soviet Indology, the work evoked a great and positive response in India. "What faith the author must have had in humanity, what faith in science and culture in

In view of Academician Barannikov's great contribution to the study and popularisation of the work of the great Tulsidas, his Indian admirers proclaimed him a

Soviet society were published … received a very good welco… commended by scholars. Bu… reviews based on dogmatic … approach to literature. Baranni… faultfinding and ill-intentioned … towards the introduction and … much to heart.

I remember he started o… Leningrad University, which I… words: "They sometimes repro… the medieval Indian Vaishna… years later when working on t… literature could I truly appre… daring and innovatory approa… *bhakti* poetry by stressing its h… cratic nature, which, in my o… opportunity for typological con… its trends with the world cultur… period.

Another merit of Barannik… promoted the development of S… exchange, stimulating Indian wri… popularise Russian and Soviet … Here is a most characteristic … years the well-known poet Har… had been translating Russian po… had accumulated quite a lot of… no hurry to publish it. Whe…

ಮುನ್ನುಡಿ

(ಮೊದಲನೆಯ ಮುದ್ರಣಕ್ಕೆ ಬರೆದದ್ದು)

ಕನ್ನಡ ಸಾಹಿತ್ಯವನ್ನು ಅಭಿವೃದ್ಧಿ ಪಡಿಸಬೇಕೆಂಬ ಘನೋದ್ದೇಶದಿಂದ ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿಗಳು ಒಂದು "ಕನ್ನಡ ಪ್ರಕಟನ ಸಮಿತಿ"ಯನ್ನು ನಿಯಮಿಸಿ, ಪ್ರತಿವರ್ಷವೂ ಪ್ರಸಿದ್ಧರಾದ ಗ್ರಂಥಕರ್ತರನ್ನು ನಿಷ್ಕರ್ಷಿಸಿ ಅವರಿಂದ ಗ್ರಂಥಗಳನ್ನು ಪ್ರಕಟನೆಗೆ ಸಿದ್ಧಪಡಿಸುವುದಕ್ಕೆ ತಕ್ಕ ಏರ್ಪಾಡನ್ನು ಮಾಡಿರುತ್ತಾರೆ.

ಈ ಗ್ರಂಥಗಳು ಎರಡು ಬಗೆಯವು—

೧. ಈ ನವೀನ ಕಾಲಕ್ಕೆ ಬೇಕಾದ ಮತ್ತು ಜನಸಾಮಾನ್ಯಕ್ಕೆ ಜ್ಞಾನವನ್ನು ಹರಡಬಲ್ಲ ಸಾಹಿತ್ಯ, ಕಲೆ, ವಿಜ್ಞಾನ, ತತ್ತ್ವ, ಚರಿತ್ರೆ, ಧರ್ಮ, ನೀತಿ, ಸಂಸ್ಕೃತಿ ಮುಂತಾದ ವಿಷಯಗಳನ್ನು ಲಲಿತವಾದ ಹೊಸಗನ್ನಡ ಶೈಲಿಯಲ್ಲಿ, ವಿವಾದಾಸ್ಪದವಲ್ಲದ ನಿಷ್ಕೃಷ್ಟವಾದ ರೀತಿಯಲ್ಲಿ ತಿಳಿಸತಕ್ಕುವು. ಇವು ಸ್ವತಂತ್ರ ಗ್ರಂಥಗಳಾಗಿರಬಹುದು ; ಅಥವಾ ಭಾಷಾಂತರಗಳಾಗಿರಬಹುದು ; ಅಥವಾ ಸಂಕಲನಗಳಾಗಿರಬಹುದು.

೨. ಕನ್ನಡದ ಪೂರ್ವದ ಸಾಹಿತ್ಯವನ್ನು ಜನರಲ್ಲಿಯೂ ವಿದ್ಯಾರ್ಥಿ ವರ್ಗದಲ್ಲಿಯೂ ಹೆಚ್ಚು ಪ್ರಚಾರಕ್ಕೆ ತರುವುದಕ್ಕಾಗಿ, ಉತ್ತಮ ಕಾವ್ಯಗಳ ಸಂಗ್ರಹಗಳು. ಇವು ವಿದ್ಯಾರ್ಥಿಗಳ ಪಾಠಕ್ಕೆ ಅನುಕೂಲವಾಗಿರಬೇಕು ; ಮೂಲಪ್ರತಿಗಳನ್ನು ಪರಿಶೋಧಿಸಿದ ಶುದ್ಧ ಪಾಠವನ್ನು ಒಳಕೊಂಡು, ಪೀಠಿಕೆ, ಶಬ್ದಕೋಶ, ಆವಶ್ಯಕವಾದ ಟಿಪ್ಪಣಿಗಳೊಡನೆ ಕೂಡಿರಬೇಕು.

ಹೀಗೆ ಏರ್ಪಟ್ಟು ಗ್ರಂಥಕರ್ತರಿಗೆ ಒಪ್ಪಿಸಿದ ಕೆಲಸಗಳಲ್ಲಿ ಈ "ಕರ್ಣಾಟಕ ಕಾದಂಬರೀ ಸಂಗ್ರಹ" ಎರಡನೆಯದು. ಈ ಸಂಗ್ರಹ ಕಾರ್ಯವನ್ನು ಕುರಿತು ಗುಣಜ್ಞರ ಪರಾಮರ್ಶೆಗಾಗಿ ಒಂದೆರಡು ಮಾತನ್ನು ಅರಿಕೆ ಮಾಡಿಕೊಳ್ಳಬೇಕಾಗಿದೆ.

ನಮ್ಮ ಪ್ರೌಢಕಾವ್ಯಗಳು ಸಾಧಾರಣವಾಗಿ ಬಹಳ ವಿಸ್ತಾರವಾಗಿರುವುದರಿಂದ ಅವುಗಳಲ್ಲಿ ಬಹು ಸ್ವಲ್ಪಭಾಗವನ್ನು ಮಾತ್ರ ಪರೀಕ್ಷೆ

ಗಳಿಗೆ ಪಠ್ಯ ಭಾಗವಾಗಿ ಇಡುವ ಪದ್ಧತಿ ರೂಢಿಗೆ ಬಂದಿದೆ. ಸಾಮಾನ್ಯ ಜನರಂತೂ ಈ ಕಾವ್ಯಗಳನ್ನು ಓದುವುದೇ ಅಪೂರ್ವ. ಇದು ವ್ಯಸನ ಕರವಾದ ಸಂಗತಿ. ಒಂದು ಕಾವ್ಯದ ಸೊಬಗನ್ನು, ಒಬ್ಬ ಕವಿಯ ಕವಿತಾಶಕ್ತಿಯನ್ನು, ತಿಳಿಯಬೇಕಾದರೆ ಕಾವ್ಯವನ್ನು ಸಂಪೂರ್ಣವಾಗಿ ಓದಬೇಕು ; ಇಲ್ಲ, ಉತ್ತಮ ಭಾಗಗಳೆಲ್ಲವನ್ನಾದರೂ ನೋಡಬೇಕು. ಈ ಸಮಷ್ಟಿದೃಷ್ಟಿ ಸಾಧ್ಯವಾಗುವಂತೆ, ಪಾಠಕ್ಕೆ ಪ್ರಮಾಣ ಅತಿಮೀರ ದಂತೆ, ಕಾವ್ಯಗಳನ್ನು ಅದರದರ ಸ್ವಭಾವಕ್ಕೆ ಉಚಿತವಾಗಿ ಸಂಗ್ರಹಿಸಿ ದರೆ ವಿದ್ಯಾರ್ಥಿಗಳಿಗೂ ಜನಸಾಮಾನ್ಯಕ್ಕೂ ಹಿತಕರವೂ ಪ್ರಯೋಜನ ಕರವೂ ಆಗಬಹುದೆಂಬ ನಂಬಿಕೆಯಿಂದ ಈ ಸಂಗ್ರಹಗಳನ್ನು ಮಾಡುತ್ತದೆ. ಇದರಲ್ಲಿ ಮುಖ್ಯ ಗಮನ ಕಥಾಸರಣಿ ಕೆಡಬಾರದು ; ಒಟ್ಟು ಕಥೆಯ ಸ್ವಾರಸ್ಯಕ್ಕೆ, ಪಾತ್ರನಿರೂಪಣಕ್ಕೆ, ಭಂಗಬರಬಾರದು ; ಅವಶ್ಯವಾದ ವರ್ಣನೆಯ ಮತ್ತು ವಿವರಣೆಯ ಸಾರ ಬಿಟ್ಟುಹೋಗಬಾರದು ; ಎಲ್ಲ ಕ್ಕಿಂತ ಪ್ರಧಾನವಾದದ್ದು, ಕವಿಯ ವ್ಯಕ್ತಿತ್ವಕ್ಕೆ, ಆತನ ವಿಶೇಷ ಪ್ರತಿ ಭೆಗೆ ಲೋಪ ಬರಕೂಡದು. ಇಷ್ಟನ್ನೂ ಸಾಧಿಸುವುದು ಸಂಗ್ರಹಕಾರನ ಕರ್ತವ್ಯ ; ಆದರೆ ಕಷ್ಟ. ನಿಸ್ಸಾರವಾದ, ಚರ್ವಿತಚರ್ವಣವಾದ ಭಾಗ ಗಳನ್ನು ಮನಃಕ್ಲೇಶವಿಲ್ಲದೆ ಬಿಟ್ಟರೂ ಆತನು ಆಗಾಗ್ಗೆ ಧರ್ಮಸಂಕಟಕ್ಕೆ ಸಿಕ್ಕದೆ ಇರಲಾರನು. ಯಾವ ಸುಂದರವಾದ ಪ್ರಕರಣವನ್ನು ಉಳಿಸಿ ಕೊಳ್ಳಲಿ, ಈ ಭಾವವನ್ನೂ ಚಮತ್ಕಾರವನ್ನೂ ಹೇಗೆ ಬಿಡಲಿ ಎಂದು ಆತನು ತನ್ನೊಡನೆಯೇ ಹೋರಾಡದೆ ಇರನು. ತನ್ನ ಸಂಸ್ಕಾರವನ್ನೂ ಅಭಿರುಚಿಯನ್ನೂ ಪ್ರಮಾಣವಾಗಿಟ್ಟುಕೊಂಡರೂ, ತನ್ನ ಸಂಗ್ರಹ ಬಹು ಜನಸಮ್ಮತವಾಗಬೇಕೆನ್ನುವುದನ್ನು ಮರೆಯನು. ಕೊನೆಗೆ ಸಹೃದಯರ ಕರುಣೆಗೆ ಸಂಗ್ರಹಕಾರನು ಶರಣನು.

ಭಗವತ್ಕೃಪೆಯಿಂದಲೂ ಕನ್ನಡಿಗರ ಸೌಹಾರ್ದಸಹಕಾರಗಳಿಂದಲೂ ಈ ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ ಬೆಳೆಯುತ್ತಾ ಬರಲಿ ಎಂದು ಪ್ರಾರ್ಥನೆ.

ಬೆಂಗಳೂರು,
೨೦ - ೬ - ೩೩.

ಬಿ. ಎಂ. ಶ್ರೀಕಂಠಯ್ಯ,
ಸಮಿತಿಯ ಅಧ್ಯಕ್ಷ ಮತ್ತು ಪ್ರಧಾನ ಸಂಪಾದಕ.

ವಿಷಯ ಸೂಚಿಕೆ.

ಪೀಠಿಕೆ

ಕವಿಯ ಚರಿತ್ರೆ

ಕಾವ್ಯಪಾಠಕ್ಕೆ ಕವಿಪರಿಚಯವು ಒಂದು ಆವಶ್ಯಕವಾದ ಅಂಗವೆಂಬುದು ಈಗಿನವರ ಮತ. ಹಿಂದಿನವರು ಹಾಗೆ ಭಾವಿಸಿರಲಿಲ್ಲ; ಆದಕಾರಣ ಅವರು ನಮ್ಮ ಕವಿಗಳ ಜೀವನ ಚರಿತ್ರೆಗಳನ್ನು ಬರೆದಿಡಲು ಪ್ರಯತ್ನಿಸಲಿಲ್ಲ. ಹೀಗೆ ನಮ್ಮಲ್ಲಿ ಕವಿಚರಿತ್ರೆಗಳ ಅಭಾವವಿದ್ದರೂ ಕವಿಗಳ ಕಾಲ, ದೇಶ, ಮತ ಮೊದಲಾದ ಸಂಗತಿಗಳನ್ನು ತಿಳಿದುಕೊಳ್ಳುವುದಕ್ಕೆ ಸಾಧನಗಳು ಇಲ್ಲದೆ ಹೋಗಿಲ್ಲ. ಅನೇಕ ವೇಳೆ ಕವಿಗಳೇ ಸ್ವವಿಷಯವನ್ನು ತಮ್ಮ ಗ್ರಂಥಗಳಲ್ಲಿ ತಕ್ಕಮಟ್ಟಿಗೆ ತಿಳಿಸಿರುತ್ತಾರೆ. ಅಲ್ಲದೆ, ಒಂದು ಕಾವ್ಯದಲ್ಲಿ ಪ್ರತಿಪಾದಿತವಾದ ವಿಷಯಗಳು, ಅದರ ಶೈಲಿ ಮೊದಲಾದುವುಗಳಿಂದ ಪಾಠಕರು ಅದನ್ನು ಬರೆದ ಕವಿಯ ವಿಚಾರವಾಗಿ ಕೆಲವು ಸಂಗತಿಗಳನ್ನು ಊಹಿಸಬಹುದು. ಇದೂ ಅಲ್ಲದೆ ಬೇರೆ ಗ್ರಂಥಗಳಿಂದಲೂ ಶಾಸನಗಳಿಂದಲೂ ಐತಿಹ್ಯಗಳಿಂದಲೂ ಕವಿಗಳ ವಿಷಯವಾಗಿ ಕೆಲವು ಅಂಶಗಳು ತಿಳಿದುಬರುವುದೂ ಉಂಟು. ಈ ಆಂತರ ಮತ್ತು ಬಾಹ್ಯ ಪ್ರಮಾಣಗಳಿಂದ ನಮ್ಮ ಕವಿಗಳ ಚರಿತ್ರೆಯನ್ನು ತಕ್ಕಮಟ್ಟಿಗೆ ತಿಳಿಯುವುದು ಸಾಧ್ಯವೆಂಬುದಕ್ಕೂ ಆ ವಿಧವಾದ ಚರಿತ್ರೆಯನ್ನು ತಿಳಿಯಲು ಈಗಿನ ಸಾಹಿತ್ಯ ಪಾಠಕರಿಗೆ ವಿಶೇಷ ಕುತೂಹಲವಿದೆಯೆಂಬುದಕ್ಕೂ ಶ್ರೀಮಾನ್ ರಾ. ನರಸಿಂಹಾಚಾರ್ಯರು ಬಹುಕಾಲದ ಪರಿಶ್ರಮದಿಂದ ರಚಿಸಿರುವ ಕರ್ಣಾಟಕ ಕವಿಚರಿತೆಯ ಮೂರು ದೊಡ್ಡ ದೊಡ್ಡ ಸಂಪುಟಗಳು ಸಾಕ್ಷಿಯಾಗಿವೆ.

ಕನ್ನಡದಲ್ಲಿ ಕಾದಂಬರಿಯನ್ನು ಬರೆದ ಕವಿ ನಾಗವರ್ಮ. ಈತನು ಸ್ವವಿಷಯವನ್ನು ಹೆಚ್ಚಾಗಿ ಹೇಳಿಕೊಂಡಿಲ್ಲ. ಹೇಳಿಕೊಂಡಿರುವ ಅಲ್ಪಸ್ವಲ್ಪವೂ ಸ್ಪಷ್ಟವಾಗಿರದೆ ಸಂದಿಗ್ಧವಾಗಿದೆ. ಬೇರೆ ಗ್ರಂಥಗಳಲ್ಲಾಗಲಿ ಶಾಸನಗಳಲ್ಲಾಗಲಿ ಈತನ ಕಾಲದೇಶಾದಿಗಳನ್ನು ತಿಳಿದುಕೊಳ್ಳಲು ಸಾಧಕವಾಗುವ ಸ್ಪಷ್ಟವಾದ, ನಿಷ್ಕೃಷ್ಟವಾದ ಯಾವ ಸಂಗತಿಯೂ ಇದು

ವರೆಗೂ ದೊರೆತಿಲ್ಲ. ಸಾಲದ್ದಕ್ಕೆ ಈತನು ಇದೊಂದೇ ಗ್ರಂಥವನ್ನು ರಚಿಸಿದನೆ, ಬೇರೆ ಗ್ರಂಥಗಳನ್ನೂ ರಚಿಸಿರುವನೆ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಹುಟ್ಟಿದ್ದು, ಇದುವರೆಗೂ ಸರ್ವ ಸಮ್ಮತವಾದ ಯಾವುದೊಂದು ಸಿದ್ಧಾಂತವೂ ಆಗಿಲ್ಲ. ಹೀಗಾಗಿ ಈ ಕವಿಯ ಚರಿತ್ರೆ ಯೇನೆಂಬುದನ್ನು ನಿರ್ಧರಿಸುವುದು ಕಷ್ಟಸಾಧ್ಯವಾಗಿ ಪರಿಣಮಿಸಿದೆ. ಇಲ್ಲಿ ಮೊದಲು, ಕಾದಂಬರಿಯಿಂದ ಕವಿಯ ವಿಷಯವಾಗಿ ಅರಿಯಬಹು ದಾದ ಸಂಗತಿಗಳನ್ನು ತಿಳಿಸಿ ಆ ಮೇಲೆ ಈ ಕವಿ ಬೇರೆ ಗ್ರಂಥಗಳನ್ನು ಬರೆದನೆ ಎಂಬ ವಿಷಯದಲ್ಲಿರುವ ಭಿನ್ನಮತಗಳನ್ನು ಸಂಗ್ರಹವಾಗಿ ಸಮಾಲೋಚಿಸಬೇಕಾಗಿದೆ.

ಕನ್ನಡ ಕವಿಗಳಲ್ಲಿ ಕೆಲವರು, ಮುಖ್ಯವಾಗಿ ಚಂಪೂಕಾವ್ಯಲೇಖಕರು ತಮ್ಮ ಗ್ರಂಥಗಳ ಉಪಕ್ರಮ ಉಪಸಂಹಾರ ಭಾಗಗಳನ್ನು ವಿಸ್ತಾರ ವಾಗಿ ಬರೆಯುವ ಸಂಪ್ರದಾಯವನ್ನು ಅನುಸರಿಸಿರುತ್ತಾರೆ. ಪಂಪ, ರನ್ನ, ಜನ್ನ ಮೊದಲಾದವರ ಕಾವ್ಯಗಳಲ್ಲಿ ಈ ಸಂಪ್ರದಾಯದ ಪರಿಚಯ ವನ್ನು ಪಡೆಯಬಹುದು. ಅವರು ಸ್ವವಿಷಯವನ್ನೂ ತಕ್ಕಮಟ್ಟಿಗೆ ತಿಳಿಸು ತ್ತಾರೆ. ಸಂಸ್ಕೃತದಲ್ಲಿ ಕಾದಂಬರಿಯನ್ನು ಬರೆದ ಬಾಣಭಟ್ಟನು ಹರ್ಷ ಚರಿತದಲ್ಲಿ ವಿಸ್ತಾರವಾಗಿಯೂ, ಕಾದಂಬರಿಯಲ್ಲಿ ಸಂಗ್ರಹವಾಗಿಯೂ ತನ್ನ ಚರಿತ್ರೆಯನ್ನು ಹೇಳಿಕೊಂಡಿರುವುದರಿಂದಂತೂ ಕನ್ನಡದಲ್ಲಿ ಕಾದಂ ಬರಿಯನ್ನು ಬರೆದ ಕವಿ ಮೇಲೆ ಹೇಳಿರುವ ಕವಿ ಸಂಪ್ರದಾಯವನ್ನು ಅನು ಸರಿಸುವನೆಂದು ನಿರೀಕ್ಷಿಸುವುದು ಸಹಜವಾಗಿದೆ. ಆದರೆ ಕರ್ಣಾಟಕ ಕಾದಂಬರಿಯಷ್ಟು ಸಂಗ್ರಹವಾದ ಉಪಕ್ರಮ ಉಪಸಂಹಾರ ಭಾಗ ಗಳುಳ್ಳ ಚಂಪೂ ಗ್ರಂಥವು ಮತ್ತೊಂದಿಲ್ಲವೆಂದೂ ಹೇಳಬಹುದು. ಕವಿ ಸ್ವವಿಷಯವನ್ನು ಹೇಳಿಕೊಳ್ಳುವ ವಿಚಾರವಂತಿರಲಿ ; ದೇವತಾಸ್ತೋತ್ರ, ಕಾವ್ಯವಿಚಾರ ಮುಂತಾದುವನ್ನು ಕೂಡ ಬಹು ಸಂಗ್ರಹವಾಗಿ ಮಾಡಿ ದ್ದಾನೆ. ಕಾವ್ಯದ ಮೊದಲನೆಯ ಪದ್ಯದಲ್ಲಿ ಶಿವನ ಜಟೆಯನ್ನಲಂಕರಿ ಸಿರುವ ಚಂದ್ರನನ್ನೂ ಎರಡನೆಯದರಲ್ಲಿ ಸರಸ್ವತಿಯನ್ನೂ ಸ್ತುತಿಸಿ, ಮೂರನೆಯ ಪದ್ಯದಲ್ಲಿ ಬಾಣನನ್ನೂ ನಾಲ್ಕು, ಐದು, ಆರನೆಯ ಪದ್ಯ ಗಳಲ್ಲಿ ಸಂಸ್ಕೃತ ಕನ್ನಡ ಕಾದಂಬರಿಗಳನ್ನೂ ಹೊಗಳಿದ್ದಾನೆ. ಬಳಿಕ ಏಳನೆಯ ಪದ್ಯದಲ್ಲಿ " ಕೃತಿಪತಿ ನರೇಂದ್ರಚಂದ್ರಂ, ಕೃತಿಯಂ ಪೇೞ್ದಂ

ಬುಧಾಬ್ಜವನ ಕಳಹಂಸಂ, ಕೃತಿ ಕಾದಂಬರಿ......" ಎಂದು ಸೂಚಿಸಿ ಕಥೆಯನ್ನು ಆರಂಭಿಸಿದ್ದಾನೆ. ಉಪಕ್ರಮಣಿಕಾ ಭಾಗದಲ್ಲಿ ಏಳು ಪದ್ಯಗಳಿದ್ದರೆ ಉಪಸಂಹಾರ ಭಾಗದಲ್ಲಿ ನಾಲ್ಕೇ ಪದ್ಯಗಳಿವೆ. ಆ ಭಾಗದ ಮೊದಲನೆಯ ಪದ್ಯದಲ್ಲಿ ಬಾಣನಿಂದ ಸಂಸ್ಕೃತದಲ್ಲಿ ರಚಿತವಾಗಿದ್ದ ಕಾದಂಬರಿ "ಕರ್ಣಾಟಕತ್ವಂಬೊರ್ದಿ....ರಾಜೇಂದ್ರ ಚಂದ್ರಾಂಕನೊಳ್ ಸಂಗತಿವೆತ್ತಾದಂ ತ್ರಿಲೋಕೀಸಹಚರಿಯೆನಿಸಿದುದು" ಎಂದು ಹೇಳಿ, ಮುಂದಿನ ಪದ್ಯದಲ್ಲಿ ಭೋಜರಾಜನು "ಇವು ಕಾಳಿಂಗಾಭಿಧೇಯ ಪ್ರವಿದಿತಮಿವು ಬಾಹ್ಲೀಕದೇಶೋದ್ಭವಮಶ್ವಂ....ಸತ್ಕೃತಿವನಿತೆಗಿವೌಚಿತ್ಯಮೆಂದಿತ್ತಂ" ಎಂದು ತಿಳಿಸಿದ್ದಾನೆ. ಮುಂದೆ ಒಂದು ಮಂಗಳ ಪದ್ಯವನ್ನು ಹೇಳಿ, ಆಮೇಲೆ ತನ್ನ ಕಾವ್ಯದ ಶ್ರೇಷ್ಠತೆಯನ್ನು ಒಂದು ಪದ್ಯದಲ್ಲಿ ಹೊಗಳಿ ಗ್ರಂಥವನ್ನು ಪರಿಸಮಾಪ್ತಿ ಮಾಡಿದ್ದಾನೆ. ಕಾವ್ಯದ ಪೂರ್ವಭಾಗದ ಕೊನೆಯಲ್ಲಾಗಲಿ ಉತ್ತರಭಾಗದ ಕೊನೆಯಲ್ಲಾಗಲಿ ಚಂಪೂಕಾವ್ಯಗಳ ಆಶ್ವಾಸಾಂತ ಗದ್ಯದಂಥ ಗದ್ಯವು ಕೂಡ ಇಲ್ಲ. ಕವಿಯ ಹೆಸರು ಗ್ರಂಥಾಂತ್ಯದ ಎರಡು ಪದ್ಯಗಳಲ್ಲಿ ಉಕ್ತವಾಗಿದೆ.

ಮೇಲೆ ಹೇಳಿರುವುದರಿಂದ ಕವಿಯ ವಿಷಯವಾಗಿ ತಿಳಿದುಬರುವ ಸಂಗತಿಗಳಾವುವೆಂದರೆ—

೧. "ಕೃತಿಯಂ ಪೇಟ್ದಂ ಬುಧಾಬ್ಜವನ ಕಳಹಂಸಂ" ಎಂದು ಹೇಳಿರುವುದರಿಂದ ಈ ಕವಿಗೆ "ಬುಧಾಬ್ಜವನ ಕಳಹಂಸ"ನೆಂಬ ಅಥವಾ ಅದಕ್ಕೆ ಸಮಾನಾರ್ಥಕವಾದ ಒಂದು ಬಿರುದಿದ್ದಿರಬೇಕು.

೨. "ಕೃತಿಪತಿ ನರೇಂದ್ರ ಚಂದ್ರಂ" ಎಂಬುದರಿಂದ ಕವಿಗೆ ನರೇಂದ್ರಚಂದ್ರ ಅಥವಾ ಚಂದ್ರನೆಂಬ ರಾಜನು ಆಶ್ರಯದಾತನಾಗಿದ್ದನೆಂದು ಅನುಮಾನಿಸಲು ಅವಕಾಶವಾಗುತ್ತದೆ. ಕಾದಂಬರಿ "ಕರ್ಣಾಟಕತ್ವಂಬೊರ್ದಿ **ರಾಜೇಂದ್ರ ಚಂದ್ರಾಂಕನೊಳ್ ಸಂಗತಿವೆತ್ತು** ತ್ರಿಲೋಕೀಸಹಚರಿಯೆನಿಸಿದುದು" ಎಂಬೀ ಹೇಳಿಕೆಯು ಈ ಅನುಮಾನವನ್ನು ಬಲಪಡಿಸುತ್ತದೆ. ಇದೂ ಅಲ್ಲದೆ ಕಾವ್ಯಾರಂಭದ ಮಂಗಳ ಪದ್ಯವೂ ಈ ಅನುಮಾನಕ್ಕೆ ಉಪಷ್ಟಂಭಕವಾಗುತ್ತದೆ. ಕಾವ್ಯಾರಂಭದಲ್ಲಿ ಕವಿ ಸಂಪ್ರದಾಯದಂತೆ ತ್ರಿಮೂರ್ತಿಗಳಲ್ಲೊಬ್ಬನನ್ನು ಸ್ತುತಿಸದೆ

ಚಂದ್ರನನ್ನು ಸ್ತುತಿಸಿದ್ದಾನೆ. ದೇವತಾಸ್ತೋತ್ರ ಭಾಗದಲ್ಲಿ ಪ್ರಕಾರಾಂತರವಾಗಿ, ಶ್ಲೇಷೆಯಿಂದಲೋ ಬೇರೆ ವಿಧವಾಗಿಯೋ, ತಮ್ಮ ರಾಜರನ್ನು ಸ್ತುತಿಸುವ ಸಂಪ್ರದಾಯವು ಕೆಲವು ಕನ್ನಡ ಕವಿಗಳಲ್ಲಿ ಕಂಡು ಬರುತ್ತದೆ. ಈ ಕಾವ್ಯದಲ್ಲಿಯೂ ನಾಗವರ್ಮನು ತನಗೆ ಆಶ್ರಯದಾತನಾದ ಚಂದ್ರನೆಂಬ ರಾಜನನ್ನು ಗ್ರಂಥಾದಿಯ ಮಂಗಳ ಪದ್ಯದಲ್ಲಿ ದೇವತಾಸ್ತೋತ್ರದ ವ್ಯಾಜದಿಂದ ಸ್ತುತಿಸಿರುವನೆಂದು ಊಹಿಸುವುದು ತಪ್ಪಾಗಲಾರದು. ಆದಕಾರಣ ಈ ಕವಿಗೆ ಚಂದ್ರನೆಂಬ ರಾಜನು[1] ಪೋಷಕನಾಗಿದ್ದನೆಂದು ಇಟ್ಟುಕೊಳ್ಳಬಹುದು.

೩. ಭೋಜರಾಜನು ಕವಿಗೆ ಕೆಲವು ಜಾತ್ಯಶ್ವಗಳನ್ನು ಕೊಟ್ಟಂತೆ ಹೇಳಿರುವುದರಿಂದ ಈ ಕವಿ ಭೋಜನ ಕಾಲದಲ್ಲಿದ್ದನೆಂದು ಗೊತ್ತಾಗುತ್ತದೆ. ಇಲ್ಲಿ ಉಕ್ತನಾದ ಭೋಜನು ಪ್ರಸಿದ್ಧನಾದ ಧಾರಾಪುರದ ಭೋಜನೆಂದು ಕವಿಚರಿತಕಾರರೂ ಇತರ ವಿದ್ವಾಂಸರೂ ಅಭಿಪ್ರಾಯಪಟ್ಟಿರುತ್ತಾರೆ. ಇದು ನಿಜವಾದ ಪಕ್ಷದಲ್ಲಿ ಈ ಕವಿ ೧೧ನೆಯ ಶತಮಾನದಲ್ಲಿದ್ದನೆಂದು ನಿಶ್ಚಿತವಾಗುತ್ತದೆ.

೪. ಕವಿಗಳಿಗೆ ರಾಜರು ಗ್ರಾಮಗಳನ್ನೋ ಧನಕನಕ ವಸ್ತ್ರಾದಿಗಳನ್ನೋ ಬಹುಮಾನವಾಗಿ ಕೊಡುವುದು ಸಾಮಾನ್ಯವಾಗಿ ಸಂಪ್ರದಾಯವಾಗಿದೆ. ಹಾಗಲ್ಲದೆ ಭೋಜನು ತನಗೆ ಜಾತ್ಯಶ್ವಗಳನ್ನು ಬಹುಮಾನವಾಗಿ ಕೊಟ್ಟಂತೆ ಕವಿ ಹೇಳಿಕೊಂಡಿರುವುದರಿಂದ ಈ ನಾಗವರ್ಮನು ಯುದ್ಧವೀರನಾಗಿದ್ದಿರಬೇಕು ಎಂಬ ಅನುಮಾನಕ್ಕೆ ಆಸ್ಪದವಿದೆ.

೫. ಕವಿ ತನ್ನ ಮತವಾವುದೆಂಬುದನ್ನು ಹೇಳಿಕೊಂಡಿಲ್ಲ. ಕಾದಂಬರಿಯ ಮತಧರ್ಮದ ಆವರಣವನ್ನು ನೋಡಿದರೆ ಈತನು ಬ್ರಾಹ್ಮಣನೆಂದೂ ಶಿವೋಪಾಸಕನೆಂದೂ ತೋರುತ್ತದೆ. ಇವನು ಅನ್ಯಮತೀಯನೆಂಬುದಕ್ಕಂತೂ ಈ ಗ್ರಂಥದಲ್ಲಿ ಲೇಶವೂ ಪ್ರಮಾಣ ದೊರೆಯುವುದಿಲ್ಲ.

---

1 ಇವನು ಬನವಾಸಿಯ ನಾಗರಖಂಡವನ್ನು ಆಳುತ್ತಿದ್ದ ಸಾಮಂತ ಚಂದ್ರನೆಂದೂ ಕಾದಂಬರಿ ೧೦೧೪ರಲ್ಲಿ ಅಥವಾ ಅದಕ್ಕೆ ೨-೩ ವರುಷ ಹಿಂದೆ ಹುಟ್ಟಿದ್ದಿರಬೇಕೆಂದೂ ಶ್ರೀಮಾನ್ ಎಚ್. ಚೆನ್ನಕೇಶವಯ್ಯಂಗಾರ್ಯರು ಅಭಿಪ್ರಾಯಪಡುತ್ತಾರೆ (ಕ. ಸಾ. ಪರಿಷತ್ಪತ್ರಿಕೆ, xiv—೩). ಇದು ವಿಮರ್ಶಾರ್ಹವಾದ ಸಂಗತಿ.

ಈ ಕವಿ ಬೇರೆ ಗ್ರಂಥಗಳನ್ನೂ ಬರೆದಿರುವ ಪಕ್ಷದಲ್ಲಿ ಅವುಗಳಿಂದಲೂ ಈತನ ವಿಷಯವಾಗಿ ಕೆಲವು ಸಂಗತಿಗಳು ಗೊತ್ತಾಗಬಹುದು. ಆದಕಾರಣ ಈತನು ಬೇರೆ ಗ್ರಂಥಗಳನ್ನು ಬರೆದನೆ ಎಂಬುದನ್ನು ನೋಡೋಣ. ಕಾದಂಬರಿಯಂತೆಯೇ ಛಂದೋಂಬುಧಿ, ಕಾವ್ಯಾವಲೋಕನ, ಭಾಷಾಭೂಷಣ, ವಸ್ತುಕೋಶ — ಈ ಗ್ರಂಥಗಳಲ್ಲಿಯೂ ಗ್ರಂಥಕರ್ತನ ಹೆಸರು ನಾಗವರ್ಮನೆಂದು ಉಕ್ತವಾಗಿದೆ. ಬಹುಶಃ ಈ ನಾಮಸಾದೃಶ್ಯದ ಆಧಾರದಿಂದ ಡಾ॥ ಕಿಟ್ಟಲ್, ಬಿ. ಮಲ್ಲಪ್ಪನವರು ಮೊದಲಾದ ವಿದ್ವಾಂಸರು ಈ ಗ್ರಂಥಗಳೆಲ್ಲವೂ ಒಬ್ಬ ಕವಿಯಿಂದ ರಚಿತವಾದುವೆಂದು ನಿರ್ಣಯಿಸಿದ್ದರು. ಈ ಅಭಿಪ್ರಾಯವು ತಪ್ಪೆಂದೂ ಕಾದಂಬರಿ ಛಂದೋಂಬುಧಿಗಳನ್ನು ರಚಿಸಿದವನು ಒಬ್ಬ ನಾಗವರ್ಮನೆಂದೂ ಮಿಕ್ಕ ಮೂರನ್ನು ಬರೆದವನು ಬೇರೊಬ್ಬ ನಾಗವರ್ಮನೆಂದೂ ಶ್ರೀಮಾನ್ ರಾ. ನರಸಿಂಹಾಚಾರ್ಯರವರು ಕರ್ಣಾಟಕ ಕವಿಚರಿತೆಯ ಪ್ರಥಮ ಸಂಪುಟದಲ್ಲಿ (ಪುಟಗಳು ೫೨–೫೪) ಕೆಲವು ಕಾರಣಗಳನ್ನು ಕೊಟ್ಟು ಸಿದ್ಧಾಂತಮಾಡಿದರು. ಈ ಸಿದ್ಧಾಂತವನ್ನು ಖಂಡಿಸಿ ಡಾ॥ ಎ. ವೆಂಕಟಸುಬ್ಬಯ್ಯನವರು ಮೇಲೆ ಹೇಳಿದ ಐದು ಗ್ರಂಥಗಳನ್ನೂ ಒಬ್ಬ ನಾಗವರ್ಮನೇ ರಚಿಸಿದನೆಂದು "ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರ" ಎಂಬ ಗ್ರಂಥದಲ್ಲಿ (ಪುಟಗಳು ೧೫೨–೧೮೧) ಸಿದ್ಧಾಂತಮಾಡಿದರು. ಡಾ॥ ವೆಂಕಟಸುಬ್ಬಯ್ಯನವರ ಈ ವಾದವನ್ನು ಕವಿಚರಿತೆಯ ಮೂರನೆಯ ಸಂಪುಟದ ಅವತರಣಿಕೆಯಲ್ಲಿ (ಪುಟಗಳು ೫೪–೫೮) ಸಮಾಲೋಚಿಸಿ, "ಅಯ್ಯನವರು ತಮ್ಮ ಕಲ್ಪನೆಯನ್ನು ಸ್ಥಾಪಿಸುವುದಕ್ಕಾಗಿ ಮಾಡಿರುವ ಪ್ರಯತ್ನವು ನಿಷ್ಫಲ" ಎಂದು ಶ್ರೀಮಾನ್ ರಾ. ನರಸಿಂಹಾಚಾರ್ಯರು ಅಭಿಪ್ರಾಯಪಟ್ಟು ನಾಗವರ್ಮರಿಬ್ಬರೆಂಬ ತಮ್ಮ ಹಿಂದಿನ ಸಿದ್ಧಾಂತವನ್ನೇ ಎತ್ತಿ ಹಿಡಿದಿದ್ದಾರೆ. ಅಷ್ಟೇ ಅಲ್ಲದೆ, ಆ ಸಂಪುಟದ "ಗ್ರಂಥ ಶುದ್ಧಿ" ಎಂಬ ಭಾಗದಲ್ಲಿ "ಕಾದಂಬರಿಯನ್ನು ಬರೆದ ನಾಗವರ್ಮನು ಛಂದೋಂಬುಧಿಯನ್ನು ಬರೆದ ನಾಗವರ್ಮನಿಗಿಂತ ಬೇರೊಬ್ಬನಾಗಿರಬಹುದೋ ಎಂಬ ಸಂದೇಹಕ್ಕೆ ಅವಕಾಶವಿರುವಂತೆ ತೋರುತ್ತದೆ" ಎಂದು ಹೇಳಿ, ನಾಗವರ್ಮನೆಂಬ ಹೆಸರಿನ ಕವಿಗಳಿರುವುದು ಇಬ್ಬರು ಮಾತ್ರವೇ ಅಲ್ಲ, ಮೂವರಿದ್ದರೂ

ಇರಬಹುದು ಎಂದು ಸೂಚಿಸಿದ್ದಾರೆ. ಶ್ರೀಮಾನ್ ಎಚ್. ಚನ್ನಕೇಶವಯ್ಯಂಗಾರ್ಯರು ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆಯ ೧೪ನೆಯ ಸಂಪುಟದ ೩ನೆಯ ಸಂಚಿಕೆಯಲ್ಲಿ (ಪುಟಗಳು ೧೭೭–೧೮೧) ಛಂದೋಂಬುಧಿ ಕಾದಂಬರಿಗಳನ್ನು ಬರೆದ ಕವಿಗಳು ಬೇರೆ ಬೇರೆ ಎಂದು ನಿರ್ಣಯಿಸಲು ಪ್ರಯತ್ನಿಸಿರುತ್ತಾರೆ. ಹೀಗೆ ನಾಗವರ್ಮನೆಂಬ ಹೆಸರಿನ ಕವಿ ಇರುವುದು ಒಬ್ಬನು, ಇಬ್ಬರು, ಮೂವರು ಎಂದು ಮೂರು ಮತಗಳಿವೆ.

ಇಲ್ಲಿ ಮೊದಲು, ಕಾದಂಬರಿಯನ್ನು ಬರೆದ ಕವಿಯೇ ಛಂದೋಂಬುಧಿಯನ್ನೂ ಬರೆದನೆ ಎಂಬುದನ್ನು ವಿಮರ್ಶಿಸೋಣ. ಈ ಎರಡು ಗ್ರಂಥಗಳೂ ಏಕಕರ್ತೃಕಗಳೆಂದು ಶ್ರೀಮಾನ್ ರಾ. ನರಸಿಂಹಾಚಾರ್ಯರು ಕವಿಚರಿತೆಯ ಪ್ರಥಮ ಸಂಪುಟದಲ್ಲಿ ತಿಳಿಸಿರುವರು. ಆದರೆ ಅವರು ಅಲ್ಲಿ ಈ ವಿಷಯವನ್ನು ಚರ್ಚಿಸಿಲ್ಲ. ಅವರ ಮುಖ್ಯ ಗಮನವಿದ್ದದ್ದು ಕಾವ್ಯಾವಲೋಕನ ಭಾಷಾಭೂಷಣ ವಸ್ತುಕೋಶಗಳನ್ನು ಬರೆದವನು ಛಂದೋಂಬುಧಿಯನ್ನು ಬರೆದವನಿಂದ ಭಿನ್ನನು ಎಂದು ತೋರಿಸುವುದರಲ್ಲಿ ; ಆದ್ದರಿಂದ ಅದನ್ನು ವಿಮರ್ಶಿಸಿದ್ದಾರೆ. ಛಂದೋಂಬುಧಿ ಕಾದಂಬರಿಗಳೆರಡೂ ಸುಮಾರು ಒಂದೇ ಕಾಲದಲ್ಲಿ ಹುಟ್ಟಿದುವೆಂದು ತೋರಿಬಂದದ್ದರಿಂದ ಅವು ಏಕಕರ್ತೃಕಗಳಾಗಿರಬೇಕೆಂದು ಅಭಿಪ್ರಾಯಪಟ್ಟರು. ಆದ ಕಾರಣವೇ, ಆ ಗ್ರಂಥಗಳು ಬೇರೆ ಬೇರೆ ಕಾಲಗಳಲ್ಲಿ ಹುಟ್ಟಿದುವು ಎಂದು ತೋರಿದ ಕೂಡಲೆ ಅವು ಭಿನ್ನ ಕರ್ತೃಕಗಳೆಂಬ ಸಂಶಯಕ್ಕೆ ಅವಕಾಶವಿದೆ ಎಂದು ಒಪ್ಪಿಕೊಂಡರು. ಸಂಶಯಕ್ಕೆಡೆಯಿವೆ ಎಂದು ಒಪ್ಪಿಕೊಂಡರೇ ಹೊರತು ತಮ್ಮ ಅಭಿಪ್ರಾಯವನ್ನು ಪೂರ್ತಿಯಾಗಿ ಬದಲಾಯಿಸಲಿಲ್ಲ. ಇದು ನ್ಯಾಯವಾದದ್ದೇ. ಏಕೆಂದರೆ, ಒಂದು ಗ್ರಂಥವು ಹುಟ್ಟಿದ ಕಾಲಕ್ಕೂ ಇನ್ನೊಂದು ಹುಟ್ಟಿದ ಕಾಲಕ್ಕೂ ನಡುವೆ ೨೦, ೩೦ ವರುಷಗಳ ಅಂತರವಿದ್ದರೆ ಅವು ಒಬ್ಬ ಕವಿಯಿಂದಲೇ ರಚಿತವಾಗಿರತಕ್ಕದ್ದು ಅಸಾಧ್ಯವೇನೂ ಅಲ್ಲ. (ಉದಾಹರಣೆಗೆ—ಜನ್ನನ ಯಶೋಧರಚರಿತೆಯ ಕಾಲಕ್ಕೂ ಅನಂತನಾಥಪುರಾಣದ ರಚನೆಯ ಕಾಲಕ್ಕೂ ನಡುವೆ ೨೧ ವರುಷಗಳ ಅಂತರವಿದೆ.) ಆದಕಾರಣ ಕವಿಚರಿತಕಾರರ ಅಭಿಪ್ರಾಯದಂತೆ ಇದು ಇನ್ನೂ ವಿಚಾರಾರ್ಹವಾದ ಸಂಗತಿಯಾಗಿ ಉಳಿದಿದೆ.

ಶ್ರೀಮಾರ್ ಎಚ್. ಚೆನ್ನಕೇಶವಯ್ಯಂಗಾರ್ಯರು ಇವು ಭಿನ್ನಕರ್ತೃಕಗಳೆಂಬುದಕ್ಕೆ ಕೊಟ್ಟಿರುವ ಕೆಲವು ಕಾರಣಗಳು ಅಷ್ಟೇನೂ ಪ್ರಬಲವಾದುವೆಂದು ತೋರುವುದಿಲ್ಲ. ಉದಾಹರಣೆಗೆ— (೧) ಛಂದೋಂಬುಧಿಯಲ್ಲಿ ತನ್ನ ಜಾತಿ, ವಂಶಪರಂಪರೆ, ಪೋಷಕ ಮುಂತಾದ ಪ್ರವರಗಳನ್ನು ಸ್ಪಷ್ಟವಾಗಿ ಹೇಳಿಕೊಂಡವನು ಕಾದಂಬರಿಯಲ್ಲಿ ಏಕೆ ಹೇಳಿಕೊಳ್ಳಲಿಲ್ಲ ಎಂದು ಆಕ್ಷೇಪಿಸುತ್ತಾರೆ. ಇದಕ್ಕೆ ಉತ್ತರವನ್ನು ಯಾರು ಹೇಳಬಹುದು? ಭಾರತದಲ್ಲಿ ತನ್ನ ವಂಶ ಪರಂಪರೆಯನ್ನು ಹೇಳಿಕೊಂಡ ಪಂಪನು ಆದಿಪುರಾಣದಲ್ಲಿ ಏಕೆ ಹೇಳಿಕೊಳ್ಳಲಿಲ್ಲ? ಇದರಿಂದ ಆ ಪಂಪನೇ ಬೇರೆ, ಇವನೇ ಬೇರೆ ಎಂದು ಹೇಳಲಾಗುತ್ತದೆಯೆ? (೨) ಇವೆರಡು ಗ್ರಂಥಗಳ ಭಾಷಾಶೈಲಿಗಳು ಬೇರೆ ಬೇರೆ ಎಂದು ಹೇಳುತ್ತಾರೆ. ಇದು ಹಿಡಿತಕ್ಕೆ ಸಿಕ್ಕತಕ್ಕ ಮಾತಲ್ಲ. ಅವರು ಕೊಡುವ ಇನ್ನೂ ಕೆಲವು ಕಾರಣಗಳು ಪ್ರಬಲವಾದ ಸಂಶಯವನ್ನು ಉಂಟುಮಾಡುವುವೇ ಹೊರತು ಯಾವುದೊಂದು ಸಿದ್ಧಾಂತವನ್ನು ಮಾಡುವುದಕ್ಕೂ ಸಾಕಾದ, ಪ್ರಬಲವಾದ, ನಿಷ್ಕೃಷ್ಟವಾದ, ಪ್ರಮಾಣವಾಗಲಾರವು. ಆದಕಾರಣ ಇಲ್ಲಿ ಅವೆರಡು ಗ್ರಂಥಗಳೂ ಏಕಕರ್ತೃಕಗಳೇ ಭಿನ್ನಕರ್ತೃಕಗಳೇ ಎಂಬ ಪ್ರಶ್ನೆಗೆ ಸಾಧಕ ಬಾಧಕಗಳಾಗಿರುವ ಮುಖ್ಯ ಸಂಗತಿಗಳನ್ನು ಪರ್ಯಾಲೋಚಿಸುವುದು ಆವಶ್ಯಕವಾಗಿದೆ. ಹಾಗೆ ಮಾಡುವುದಕ್ಕೆ ಮೊದಲು ಛಂದೋಂಬುಧಿಯಿಂದ ಅದನ್ನು ಬರೆದ ಕವಿಯ ವಿಷಯವಾಗಿ ತಿಳಿದುಬರುವ ಮುಖ್ಯ ಸಂಗತಿಗಳನ್ನು ಸಂಗ್ರಹಿಸಬೇಕಾಗಿದೆ.

ಛಂದೋಂಬುಧಿಯನ್ನು ಬರೆದ ಕವಿ ಸ್ವವಿಷಯವನ್ನು ತಕ್ಕಮಟ್ಟಿಗೆ ಹೇಳಿಕೊಂಡಿದ್ದಾನೆ. ಅಲ್ಲದೆ, ಅಲ್ಲಲ್ಲಿ ಪ್ರಾಸಂಗಿಕವಾಗಿ ಬರುವ ಆತನ ಮಾತುಗಳಿಂದ ಆತನ ವಿಷಯವನ್ನು ಕುರಿತು ಕೆಲಮಟ್ಟಿಗೆ ಊಹಿಸುವುದಕ್ಕೂ ಅವಕಾಶವಿದೆ. ಛಂದೋಂಬುಧಿಯಿಂದ ಅದನ್ನು ಬರೆದ ಕವಿಯ ವಿಷಯವಾಗಿ ತಿಳಿದುಬರುವ ಸಂಗತಿಗಳೇನೆಂದರೆ—

---

[1] ಇದುವರೆಗೆ ದೊರೆತಿರುವ ಹಸ್ತಲಿಖಿತ ಪ್ರತಿಗಳು ಒಂದೊಂದು ಒಂದೊಂದು ತೆರನಾಗಿದ್ದು ಎಷ್ಟೋ ಪ್ರಕ್ಷಿಪ್ತ ಪದ್ಯಗಳು ಈ ಪ್ರತಿಗಳಲ್ಲಿ ಸೇರಿಹೋಗಿರುವಂತೆ ಗೊತ್ತಾಗಿರುವುದರಿಂದ ಛಂದೋಂಬುಧಿಯ ಶುದ್ಧ ಪಾಠವು ಯಾವುದೆಂಬುದನ್ನು ಕಂಡುಹಿಡಿಯುವುದು ಪ್ರಕೃತಸ್ಥಿತಿಯಲ್ಲಿ ಕಷ್ಟಸಾಧ್ಯವಾಗಿದೆ. ಕರ್ಣಾಟಕ ಕಾವ್ಯ ಕಲಾನಿಧಿ ಗ್ರಂಥಮಾಲೆಯಲ್ಲಿ ಮುದ್ರಿತವಾದ ಪುಸ್ತಕವನ್ನು ಆಧಾರವಾಗಿಟ್ಟುಕೊಂಡು ಇಲ್ಲಿ ವಿಚಾರ ಮಾಡಲಾಗಿದೆ.

೧. ಈ ಕವಿ ಕೊಟ್ಟಿರುವ ವಂಶಪರಂಪರೆಯಿಂದ ಈತನ ಪೂರ್ವಿಕರು ವೈದಿಕ ಬ್ರಾಹ್ಮಣರೆಂದು ಗೊತ್ತಾಗುತ್ತದೆ. ಅದರ ಸಾರಾಂಶವಿದು—ವೆಂಗಿವಿಷಯದ ಸಪ್ತಗ್ರಾಮಗಳಲ್ಲಿ ವೆಂಗಿಪಟು ಪ್ರಖ್ಯಾತವಾದದ್ದು. ಆ ವೆಂಗಿಪಟುವಿನಲ್ಲಿ **ಅಂಬುಜ ಸಂಭವನಂತೆ** ವಿದಗ್ಧನಾದ ವೆಣ್ಣಮಯ್ಯನು "**ವೇದದೊಳ**ನುಗತಮೆನಿಸುವ ವೇದಗಳೊಳ್ ನಿಪುಣನಾಗಿ ನೆಗಟ್ದಂ." ಆತನು **ಅಂಬುಜ ಸಂಭವಮೂರ್ತಿ,** ಕೌಂಡಿನ್ಯ **ಗೋತ್ರಂ.** ಆತನ ಸತಿ ಕೌಂಡಿಕಬ್ಬೆ. ಆ ದಂಪತಿಗಳ ಮಗನಾದ ದಾಮಮಯ್ಯನು ಕವಿಯ ತಾತ. ಕವಿಯ ತಂದೆಯಾದ ವೆಣ್ಣಮಯ್ಯನು "ಲೌಕಿಕ **ವೈದಿಕ** ಶಾಸ್ತ್ರ ವಿವೇಕ ಕಲಾಭಿಜ್ಞನೆನಿಸಿ **ನೆಗಟ್ದಂ.**"

೨. ಛಂದೋಂಬುಧಿಯ ಪ್ರಥಮಾಧಿಕಾರದ ೩೫ನೆಯ ಪದ್ಯದಲ್ಲಿ ಕವಿ ತನ್ನನ್ನು "ಸಯ್ಯಡಿಯ ನಾಗವರ್ಮ"ನೆಂದು ವಿಶೇಷಿಸಿಕೊಂಡಿರುವುದರಿಂದಲೂ ಗ್ರಂಥಾದಿಯ ದೇವತಾಸ್ತೋತ್ರ ಭಾಗದ ಒಂದು ಪದ್ಯದಲ್ಲಿ "ಸಯ್ಯಡಿಯ ಪಿನಾಕಿ ಕೂರ್ತು ನಮಗೀಗೆ ವರಂಗಳನುತ್ಸವಂಗಳಂ" ಎಂದು ಹೇಳಿರುವುದರಿಂದಲೂ ಈತನು ಸಯ್ಯಡಿಯಲ್ಲಿ ವಾಸಿಸುತ್ತಿದ್ದಂತೆ ತೋರುತ್ತದೆ.

೩. ತನ್ನ ಗುಣಗಳನ್ನು ಹೇಳಿಕೊಳ್ಳುವಾಗ "ಕುಂತೀಪುತ್ರಂ ಪೊಣರ್ದ ರಣದೊಳ್" ಎಂದು ಹೇಳಿಕೊಂಡಿರುವುದರಿಂದಲೂ ದುರ್ಗಾಸ್ತೋತ್ರಾವಸರದಲ್ಲಿ "ಭಗವತಿ ಕೂರ್ತು ಬೀರಸಿರಿಯೀಗೆ ಭುಜಾಸಿಗೆ ನಾಗವರ್ಮನಾ" ಎಂದು ಪ್ರಾರ್ಥಿಸಿರುವುದರಿಂದಲೂ ಈ ಕವಿ ಪಂಪನಂತೆ ಸೈನ್ಯದಲ್ಲಿ ಅಧಿಕಾರಿಯಾಗಿದ್ದು ಯುದ್ಧವೀರನಾಗಿದ್ದನೆಂದು ತೋರುತ್ತದೆ.

೪. ಅಧಿಕಾರಾಂತ್ಯ ಗದ್ಯದಲ್ಲಿ "ವಿಬುಧಜನ ಮನಃ ಪದ್ಮಿನೀ ರಾಜಹಂಸ ಶ್ರೀಮತ್ಕವಿರಾಜಹಂಸ ವಿರಚಿತಮಪ್ಪ ಛಂದೋಂಬುಧಿಯೊಳ್" ಎಂದಿರುವುದರಿಂದಲೂ ಮತ್ತು ಕವಿ ಅಲ್ಲಲ್ಲಿ (ಸಂಜ್ಞಾಧಿಕಾರ : ಪದ್ಯಗಳು ೯, ೧೧ ಇತ್ಯಾದಿ) ತನ್ನನ್ನು ಕವಿರಾಜಹಂಸನೆಂದುಕೊಂಡಿರುವುದರಿಂದಲೂ ಈತನಿಗೆ "ಕವಿರಾಜಹಂಸ" ನೆಂದು ಬಿರುದಿದ್ದಂತೆ ಗೊತ್ತಾಗುತ್ತದೆ.

೫. ಛಂದೋಂಬುಧಿಯ ಉಪಕ್ರಮಣಿಕಾ ಭಾಗದ ೨೭, ೨೮ನೆಯ ಪದ್ಯಗಳಿಂದ ಕವಿ ಜೈನನೆಂದು ಹೇಳಬೇಕಾಗುತ್ತದೆ. ಆ ಪದ್ಯಗಳು ಯಾವುವೆಂದರೆ—

ಅರಸಂ ರಕ್ಕಸಗಂಗಂ
ಗುರುಗಳ್ ನೆಗಟ್ದಜಿತವೀರಸೇನರ್ ದಯೆಯಿಂ
ಪೊರೆವ ನೃಪನಣ್ಣನೆನೆ ಮ
ಚ್ಚರಿಸುವರಾರ್ ನಾಕಿಯಿರುಳೊಳೇಂ ಪುಟ್ಟಿದನೇ

ಗಂಡರ ಮೂಕುತಿಯೆನಿಸಿದ
ಮಂಡಳಿಕರ ಮಂತ್ರಿ ಸಂಧಿವಿಗ್ರಹಿ ರಾಯಂ
ಕೊಂಡಾಡಿ ಪೊರೆದನೆನೆ ಧರೆ
ಕೊಂಡಾಡದೆ ಕೊಂಡುಕೊನೆಯದೇ ನಾಕಿಗನಂ

ಈ ಪದ್ಯಗಳಿಂದ ಕವಿಯ ಗುರು ಅಜಿತವೀರಸೇನನೆಂದೂ (ಕವಿ ಚರಿತೆಯಲ್ಲಿ "ಅಜಿತಸೇನದೇವರ್" ಎಂಬ ಪಾಠವಿದೆ) ಈ ಕವಿ ರಕ್ಕಸ ಗಂಗನ ಕಾಲದಲ್ಲಿ (ಸು. ೯೯೦ರಲ್ಲಿ) ಚಾವುಂಡರಾಯನಿಂದ ಪೋಷಿತ ನಾಗಿದ್ದನೆಂದೂ ತಿಳಿದು ಬರುತ್ತದೆ. ಆದರೆ ಈ ಪದ್ಯಗಳು ಕವಿರಚಿತ ವಾದುವೋ ಪ್ರಕ್ಷಿಪ್ತವಾದುವೋ ಎಂಬ ಸಂದೇಹಕ್ಕೆ ಅವಕಾಶವಿದೆ. ಹೇಗೆಂದರೆ—೧. ಕಿಟ್ಟೆಲ್ ಅವರು ಅಚ್ಚುಹಾಕಿದ ಛಂದೋಂಬುಧಿಯಲ್ಲಿ ಈ ಪದ್ಯಗಳು ದೊರೆಯುವುದಿಲ್ಲ; ಅವರಿಗೆ ದೊರೆತ ಹಸ್ತಲಿಖಿತ ಪ್ರತಿಗಳಲ್ಲಿ ಈ ಪದ್ಯಗಳು ಇರಲಿಲ್ಲವೆಂದು ತೋರುತ್ತದೆ; ಇದ್ದಿದ್ದರೆ ಕವಿಯ ಕಾಲವನ್ನು ಗೊತ್ತುಮಾಡಲು ಸಾಧಕಗಳಾದ ಈ ಪದ್ಯಗಳನ್ನು ಅವರು ಅಚ್ಚುಹಾಕದೆ ಬಿಡಲು ಕಾರಣವಿರಲಿಲ್ಲ. ಆದಕಾರಣ ಈ ಪದ್ಯ ಗಳು ಕೆಲವು ಪ್ರತಿಗಳಲ್ಲಿದ್ದು ಇನ್ನು ಕೆಲವು ಪ್ರತಿಗಳಲ್ಲಿ ಇಲ್ಲವೆಂದು ತೋರು ತ್ತದೆ. ಈ ಗ್ರಂಥದ ಹಸ್ತಲಿಖಿತ ಪ್ರತಿಗಳಲ್ಲಿ ಅನೇಕ ಪ್ರಕ್ಷಿಪ್ತ ಪದ್ಯ ಗಳು ಸೇರಿಹೋಗಿರುವುದರಿಂದ ಇವೂ ಪ್ರಕ್ಷಿಪ್ತವಾಗಿರುವುದು ಅಸಂಭವ ವೇನೂ ಅಲ್ಲ. ೨. ಕವಿ ಜೈನನೆಂಬುದಕ್ಕೆ ಈ ಪದ್ಯಗಳೆರಡನ್ನು ಬಿಟ್ಟರೆ ಈ ಗ್ರಂಥದಲ್ಲಿ ಆವ ಆಂತರ ಪ್ರಮಾಣವೂ ಇಲ್ಲ. (ಅಧಿಕಾರಾಂತ ಗದ್ಯ ಗಳಲ್ಲಿ ಭಿನ್ನ ಪಾಠಗಳಿರುವುದರಿಂದ ಅವನ್ನು ಪ್ರಮಾಣವಾಗಿ ಅಂಗೀಕರಿಸ ಲಾಗುವುದಿಲ್ಲ.) ಉದಾಹರಣೆಗೆ—(ಅ) ಗ್ರಂಥಾದಿಯಲ್ಲಿ ಜಿನಸ್ತುತಿ

ಯಿರದೆ ವಿಷ್ಣು, ಶಿವ ಮೊದಲಾದ ದೇವತೆಗಳ ಸ್ತೋತ್ರವಿದೆ. ಜೈನರಾದ ಪಂಪರನ್ನರ ಭಾರತ ಗದಾಯುದ್ಧಗಳಲ್ಲಿಯೂ ಹಾಗೆಯೇ ಇರುವುದೆಂದರೆ ಅವರು ಜೈನ ಮತಾನುಯಾಯಿಗಳಲ್ಲದ, ವೇದ ಮತಾವಲಂಬಿಗಳಾದ ರಾಜರಿಗಾಗಿ ಆ ಗ್ರಂಥಗಳನ್ನು ಬರೆದರು. ನಾಗವರ್ಮನು ಛಂದೋಂಬುಧಿಯನ್ನು ಯಾವ ರಾಜರಿಗಾಗಿಯೂ ಬರೆಯಲಿಲ್ಲ; ತನ್ನ ಹೆಂಡತಿಯನ್ನು ಉದ್ದೇಶಿಸಿ ಬರೆದಿರುತ್ತಾನೆ. ಆದಕಾರಣ ಪಂಪರನ್ನಾದಿಗಳಿಗಿದ್ದ ಕಾರಣವು ನಾಗವರ್ಮನಿಗಿಲ್ಲ. ಅಲ್ಲದೆ (ಆ) ಪಂಪರನ್ನರು ಜೈನರೆಂಬುದಕ್ಕೆ ಆಂತರಬಾಹ್ಯ ಪ್ರಮಾಣಗಳಿವೆ. ಉದಾಹರಣೆಗೆ—ಪಂಪನು ಭಾರತದಲ್ಲಿ ತನ್ನ ಪೂರ್ವಜರ ಚರಿತ್ರೆಯನ್ನು ಬರೆಯುವಾಗ ತನ್ನ ತಂದೆ ಜೈನಮತವನ್ನು ಅವಲಂಬಿಸಿದಂತೆ ಹೇಳಿಕೊಂಡಿದ್ದಾನೆ; ತಾನು ಜಿನಾಗಮವನ್ನು ಆದಿಪುರಾಣದಲ್ಲಿಯೂ ಲೌಕಿಕವನ್ನು ಭಾರತದಲ್ಲಿಯೂ ಬೆಳಗುವಂತೆ ತಿಳಿಸಿದ್ದಾನೆ. ನಾಗವರ್ಮನು ಜೈನನೆಂಬುದಕ್ಕೆ ಅಂಥ ಆಂತರ ಪ್ರಮಾಣವಾಗಲಿ, ಬಾಹ್ಯಪ್ರಮಾಣವಾಗಲಿ ಯಾವುದೂ ಇಲ್ಲ (ಇ) ಛಂದೋಂಬುಧಿಯ ಉದ್ದಕ್ಕೂ ಕವಿ ಬ್ರಾಹ್ಮಣನೆಂಬುದಕ್ಕೆ ಪ್ರಬಲವಾದ ಪ್ರಮಾಣಗಳು ದೊರೆಯುತ್ತವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಉದಾಹರಿಸಬಹುದು—ಕವಿ ತಾನು[1] "**ಪದ್ಮಜಂ** ಶಾಸ್ತ್ರದೊಳ್" ಎಂದೂ ತನ್ನ ಕಾವ್ಯವು "**ಸನಾತನ ವೇದದಂತೆ** ನಿಲ್ಕೆಂದುಂ" ಎಂದೂ ಬ್ರಾಹ್ಮಣನಂತೆ ಹೇಳಿಕೊಂಡಿದ್ದಾನೆ. ಛಂದಶ್ಶಾಸ್ತ್ರವು "ಇಂದುಧರನುಮೆಗೆ ಪೇಟ್ದುದು" ಎಂದು ಶಿವೋದಿತವಾದದ್ದೆಂದು ಹೇಳಿರುತ್ತಾನೆ. ಅಲ್ಲದೆ ತನಗೆ ಶಿವಾಧಿಕ್ಯದಲ್ಲಿರುವ ವಿಶ್ವಾಸವನ್ನು ವಿಧವಿಧವಾಗಿ ಸೂಚಿಸಿರುತ್ತಾನೆ; ಹೇಗೆಂದರೆ—ಗುರು ಲಘುಗಳಿಗೆ ಕ್ರಮವಾಗಿ ತ್ರಿಯಂಬಕ, ಮುರಾಂತಕ ಎಂದೂ, ಕನ್ನಡ ಛಂದಸ್ಸಿನಲ್ಲಿ ೨, ೩, ೪ "ಅಂಶ"ಗಳಿಂದ ಹುಟ್ಟುವ ಗಣಗಳಿಗೆ ಕ್ರಮವಾಗಿ ಬ್ರಹ್ಮ, ವಿಷ್ಣು, ರುದ್ರ ಎಂದೂ ನಾಮಕರಣ ಮಾಡಿರುತ್ತಾನೆ. ಬ್ರಹ್ಮನಿಗಿಂತ ವಿಷ್ಣುವೂ ವಿಷ್ಣುವಿಗಿಂತ ಶಿವನೂ ಅಧಿಕರೆಂಬ ಭಾವವನ್ನು ಕವಿ ಸೂಚಿಸುವಂತೆ ತೋರುತ್ತದೆ. ಅಲ್ಲದೆ, ಕಂದಪದ್ಯದಲ್ಲಿ ಬರುವ ಐದು ತೆರದ ಮಾತ್ರಾಗಣಗಳಿಗೆ "ಗಿರಿಶಂ, ಧೂರ್ಜಟಿ, ಶರ್ವಂ, ಪುರಾರಿ,

[1] ಈ ಕವಿಯ ಪೂರ್ವಜರು ವೈದಿಕ ಬ್ರಾಹ್ಮಣರೆಂದು ಹಿಂದೆಯೇ ತಿಳಿಸಿದೆ. ಬ್ರಾಹ್ಮಣ ವಂಶದಲ್ಲಿ ಹುಟ್ಟಿದವನು ಬ್ರಾಹ್ಮಣನೇ ಆಗಿರಬೇಕು. ತಾನಾಗಲಿ, ತನ್ನ ಹಿಂದಿನವರಾಗಲಿ ಜೈನಮತವನ್ನವಲಂಬಿಸಿದಂತೆ ಅವನು ಹೇಳಿಲ್ಲ.

ಮಖರಿಪು" ಎಂಬ ಶಿವನಾಮಾಕ್ಷರಗಳ ಹೆಸರನ್ನು ಕೊಟ್ಟಿದ್ದಾನೆ. ಇದೆಲ್ಲವನ್ನೂ ನೋಡಿದರೆ ಈ ಗ್ರಂಥವನ್ನು ಬರೆದ ಕವಿ ಶೈವಬ್ರಾಹ್ಮಣನೆಂದು ಬೋಧೆಯಾಗುತ್ತದೆ. ಈ ಕಾರಣಗಳಿಂದ "ಅರಸಂ ರಕ್ಕಸಗಂಗಂ", "ಗಂಡರ ಮೂಕುತಿ" ಎಂಬ ಪದ್ಯಗಳು ಪ್ರಕ್ಷಿಪ್ತವಿರಬಹುದೇ ಎಂಬ ಪ್ರಬಲವಾದ ಸಂಶಯವು ಅನಿವಾರ್ಯವಾಗುತ್ತದೆ. ಆದರೆ ಇವು ಪ್ರಕ್ಷಿಪ್ತ ಪದ್ಯಗಳೇ ಹೊರತು ಕವಿರಚಿತವಾದುವಲ್ಲ ಎಂದು ನಿರ್ಧರವಾಗಿ ಹೇಳುವುದೂ ಕಷ್ಟ. ಏಕೆಂದರೆ, ಇವುಗಳಲ್ಲಿ ಉಕ್ತರಾದವರು ಸಮಕಾಲಿಕರು, ಒಬ್ಬರಿಗೊಬ್ಬರು ಸಂಬಂಧಪಟ್ಟವರು ಎಂದು ಶಾಸನಗಳಿಂದ ಗೊತ್ತಾಗುತ್ತದೆ. ಇವುಗಳನ್ನು ಯಾರೇ ಆಗಲಿ ಇಲ್ಲಿ ತಂದು ಸೇರಿಸುವುದಕ್ಕೆ ಉದ್ದೇಶವೇನು ? ನಿಷ್ಕಾರಣವಾಗಿ ಸೇರಿಸಿದರೆಂದು ಹೇಗೆ ಹೇಳುವುದು ?

ಕಾದಂಬರಿಯಿಂದಲೂ ಛಂದೋಂಬುಧಿಯಿಂದಲೂ ಕವಿಯ ವಿಷಯವಾಗಿ ತಿಳಿದುಬರುವ ಕೆಲವು ಸಂಗತಿಗಳು ಆ ಎರಡು ಗ್ರಂಥಗಳೂ ಏಕಕರ್ತೃಕಗಳಾಗಿರಬಹುದೆಂಬ ಊಹೆಗೆ ಅವಕಾಶಕೊಡುತ್ತವೆ. ಆ ಎರಡು ಗ್ರಂಥಗಳಿಂದಲೂ ಕವಿಯ ಹೆಸರು ನಾಗವರ್ಮನೆಂದೂ ಆತನಿಗೆ ಕವಿರಾಜಹಂಸನೆಂಬ ಅಥವಾ ಅದಕ್ಕೆ ಸಮಾನಾರ್ಥಕವಾದ ಒಂದು ಬಿರುದು ಇದ್ದಿತೆಂದೂ ಆತನು ಬಹುಶಃ ಸೈನ್ಯದಲ್ಲಿ ಒಂದು ಅಧಿಕಾರವನ್ನು ಪಡೆದ ಯುದ್ಧವೀರನಾಗಿದ್ದನೆಂದೂ ಗೊತ್ತಾಗುತ್ತದೆ. ಈ ಎರಡು ಗ್ರಂಥಗಳೂ ಸುಮಾರು ಒಂದೇ ಕಾಲದಲ್ಲಿ ಹುಟ್ಟಿದುವೆಂದು ಇಟ್ಟುಕೊಂಡರೆ ಇವು ಏಕ ಕವಿ ಕರ್ತೃಕಗಳೆಂದು ಊಹಿಸುವುದು ಅನುಚಿತವಾಗಲಾರದು. ಆದರೆ ಈ ವಿಧವಾದ ಊಹೆಗೆ ಪ್ರತಿಬಂಧಕಗಳು ಇಲ್ಲದೆ ಹೋಗಿಲ್ಲ. ಉದಾಹರಣೆಗೆ---೧. ಇವುಗಳಲ್ಲಿ ಒಂದನ್ನು ಬರೆದ ಕವಿ ಮತ್ತೊಂದನ್ನೂ ಬರೆದನೆಂಬುದಕ್ಕೆ ಆ ಗ್ರಂಥಗಳಲ್ಲಾಗಲಿ ಬೇರೆ ಗ್ರಂಥಗಳಲ್ಲಾಗಲಿ ಸ್ಪಷ್ಟವಾದ ಪ್ರಮಾಣವಿಲ್ಲ. ೨. ಛಂದೋಂಬುಧಿ ರಕ್ಕಸಗಂಗನ ಕಾಲದಲ್ಲಿ ಹುಟ್ಟಿತು ಎಂದು ಹೇಳುವ ಪದ್ಯಗಳು ಪ್ರಕ್ಷಿಪ್ತವಾಗಿರಬಹುದೆ ಎಂಬ ಸಂಶಯಕ್ಕೆ ಎಡೆಯಿರುವುದರಿಂದಲೂ ಕಾದಂಬರಿಯಲ್ಲಿಉಕ್ತರಾದ ಚಂದ್ರ ಅಥವಾ ನರೇಂದ್ರಚಂದ್ರ, ಭೋಜರಾಜ ಎಂಬವರು ಇಂಥವರೇ ಎಂದು ನಿರ್ಧರಿಸಲು ತಕ್ಕ ಪ್ರಮಾಣವು ಇಲ್ಲದಿರುವುದರಿಂದಲೂ ಈ ಎರಡು ಗ್ರಂಥಗಳೂ ಒಂದೇ ಕಾಲದಲ್ಲಿ ಹುಟ್ಟಿದುವೆಂದು ದೃಢವಾಗಿ ಹೇಳು

ವಂತಿಲ್ಲ. ೩. ಛಂದೋಂಬುಧಿಯನ್ನು ಬರೆದವನು ತಾನು ಸಯ್ಯಡಿ ಯವನೆಂದೂ ತನ್ನ ಪೂರ್ವಿಕರು ವೆಂಗಿ ದೇಶದವರೆಂದೂ ಹೇಳಿಕೊಂಡಿರು ವನು ; ಕಾದಂಬರೀಕಾರನು ಇದಾವುದನ್ನೂ ಹೇಳಿಲ್ಲ. ೪. ಕಾದಂಬರೀ ಕಾರನು ಚಂದ್ರ ಅಥವಾ ನರೇಂದ್ರಚಂದ್ರ, ಭೋಜರಾಜ ಇವರ ಆಶ್ರಯ ವನ್ನು ಪಡೆದಿದ್ದಂತೆ ಆ ಗ್ರಂಥದಿಂದ ಗೊತ್ತಾಗುತ್ತದೆ. ಛಂದೋಂ ಬುಧಿಕಾರನು ಆ ರಾಜರ ಹೆಸರನ್ನು ಎತ್ತುವುದಿಲ್ಲ—ಇತ್ಯಾದಿ.

ಒಟ್ಟಿನಲ್ಲಿ. ಕಾದಂಬರಿ ಛಂದೋಂಬುಧಿಗಳು ಏಕಕರ್ತೃಕಗಳೇ ಭಿನ್ನ ಕರ್ತೃಕಗಳೇ ಎಂಬ ವಿಚಾರದಲ್ಲಿ "ಇದಮಿತ್ಥಂ" ಎಂದು ನಿರ್ಧರಿಸಲು ಈಗ ದೊರೆತಿರುವ ಸಾಧನಗಳು ಸಾಲವು. ಈ ಎರಡು ಗ್ರಂಥಗಳನ್ನೂ ಒಬ್ಬನೇ ಬರೆದಿರಬಹುದಾದದ್ದು ಅಸಂಭವವಲ್ಲವೆಂದು ತೋರುತ್ತದೆ.

ಇನ್ನು, ಈ ಎರಡು ಗ್ರಂಥಗಳನ್ನು ಬರೆದ ಕವಿಯಿಂದ ಅಥವಾ ಕವಿಗಳಿಂದ ಕಾವ್ಯಾವಲೋಕನಾದಿಗಳೂ ರಚಿತವಾದುವೆ ಅಥವಾ ಅವನ್ನು ಬರೆದ ನಾಗವರ್ಮನೇ ಬೇರೆಯೆ ಎಂಬ ವಿಷಯದಲ್ಲಿರುವ ಭಿನ್ನಮತ ಗಳನ್ನು ಇಲ್ಲಿ ಸಂಗ್ರಹವಾಗಿ ಸೂಚಿಸಬಹುದು. ಕಾವ್ಯಾವಲೋಕನಾದಿ ಗಳನ್ನು ಬರೆದವನು ಬೇರೊಬ್ಬ ನಾಗವರ್ಮನೆಂಬುದು ಕವಿಚರಿತಕಾರರ ಮತ. ಅವರು ಕೊಡುವ ಕಾರಣಗಳು ಇವು—

೧. ಛಂದೋಂಬುಧಿಯಲ್ಲಿಯ "ಅರಸಂ ರಕ್ಕಸಗಂಗಂ", "ಗಂಡರ ಮೂಕುತಿಯೆನಿಸಿದ" ಎಂಬ ಪದ್ಯಗಳಲ್ಲಿ ಅಣ್ಣ, ರಾಯ ಎಂಬ ಹೆಸರೂ ಅಜಿತಸೇನ ರಕ್ಕಸಗಂಗರ ಹೆಸರೂ ಉಕ್ತವಾಗಿವೆ. ಚಾವುಂಡ ರಾಯನಿಗೆ ಅಣ್ಣ, ರಾಯ ಎಂಬ ಹೆಸರುಗಳಿವೆ. ಅಜಿತಸೇನದೇವನು ರಾಚಮಲ್ಲನಿಗೂ ಚಾವುಂಡರಾಯನಿಗೂ ಗುರುವಾಗಿದ್ದನು. ಮೇಲೆ ಹೇಳಿದ ಪದ್ಯಗಳಿಂದ ಈ ಕವಿ ರಕ್ಕಸಗಂಗನ ಕಾಲದಲ್ಲಿ ಚಾವುಂಡರಾಯ ನಿಂದ ಪೋಷಿತನಾಗಿಯೂ ಅಜಿತಸೇನದೇವನ ಶಿಷ್ಯನಾಗಿಯೂ ಇದ್ದನೆಂ ಬುದು ವ್ಯಕ್ತವಾಗುತ್ತದೆ. ರಕ್ಕಸಗಂಗನು ರಾಚಮಲ್ಲನ ತಮ್ಮ. ಸುಮಾರು ೯೮೪ ರಿಂದ ರಾಜ್ಯಭಾರ ಮಾಡಿದನು. ಕಾದಂಬರಿಯ ಕೊನೆಯಲ್ಲಿ ಕೆಲವು ಪಾತ್ಯಶ್ವಗಳನ್ನು "ಸತ್ಕೃತಿವನಿತೆಗಿವೌಚಿತ್ಯಮೆಂದಿತ್ತನತ್ಯುತ್ಸವದಿಂ .. .... ಭೋಜರಾಜ ಕ್ಷಿತೀಶಂ" ಎಂದು ಹೇಳಿದೆ. ಈ ಭೋಜನು ಧಾರಾಪುರದ ಭೋಜನಾಗಿರಬೇಕು. ಆತನು ಹತ್ತನೆಯ ಶತಮಾನದ ಅಂತ್ಯದಲ್ಲಿ ಆಳುವು

ದಕ್ಕೆ ಆರಂಭಿಸಿದಂತೆ ತಿಳಿಯುತ್ತದೆ. ಆದ್ದರಿಂದ ಛಂದೋಂಬುಧಿ ಕಾದಂಬರಿಗಳೆರಡೂ ಹತ್ತನೆಯ ಶತಮಾನದ ಅಂತ್ಯದಲ್ಲಿ ಹುಟ್ಟಿದುವು. ಇವನ್ನು ರಚಿಸಿದ ನಾಗವರ್ಮನ ಕಾಲ ಸು. ೯೯೦.

ಜನ್ನನ ಅನಂತನಾಥ ಪುರಾಣದಲ್ಲಿಯ ಈ ಪದ್ಯವು ಎರಡನೆಯ ನಾಗವರ್ಮನ ಕಾಲವನ್ನು ಗೊತ್ತುಮಾಡಲು ಸಾಧಕವಾಗಿದೆ—

ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾ ನಾಗವ
ರ್ಮನಿದಾನೀಂತನ ಶರ್ವವರ್ಮನೆ ಗಡಂ ಜನ್ನಂಗುಪಾಧ್ಯಾಯನಿಂ
ದು ನೃಸಿಂಹ ಕ್ಷಿತಿಪಾಲನಲ್ಲಿ ಕಟಕೋಪಾಧ್ಯಾಯನಾರೆಂಬ ಸೂ
ಕ್ತಿ ನವೀನೋಜ್ಜ್ವಳಬಾಣನಪ್ಪ ಸುಮನೋಬಾಣಂ ಕವಿಶ್ರೇಷ್ಠರೊಳ್

ಇಲ್ಲಿ, ಜಕದೇಕಮಲ್ಲನಲ್ಲಿ ಕಟಕೋಪಾಧ್ಯಾಯನಾದ ಇದಾನೀಂತನ ಶರ್ವವರ್ಮನೆಂಬ ಬಿರುದುಳ್ಳ ನಾಗವರ್ಮನು ಜನ್ನನಿಗೆ ಉಪಾಧ್ಯಾಯನೆಂದು ಹೇಳಿದೆ. ಕಾವ್ಯಾವಲೋಕನದ ಒಂದು ಪದ್ಯದಿಂದ ಅದನ್ನು ರಚಿಸಿದ ನಾಗವರ್ಮನಿಗೆ ಅಭಿನವಶರ್ವವರ್ಮನೆಂಬ ಬಿರುದಿದ್ದಂತೆ ತಿಳಿದುಬರುತ್ತದೆ. ಆದ್ದರಿಂದ ಈ ನಾಗವರ್ಮನೇ ಜನ್ನನ ಉಪಾಧ್ಯಾಯನಾಗಿರಬೇಕು. ಮೇಲೆ ಹೇಳಿದ ಜಗದೇಕಮಲ್ಲನು ೧೧೩೯ ರಿಂದ ೧೧೫೦ರ ವರೆಗೆ ಆಳಿದ ಚಾಳುಕ್ಯ ರಾಜನಾಗಿರಬೇಕು. ಆದ್ದರಿಂದ ಎರಡನೆಯ ನಾಗವರ್ಮನ ಕಾಲ ಸು. ೧೧೪೫.

೨. ಈ ಇಬ್ಬರು ನಾಗವರ್ಮರ ತಂದೆ, ಬಿರುದು, ಮತ ಮೊದಲಾದುವುಗಳಲ್ಲಿಯೂ ವ್ಯತ್ಯಾಸವಿದೆ. ಛಂದೋಂಬುಧಿಯನ್ನು ಬರೆದ ನಾಗವರ್ಮನು "ವೆಣ್ಣಮಯ್ಯನಗ್ರತನೂಜಂ" ; ಎರಡನೆಯ ನಾಗವರ್ಮನಾದರೋ ತಾನು "ದಾಮೋದರ" ತನಯನೆಂದು ಹೇಳಿಕೊಂಡಿದ್ದಾನೆ. ಮೊದಲನೆಯವನ ಬಿರುದು "ಕವಿರಾಜಹಂಸ" ; ಎರಡನೆಯವನದು "ಕವಿತಾಗುಣೋದಯ". ಮೊದಲನೆಯವನು ಜೈನನೋ ಅಲ್ಲವೋ ಎಂಬ ಸಂದೇಹಕ್ಕೆ ಅವಕಾಶವಿದೆ ; ಎರಡನೆಯವನು ಜೈನನೆಂಬುದಕ್ಕೆ ಸಂದೇಹವೇ ಇಲ್ಲ. ಮೊದಲನೆಯವನಿಗೆ ನಾಕಿ, ಸಯ್ಯಡಿಯಾತಂ ಎಂಬ ಹೆಸರುಗಳಿದ್ದಂತೆ ತಿಳಿಯುತ್ತದೆ ; ಎರಡನೆಯವನಿಗೆ ಈ ಹೆಸರುಗಳಿಲ್ಲ. ಆದ್ದರಿಂದ ಇಬ್ಬರೂ ಬೇರೆ ಬೇರೆ ಕವಿಗಳು.

ಕವಿಚರಿತಕಾರರ ಈ ಸಿದ್ಧಾಂತವನ್ನು ಡಾ॥ ವೆಂಕಟಸುಬ್ಬಯ್ಯನವರು ಖಂಡಿಸಿ ಈ ಐದು ಗ್ರಂಥಗಳನ್ನೂ ಬರೆದವನು ಒಬ್ಬ ನಾಗವರ್ಮನೇ ಎಂದು "ಕೆಲವು ಕನ್ನಡ ಕವಿಗಳ ಜೀವನಕಾಲ ವಿಚಾರ" ಎಂಬ ಗ್ರಂಥದಲ್ಲಿ (ಪುಟಗಳು ೧೫೨–೧೮೧) ನಿರ್ಣಯಿಸಿರುತ್ತಾರೆ. ಅವರು ಕೊಡುವ ಮುಖ್ಯ ಕಾರಣಗಳ ಸಾರಾಂಶವಿದು—

೧. ಕಾಲದ ವಿಚಾರ: ರಕ್ಕಸಗಂಗನೆಂಬ ಹೆಸರಿನ ರಾಜರು ಮೂರು ಜನರಿದ್ದಾರೆ. ಛಂದೋಂಬುಧಿಯ ಪದ್ಯಗಳಲ್ಲಿ ಉಕ್ತನಾದ ರಕ್ಕಸಗಂಗನಿಗೆ " ಗಂಡರ ಮೂಕುತಿ " ಎಂಬ ಬಿರುದಿದ್ದಂತೆ ಆ ಪದ್ಯಗಳಿಂದ ಗೊತ್ತಾಗುತ್ತದೆ. (ಗಂಡರ ಮೂಕುತಿ ಎಂಬುದು ರಾಯಂ ಎಂಬುದನ್ನು ವಿಶೇಷಿಸುವುದಿಲ್ಲ. ಏಕೆಂದರೆ, ಚಾವುಂಡರಾಯನಿಗೆ ಆ ಬಿರುದಿತ್ತೆಂಬುದಕ್ಕೆ ಯಾವ ಆಧಾರವೂ ಇಲ್ಲ. ಆದ್ದರಿಂದ ಅದು ಮಾಂಡಳಿಕರ ಎಂಬುದರ ವಿಶೇಷಣವಾಗಿರಬೇಕು. ಈ ಮಾಂಡಳಿಕನು ರಕ್ಕಸಗಂಗನಾಗಿರಬೇಕು.) ಈ ಬಿರುದಿನ ರಕ್ಕಸಗಂಗನು ಇದ್ದದ್ದು ಸು. ೧೦೫೦ ರಲ್ಲಿ. ಅವನ ಹಿಂದಿನ ಇಬ್ಬರಿಗೆ ಆ ಬಿರುದು ಇರಲಿಲ್ಲ. ಆದಕಾರಣ ಛಂದೋಂಬುಧಿಯ ರಚನೆಯ ಕಾಲ ಹನ್ನೊಂದನೆಯ ಶತಮಾನದ ಪೂರ್ವಾರ್ಧ. ಧಾರಾಪುರದ ಭೋಜರಾಜನು ಹತ್ತನೆಯ ಶತಮಾನದ ಅಂತ್ಯದಲ್ಲಿರಲಿಲ್ಲ. ಅವನು ೧೦೧೮ರಿಂದ ೧೦೬೦ರ ವರೆಗೆ ಆಳುತ್ತಿದ್ದನೆಂದು ತಿಳಿದುಬರುತ್ತದೆ. ಆದ್ದರಿಂದ ಕಾದಂಬರಿಯು ರಚಿತವಾದದ್ದು ಹನ್ನೊಂದನೆಯ ಶತಮಾನದ ಪೂರ್ವಾರ್ಧದಲ್ಲಿ. ಕವಿಚರಿತಕಾರರು ಹೇಳುವಂತೆ ೧೧೪೫ರಲ್ಲಿದ್ದ ನಾಗವರ್ಮನು ೧೨೩೦ರಲ್ಲಿ ಅನಂತನಾಥಪುರಾಣವನ್ನು ಬರೆದ ಜನ್ನನಿಗೆ ಉಪಾಧ್ಯಾಯನಾಗಿರುವುದು ಅಸಂಭವ. " ಜನನಾಥಂ ಜಗದೇಕನಲ್ಲಿ " ಎಂಬ ಪದ್ಯಕ್ಕೆ ಅವರು ಮಾಡಿರುವ ಅರ್ಥವು ಸರಿಯಲ್ಲ; ಆ ಪದ್ಯದ ಅಭಿಪ್ರಾಯವು ನಾಗವರ್ಮನು ಜನ್ನನ ಉಪಾಧ್ಯಾಯನೆಂಬುದೂ ಅಲ್ಲ. ಅಲ್ಲಿ ಉಕ್ತನಾದ ಜಗದೇಕಮಲ್ಲನು ೧೧೩೮ರಿಂದ ೧೧೫೦ರವರೆಗೆ ಆಳಿದ ಚಾಳುಕ್ಯರಾಜನಲ್ಲ; ೧೦೧೫ರಿಂದ ೧೦೪೦ರವರೆಗೆ ಆಳುತ್ತಿದ್ದವನಾಗಿರಬೇಕು. ಆದ್ದರಿಂದ ಕಾವ್ಯಾವಲೋಕನಾದಿ ಗ್ರಂಥಗಳು ಹುಟ್ಟಿದ ಕಾಲವೂ ಹನ್ನೊಂದನೆಯ ಶತಮಾನದ ಪೂರ್ವಾರ್ಧ. ಆದಕಾರಣ ಈ ಗ್ರಂಥಗಳನ್ನೆಲ್ಲ ಒಬ್ಬ ಕವಿಯೇ ರಚಿಸಿರಬೇಕು.

೨. ಇತರ ವಿಷಯಗಳು : ಈ ಇಬ್ಬರು ಕವಿಗಳು ಬೇರೆಬೇರೆ ಎಂಬುದಕ್ಕೆ ಕವಿಚರಿತಕಾರರು ಕೊಡುವ ಇತರ ನಿದರ್ಶನಗಳನ್ನು ಸಕಾರಣವಾಗಿ ತ್ಯಾಗಮಾಡಬಹುದು. ಉದಾಹರಣೆಗೆ—ಕವಿ ಒಂದು ಗ್ರಂಥದಲ್ಲಿ (ಛಂದೋಂಬುಧಿಯಲ್ಲಿ) ತನ್ನ ತಂದೆ ವೆಣ್ಣಮಯ್ಯನ ಹೆಸರನ್ನೂ ಇನ್ನೊಂದರಲ್ಲಿ (ಕಾವ್ಯಾವಲೋಕನದಲ್ಲಿ) ತಾತ ದಾಮೋದರನ (ದಾಮಮಯ್ಯ ಎಂಬುದು ದಾಮೋದರ ಎಂಬುದರ ಇನ್ನೊಂದು ರೂಪ) ಹೆಸರನ್ನೂ ಹೇಳಿರಬೇಕು. ತನಯ, ಸುತ ಎಂಬ ಪದಗಳಿಗೆ ಮೊಮ್ಮಗ ಎಂದೂ ಅರ್ಥವಾಗಬಹುದು. ಇದಕ್ಕೆ ಶಾಸ್ತ್ರಾಧಾರವಿದೆ. ಕಾವ್ಯಾವಲೋಕನದಲ್ಲಿ ಕವಿ ಬಹುಶಃ ಮಕಾರ ಪ್ರಾಸಕ್ಕಾಗಿ ದಾಮೋದರ ಎಂಬ ಪದವನ್ನು ಪ್ರಯೋಗಿಸಿರಬಹುದು. ಹೀಗೆಯೇ ಬಿರುದುಗಳ ವಿಷಯದಲ್ಲಿಯೂ. ಕವಿ ತನ್ನ ಎಲ್ಲ ಬಿರುದುಗಳನ್ನೂ ಎಲ್ಲ ಗ್ರಂಥಗಳಲ್ಲಿಯೂ ಹೇಳಿಕೊಳ್ಳಬೇಕೆಂಬ ನಿಯಮವೇನೂ ಇಲ್ಲ. ಒಂದೊಂದು ಗ್ರಂಥದಲ್ಲಿ ಒಂದೊಂದು ಬಿರುದನ್ನು ಹೇಳಿಕೊಂಡಿರಬಹುದು. ಸಯ್ಯಡಿಯಾತಂ ಎಂದು ಒಂದು ಗ್ರಂಥದಲ್ಲಿ ಹೇಳಿಕೊಂಡವನು ಇನ್ನೊಂದರಲ್ಲಿಯೂ ಹೇಳಬೇಕೆಂಬ ನಿಯಮವೇನೂ ಇಲ್ಲ. ಇತ್ಯಾದಿ.

ಒಟ್ಟಿನಲ್ಲಿ, ಕವಿಚರಿತಕಾರರು ಕೊಡುವ ಕಾರಣಗಳು ಹೆಚ್ಚು ತೂಕವಾದುವು. ಕಾವ್ಯಾವಲೋಕನಾದಿಗಳನ್ನು ಬರೆದವನು ಜೈನನೆಂಬುದು ನಿರ್ವಿವಾದವಾಗಿರುವುದೂ ಕಾದಂಬರಿ ಛಂದೋಂಬುಧಿಗಳನ್ನು ಬರೆದವನು ಜೈನನೆಂಬುದು ಸಂದೇಹಾಸ್ಪದವಾಗಿರುವುದೂ ಕಾವ್ಯಾವಲೋಕನಾದಿಗಳನ್ನು ಬರೆದ ನಾಗವರ್ಮನೇ ಬೇರೆ ಎಂಬ ಮತಕ್ಕೆ ಸಹಕಾರಿಯಾಗಿದೆ.

ಶ್ರೀಮಾನ್ ಎಂ. ಗೋವಿಂದಪೈಗಳವರು "ನಾಗವರ್ಮರು ಎಷ್ಟು ಮಂದಿ?" ಎಂಬ ತಮ್ಮ ಲೇಖನದಲ್ಲಿ [ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ, ಸಂ. XX (೧೯೩೫)] ಈ ವಿಷಯವನ್ನು ಕೂಲಂಕಷವಾಗಿ ಚರ್ಚಿಸಿ ಹೀಗೆ ನಿರ್ಣಯಿಸಿದ್ದಾರೆ: "ಛಂದೋಂಬುಧಿ ಕ್ರಿ. ಶ. ೯೭೪–೭೪ರ ನಡುವೆಯೂ ಕಾದಂಬರಿ ಕ್ರಿ. ಶ. ೧೦೦೦–೧೦೦೫ರ ನಡುವೆಯೂ ರಚಿತವಾಗಿರಬೇಕೆಂಬುದರಿಂದ ಅವೆರಡೂ ಏಕಕರ್ತೃಕವಾಗಿರಬಹುದು.... ಅವುಗಳ ರಚಕನಾದ ಬ್ರಾಹ್ಮಣ ನಾಗವರ್ಮನು ಕ್ರಿ. ಶ. ಸು ೯೫೦ರಲ್ಲಿ

ಹುಟ್ಟಿ ಕ್ರಿ. ಶ. ಸು ೧೧೧೦–೧೫೮ರ ವರೆಗೆ ಬಾಳಿರಬಹುದು. ವಸ್ತುಕೋಶ–ಕಾವ್ಯಾವಲೋಕನ–ಭಾಷಾಭೂಷಣಗಳ ಜೈನ ನಾಗವರ್ಮನಾದರೋ ಕ್ರಿ. ಶ. ಸು ೧೧೨೦–೧೨೦೦ ರೊಳಗೆ ಇದ್ದಿರಬೇಕೆಂಬುದರಿಂದ ಆ ಬ್ರಾಹ್ಮಣ ನಾಗವರ್ಮನಿಗೂ ಈ ಜೈನ ನಾಗವರ್ಮನಿಗೂ ಹೆಚ್ಚು ಕಡಮೆ ೧೮೦ ವರ್ಷಗಳಷ್ಟಾದರೂ ಕಾಲ ವ್ಯತ್ಯಾಸವಿರಬೇಕೆಂದು ಪ್ರತ್ಯಕ್ಷವಿರುವುದರಿಂದ, ಅವರು ಅನ್ಯಾನ್ಯ ಶತಕಗಳಲ್ಲಿದ್ದ ಅನ್ಯಾನ್ಯರಾದ ಇಬ್ಬರೇ ಹೊರತು ಎಂದಿಗೂ ಏಕವ್ಯಕ್ತಿಯಲ್ಲ (ಪು. ೧೫೨)....ಹೀಗೆ ಛಂದೋಂಬುಧಿ–ಕಾದಂಬರಿಗಳ ರಚಕನಾದ ಬ್ರಾಹ್ಮಣ ನಾಗವರ್ಮನೊಬ್ಬನು, ವಸ್ತುಕೋಶ–ಕಾವ್ಯಾವಲೋಕನ–ಭಾಷಾಭಾಷಣಗಳನ್ನು ರಚಿಸಿದ ಜೈನ ನಾಗವರ್ಮನೊಬ್ಬನು, ಚಂದ್ರಚೂಡಾಮಣಿ ಶತಕವನ್ನು ಬರೆದ ಬ್ರಾಹ್ಮಣ ನಾಗವರ್ಮನೊಬ್ಬನು ಎಂದು ಅನ್ಯಾನ್ಯರಾದ ನಾಗವರ್ಮರು ಮೂವರಾದರೂ ಇದ್ದರು ಎಂಬಲ್ಲಿ ಸಂಶಯವಿಲ್ಲ'' (ಪು. ೧೬೦).

ಕನ್ನಡ ಸಾಹಿತ್ಯದ ಮೇಲೆ ಸಂಸ್ಕೃತ ಸಾಹಿತ್ಯದ ಪ್ರಭಾವ

ಕನ್ನಡದಲ್ಲಿ ಗ್ರಂಥರಚನೆಯಾಗುವ ಹೊತ್ತಿಗೆ ಸಂಸ್ಕೃತವು ಸಮಗ್ರ ಭರತಖಂಡದ ಸಂಸ್ಕೃತಿಯ ಭಾಷೆಯಾಗಿ ಏರ್ಪಟ್ಟು ವಿಶೇಷವಾದ ಪ್ರಾಬಲ್ಯವನ್ನು ಪಡೆದಿತ್ತು. ಸಂಸ್ಕೃತ ಸಾಹಿತ್ಯವೇ ಕನ್ನಡ ಸಾಹಿತ್ಯ ರಚನೆಗೆ ಪ್ರೇರಕವೂ ಪೋಷಕವೂ ಆಗಿತ್ತೆಂದು ಹೇಳಬಹುದು. ಕಾವ್ಯಕ್ಕೆ ತಕ್ಕ ವಿಷಯವಾವುದು, ಅದನ್ನು ಕಾವ್ಯದಲ್ಲಿ ಯಾವ ರೀತಿಯಲ್ಲಿ ನಿರೂಪಿಸಬೇಕು ಎಂಬುದನ್ನು ಕನ್ನಡ ಕವಿಗಳು ಸಂಸ್ಕೃತ ಕವಿಗಳಿಂದ ಕಲಿತರು. ಕೆಲವರು ಸಂಸ್ಕೃತ ಪ್ರಾಕೃತ ಗ್ರಂಥಗಳನ್ನು ಕನ್ನಡಕ್ಕೆ ಪರಿವರ್ತಿಸಿದರು ; ಮತ್ತೆ ಕೆಲವರು ಕಾವ್ಯವಸ್ತುವನ್ನು ಸಂಸ್ಕೃತದಿಂದ ಸಂಗ್ರಹಿಸಿ ಹೊಸ ಕಾವ್ಯಗಳನ್ನು ರಚಿಸಿದರು. ಸಂಸ್ಕೃತ ಸಾಹಿತ್ಯವು ಕನ್ನಡ ಸಾಹಿತ್ಯಕ್ಕೆ ಸಾಹಿತ್ಯ ಸಾಮಗ್ರಿಯ ಭಂಡಾರವಾದದ್ದು ಮಾತ್ರವಲ್ಲದೆ ಕನ್ನಡ ಕವಿಗಳಿಗೆ ಕನ್ನಡಿಯೂ ಕೈದೀವಿಗೆಯೂ ಆಯಿತು.

ಸಂಸ್ಕೃತ ಸಾಹಿತ್ಯಕ್ಷೇತ್ರವು ವಿಸ್ತಾರವಾದದ್ದು. ಅದರಲ್ಲಿ ಯಾವ ಭಾಗವನ್ನು ಕನ್ನಡ ಕವಿಗಳು ಮಾದರಿಯಾಗಿಟ್ಟುಕೊಂಡರೆಂಬುದು ನಾವು ತಿಳಿದುಕೊಳ್ಳಬೇಕಾದ ಸಂಗತಿ. ಸಾಹಿತ್ಯಾಭಿರುಚಿಯು ಕಾಲ

ಕೌಶಲಕ್ಕೂ ಮಾರ್ಪಡುತ್ತದೆ. ಕನ್ನಡದಲ್ಲಿ ಸಾಹಿತ್ಯ ರಚನೆಯಾಗುವ ಕಾಲಕ್ಕೆ ಸಂಸ್ಕೃತದಲ್ಲಿ ಯಾವ ಅಭಿರುಚಿಯು ಬಳಕೆಯಲ್ಲಿತ್ತೋ ಆ ಅಭಿರುಚಿಯೇ ಕನ್ನಡ ಸಾಹಿತ್ಯದ ಸ್ವರೂಪವನ್ನೂ ನಿರ್ಧರಿಸುವುದು ಸ್ವಾಭಾವಿಕ. ಕನ್ನಡ ಸಾಹಿತ್ಯರಚನೆಯ ಆರಂಭಕಾಲವನ್ನು ಸುಮಾರು ಆರನೆಯ ಅಥವಾ ಏಳನೆಯ ಶತಮಾನವೆಂದು ಇಟ್ಟುಕೊಳ್ಳಬಹುದು. ಅಷ್ಟು ಹೊತ್ತಿಗೆ ಸಂಸ್ಕೃತ ಸಾಹಿತ್ಯದಲ್ಲಿ ವ್ಯಾಸವಾಲ್ಮೀಕಿಗಳ, ಭಾಸ ಕಾಳಿದಾಸರ ಕಾಲವಾಗಿ ಹೋಗಿ ಬಾಣ ಮಾಘರ ಕಾಲ ಸನ್ನಿಹಿತವಾಗಿತ್ತು.[1] ಎಂದರೆ, ಕಾವ್ಯದಲ್ಲಿ ಧರ್ಮನೀತಿಗಳಿಗೂ ಭಾವರಸಗಳಿಗೂ ಪ್ರಾಶಸ್ತ್ಯವನ್ನು ಕೊಡುವ ಸಂಪ್ರದಾಯವು, ಅಭಿರುಚಿಯು, ಹಿಂದೆ ಬಿದ್ದು ಅರ್ಥಚಮತ್ಕಾರ ಉಕ್ತಿವೈಚಿತ್ರ್ಯಗಳಿಗೆ, ಪ್ರೌಢಿಮೆಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡುವ ಸಂಪ್ರದಾಯವು ರೂಢಿಗೆ ಬಂದಿತ್ತು. ಒಟ್ಟಿನಲ್ಲಿ ಕನ್ನಡ ಕವಿಗಳು ಈ ಸಂಪ್ರದಾಯವನ್ನು ಅನುಸರಿಸಿದರು. ಆದಕಾರಣವೇ ಕನ್ನಡ ಕಾವ್ಯಗಳಲ್ಲಿ, ಮುಖ್ಯವಾಗಿ ಚಂಪೂಕಾವ್ಯಗಳಲ್ಲಿ, ಕಥೆಗಿಂತಲೂ ವರ್ಣನೆಗೂ—ಅನೇಕ ವೇಳೆ ಅಪ್ರಸಕ್ತವಾದ ವರ್ಣನೆಗೂ—ರಸಭಾವಗಳಿಗಿಂತಲೂ ಶಬ್ದಾರ್ಥಾಲಂಕಾರಗಳಿಗೂ ಸ್ವಾನುಭವಕ್ಕಿಂತಲೂ ಕವಿಸಮಯಕ್ಕೂ ಹೆಚ್ಚು ಪುರಸ್ಕಾರವು ದೊರೆತಿದೆ. ಕನ್ನಡದಲ್ಲಿ ಈ ರೀತಿಯ ಕಾವ್ಯರಚನೆಗೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟ ಸಂಸ್ಕೃತ ಕವಿಗಳಲ್ಲಿ ಬಾಣನು ಮುಖ್ಯನಾದವನೆಂದು ಹೇಳಬಹುದು. ಆದಕಾರಣ ಕನ್ನಡ ಸಾಹಿತ್ಯವು ಪ್ರೌಢಾವಸ್ಥೆಗೆ ಬರುತ್ತಿದ್ದ ಕಾಲದಲ್ಲಿ ಬಾಣನ ಕಾದಂಬರಿಯು ಕನ್ನಡಕ್ಕೆ ಪರಿವರ್ತಿತವಾದದ್ದು ಸ್ವಾಭಾವಿಕವೇ ಆಗಿದೆ.

ಬಾಣಕವಿಯ ಚರಿತ್ರೆ

ಬಾಣಕವಿಯ ಕಾವ್ಯರಚನಾ ರೀತಿಯನ್ನು ವಿವರಿಸುವುದಕ್ಕೆ ಮೊದಲು ಆತನ ಜೀವನ ಚರಿತ್ರೆಯನ್ನು ಇಲ್ಲಿ ಸಂಗ್ರಹವಾಗಿ ತಿಳಿಸು

[1] ಹೀಗೆ ಹೇಳುವುದರಿಂದ ಆ ಕಾಲದವರಿಗೆ ವ್ಯಾಸವಾಲ್ಮೀಕಿಗಳಲ್ಲಿ, ಕಾಳಿದಾಸ ಭಾಸರಲ್ಲಿ ಗೌರವವಿರಲಿಲ್ಲವೆಂದಾಗಲಿ, ಅವರ ಕಾವ್ಯಗಳನ್ನು ಜನರು ಓದಿ ಮೆಚ್ಚುತ್ತಿರಲಿಲ್ಲವೆಂದಾಗಲಿ ಅರ್ಥವಲ್ಲ. ಆದರೆ ಅವರ ಗೀಳು ಬೇರೆ ಕಡೆಗೆ ತಿರುಗಿತ್ತು. ಆ ಕಾಲದಲ್ಲಿಯೂ ಅಲ್ಲಿಂದೀಚೆಗೂ ಹುಟ್ಟಿದ ಸಂಸ್ಕೃತ ಕಾವ್ಯಗಳು ಇದಕ್ಕೆ ಸಾಕ್ಷಿಯಾಗಿವೆ. ಕವಿರಾಜಮಾರ್ಗದಲ್ಲಿ, ಸಂಸ್ಕೃತ ಕವಿಗಳಲ್ಲಿ ಮುಖ್ಯರಾದವರನ್ನು ತಿಳಿಸುವಾಗ ಪದ್ಯದಲ್ಲಿ ಕಾಳಿದಾಸ ಮಾಘರನ್ನು ಸಮಗದ್ದುಗೆಯಲ್ಲಿ ಕುಳ್ಳಿರಿಸಿರುವುದನ್ನೂ ಗದ್ಯದಲ್ಲಿ ಬಾಣನನ್ನು ಹೇಳಿರುವುದನ್ನೂ ನೋಡಬಹುದು. ಮೊನ್ನೆ ಮೊನ್ನೆಯವರಗೂ ಕಾಳಿದಾಸನ ಕಾವ್ಯಗಳು ಕನ್ನಡಕ್ಕೆ ಪರಿವರ್ತಿತವಾಗದಿದ್ದುದೂ ಗಮನಿಸಬೇಕಾದ ಸಂಗತಿ.

ವುದು ಅಪ್ರಸಕ್ತವಾಗಲಾರದು. ಬಾಣನು ಕ್ರಿ. ಶ. ೬೦೬ರಿಂದ ೬೪೬ರ ವರೆಗೆ ರಾಜ್ಯಭಾರಮಾಡಿದ ಶ್ರೀಹರ್ಷಚಕ್ರವರ್ತಿಯ ಆಸ್ಥಾನಕವಿಯಾಗಿದ್ದನು. ಈತನಿಂದ ರಚಿತವಾದ ಗ್ರಂಥಗಳಲ್ಲಿ ಹರ್ಷಚರಿತ ಕಾದಂಬರಿಗಳು ಪ್ರಖ್ಯಾತವಾದುವು. ಈತನು ಸ್ವಚರಿತ್ರೆಯನ್ನು ಹರ್ಷಚರಿತೆಯಲ್ಲಿ ವಿಸ್ತಾರವಾಗಿಯೂ ಕಾದಂಬರಿಯಲ್ಲಿ ಸಂಗ್ರಹವಾಗಿಯೂ ಹೇಳಿಕೊಂಡಿರುತ್ತಾನೆ. ಈ ಆತ್ಮಕಥೆಯೇ ಒಂದು ಕಾದಂಬರಿಯಂತೆ ಮನೋರಂಜಕವಾಗಿದ್ದು ಈತನು ಹುಟ್ಟುಕಥೆಗಾರನೆಂಬುದಕ್ಕೆ ನಿದರ್ಶನವಾಗಿದೆ. ಬಾಣನು ಒಂದು ಪ್ರಖ್ಯಾತವಾದ ಬ್ರಾಹ್ಮಣ ವಂಶದಲ್ಲಿ ಹುಟ್ಟಿದನು. (ತನ್ನ ಪೂರ್ವಜರ ವೃತ್ತಾಂತವನ್ನು ಈ ಕವಿ, ಕನ್ನಡದಲ್ಲಿ ಪಂಪನಂತೆ, ಬಹು ಹೆಮ್ಮೆಯಿಂದ ಹೇಳಿಕೊಂಡಿರುವನು.) ಈತನ ತಂದೆಯ ಹೆಸರು ಚಿತ್ರಭಾನು; ತಾಯಿಯ ಹೆಸರು ರಾಜದೇವಿ. ಬಾಣನು ಹುಟ್ಟಿದ ಸ್ವಲ್ಪ ಕಾಲದಲ್ಲಿಯೇ ತಾಯಿ ತೀರಿಹೋದಳು. ಹೀಗೆ ಹುಟ್ಟುತ್ತಲೇ ಮಾತೃವಾತ್ಸಲ್ಯದಿಂದ ವಂಚಿತನಾದ ಈ ಮಗುವನ್ನು ಈತನ ತಂದೆ ಬಹು ಮಮತೆಯಿಂದ ಬೆಳೆಸಿ ವಿದ್ಯಾಬುದ್ಧಿಗಳನ್ನು ಕಲಿಸಿದನು. ತಂದೆಯ ಲಾಲನೆಪಾಲನೆಯೂ ಚಿಕ್ಕತನದಲ್ಲಿಯೇ ಎಂದರೆ ಹದಿನಾಲ್ಕನೆಯ ವಯಸ್ಸಿನಲ್ಲಿಯೇ ಈ ಕವಿಗೆ ಇಲ್ಲದಂತಾಯಿತು. (ಕವಿ ತಾನು ಹೀಗೆ ಬಾಲ್ಯದಲ್ಲಿ ಅನುಭವಿಸಿದ ಮಾತಾಪಿತೃವಿಯೋಗ ದುಃಖವನ್ನು ಕಾದಂಬರಿಯಲ್ಲಿ ಬರುವ ವೈಶಂಪಾಯನ ಗಿಳಿಯ ಪೂರ್ವವೃತ್ತಾಂತದಲ್ಲಿ ಹೃದಯಂಗಮವಾಗಿ, ಹೃದಯವಿದ್ರಾವಕವಾಗಿ ಚಿತ್ರಿಸಿರುವಂತೆ ತೋರುತ್ತದೆ.) ಹೀಗೆ ಜೀವನದ ಹೊಸ್ತಿಲಲ್ಲಿಯೇ ಅನಾಥನಾದ ತಾನು ಕೆಲವು ಕಾಲ ದಿಕ್ಕುತೋರದವನಾಗಿ ಮನೆಯಲ್ಲಿದ್ದು ಆಮೇಲೆ "ಅವಿನಯ ನಿದಾನವಾದ ಸ್ವಾತಂತ್ರ್ಯ, ಕುತೂಹಲ ಬಹುಲವಾದ ಬಾಲಭಾವ, ಧೈರ್ಯಪ್ರತಿಪಕ್ಷವಾದ ಯೌವನಾರಂಭ—ಇವುಗಳ ಪರಿಣಾಮವಾಗಿ ಶೈಶವೋಚಿತವಾದ ಅನೇಕ ಚಾಪಲ್ಯಗಳಿಗೆ" ಈಡಾದಂತೆ ಹೇಳಿಕೊಂಡಿದ್ದಾನೆ. ಈತನಿಗೆ ಪಿತ್ರಾರ್ಜಿತವಾದ ಆಸ್ತಿ ಬೇಕಾದಹಾಗಿತ್ತು. ಬೇಕಾದಷ್ಟು ಜನ ಗೆಳೆಯರೂ ಇದ್ದರು. ಈ ಗೆಳೆಯರ ಗುಂಪಿನಲ್ಲಿ ವಿವಿಧಜಾತಿಯ ಜನರಿದ್ದರು—ಕವಿಗಳು, ವೈದ್ಯರು, ಪಂಡಿತರು, ಚಿತ್ರಕರು, ಭಿಕ್ಷುಗಳು, ಸಂನ್ಯಾಸಿಗಳು, ನರ್ತಕಿಯರು, ಇತ್ಯಾದಿ. ಈ ದೊಡ್ಡ ಗುಂಪಿನೊಡನೆ

ಈತನು ದೇಶಪರ್ಯಟನಕ್ಕೆ ಹೊರಟನು. ಇಷ್ಟುಹೊತ್ತಿಗೆ ಮೇಧಾವಿಯಾದ ಈತನು ಬ್ರಾಹ್ಮಣರು ಕಲಿಯಬೇಕಾದ ವಿದ್ಯೆಯನ್ನೆಲ್ಲಾ ಕಲಿತು ವಿದ್ವಾಂಸನಾಗಿದ್ದನು. ದೇಶಪರ್ಯಟನ ಕಾಲದಲ್ಲಿ ಅನೇಕ ರಾಜಾಸ್ಥಾನಗಳನ್ನೂ ಗುರುಕುಲಗಳನ್ನೂ ಸಂದರ್ಶಿಸಿ ಅಲ್ಲಲ್ಲಿ ನಡೆಯುತ್ತಿದ್ದ ವಿದ್ವಾಂಸರ ಚರ್ಚೆಗಳಲ್ಲಿ ಭಾಗವಹಿಸಿದನು. ಹೀಗೆ ಬಹುಕಾಲ ಕಳೆದ ಮೇಲೆ ಸ್ವಗ್ರಾಮಕ್ಕೆ ಹಿಂದಿರುಗಿದನು. ಇಷ್ಟುಹೊತ್ತಿಗೆ ಈತನ ಕೀರ್ತಿ ಶ್ರೀಹರ್ಷಚಕ್ರವರ್ತಿಯ ಕಿವಿಯನ್ನು ಮುಟ್ಟಿತ್ತು. ಚಕ್ರವರ್ತಿಯ ಹತ್ತಿರಿದ್ದ ಕೆಲವರು ಅಸೂಯೆಯಿಂದ ಈತನ "ಶೈಶವೋಚಿತವಾದ ಚಾಪಲ್ಯ"ಗಳಿಗೆ ಬಣ್ಣಗಟ್ಟಿ ಈತನ ವಿಷಯದಲ್ಲಿ ರಾಜನಿಗೆ ಅಸಂತುಷ್ಟಿಯುಂಟಾಗುವಂತೆ ಮಾಡಿದ್ದರು. ಆದರೆ ಬಾಣನಿಗೆ ನಿಷ್ಕಾರಣದ್ವೇಷಿಗಳಿದ್ದಂತೆಯೇ ಅವ್ಯಾಜಮಿತ್ರರೂ ಇದ್ದರು. ಇವರಲ್ಲಿ ಶ್ರೀಹರ್ಷನ ತಮ್ಮನಾದ ಕೃಷ್ಣನು ಒಬ್ಬನು. ಈತನು ಬಾಣನ ವಿಷಯವಾಗಿ ತನ್ನ ಅಣ್ಣನೊಡನೆ ಮಾತನಾಡಿ ಬಾಣನನ್ನು ಆತನ ಆಸ್ಥಾನಕ್ಕೆ ಬರುವಂತೆ ಹೇಳಿ ಕಳುಹಿಸಿದನು. ತನ್ನ ಮನೆಗೆ ಕೃಷ್ಣನ ದೂತನು ಬಂದದ್ದು, ಅವನೊಡನೆ ತಾನು ಮಾಡಿದ ಸಂಭಾಷಣೆ, ಶ್ರೀಹರ್ಷನ ಬಳಿಗೆ ಹೋಗುವಾಗ ತಾನು ಮಾಡಿದ ಪ್ರಯಾಣ, ವೈಭವಪೂರ್ವವಾದ ಆಸ್ಥಾನದಲ್ಲಿ ತಾನು ಚಕ್ರವರ್ತಿಯನ್ನು ನೋಡಿದ್ದು, ಆತನಿಗೂ ತನಗೂ ನಡೆದ ಸಂಭಾಷಣೆ ಮೊದಲಾದುವನ್ನು ಬಾಣಕವಿ ಹೃದಯಂಗಮವಾಗಿ ವರ್ಣಿಸಿರುವನು. ಶ್ರೀಹರ್ಷನು ಕವಿಯನ್ನು ಕೆಲವುಕಾಲ ತನ್ನ ಸಮೀಪದಲ್ಲಿಯೇ ಇಟ್ಟುಕೊಂಡಿದ್ದು, ಆತನ ನಡತೆಯನ್ನೂ ಯೋಗ್ಯತೆಯನ್ನೂ ಪರೀಕ್ಷಿಸಿ, ಮೆಚ್ಚಿ, ಆತನಿಗೆ ಬೇಕಾದ ಹಾಗೆ ಸನ್ಮಾನಮಾಡಿ, ಆತನನ್ನು ತನ್ನ ಆಸ್ಥಾನಕವಿಯಾಗಿಟ್ಟುಕೊಂಡನು.

ಬಾಣನ ಕವಿತಾಮಾರ್ಗ

ಸಂಸ್ಕೃತ ಸಾಹಿತ್ಯಕ್ಷೇತ್ರದ ಪದ್ಯಕಾವ್ಯಲೇಖಕರಲ್ಲಿ ಕಾಳಿದಾಸನಿಗೆ ದೊರೆತಿರುವ ಸ್ಥಾನವು ಗದ್ಯಕಾವ್ಯಲೇಖಕರಲ್ಲಿ ಬಾಣನಿಗೆ ದೊರೆತಿದೆ. ಬಾಣ ಕವಿಯ ಪ್ರತಿಭೆ ಅದ್ಭುತವಾದದ್ದು. ಆತನಿಗಿದ್ದ ಲೋಕಾನುಭವವು ಅಸಾಮಾನ್ಯವಾದದ್ದು. ಪದವಿನ್ಯಾಸಚತುರತೆಯಲ್ಲಂತೂ ಆತನಿಗೆ ಸಮಾನನಾದ ಕವಿ " ನ ಭೂತೋ ನ ಭವಿಷ್ಯತಿ ". ಮಾನವ ಹೃದ

ಯದ ಬಹು ಸೂಕ್ಷ್ಮವಾದ ಭಾವಗಳನ್ನೂ ಪ್ರಕೃತಿಯ ವಿಧವಿಧವಾದ ಸೌಂದರ್ಯವನ್ನೂ ವರ್ಣಿಸುವುದರಲ್ಲಿ ಆತನು ಯಾರಿಗೂ ಕಡಮೆಯಲ್ಲ. ಆತನು ಉದ್ರೇಕಿಸಲಾರದ ಮಾನವ ಹೃದಯದ ಭಾವವಿಲ್ಲ; ಆತನು ಚಿತ್ರಿಸಲಾಗದ ಪ್ರಕೃತಿಯ ಭಾಗವಿಲ್ಲ. "ಬಾಣೋಚ್ಛಿಷ್ಟಂ ಜಗತ್ ಸರ್ವಂ" ಎಂಬ ಹೇಳಿಕೆಯು ಸ್ತುತಿಪಾಠಕನ ಅತ್ಯುಕ್ತಿಯಲ್ಲ; ವಿಮರ್ಶಕನ ವಿಚಾರಪೂರ್ವಕವಾದ ಅಭಿಪ್ರಾಯ.

ಬಾಣಭಟ್ಟನಲ್ಲಿ ಒಂದಕ್ಕೊಂದು ಹೊಂದದ ಎರಡು ಗುಣಗಳು ಮಿಳಿತವಾಗಿರುವುವು. ಒಂದು ಕಡೆ ಆತನು ಪ್ರತಿಭಾಸಂಪನ್ನನಾದ, ರಸಋಷಿಯಾದ ಕವಿ. ಮತ್ತೊಂದುಕಡೆ ಬುದ್ಧಿಚಮತ್ಕಾರದಿಂದ, ಶಬ್ದಜಾಲದಿಂದ ಮುಗ್ಧನಾದ ಪಂಡಿತ. ರಸಿಕತೆಯೂ ಪಾಂಡಿತ್ಯಪ್ರಿಯತೆಯೂ ಇಷ್ಟು ಸಮಾನವಾಗಿ ಒಂದೆಡೆ ಸೇರಿರುವುದು ಮತ್ತಾವ ಕವಿಯಲ್ಲಿಯೂ ಕಂಡುಬರುವುದಿಲ್ಲ. ಬಾಣಕವಿ ಹುಟ್ಟುಕಥೆಗಾರನೆಂದು ಹಿಂದೆಯೇ ಹೇಳಿದೆ. ಆತನು ಕಥೆಯನ್ನು ಅಚ್ಚುಕಟ್ಟಾಗಿ, ಬಹು ಸ್ವಾರಸ್ಯವಾಗಿ, ಕೇಳುವವರು ಕಿವಿಯನ್ನು ತೆರೆದುಕೊಂಡು ಕೇಳುವಂತೆ ಹೇಳುತ್ತಾನೆ. ಕಥೆಯ ಮಧ್ಯೆ ವರ್ಣನೆ ಬಂದರೆ ಆ ವರ್ಣನೆಯಲ್ಲಿಯೇ ಮಗ್ನನಾಗಿ ಅದನ್ನು ಬೆಳೆಸುತ್ತಾ ಕಥೆಯನ್ನು ಮರೆಸಿಬಿಡುತ್ತಾನೆ. ವರ್ಣಿಸಬೇಕಾದುದನ್ನು ಪಾಠಕರ ಕಣ್ಣೆದುರಿಗೆ ಬಂದು ನಿಲ್ಲುವಂತೆ ಚಿತ್ರಿಸುವ ಸಾಮರ್ಥ್ಯವು ಕವಿಗೆ ಇದೆ; ಆದರೆ ವರ್ಣಿಸುತ್ತಾ ವರ್ಣಿಸುತ್ತಾ ಶಬ್ದಾರ್ಥಾಲಂಕಾರಗಳ, ಶ್ಲೇಷವಿರೋಧಾಭಾಸಗಳ ಮರುಭೂಮಿಯಲ್ಲಿ ನಡೆದು ಪಾಠಕರನ್ನೂ ಎಳೆದುಕೊಂಡು ಹೋಗುತ್ತಾನೆ. ಈ ವರ್ಣನೆಯಿಂದ ಪಾರಾಗಿ ಬರುವ ಹೊತ್ತಿಗೆ ಕಥಾಸೂತ್ರವು ಅನೇಕವೇಳೆ ಹರಿದು ಹೋಗಿರುತ್ತದೆ. ಕಥೆಯ ದೃಷ್ಟಿಯಿಂದ ಬಾಣಕವಿಯ ಕಾವ್ಯರಚನೆಯಲ್ಲಿ ಇದೊಂದು ದೋಷವಾಗುತ್ತದೆ. ಇನ್ನು ಭಾವರಸಗಳ ದೃಷ್ಟಿಯಿಂದಲೂ ಒಂದು ದೋಷವಿದೆ. ಕವಿಗೆ ಪಾಠಕರ ಹೃದಯದಲ್ಲಿ ಅಡಗಿರುವ ಭಾವತರಂಗಗಳನ್ನು ಎಬ್ಬಿಸಿ ರಸಪ್ರವಾಹವನ್ನು ಹರಿಸುವ ಶಕ್ತಿ ಇದೆ; ಈ ರಸಪ್ರವಾಹಕ್ಕೆ ಈತನ ಪಾಂಡಿತ್ಯ ಪ್ರಿಯತೆಯು, ಶಬ್ದಾರ್ಥಾಲಂಕಾರ ಪ್ರೌಢಿಮೆಯು, ಅನೇಕವೇಳೆ ಅಡ್ಡವಾಗಿ ಬರುತ್ತದೆ. ಹೀಗಾಗಿ ಕಾವ್ಯರಸಾಸ್ವಾದನಲೋಲುಪರಿಗೆ ಮೇಲಿಂದಮೇಲೆ ಬೇಸರ

ವುಂಟಾಗುತ್ತದೆ. ಉತ್ತಮವಾದ ಕಾವ್ಯಕ್ಕೆ ರಸಭಾವಗಳೂ ಬೇಕು; ವರ್ಣನೆಯೂ ಬೇಕು; ಶಬ್ದಾರ್ಥಾಲಂಕಾರಗಳೂ ಬೇಕು. ಆದರೆ ಇವೆಲ್ಲವೂ ತಕ್ಕ ಪ್ರಮಾಣದಲ್ಲಿ ಹೊಂದಿಕೆಯಾಗಿ ಸೇರಿರಬೇಕು. ಬಾಣ ಕವಿಯ ಕಾವ್ಯದಲ್ಲಿ ಈ ಪ್ರಮಾಣವು ಮೇಲಿಂದಮೇಲೆ ಏರುಪೇರಾಗಿ ಕಾವ್ಯದ ಹದವು ಕೆಟ್ಟುಹೋಗಿರುವುದೆಂದು ಹೇಳಬಹುದು. ಬಾಣನ ಕಾವ್ಯದಲ್ಲಿ ಆತನ ಪಾಂಡಿತ್ಯ ಪ್ರಿಯತೆಯು ಉಂಟುಮಾಡಿರುವ ದೋಷ ವನ್ನು ಒಬ್ಬ ಪಾಶ್ಚಾತ್ಯ ವಿಮರ್ಶಕರು ಹೀಗೆ ವರ್ಣಿಸಿರುತ್ತಾರೆ.—

,, Bana's prose is an Indian wood where progress is impossible through the undergrowth until the traveller cuts out a path for himself, and where even then he is confronted by malicious wild beasts in the shape of unknown words to terrify him."

ಈ ಅಭಿಪ್ರಾಯವನ್ನು ಎಲ್ಲ ಪಾಶ್ಚಾತ್ಯವಿಮರ್ಶಕರೂ ಒಟ್ಟಿನಲ್ಲಿ ಒಪ್ಪಿ ಕೊಂಡಿರುತ್ತಾರೆ. ಈ ಕಷ್ಟವನ್ನು ಪಾಶ್ಚಾತ್ಯರು ಅನುಭವಿಸುವಷ್ಟು ಭಾರತೀಯರು ಅನುಭವಿಸದಿರಬಹುದು; ಆದರೂ ಈ ಅಭಿಪ್ರಾಯದಲ್ಲ ಸತ್ಯಾಂಶವಿದೆ ಎಂದು ಒಪ್ಪಿಕೊಳ್ಳಬೇಕು. ಆದರೆ ಈ ನ್ಯೂನತೆಯ ತಪ್ಪನ್ನೆಲ್ಲ ಬಾಣಕವಿಯ ತಲೆಗೇ ಕಟ್ಟುವುದು ಅನ್ಯಾಯ; ಏಕೆಂದರೆ, ಆ ಕಾಲದ ಸಾಹಿತ್ಯಾಭಿರುಚಿಯೇ ಹಾಗಿತ್ತು. ಆ ಕಾಲದ ಕವಿಗಳೆಲ್ಲರ ಲ್ಲಿಯೂ ಈ ನ್ಯೂನತೆ ಸ್ವಲ್ಪ ಹೆಚ್ಚುಕಡಮೆ ಕಂಡುಬರುತ್ತದೆ.

ಕಾದಂಬರೀ ಕಥೆಯ ಸ್ವರೂಪ

ಕಾದಂಬರಿಯ ಕಥೆ ಬಾಣಕವಿಯ ಸ್ವಂತ ಸೃಷ್ಟಿಯಲ್ಲ. ಅದರ ಮೂಲವು ಗುಣಾಢ್ಯನ ಬೃಹತ್ಕಥೆಯಲ್ಲಿರುವುದೆಂದು ತಿಳಿದುಬರುತ್ತದೆ. ಭಾರತ ರಾಮಾಯಣಗಳಂತೆ ಬೃಹತ್ಕಥೆಯೂ ಸಂಸ್ಕೃತ ಕವಿಗಳಿಗೆ ಕಾವ್ಯ ವಸ್ತುವಿನ ಒಂದು ದೊಡ್ಡ ಭಂಡಾರವಾಗಿತ್ತು. ಭಾರತ ರಾಮಾಯಣ ಗಳು ಸಂಸ್ಕೃತದಲ್ಲಿವೆ; ಬೃಹತ್ಕಥೆ ಪೈಶಾಚೀ ಭಾಷೆಯಲ್ಲಿತ್ತು. ಈಗ ಆ ಗ್ರಂಥವು ಅನುಪಲಬ್ಧವಾಗಿದೆ. ಆದರೆ ಅದನ್ನು ಸಂಗ್ರಹಿಸಿ ಕೆಲವರು ಸಂಸ್ಕೃತದಲ್ಲಿ ಬರೆದಿರುತ್ತಾರೆ. ಇಂಥ ಗ್ರಂಥಗಳಲ್ಲಿ ಕಥಾ ಸರಿತ್ಸಾಗರವೂ ಒಂದು. ಅದರಿಂದ ಬೃಹತ್ಕಥೆಯಲ್ಲಿ ಸ್ವಲ್ಪ ಹೆಚ್ಚು ಕಡಮೆ ಕಥೆ ಹೇಗಿದ್ದಿತೆಂಬುದನ್ನು ಊಹಿಸಬಹುದು. ಕಥಾಸರಿತ್ಸಾಗರದ

ಮಕರಂದಿಕೋಪಾಖ್ಯಾನದಲ್ಲಿ (ಲಂಬಕ ೧೦—ತರಂಗ ೩) ಕಾದಂಬರೀ ಕಥೆಯ ಮೂಲ ರೇಖೆಗಳಿವೆ. ಬಾಣಕವಿ ಅದಕ್ಕೆ ಬಣ್ಣಕಟ್ಟಿ ಒಂದು ಮನೋಹರವಾದ ವರ್ಣಚಿತ್ರವನ್ನು ರಚಿಸಿ ಅದರಲ್ಲಿ ಜೀವಕಳೆಯನ್ನು ತುಂಬಿದ್ದಾನೆ.

ಕಾದಂಬರಿ ಒಂದು ಕಥಾಕಾವ್ಯ. ಅದರ ಕಥಾಸೂತ್ರವು ಸರಳವಾಗಿಲ್ಲ; ಅದರಲ್ಲಿ ಕೆಲವು ತೊಡಕುಗಳಿವೆ. ಕಥೆಯನ್ನು ಸುಲಭವಾಗಿ ಗ್ರಹಿಸಬೇಕಾದರೆ ಈ ತೊಡಕುಗಳೇನೆಂಬುದನ್ನು ತಿಳಿದಿರುವುದು ಒಳ್ಳೆಯದು. (೧) ಈ ಕಾವ್ಯದಲ್ಲಿ ಚಂದ್ರಾಪೀಡ ಕಾದಂಬರಿಯರ ಪ್ರಣಯದ ಕಥೆ ವರ್ಣಿತವಾಗಿದೆ. ಅದರ ಜತೆಗೆ ಇನ್ನೊಂದು ಪ್ರಣಯದ ಕಥೆಯೂ ಸೇರಿದೆ; ಅದು ಪುಂಡರೀಕ ಮಹಾಶ್ವೇತೆಯರ ಪ್ರಣಯದ ಕಥೆ. ಈ ಎರಡು ಕಥೆಗಳೂ ಹಾಸುಹೊಕ್ಕುಗಳಂತೆ ಒಂದರೊಡನೆ ಒಂದು ಬೆರೆದು ಹೋಗಿವೆ. (೨) ಕಥಾನಾಯಿಕೆಯರಾದ ಕಾದಂಬರೀ ಮಹಾಶ್ವೇತೆಯರು ದೇವವರ್ಗಕ್ಕೆ ಸೇರಿದವರು-- ಕಾದಂಬರಿ ಗಂಧರ್ವ ಕನ್ಯೆ, ಮಹಾಶ್ವೇತೆ ಅಪ್ಸರೆ. ಇವರು ವರಿಸಿದ ಪತಿಗಳು, ಚಂದ್ರಾಪೀಡ ಪುಂಡರೀಕರು, ದೇವಾಂಶ ಸಂಭೂತರಾದರೂ ಮಾನವ ವರ್ಗಕ್ಕೆ ಸೇರಿದವರು. ಇವರಿಬ್ಬರೂ ಶಾಪಗ್ರಸ್ತರಾಗಿ ಜನ್ಮಾಂತರಗಳನ್ನು ಪಡೆಯುತ್ತಾರೆ. ಪುಂಡರೀಕನಿಂದ ಶಾಪ ಹೊಂದಿದ ಚಂದ್ರನು ಚಂದ್ರಾಪೀಡನಾಗಿ ಅವತರಿಸಿ ಕಾದಂಬರಿಯ ಪ್ರಣಯಕ್ಕೆ ಪಾತ್ರನಾಗಿ ಆಕೆಯನ್ನು ವಿವಾಹವಾಗುವುದಕ್ಕೆ ಮುಂಚೆಯೇ ದೇಹತ್ಯಾಗ ಮಾಡುವನು. ಬಳಿಕ ಶೂದ್ರಕರಾಜನಾಗಿ ಹುಟ್ಟಿ ಶಾಪವಿಮೋಚನಾನಂತರದಲ್ಲಿ ಚಂದ್ರಾಪೀಡದೇಹವನ್ನು ಹೊಂದಿ ಕಾದಂಬರಿಯನ್ನು ವಿವಾಹವಾಗುವನು. ಪುಂಡರೀಕನು ಚಂದ್ರನ ಆಗ್ರಹಕ್ಕೆ ಈಡಾಗಿ ದೇಹತ್ಯಾಗಮಾಡಿ ಚಂದ್ರನು ಚಂದ್ರಾಪೀಡನಾಗಿ ಅವತರಿಸಿದಾಗ ಅವನ ಪ್ರಿಯಮಿತ್ರನಾದ ವೈಶಂಪಾಯನನಾಗಿ ಜನಿಸುವನು. ಆಗ ದುರ್ನಿಗ್ರಹವಾದ ಪೂರ್ವಜನ್ಮವಾಸನೆಯಿಂದ ಪ್ರೇರಿತನಾಗಿ ಮಹಾಶ್ವೇತೆಯಲ್ಲಿ ಮೋಹಗೊಂಡು ಇವನು ಪರಪುರುಷನೆಂದು ಭಾವಿಸಿದ ಆಕೆಯಿಂದ ಶಾಪಹೊಂದಿ ಗಿಳಿಯ ಜನ್ಮವನ್ನು ಪಡೆದು ಶಾಪವಿಮೋಚನೆಯಾದಮೇಲೆ ಪುಂಡರೀಕನ ಶರೀರವನ್ನು ಮರಳಿ ಹೊಂದಿ ಮಹಾಶ್ವೇತೆಯನ್ನು ಮದುವೆಯಾಗುವನು. ಕಾದಂಬರಿಯ ಕಥೆ ಆರಂಭವಾಗುವುದು

ಚಂದ್ರಾಪೀಡನು ಶೂದ್ರಕನಾಗಿಯೂ ಪುಂಡರೀಕನು ಗಿಳಿಯಾಗಿಯೂ ಜನ್ಮಗ್ರಹಣಮಾಡಿದ ಕಾಲದಲ್ಲಿ. (೩) ಈ ಕಥೆಯನ್ನೆಲ್ಲಾ ಕವಿ ತಾನೇ ಹೇಳುವುದಿಲ್ಲ ; ಅದರ ಬಹುಭಾಗವನ್ನು ಬೇರೆಬೇರೆ ಪಾತ್ರಗಳ ಬಾಯಿಂದ ಹೇಳಿಸುತ್ತಾನೆ. ಕಥೆಯ ಆರಂಭ ಭಾಗವನ್ನು ಎಂದರೆ ಶೂದ್ರಕರಾಜನ ಬಳಿಗೆ ಚಂಡಾಲಕನ್ಯೆ ಗಿಳಿಯನ್ನು ತರುವವರೆಗಿನ ಕಥೆಯನ್ನು ಕವಿ ತಾನೇ ಹೇಳುತ್ತಾನೆ. ಆ ಮೇಲೆ ಗಿಳಿಯು ತಾನು ಹುಟ್ಟಿ ಬೆಳೆದು ಜಾಬಾಲಿ ಮುನಿಗಳ ಆಶ್ರಮಕ್ಕೆ ಹೋಗುವವರೆಗಿನ ತನ್ನ ಚರಿತ್ರೆಯನ್ನು ಶೂದ್ರಕನಿಗೆ ಹೇಳುತ್ತದೆ. ಅಲ್ಲಿಂದ ಮುಂದೆ ಗಿಳಿಗೆ ಆ ಜನ್ಮ ಬರುವುದಕ್ಕೆ ಕಾರಣವಾದ ಅದರ ಪೂರ್ವಜನ್ಮದ ಕಥೆಯನ್ನು ಜಾಬಾಲಿ ಮುನಿಗಳು ತಮ್ಮ ಆಶ್ರಮದ ಋಷಿಗಳಿಗೆ ಹೇಳುತ್ತಾರೆ. (ಈ ಕಥೆಯೆಲ್ಲವೂ ಜಾಬಾಲಿಗಳ ಮಾತಿನಲ್ಲಿಯೇ ಇಲ್ಲ. ಇದರಲ್ಲಿ ಕೆಲವು ಭಾಗವು ಮಹಾಶ್ವೇತೆಯ ಮಾತಿನಲ್ಲಿಯೂ ಕೆಲವು ಭಾಗವು ಕಪಿಂಜಲನ ಮಾತಿನಲ್ಲಿಯೂ ಇದೆ.) ಅದನ್ನು ಗಿಳಿ ಶೂದ್ರಕನಿಗೆ ಹೇಳುತ್ತದೆ. ಅಲ್ಲಿಂದ ಮುಂದೆ ಗಿಳಿ ತಾನು ಶೂದ್ರಕನ ಬಳಿಗೆ ಬರುವವರೆಗಿನ ಸ್ವಚರಿತ್ರೆಯನ್ನು ತಾನೇ ಹೇಳುತ್ತದೆ. ಇದಾದಮೇಲೆ ಚಂಡಾಲಕನ್ಯೆ ತಾನಾರೆಂಬುದನ್ನೂ ಶೂದ್ರಕನೂ ಗಿಳಿಯೂ ಯಾರೆಂಬುದನ್ನೂ ತಿಳಿಸುತ್ತಾಳೆ. ಕಥೆಯ ಆರಂಭ ಭಾಗದಂತೆಯೇ ಕಥೆಯ ಅಂತ್ಯಭಾಗವನ್ನೂ ಕವಿ ತಾನೇ ಹೇಳಿ ಮುಗಿಸುತ್ತಾನೆ.

ಕಾದಂಬರಿಯ ಕಥಾಸಾರಾಂಶ

ಮಾಳವದ ರಾಜಧಾನಿಯಾದ ವಿದಿಸೆಯೆಂಬ ಪಟ್ಟಣದಲ್ಲಿ ಶೂದ್ರಕನೆಂಬ ರಾಜನು "ಚತುರಬ್ಧಿಮೇಖಲಾವಲಯಿತ ಭೂಮಿಗೆ" ಒಡೆಯನಾಗಿ ರಾಜ್ಯಭಾರಮಾಡುತ್ತಿದ್ದನು. ಆತನು ಒಂದು ದಿವಸ ಪ್ರಭಾತ ಸಮಯದಲ್ಲಿ ಒಡ್ಡೋಲಗದಲ್ಲಿರುವಾಗ, ಮೋಹಿನಿಯಂತೆ ಮನೋಹರಾಕಾರೆಯಾದ ಒಬ್ಬ ಚಂಡಾಲಕನ್ಯೆ ನೀಲಮಣಿಪುತ್ರಿಕೆಯಂತೆ ಒಡ್ಡೋಲಗವನ್ನು ಪ್ರವೇಶಿಸಿದಳು. ಆಕೆಯ ರೂಪರೇಖಾವಿಲಾಸವನ್ನು ನೋಡಿ ರಾಜನು ಮುಗ್ಧನಾದನು. ರಾಜನಿಗೆ ಕಾಣಿಕೆಯಾಗಿ ಅರ್ಪಿಸುವುದಕ್ಕಾಗಿ ಆಕೆ ಒಂದು ಅರಗಿಳಿಯನ್ನು ತಂದಿದ್ದಳು. ಆ ಅರಗಿಳಿಯಿದ್ದ ಪಂಜರವನ್ನು ರಾಜನ ಮುಂದಿಟ್ಟು ಆ ಗಿಳಿ ವೇದಶಾಸ್ತ್ರ ಪುರಾಣಗಳನ್ನೂ

ಸಂಗೀತಸಾಹಿತ್ಯಾದಿ ಕಲೆಗಳನ್ನೂ ಬಲ್ಲುದೆಂದು ತಿಳಿಸಿ ಪಂಜರದ ಬಾಗಿಲನ್ನು ತೆರೆಯಲು, ಅದು "ರಾಜಾಭಿಮುಖನುಂ ಉನ್ನಮಿತ ದಕ್ಷಿಣ ಚರಣನುಂ ಅತಿಸ್ಪಷ್ಟ ವರ್ಣಸಂಸ್ಕಾರಮಪ್ಪ ವಾಣಿಯಿಂ ಕೃತಜಯ ಶಬ್ದನುಮಾಗಿ,

ಸ್ತನಯುಗಮಶ್ರುಸ್ನಾತಂ ಸಮೀಪತರವರ್ತಿ ಹೃದಯಶೋಕಾಗ್ನೇಃ ।
ಚರತಿ ವಿಮುಕ್ತಾಹಾರಂ ವ್ರತಮಿವ ಭವತೋ ರಿಪುಸ್ತ್ರೀಣಾಂ ॥

ಎಂದು ಒಂದು ಆರ್ಯೆಯನ್ನು ಹೇಳಿತು. ಅದನ್ನು ಕೇಳಿ ವಿಸ್ಮಿತನಾದ ರಾಜನು ಅದರ ವೃತ್ತಾಂತವನ್ನು ತಿಳಿಯಲಪೇಕ್ಷಿಸಿ ಭೋಜನಾನಂತರದಲ್ಲಿ ಆ ಗಿಳಿಯನ್ನು ಕುರಿತು ನೀನು ಯಾರು, ಎಲ್ಲಿಯವನು, ನಿನಗೆ ಈ ಶಾಸ್ತ್ರ ಪರಿಚಯವು ಹೇಗಾಯಿತು, ನೀನು ನಿಜವಾಗಿ ಗಿಳಿಯೇ ಅಥವಾ ವಿಹಂಗಮ ದೇಹಿಯೇ ಎಂದು ಕೇಳಿದನು. ಆಗ ಗಿಳಿ ತನ್ನ ಕಥೆಯನ್ನು ಹೀಗೆ ಹೇಳಿತು.

ಗಿಳಿಯ ಹೇಳಿಕೆ.—ವಿಂಧ್ಯಾಚಲದ ಅಡವಿಯಲ್ಲಿರುವ ಪಂಪಾ ಸರೋವರದ ತಡಿಯಲ್ಲಿ ಒಂದು ದೊಡ್ಡ ಬೂರುಗದ ಮರವಿದೆ. ಆ ಮರದಲ್ಲಿ ಗಿಳಿಯ ಹಿಂಡುಗಳು ಗೂಡುಗಳನ್ನು ಮಾಡಿಕೊಂಡಿದ್ದುವು; ಅದರ ಒಂದು ಹಳೆಯ ಪೊಟ್ಟರೆಯಲ್ಲಿ ಒಂದು ಮುದಿಗಿಳಿ ತನ್ನ ಹೆಂಡತಿ ಯೊಡನೆ ವಾಸಿಸುತ್ತಿತ್ತು. ಆ ಮುದಿಗಿಳಿಗೆ ಪಾಪಿಯಾದ ನಾನು ಮಗ ನಾಗಿ ಹುಟ್ಟಿದೆನು. ಹುಟ್ಟಿದ ಕೂಡಲೆ ನನ್ನ ತಾಯಿ ಪ್ರಸವವೇದನೆ ಯನ್ನು ತಾಳಲಾರದೆ ತೀರಿಕೊಂಡಳು. ಹೀಗೆ ಜಾಯಾ ವಿಯೋಗ ದುಃಖವು ಪ್ರಾಪ್ತವಾದರೂ ನನ್ನ ತಂದೆ ನನ್ನಮೇಲಿನ ಮಮತೆಯಿಂದ ಆ ದುಃಖವನ್ನು ಅಡಗಿಸಿಕೊಂಡು, ಮುಪ್ಪಿನಿಂದ ಹಾರಲಾರದೆ ಇದ್ದರೂ ಅಕ್ಕಪಕ್ಕದ ಗೂಡುಗಳಿಂದ ಹಕ್ಕಿಗಳು ತಿಂದುಳಿದ ಕಾಳನ್ನೂ ಹಣ್ಣುಹಂಪ ಲನ್ನೂ ತಂದು ನನಗೆ ತಿನ್ನಿಸಿ ಮಿಕ್ಕದ್ದನ್ನು ತಾನು ತಿಂದು ನನ್ನನ್ನು ಸಾಕುತ್ತಿದ್ದನು. ಹೀಗಿರಲು ಒಂದು ದಿನ ಬೇಡರ ಪಡೆಯೊಂದು ಆ ಕಾಡನ್ನು ಮುತ್ತಿತು. ಅವರಲ್ಲಿ ಒಬ್ಬ ಮುದಿಬೇಡನು ಆ ಬೂರುಗದ ಮರವನ್ನು ಹತ್ತಿ ಮರಿಗಳೆನ್ನದೆ ಮುದಿಗಿಳಿಗಳೆನ್ನದೆ ಗಿಳಿಗಳ ಗಂಟಲನ್ನು ಮುರಿದು ನೆಲಕ್ಕೀಡಾಡುತ್ತಿದ್ದನು. ಆಗ ನನ್ನ ಮುದಿತಂದೆ ನನ್ನನ್ನು ನೋಡಿ ಕಣ್ಣೀರನ್ನು ಸುರಿಸುತ್ತಾ "ಮಗು, ನಿನ್ನನ್ನು ಯಾರು ಕಾಯ ಬಲ್ಲರು ?

"ನಿನ್ನಯ ತಾಯನುಯ್ವ ಪದದೊಳ್ ಜವನಕ್ಕಟ ನೋಡು ಕಂದ ಬಂ
ದೆನ್ನುಮನಂತೆ ಕೂಡಿದೊಡನೊಕ್ಕಲುಪೋಗಿಸನೇಕೆ ಬಯ್ತನಾಂ
ನಿನ್ನನೆ ನೋಡಿ ಶೋಕಮನಡಂಗಿಸಿ ಬಾಷ್ಕೆಯೆ ಲೇಸೆನುತ್ತುಮಿ
ರ್ಪನ್ನೆಗಮುಮ್ಮ ನಿನ್ನನೊಡಗೊಂಡು ಮುಬುಂಗುವ ಕಾಲಮಾದುದೋ"

ಎಂದು ನನ್ನನ್ನು ತೊಡೆಯೆಡೆಯಲ್ಲಿಟ್ಟುಕೊಂಡು ತನ್ನ ಹರಿದ ರೆಕ್ಕೆಗಳಿಂದ ಮುಚ್ಚಿ ಮರುಗುತ್ತಿರಲು ಆ ಬೇಡನು ನಾವಿದ್ದ ಗೂಡಿಗೆ ಕೈಹಾಕಿ ನನ್ನ ತಂದೆಯ ಗಂಟಲನ್ನು ಮುರಿದು ನೆಲಕ್ಕೀಡಾಡಿದನು. ನನ್ನ ತಂದೆ ನೆಲಕ್ಕೆ ಬೀಳುವಾಗ ಆತನ ರೆಕ್ಕೆಯಿಂದ ಸಿಡಿದು ತರಗೆಲೆಯ ರಾಶಿಯಲ್ಲಿ ಬಿದ್ದು ನಾನು ಜೀವವನ್ನು ಉಳಿಸಿಕೊಂಡೆನು. ಬಳಿಕ ನನಗೆ ನೀರಡಿಕೆಯಾಯಿತು. ಹಾರುವುದಕ್ಕೆ ಗರಿ ಹುಟ್ಟಿರಲಿಲ್ಲ; ಕಾಲೂ ಬಲಿತಿರಲಿಲ್ಲ. ಮೂಗು ಮುರಿಯುವಂತೆ ಮುಗ್ಗರಿಸುತ್ತಾ ಎಡಬಲಕ್ಕೆ ಬೀಳುತ್ತಾ ಸಾಗುತ್ತಿರಲು ಮಧ್ಯಾಹ್ನವಾಯಿತು; ಬಿಸಿಲ ಬೇಗೆ ಹೆಚ್ಚಿತು; ನೀರಡಿಕೆ ಘನವಾಯಿತು. ಇನ್ನುಳಿಯುವ ಆಸೆಯಿಲ್ಲವೆಂದುಕೊಂಡೆನು. ಅದೃಷ್ಟವಶಾತ್ ಆಗ ಅದೇ ದಾರಿಯಲ್ಲಿ ಸ್ನಾನಕ್ಕಾಗಿ ಹೋಗುತ್ತಿದ್ದ ಜಾಬಾಲಿ ಮುನಿಕುಮಾರನಾದ ಹಾರೀತನು ನನ್ನನ್ನು ಕಂಡು ಮನಕರಗಿ ಕೊಳದ ಬಳಿಗೆ ತೆಗೆದುಕೊಂಡುಹೋಗಿ ಶೈತ್ಯೋಪಚಾರಮಾಡಿ ಸ್ನಾನಾನಂತರ ತನ್ನ ತಂದೆಯ ಆಶ್ರಮಕ್ಕೆ ತೆಗೆದುಕೊಂಡು ಹೋದನು. ಜಾಬಾಲಿ ಮುನಿ ನನ್ನನ್ನು ನೋಡಿ ಸ್ವಲ್ಪಕಾಲ ಧ್ಯಾನಿಸಿ, ಈತನು ಹಿಂದಿನ ಜನ್ಮದಲ್ಲಿ ನೀತಿಯನ್ನು ಬಿಟ್ಟು ನಡೆದು ಮೋಹದಿಂದ ತಿರ್ಯಗ್ಜಾತಿಯಲ್ಲಿ ಹುಟ್ಟಿದನು ಎಂದು ಹೇಳಿದನು. ಅಲ್ಲಿದ್ದ ಋಷಿಗಳು ಈತನ ಹಿಂದಿನ ಕಥೆಯೇನೆಂದು ಕೇಳಲು ಈ ರೀತಿಯಾಗಿ ಹೇಳಿದನು.

ಜಾಬಾಲಿಯ ಹೇಳಿಕೆ.—ಅವಂತೀ ದೇಶದ ಉಜ್ಜಯಿನಿಯೆಂಬ ಪಟ್ಟಣದಲ್ಲಿ ತಾರಾಪೀಡನೆಂಬ ರಾಜನಿದ್ದನು; ಆತನಿಗೆ ಸಕಲಶಾಸ್ತ್ರವಿದನಾದ ಶುಕನಾಸನೆಂಬ ಬ್ರಾಹ್ಮಣನು ಮಂತ್ರಿಯಾಗಿದ್ದನು. ಆತನ ರಾಣಿಯ ಹೆಸರು ವಿಲಾಸವತೀ ಮಹಾದೇವಿ. ಬಹುಕಾಲ ಮಕ್ಕಳಾಗದ್ದರಿಂದ ಆ ರಾಜನೂ ರಾಣಿಯೂ ರಾಜ್ಯವಿಭವವು ವಿಫಲವಾದಂತೆ ಮರುಗುತ್ತಿದ್ದರು. ಪುತ್ರಾಪೇಕ್ಷಿಗಳಾದ ಅವರು ಅನೇಕ ವ್ರತನೇಮಾದಿಗಳನ್ನು ಆಚರಿಸುತ್ತಿರಲು ಅವರಿಗೆ ಒಬ್ಬ ಮಗನಾದನು. ಆ ದಿವಸವೇ ಮಂತ್ರಿಗೂ

ಒಬ್ಬ ಮಗನಾದನು. ರಾಜನ ಮಗನಿಗೆ ಚಂದ್ರಾಪೀಡನೆಂದೂ ಮಂತ್ರಿಯ ಮಗನಿಗೆ ವೈಶಂಪಾಯನನೆಂದೂ ನಾಮಕರಣ ಮಾಡಿದರು. ಶೈಶವವು ಕಳೆದ ಮೇಲೆ ಅವರಿಗೆ ತಕ್ಕ ವಿದ್ಯಾಬುದ್ಧಿಗಳನ್ನು ಕಲಿಸಿದರು. ಅವರಿಬ್ಬರೂ ಪ್ರಾಣಪ್ರಿಯರಾದರು.

ದಿನಪತಿಯುಂ ದಿನಮುಂ ಬಿಡ
ದನುಬಂಧದಿನಗಲದಂತೆವೋಲ್ ಚಂದ್ರಾಪೀ
ಡನುಮಂತಾ ವೈಶಂಪಾ
ಯನನುಂ ಪದಪಿಂದಮೊರ್ವರೊರ್ವರನಗಲರ್

ಚಂದ್ರಾಪೀಡನಿಗೆ ಹದಿನಾರು ವರುಷ ವಯಸ್ಸಾಗುವ ಹೊತ್ತಿಗೆ ಆತನು "ಪರಿಸಮಾಪ್ತ ಸಕಲ ಕಲಾ ವಿಜ್ಞಾನ"ನಾದನು. ಆಗ ತಾರಾಪೀಡನು ಮಗನಿಗೆ ಪರಮೋತ್ಸಾಹದಿಂದ ಯೌವರಾಜ್ಯಾಭಿಷೇಕವನ್ನು ಮಾಡಿದನು. ಈ ಸಮಯದಲ್ಲಿ, ಚಂದ್ರಾಪೀಡನಿಗೆ ಪರಮಪ್ರಿಯವಾದ ಇಂದ್ರಾಯುಧವೆಂಬ ಕುದುರೆಯು ತಂದೆಯಿಂದಲೂ ಆತನನ್ನು ನೆರಳಿನಂತೆ ಅನುಸರಿಸ ತಕ್ಕ ಪತ್ರಲೇಖೆಯೆಂಬ ಪರಿಚಾರಿಕೆ ತಾಯಿಯಿಂದಲೂ ದೊರೆತರು. ಪತ್ರಲೇಖೆಯ ಶೀಲಾಚಾರವಿನಯಾದಿಗಳನ್ನು ನೋಡಿ ಚಂದ್ರಾಪೀಡನು ಆಕೆಯನ್ನು ತನ್ನ ತಾಂಬೂಲ ಕರಂಕವಾಹಿನಿಯನ್ನಾಗಿ ಮಾಡಿಕೊಂಡನು. ಯೌವರಾಜ್ಯಾಭಿಷೇಕವಾದೊಡನೆಯೇ ದಿಗ್ವಿಜಯಕ್ಕಾಗಿ ಹೊರಟನು.

ದಿಗ್ವಿಜಯಮಾಡಿಕೊಂಡು ಬರುತ್ತಾ ಒಂದು ದಿನ ಚಂದ್ರಾಪೀಡನು ಬೇಟೆಗೆ ಹೋಗಿದ್ದನು. ಆಗ ಕುದುರೆಯ ಮುಖವನ್ನುಳ್ಳ ವಿಲಕ್ಷಣವಾದ ಕಿನ್ನರ ಮಿಥುನವು ಬೆಟ್ಟದ ತುದಿಯಿಂದ ಇಳಿದು ಬಂದು ಆಡುತ್ತಿದ್ದುದನ್ನು ಕಂಡು ಹಿಡಿಯಬೇಕೆಂಬ ತವಕದಿಂದ ಬೆನ್ನಟ್ಟಿಹೋದನು. ಆದರೆ ಅವು ಸಿಕ್ಕದೆ ಕೈಲಾಸ ಶಿಖರವನ್ನೇರಿ ಕಣ್ಮರೆಯಾದುವು. ರಾಜಕುಮಾರನು ಆಗಲೇ ತನ್ನ ಪಾಳಯವನ್ನು ಬಿಟ್ಟು ಬಹುದೂರ ಬಂದುಬಿಟ್ಟಿದ್ದನು. ಅಷ್ಟು ಹೊತ್ತಿಗೆ ಮಧ್ಯಾಹ್ನವಾಗಿತ್ತು. ಕುದುರೆಯೂ ದಣಿದಿತ್ತು, ತಾನೂ ದಣಿದಿದ್ದನು. ಆದಕಾರಣ ಮೊದಲು ಒಂದು ಜಲಾಶಯವನ್ನು ಕಂಡುಹಿಡಿದು ಅಲ್ಲಿ ಸ್ವಲ್ಪ ವಿಶ್ರಮಿಸಿಕೊಂಡು ಅನಂತರ ತನ್ನ ಪಾಳಯಕ್ಕೆ ಹಿಂದಿರುಗಬೇಕೆಂದು ನಿಶ್ಚಯಿಸಿ ಬರುತ್ತಿರುವಲ್ಲಿ ಅಚ್ಛೋದ ಸರೋವರವು ಸಿಕ್ಕಿತು. ಅಲ್ಲಿ ಕುದುರೆಯಿಂದಿಳಿದು ಅದಕ್ಕೆ ನೀರು ಕುಡಿಸಿ ಹುಲ್ಲು

ಕೊಯ್ದು ಹಾಕಿ ತಾನೂ ವಿಶ್ರಮಿಸಿಕೊಳ್ಳುತ್ತಿರಲು ಇಂಪಾದ ಗಾನವು ಕೇಳ ಬಂತು. ಆ ಶಬ್ದವನ್ನನುಸರಿಸಿ ಹೋಗಲು ಒಂದು ಸಿದ್ಧಾಯತನವು ಕಣ್ಣಿಗೆ ಬಿತ್ತು. ಅಲ್ಲಿ ಅಪೂರ್ವ ಸುಂದರಿಯೂ ನವಯೌವನಶಾಲಿನಿಯೂ ತೇಜಸ್ವಿನಿಯೂ ಆದ ಒಬ್ಬ ತಾಪಸವೇಷಧಾರಿಣಿ ಶಿವನನ್ನು ಆರಾಧಿಸುತ್ತಿದ್ದಳು. ಸ್ವಲ್ಪ ಹೊತ್ತಾದ ಮೇಲೆ ಆಕೆ ಶಿವಲಿಂಗಕ್ಕೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ ಅಲ್ಲಿ ನಿಂತಿದ್ದ ಚಂದ್ರಾಪೀಡನನ್ನು ನೋಡಿ ಸ್ವಾಗತವನ್ನು ಕೇಳಿ ತನ್ನ ಆತಿಥ್ಯವನ್ನು ಸ್ವೀಕರಿಸುವಂತೆ ಆತನನ್ನು ಪ್ರಾರ್ಥಿಸಿ ತಾನು ವಾಸಿಸುತ್ತಿದ್ದ ಗುಹೆಗೆ ಕರೆದುಕೊಂಡುಹೋದಳು. ಆಕೆಯ ಆತಿಥ್ಯವನ್ನು ಚಂದ್ರಾಪೀಡನು ಸ್ವೀಕರಿಸಿ, ಆಕೆ ಫಲಾಹಾರವಾಡಿ ಬಂದ ಮೇಲೆ ತನ್ನ ವೃತ್ತಾಂತವನ್ನೆಲ್ಲ ಆಕೆಗೆ ವಿವರಿಸಿ ಆಕೆಯ ವೃತ್ತಾಂತವನ್ನು ಕೇಳಿದನು. ಮಹಾಶ್ವೇತೆಯ ಬಾಯಿಂದ ಮಾತು ಹೊರಡಲಿಲ್ಲ ; ಕಣ್ಣಿನಿಂದ ನೀರು ಧಾರಾಕಾರವಾಗಿ ಸುರಿಯಲು ಆರಂಭವಾಯಿತು. ಆಕೆ ಅಳವಿಲ್ಲದೆ ಅಳುತ್ತಿರಲು ಚಂದ್ರಾಪೀಡನು ಆಶ್ಚರ್ಯಚಕಿತನಾದನು. ದುಃಖದ ಆವೇಗವು ಸ್ವಲ್ಪ ಕಡಮೆಯಾದ ಮೇಲೆ ಆಕೆ ತನ್ನ ಕಥೆಯನ್ನು ಹೇಳಿದಳು.

ಮಹಾಶ್ವೇತೆಯ ಹೇಳಿಕೆ.—ನನ್ನ ತಂದೆ ಇಂದ್ರನ ಪ್ರಿಯಮಿತ್ರನಾದ ಹಂಸನೆಂಬ ಗಂಧರ್ವ ; ತಾಯಿ ಗೌರಿಯೆಂಬ ಅಪ್ಸರಸ್ತ್ರೀ. ಅವರು ಬಹು ಕಾಲ ಸಂತಾನಹೀನರಾಗಿದ್ದರು. ಆ ಮೇಲೆ ನಿರ್ಭಾಗ್ಯೆಯಾದ ನಾನು ಅವರ ಮಗಳಾಗಿ ಹುಟ್ಟಿದೆನು. ಅವರು ನನ್ನನ್ನು ಗಂಡು ಮಗನನ್ನು ಪ್ರೀತಿಸುವುದಕ್ಕಿಂತಲೂ ಹೆಚ್ಚು ಪ್ರೀತಿಯಿಂದ ಬೆಳೆಸುತ್ತಿದ್ದರು. ಕಾಲಕ್ರಮದಲ್ಲಿ ನನಗೆ ಯೌವನೋದಯವಾಯಿತು. ಆಗ ಒಮ್ಮೆ ವಸಂತ ಸಮಯದಲ್ಲಿ ನಾನು ತಾಯಿಯೊಡನೆ ಮಜ್ಜನಕ್ಕಾಗಿ ಅಚ್ಛೋದ ಸರಸ್ಸಿಗೆ ಬರುತ್ತಾ ದಾರಿಯಲ್ಲಿ ಒಬ್ಬ ಸುಂದರನಾದ ಮುನಿ ಕುಮಾರನನ್ನೂ ಅವನ ಗೆಳೆಯನನ್ನೂ ನೋಡಿದೆನು. ಆ ಮುನಿಕುಮಾರನನ್ನು ನೋಡಿದ ಕೂಡಲೆ ನಾನು ಮೋಹಪರವಶಳಾಗಿಬಿಟ್ಟೆನು. ತಾಪಸರು ಕೋಪಿಗಳಲ್ಲವೆ ? ಆದಕಾರಣ ಆ ಮುನಿ ನನ್ನ ಕಾಮವಿಕಾರವನ್ನು ನೋಡಿ ಎಲ್ಲಿ ಶಾಪಕೊಡುವನೋ ಎಂದು ಭಯವಾಯಿತು ; ಆದರೂ ಪೂಜಾರ್ಹರನ್ನು ಅವಜ್ಞೆಗೆಯ್ಯಲಾಗದೆಂದು ಆತನ ಮುಖವನ್ನೇ

ನೋಡುತ್ತಾ ಅವನಿಗೆ ನಮಸ್ಕಾರ ಮಾಡಿದೆನು. ಶಾಪಕೊಡುವುದು ಹಾಗಿರಲಿ, ಕಾಮವಿಕಾರಕ್ಕೊಳಗಾದ ನನ್ನನ್ನು ನೋಡಿ ಆತನೂ ಕಾಮ ವಿಕಾರಕ್ಕೊಳಗಾದನು. ಆಗ ನಾನು ಆತನ ಗೆಳೆಯನನ್ನು ಕುರಿತು "ಈತನಾರು, ಈತನ ಹೆಸರೇನು, ಈತನ ಕಿವಿಯಲ್ಲಿರುವ ಸುಂದರವಾದ ಕುಸುಮಮಂಜರಿ ಎಲ್ಲಿಯದು ?" ಎಂದು ಕೇಳಲು, ಆತನು ನನಗೆ ಎಲ್ಲ ಸಮಾಚಾರವನ್ನೂ ತಿಳಿಸಿದನು. "ನಿನಗೆ ಈ ಪುಷ್ಪಮಂಜರಿ ಬೇಕಾಗಿದೆ ಎಂದು ಕಾಣುತ್ತದೆ, ತೆಗೆದುಕೋ" ಎಂದು ಹೇಳಿದ ಆ ಮುನಿಕುಮಾರನು ಅದನ್ನು ನನ್ನ ಕಿವಿಗೆ ತೊಡಿಸಿದನು. ನನ್ನ ಕದಂಪಿನ ಸೋಂಕಿನ ಸುಖದಿಂದ ಆತನ ಕೈ ಕಂಪಿಸಲು ಆತನ ಕೈಯಲ್ಲಿದ್ದ ಅಕ್ಷಮಾಲೆ ಜಾರಿ ನೆಲಕ್ಕೆ ಬಿತ್ತು. ಅದನ್ನು ನಾನು ಕೊರಳಲ್ಲಿ ಹಾಕಿಕೊಂಡು ಸುಖಾನು ಭವಮಾಡುತ್ತಿರಲು ನನ್ನ ಪರಿಚಾರಕಳು "ಮನೆಗೆ ಹೋಗಲು ತಾಯಿ ಯವರು ಕಾದಿರುವರು, ಬಾ" ಎಂದು ಕರೆದುಕೊಂಡು ಹೋದಳು. ಕೈಯಿಂದ ಅಕ್ಷಮಾಲಿಕೆ ಜಾರಿಬಿದ್ದದ್ದನ್ನೂ ನಾನು ಅದನ್ನು ತೆಗೆದು ಕೊಂಡುಹೋದದ್ದನ್ನೂ ಅರಿಯದಷ್ಟು ಕಾಮಪರವಶನಾಗಿದ್ದ ಗೆಳೆಯ ನನ್ನು ನೋಡಿ ಕಪಿಂಜಲನು "ಇದೇನು ಪುಂಡರೀಕ, ಮೈಮೇಲೆ ಎಚ್ಚರ ತಪ್ಪಿತೆ ? ನಿನ್ನ ಕೈಯಿಂದ ಜಾರಿದ ಅಕ್ಷಮಾಲೆಯನ್ನು ಆಕೆ ತೆಗೆದುಕೊಂಡು ಹೋದದ್ದು ಕೂಡ ನಿನಗೆ ಗೊತ್ತಾಗಲಿಲ್ಲ. ಇಷ್ಟು ಎಚ್ಚರ ತಪ್ಪಿದವರು ಎಲ್ಲಾದರೂ ಉಂಟೆ ?" ಎಂದು ಗದರಿಸಿದನು. ಆಗ ಆ ಮುನಿಕುಮಾರನು ಕೋಪಗೊಂಡಂತೆ ನಟಿಸಿ, "ಎಲೆ ಚಪಲೆ, ನನ್ನ ಜಪಸರವನ್ನು ಕೊಡು, ಕೊಡದೆ ಮುಂದೆ ಹೆಜ್ಜೆಯಿಟ್ಟೀಯೆ" ಎನ್ನಲು ನಾನು ಗಾಬರಿ ಯಿಂದ ಜಪಸರಕ್ಕೆ ಬದಲಾಗಿ ಹಾರವನ್ನು ಕೊಟ್ಟೆನು. ನನ್ನ ಮುಖ ವನ್ನೇ ಆಸಕ್ತಿಯಿಂದ ನೋಡುತ್ತಿದ್ದ ಆತನು ಅದನ್ನು ಜಪಸರವೆಂದೇ ತೆಗೆದುಕೊಂಡನು. ಬಳಿಕ ನನ್ನನ್ನು ಮನೆಗೆ ಕರೆದೊಯ್ದರು. ನಾನು ಮೋಹಪರವಶಳಾಗಿ ಗವಾಕ್ಷಿಯ ಬಳಿಗೆ ಹೋಗಿ ಆತನು ಇದ್ದ ದೆಸೆಯನ್ನು ನೋಡುತ್ತ ಕುಳಿತೆನು. ಹೀಗೆ ಆತನಲ್ಲಿ ಮನಸ್ಸು ನಟ್ಟು ನಾನು ಕುಳಿ ತಿರಲು ಸ್ನಾನಕ್ಕಾಗಿ ಹಿಂದೆ ಉಳಿದಿದ್ದ ಮಕರಿಕೆಯೆಂಬ ಸೇವಕಳು ನನ್ನ ಬಳಿಗೆ ಬಂದು ಆ ಮುನಿಕುಮಾರನು ಕಳುಹಿದ ಪ್ರೇಮಪತ್ರವನ್ನು ನಗೆನ ಕೊಟ್ಟಳು. ಮೊದಲೇ ಸೊಕ್ಕಿದವನಿಗೆ ಕಳ್ಳು ಡಿಸಿದಂತಾಯಿತು. ಹೇಗೋ

ದಿವಸವು ಕಳೆಯಿತು ; ಸಾಯಂಕಾಲವಾಯಿತು. ಆಗ ಆ ಮುನಿಕುಮಾರನ ಗೆಳೆಯ ಕಪಿಂಜಲನು ಬಂದು ಆತನ ಸಂತಾಪಾವಸ್ಥೆಯನ್ನು ತಿಳಿಸುತ್ತಿದ್ದನು. ಅಷ್ಟರಲ್ಲಿಯೇ ನನ್ನ ತಾಯಿ ನನ್ನನ್ನು ನೋಡಬೇಕೆಂದು ಬಂದದ್ದರಿಂದ ಕಪಿಂಜಲನು "ನನ್ನ ಪ್ರಾಣಮಿತ್ರನ ಜೀವವನ್ನು ಹೇಗಾದರೂ ಕಾಪಾಡು" ಎಂದು ಅಂಗಲಾಚಿಕೊಂಡು ಯಾರಿಗೂ ತಿಳಿಯದಂತೆ ತಪ್ಪಿಸಿಕೊಂಡು ಹೋದನು. ತಾಯಿ ಬಂದಳು, ಏನೋ ಹೇಳಿದಳು. ನನಗೆ ಒಂದೂ ತಿಳಿಯಲಿಲ್ಲ. ಆಕೆ ಹೊರಟು ಹೋದ ಮೇಲೆ ಯಾರಿಗೂ ತಿಳಿಯದಂತೆ ತರಳಿಕೆಯೊಡನೆ ಮುನಿಕುಮಾರನ ಬಳಿಗೆ ಹೋಗಲು ಹೊರಟೆನು. ಬಲಗಣ್ಣು ಹಾರಿತು ; ಈ ಅಪಶಕುನದಿಂದ ಹೃದಯವು ನಡುಗಿತು. ಗಾಬರಿಯಿಂದ ಹೇಗೋ ನಡೆದೆನು. ಪುರುಷ ಪ್ರಲಾಪವು ಕೇಳಬಂತು ; ಕಪಿಂಜಲನು ಅಳುತ್ತಿದ್ದನು. ಎದೆಗೆಟ್ಟು ಸತ್ತಂತಾಗಿ ಕಣ್ಣೀರಿನಿಂದ ದೆಸೆಗಾಣದೆ ಎಡವುತ್ತಾ ಮುಗ್ಗರಿಸುತ್ತಾ ಅಯ್ಯೋ ಎಂದು ಅಳುತ್ತಾ ಆತನಲ್ಲಿಗೆ ಹೋದೆನು. ಪ್ರಿಯವಿರಹ ದುಃಖವನ್ನು ಸೈರಿಸಲಾರದೆ ಸಹಗಮನಕ್ಕೆ ಸಿದ್ಧಳಾಗುತ್ತಿರಲು ಒಂದು ಆಶ್ಚರ್ಯದ ಸಂಗತಿ ನಡೆಯಿತು. ಚಂದ್ರಮಂಡಲದಿಂದ ಒಬ್ಬ ದಿವ್ಯಪುರುಷನು ಬಂದು ನನ್ನ ಮುಂದಿದ್ದ ಪುಂಡರೀಕನ ದೇಹವನ್ನು ತನ್ನ ಕೈಗಳಲ್ಲಿ ಎತ್ತಿಕೊಂಡು "ಮಗಳೆ ಮಹಾಶ್ವೇತೆ, ಸಾಯುವ ಆಲೋಚನೆ ಬೇಡ. ನೀನು ಮತ್ತೆ ಈತನನ್ನು ಕೂಡುವೆ" ಎಂದು ಹೇಳಿ ಆಕಾಶಕ್ಕೆ ನೆಗೆದನು. ಕಪಿಂಜಲನು "ಹೇಳದೆ ಕೇಳದೆ ನನ್ನ ಗೆಳೆಯನನ್ನು ಎತ್ತಿಕೊಂಡು ಹೋಗುತ್ತೀಯಾ" ಎನ್ನುತ್ತ ಆತನನ್ನು ಹಿಂಬಾಲಿಸಿ ಹೋದನು. ತರಳಿಕೆ ನನ್ನನ್ನು ಸಂತೈಸಿ, ಬೆಳಗಿನ ಜಾವವಾಗಲು ಈ ಕೊಳದ ಬಳಿಗೆ ಕರೆದುಕೊಂಡು ಬಂದು ಸ್ನಾನಮಾಡಿಸಿದಳು. ಅಂದಿನಿಂದಲೂ ಆತನ ಮೇಲಣ ಪ್ರೀತಿಯಿಂದ ಅತನ ವಲ್ಕಲ ಅಕ್ಷಾವಳಿ ಕಮಂಡಲುಗಳನ್ನು ಸ್ವೀಕರಿಸಿ ಆತನ ವೇಷವನ್ನೇ ತಳೆದು ತಪಶ್ಚರಣೆಮಾಡುತ್ತಿದ್ದೇನೆ. ತಾಯಿತಂದೆಗಳನ್ನೂ ಬಂಧುಜನಗಳನ್ನೂ ಬಿಟ್ಟು ತರಳಿಕೆಯೊಬ್ಬಳೊಡಗೂಡಿ ಆತನು ಪುನಃ ದೊರೆಯುವ ಕಾಲವನ್ನು ನಿರೀಕ್ಷಿಸುತ್ತಾ ಅನಾಥೆಯಾದ ನಾನು ಲೋಕೈಕನಾಥನಾದ ಶಂಕರನನ್ನು ಆರಾಧಿಸುತ್ತಾ ಹೀಗೆ ಇರುತ್ತೇನೆ ಎಂದು ಹೇಳಿ ಮಹಾಶ್ವೇತೆ ಕಣ್ಣೀರಿಟ್ಟಳು. ಚಂದ್ರಾಪೀಡನು

ಆಕೆಯನ್ನು ಸಂತೈಸಿ "ಆ ನಿಮ್ಮ ತರಳಿಕೆಯೆಲ್ಲಿ ಹೋದಳು" ಎಂದು ಕೇಳಲು, ಮಹಾಶ್ವೇತೆ "ನನಗೆ ಕಾದಂಬರಿಯೆಂಬ ಒಡನಾಡಿಯಿದ್ದಾಳೆ. ಆಕೆ ಚಿತ್ರರಥನೆಂಬ ಗಂಧರ್ವರಾಜನ ಕುವರಿ; ನಾವಿಬ್ಬರೂ ಒಡನುಂಡು, ಒಡನೆ ಇದ್ದು, ಒಡನೆ ಬೆಳೆದವು; ಆಕೆ ನಾನು ಹೀಗೆ ಶೋಕಾಕುಲೆಯಾಗಿ ರುವೆನೆಂಬುದನ್ನು ಕೇಳಿ ತಾನೂ ಕನ್ಯಾವ್ರತದಲ್ಲಿಯೇ ಕಾಲಕಳೆಯು ವುದಾಗಿಯೂ ತಂದೆ ಯಾರಿಗಾದರೂ ತನ್ನನ್ನು ಕೊಟ್ಟು ಮದುವೆ ಮಾಡಲುಜ್ಜುಗಿಸಿದರೆ ತಾನು ಪ್ರಾಣ ಬಿಡುವುದಾಗಿಯೂ ನಿಶ್ಚಯಿ ಸಿರುವಳು. ಇದನ್ನು ಕರ್ಣಪರಂಪರೆಯಿಂದ ತಿಳಿದ ಆಕೆಯ ತಂದೆ ಒಬ್ಬ ಕಂಚುಕಿಯನ್ನು ನನ್ನ ಬಳಿಗೆ ಕಳುಹಿಸಿದನು. ತಂದೆಯ ಮಾತಿ ನಂತೆ ನಡೆಯಬೇಕೆಂದು ಆಕೆಗೆ ಬುದ್ಧಿಹೇಳಲು ತರಳಿಕೆಯನ್ನು ಕಳುಹಿಸಿ ಕೊಟ್ಟನು. ಅತ್ತ ತರಳಿಕೆ ಹೋದಳು; ಇತ್ತ ನೀವು ಬಂದಿರಿ" ಎಂದು ಹೇಳಿದಳು.

ಜಾಬಾಲಿಯ ಹೇಳಿಕೆ.—ಮರುದಿನ ಬೆಳಗ್ಗೆ ತರಳಿಕೆ ಬಂದು, ತಾನು ಹೇಳಿದ ಮಾತಿಗೆ ಕಾದಂಬರಿ ಒಡಂಬಡಲಿಲ್ಲವೆಂದು ತಿಳಿಸಲು ಮಹಾಶ್ವೇತೆ ಚಂದ್ರಾಪೀಡನನ್ನು ಕುರಿತು "ರಾಜಧಾನಿ ಹತ್ತಿರವೇ ಇದೆ. ನೀನು ನನ್ನೊಡನೆ ಬಂದು ಆಕೆಗೆ ಬುದ್ಧಿಹೇಳಬೇಕು; ಆಕೆ ನನ್ನ ಪ್ರಾಣ ಸಮಾನಳು, ನಿಜವಾಗಿಯೂ ಅಸ್ವಸ್ಥಳಾಗಿದ್ದಾಳೆ. ನನ್ನ ಈ ಪ್ರಾರ್ಥನೆ ಯನ್ನು ನಿರರ್ಥಕಮಾಡದೆ ಇದೊಂದು ದಿನ ಅಲ್ಲಿದ್ದು ವಿಶ್ರಮಿಸಿಕೊಂಡು ನಾಳೆ ಬೀಡಿಗೆ ಬಿಜಯಂಗೈಯಬೇಕು; ಅಕಾರಣಬಂಧುವಾದ ನಿನ್ನನ್ನು ನೋಡಿಯೇ ನನಗೆ ಶೋಕವು ಆರಿತು. ನಿನ್ನ ಆಗಮನವು ಆಕೆಗೂ ಸುಖವನ್ನುಂಟುಮಾಡಬಹುದು" ಎಂದು ಹೇಳಿದಳು. ಚಂದ್ರಾಪೀಡನು ಅದಕ್ಕೆ ಒಪ್ಪಿ ಆಕೆಯೊಡನೆ ಚಿತ್ರರಥನ ರಾಜಧಾನಿಗೆ ಹೋದನು. ಕಾದಂಬ ರಿಯನ್ನು ನೋಡಿದ ಒಡನೆಯೇ ಚಂದ್ರಾಪೀಡನಿಗೆ ಆಕೆಯಲ್ಲಿ ಅನುರಾಗ ಹುಟ್ಟಿತು. ಈತನನ್ನು ನೋಡಿದ ಕೂಡಲೇ ಆಕೆಗೂ ಈತನಲ್ಲಿ ಅನುರಾಗ ಹುಟ್ಟಿತು. ಮಹಾಶ್ವೇತೆ ಕಾದಂಬರಿಗೆ ಚಂದ್ರಾಪೀಡನ ಪರಿಚಯವನ್ನು ಮಾಡಿಸಿ "ಈತನು ಹೊಸಬನೆಂದು ಭಾವಿಸಬೇಡ; ನನ್ನಲ್ಲಿ ಹೇಗೋ ಈತನಲ್ಲಿಯೂ ಹಾಗೆಯೇ ನಡೆದುಕೊ" ಎಂದು ಹೇಳಿದಳು. ಕಾದಂಬರಿ ಮಹಾಶ್ವೇತೆಯ ಪಾದವನ್ನು ತಾನೇ ತೊಳೆದು ಮದಲೇಖೆಯೆಂಬವಳಿಂದ

ರಾಜಪುತ್ರನ ಪಾದಗಳನ್ನು ತೊಳೆಯಿಸಿ ಮಹಾಶ್ವೇತೆಗೆ ತಾಂಬೂಲವನ್ನು ಕೊಡಹೋಗಲು ಆಕೆ "ಈತನು ರಾಜಕುಮಾರ, ಹೊಸದಾಗಿ ಬಂದವನು, ಮಾನ್ಯನು, ನಮಗೆ ಆರಾಧ್ಯನು. ಆದಕಾರಣ ಈ ತಾಂಬೂಲವನ್ನು ಮೊದಲು ಈತನಿಗೆ ಕೊಡು" ಎಂದು ಹೇಳಿದಳು. ಕಾದಂಬರಿ "ನನಗೆ ನಾಚಿಕೆಯಾಗುತ್ತದೆ. ನೀನೇ ಕೊಡು" ಎಂದು ಲಜ್ಜೆಯಿಂದ ತಲೆಬಾಗಿಸಿಕೊಂಡು ಹೇಳಿದಳು. ಮಹಾಶ್ವೇತೆ ಆಗ್ರಹಿಸಲು ಆಕೆ ಲಜ್ಜೆಯಿಂದ ಬೆವರುತ್ತಾ ನಡುಗುತ್ತಾ ತಾಂಬೂಲವನ್ನು ಕೊಟ್ಟಳು. ಹೀಗೆ ಕಾದಂಬರಿಗೆ ಚಂದ್ರಾಪೀಡನಲ್ಲಿ ಪ್ರೇಮಾಂಕುರವು ಮೊಳೆತು ಚಿಗುರಿಟ್ಟಿತು. ಅಷ್ಟರಲ್ಲಿ ಚಿತ್ರರಥನೂ ಮದಿರಾದೇವಿಯೂ ಮಹಾಶ್ವೇತೆಯನ್ನು ನೋಡಲು ಉತ್ಸುಕರಾಗಿರುವುದಾಗಿ ಸುದ್ದಿ ಬಂದದ್ದರಿಂದ ಮಹಾಶ್ವೇತೆ ಚಂದ್ರಾಪೀಡನಿಗೆ ಬಿಡಾರವನ್ನು ಗೊತ್ತುಮಾಡಿ ಆತನನ್ನು ಅಲ್ಲಿಗೆ ಕಳುಹಿಸಿ ಚಿತ್ರರಥನನ್ನು ಕಾಣಲು ಹೋದಳು. ಪ್ರಣಯ ಜಾಲದಲ್ಲಿ ಸಿಲುಕಿದ ಕಾದಂಬರಿಗೆ ಮನಸ್ಸಿನಲ್ಲಿ ವಿಚಾರತರಂಗಗಳೆದ್ದುವು. ಸುತ್ತಲೂ ಸಖಿಯರಿದ್ದರು, ಪರಿಚಾರಿಕೆಯರಿದ್ದರು ; ಎದುರಿಗೆ ಪತಿವಿರಹದುಃಖಿನಿಯಾದ ಮಹಾಶ್ವೇತೆಯಿದ್ದಳು ; ರಾಜಕುಮಾರನಾದರೋ ಹೊಸಬ ; ಇವರೆಲ್ಲರೆದುರಿಗೆ ನನ್ನ ಕಾಮಪರವಶತೆಯು ವ್ಯಕ್ತವಾಯಿತು. ಇದೆಲ್ಲವೂ ಒತ್ತಟ್ಟಿಗಿರಲಿ, "ಅಕ್ಕನು ವ್ರತದಲ್ಲಿ ದೇಹವನ್ನು ತೆಯ್ಯುತ್ತಿದ್ದಾಳೆ, ಆದಕಾರಣ ನಾನು ಮದುವೆಯಾಗುವುದಿಲ್ಲ. ಕನ್ಯಾವ್ರತವನ್ನು ಕೈಕೊಳ್ಳುತ್ತೇನೆ" ಎಂದು ಎಲ್ಲರಿಗೂ ಹೇಳಿ, ಎಂದೂ ಕಾಣದ ಕೇಳದ ರಾಜಕುಮಾರನಲ್ಲಿ ಅಕ್ಕನ ಎದುರಿಗೇ ಮೋಹಗೊಂಡೆನಲ್ಲ, ಮನವೆಲ್ಲವೂ ಆತನಿಗೆ ಸೂರೆಹೋಗಿದೆ ಎಂದು ಯೋಚಿಸುತ್ತಿದ್ದಳು. ಇತ್ತ ಚಂದ್ರಾಪೀಡನೂ ಆಕೆಯ ಹಾವಭಾವಗಳನ್ನು ಸ್ಮರಿಸುತ್ತಾ ಆಕೆಗೆ ತನ್ನಲ್ಲಿ ಪ್ರೇಮವುಂಟಾಗಿರಬೇಕೆಂದು ಯೋಚಿಸುತ್ತಿದ್ದನು. ಅಷ್ಟು ಹೊತ್ತಿಗೆ ಮದಲೇಖೆ ಶೇಷವೆಂಬ ಹೆಸರಿನ ಮುತ್ತಿನ ಹಾರವನ್ನು ತೆಗೆದುಕೊಂಡು ಬಂದು "ಇದು ನಿಮ್ಮ ಮದನಾವತಾರವೆನಿಸಿದ ಆಕಾರಕ್ಕೆ ಎಣೆಯಾದದ್ದೆಂದು ಕಾದಂಬರಿ ಕಳುಹಿಸಿದ್ದಾಳೆ ; ಇದು ಆಕೆಯ ಪ್ರಣಯದ ಕುರುಹು ; ಇದನ್ನು ನೀವು ಕೈಕೊಳ್ಳದಿದ್ದರೆ ಆಕೆ ಭಗ್ನಪ್ರಣಯೆಯಾಗುವಳು" ಎಂದು ಹೇಳಿ ಒಪ್ಪಿಸಿ ಹೋದಳು. ಕೊಂಚ ಹೊತ್ತಾದಮೇಲೆ ಚಂದ್ರೋದಯ

ವಾಗಲು ಕಾದಂಬರಿ ಮಿತಪರಿವಾರೆಯಾಗಿ ಬಂದು ಚಂದ್ರಾಪೀಡನನ್ನು ನೋಡಿ ಸ್ವಲ್ಪಕಾಲ ಮಾತನಾಡುತ್ತಿದ್ದು ಹಿಂದಿರುಗಿದಳು. ಆಮೇಲೆ ಚಂದ್ರಾಪೀಡನು ಶಯ್ಯೆಯಲ್ಲಿ ಮಲಗಿ ಕಾದಂಬರಿಯ ನಿರಹಂಕಾರ, ಮಹಾಶ್ವೇತೆಯ ನಿಷ್ಕಾರಣವತ್ಸಲತೆ, ಮದಲೇಖೆಯ ಸುಜನತೆ ಮುಂತಾದುವನ್ನು ಭಾವಿಸುತ್ತಿರಲು ಬೆಳಗಾಯಿತು. ಬಳಿಕ ಅವನು ಎದ್ದು ಮುಖ ಮಜ್ಜನಾದಿಗಳನ್ನು ಪೂರೈಸಿ ಕಾದಂಬರಿ ಮಹಾಶ್ವೇತೆಯರ ಅಪ್ಪಣೆಯನ್ನು ಪಡೆದು ಹೊರಟು ಅಚ್ಛೋದ ಸರಸ್ಸಿನ ಮಾರ್ಗವಾಗಿ ಹೋದನು. ಆ ವೇಳೆಗೆ ಇಂದ್ರಾಯುಧದ ಹೆಜ್ಜೆಯನ್ನನುಸರಿಸಿ ಬಂದು ಆ ಸರೋವರದ ಬಳಿ ಬೀಡುಬಿಟ್ಟಿದ್ದ ತನ್ನ ಪರಿವಾರವನ್ನು ನೋಡಿ ಆ ದಿನವನ್ನು ಅಲ್ಲಿ ಕಳೆದನು. ಮರುದಿನ ಬೆಳಗ್ಗೆ ಕೇಯೂರಕನು ಬಂದು ಚಂದ್ರಾಪೀಡನು ಮರೆತು ಬಂದಿದ್ದ ಶೇಷಹಾರವನ್ನೂ ಕಾದಂಬರಿ ಕಳುಹಿಸಿದ್ದ ಉಪಾಯನವನ್ನೂ ಕೊಟ್ಟು ಕಾದಂಬರಿಗೆ ಉಂಟಾಗಿದ್ದ ವಿರಹವನ್ನು ವಿವರಿಸಿ "ಆಕೆ ನಿಮ್ಮನ್ನು ಕರೆತರುವಂತೆ ಹೇಳಿ ನನ್ನನ್ನು ಕಳುಹಿದಳು" ಎಂದು ತಿಳಿಸಿದನು. ಚಂದ್ರಾಪೀಡನು ಪತ್ರಲೇಖೆಯೊಡನೆ ಹೋಗಿ ಪ್ರಮದವನದ ಹಿಮಗೃಹದಲ್ಲಿದ್ದ ಕಾದಂಬರಿಯನ್ನು ಕಂಡನು. ಅಲ್ಲಿ ಸ್ವಲ್ಪ ಹೊತ್ತು ಪ್ರೇಮಾಲಾಪವು ನಡೆದ ಮೇಲೆ ಚಂದ್ರಾಪೀಡನು ಕಾದಂಬರಿಯ ಇಷ್ಟದಂತೆ ಪತ್ರಲೇಖೆಯನ್ನು ಆಕೆಯ ಬಳಿಯಲ್ಲಿಯೇ ಬಿಟ್ಟು ತನ್ನ ಪಾಳಯಕ್ಕೆ ಹಿಂದಿರುಗಿದನು. ಆ ವೇಳೆಗೆ ಒಬ್ಬ ದೂತನು ಉಜ್ಜಯಿನಿಯಿಂದ ಬಂದು ಒಂದು ಕಾಗದವನ್ನು ಕೊಟ್ಟನು. ಅದರಲ್ಲಿ ಆ ಕಾಗದವನ್ನು ನೋಡಿದ ಕೂಡಲೇ ರಾಜಧಾನಿಗೆ ಹಿಂದಿರುಗಿ ಬರಬೇಕೆಂದು ಬರೆದಿತ್ತು. ಈ ಸುದ್ದಿಯನ್ನು ಕಾದಂಬರಿಗೆ ಹೇಳಿ ಕಳುಹಿಸಿ, ಪತ್ರಲೇಖೆಯನ್ನು ಕರೆತರಲು ಮೇಘನಾದನನ್ನು ಅಲ್ಲಿಯೇ ಬಿಟ್ಟು, ತನ್ನ ಸೈನ್ಯವನ್ನು ಕರೆದುಕೊಂಡು ಬರುವಂತೆ ವೈಶಂಪಾಯನನಿಗೆ ಹೇಳಿ, ಉಜ್ಜಯಿನಿಗೆ ಹೊರಟುಹೋದನು.

ಚಂದ್ರಾಪೀಡನು ಉಜ್ಜಯಿನಿಗೆ ಬಂದು ಕಾದಂಬರಿಯನ್ನೇ ಸ್ಮರಿಸುತ್ತಾ ಪತ್ರಲೇಖೆಯ ಆಗಮನವನ್ನು ನಿರೀಕ್ಷಿಸುತ್ತಿದ್ದನು. ಕೆಲವು ದಿನಗಳ ಮೇಲೆ ಆಕೆ ಬರಲು ಆಕೆಯಿಂದ ಕಾದಂಬರಿಯ ವಿರಹವ್ಯಥೆಯ ವರ್ಣನೆಯನ್ನು ಕೇಳಿ ಮರುಗಿದನು. ಇದಾದ ಕೆಲವು ದಿನಗಳ ಮೇಲೆ ಕಾದಂಬರಿಯ ಸ್ಥಿತಿಯನ್ನು ಬಿನ್ನವಿಸಲು ಬಂದ ಕೇಯೂರಕನಿಂದಲೂ

ಅವಳ ವಿರಹ ವೇದನೆಯನ್ನು ಕೇಳಿ ಉದ್ವಿಗ್ನಚಿತ್ತನಾದನು. ವೈಶಂಪಾಯನನು ಸೈನ್ಯದೊಡನೆ ಹಿಂದಿರುಗಿದ ಕೂಡಲೇ ತಾನು ತಂದೆತಾಯಿಗಳ ಅಪ್ಪಣೆ ಪಡೆದು ಹೊರಟುಬರುವುದಾಗಿ ಕಾದಂಬರಿಗೆ ತಿಳಿಸಿ ಆಕೆಯನ್ನು ಸಮಾಧಾನಪಡಿಸಬೇಕೆಂದು ಹೇಳಿ ಕೇಯೂರಕನನ್ನೂ ಪತ್ರಲೇಖೆಯನ್ನೂ ಕಾದಂಬರಿಯ ಬಳಿಗೆ ಕಳುಹಿದನು. ಎಷ್ಟು ದಿನಗಳಾದರೂ ವೈಶಂಪಾಯನನಾಗಲಿ ಸೈನ್ಯವಾಗಲಿ ಬಾರದಿರಲು ತಾನಾದರೂ ಹೋಗಿ ವೈಶಂಪಾಯನನ ವಿಷಯವನ್ನು ತಿಳಿದುಕೊಂಡು ಬರಬೇಕೆಂದು ಹೊರಟನು. ತಾವು ಎಷ್ಟು ಪ್ರಾರ್ಥಿಸಿದರೂ ವೈಶಂಪಾಯನನು ಅಚ್ಛೋದ ಸರಸ್ತೀರದ ಪ್ರದೇಶವನ್ನು ಬಿಟ್ಟುಬರುವುದಕ್ಕೆ ಒಪ್ಪಲಿಲ್ಲವೆಂಬುದನ್ನೂ ಆತನಿಗೆ ಇದ್ದಕ್ಕಿದ್ದ ಹಾಗೆ ವೈರಾಗ್ಯವುಂಟಾಗಿರುವುದೆಂಬುದನ್ನೂ ಹಿಂದಕ್ಕೆ ಬರುತ್ತಿದ್ದ ಸೈನ್ಯದವರು ತಿಳಿಸಲು, ಆತನನ್ನು ಕರೆತರುವುದಕ್ಕಾಗಿ ತಂದೆತಾಯಿಗಳ ಅಪ್ಪಣೆಯನ್ನು ಪಡೆದು ತಾನೇ ಹೊರಟನು.

ಚಂದ್ರಾಪೀಡನು ಇಂದ್ರಾಯುಧವನ್ನೇರಿ ಸೈನ್ಯದೊಡನೆ ಹೊರಟು ಸ್ನೇಹಿತನನ್ನು ನೋಡಬೇಕೆಂಬ ಕುತೂಹಲದಿಂದಲೂ ಕಾದಂಬರಿಯ ಸಮಾಗಮ ಸೌಖ್ಯವನ್ನು ಪಡೆಯಬೇಕೆಂಬ ಉತ್ಸುಕತೆಯಿಂದಲೂ ಎಲ್ಲಿಯೂ ತಡೆಯದೆ ಪ್ರಯಾಣಮಾಡಿದನು. ಹೋಗುತ್ತಾ ದಾರಿಯಲ್ಲಿ "ನನ್ನನ್ನು ಕಂಡು ನಾಚಿಹೋಗುವ ಗೆಳೆಯನ ಹಿಂದೆ ಹೋಗಿ ಅವನನ್ನು ತಕ್ಕೈಸುತ್ತೇನೆ; ನಾನೂ ಆತನೂ ಇಬ್ಬರೂ ಮಹಾಶ್ವೇತೆಯ ಆಶ್ರಮಕ್ಕೆ ಹೋಗಿ ಅಲ್ಲಿ ಸೈನ್ಯವನ್ನು ಬಿಟ್ಟು ಆಕೆಯೊಡನೆ ಹೇಮಕೂಟಕ್ಕೆ ಹೋಗುತ್ತೇವೆ. ನಾನು ಬಂದದ್ದನ್ನು ಕೇಳಿ ಇದಿರೇಳುವ ಕಾದಂಬರಿಯನ್ನು ನೋಡಿ ಕಣ್ಬಡೆದುದಕ್ಕೆ ಸಾಫಲ್ಯವನ್ನು ಸಂಪಾದಿಸುತ್ತೇನೆ. ಕಾದಂಬರಿಗೆ ಹೇಳಿ ವೈಶಂಪಾಯನನಿಗೂ ಮದಲೇಖೆಗೂ ವಿವಾಹವನ್ನು ಮಾಡಿಸುತ್ತೇನೆ"—ಹೀಗೆ ಮನಸ್ಸಿನಲ್ಲಿ ಮಂಡಿಗೆ ಮಾಡುತ್ತಾ ಚಿತ್ರರಥವನ್ನು ಸೇರಿದನು. ಅಲ್ಲಿ ಎಷ್ಟು ಹುಡುಕಿದರೂ ವೈಶಂಪಾಯನನ ಸುಳಿವೇ ಗೊತ್ತಾಗಲಿಲ್ಲ. ಮಹಾಶ್ವೇತೆಗೆ ಆತನ ವೃತ್ತಾಂತವು ತಿಳಿದಿರಬಹುದೆಂದು ಭಾವಿಸಿ ಆಕೆಯ ಆಶ್ರಮಕ್ಕೆ ಹೋಗಿ ನೋಡಲು, ಆಕೆ ಕಣ್ಣಲ್ಲಿ ಧಾರಾಕಾರವಾಗಿ ನೀರು ಸುರಿಸುತ್ತಾ ದುಃಖದಿಂದ ತಲೆಬಾಗಿಸಿ ಕುಳಿತಿದ್ದಳು. ಅದನ್ನು ಕಂಡು ಗಾಬರಿಯಾಗಿ, ಕಾದಂಬರಿಗೇನಾದರೂ

ಕೇಡಾಗಿರಬಹುದೆಂದು ಶಂಕಿಸಿ ಇದೇನೆಂದು ಕೇಳಲು ಆಕೆ ಹೀಗೆ ಹೇಳಿದಳು—ನೀನು ಉಜ್ಜಯಿನಿಗೆ ಹೋದದ್ದನ್ನು ಕೇಳಿ ಮನನೊಂದು ಮಹಾಘೋರತಪಶ್ಚರಣಾರ್ಥವಾಗಿ ಇಲ್ಲಿಗೆ ಬಂದೆನು. ಒಂದು ದಿನ ನಿನ್ನ ವಯಸ್ಸಿನ ಒಬ್ಬ ಬ್ರಾಹ್ಮಣ ಕುಮಾರನು ಬಂದು ನನ್ನನ್ನು ಕಣ್ಣುಗಳಿಂದಲೇ ಹೀರುವಂತೆ ನೋಡಿ "ಸುಂದರಿ, ನಿನ್ನಂಥವರು ಐಹಿಕ ಸುಖವನ್ನು ಬಿಟ್ಟು ತಪಕ್ಕೆ ಹೋಗುವುದೆ?" ಎಂದು ಮೊದಲಾಗಿ ಅನೇಕ ಚಾಟು ಚಪಲವಾಕ್ಯಗಳನ್ನು ನುಡಿದನು. ಪುಂಡರೀಕನನ್ನೇ ಸ್ಮರಿಸುತ್ತಾ ಸುಖವನ್ನೇ ಅರಿಯದಿದ್ದ ನಾನು ನೀನಾರೆಂದು ಕೂಡ ಕೇಳದೆ ಬೇರೆಡೆಗೆ ಹೊರಟುಹೋಗಿ, ತರಳಿಕೆಯನ್ನು ಕರೆದು "ಇವನನ್ನು ಗುಹೆಯತ್ತ ಬಾರದಂತೆ ತಡೆದಿರು" ಎಂದು ಹೇಳಿದೆನು. ಅವಳು ತಡೆದರೂ ಬಿಡದೆ ಅವನು ನನ್ನ ಹತ್ತಿರವೇ ಸುಳಿದಾಡುತ್ತಿದ್ದನು. ಒಂದು ದಿನ ರಾತ್ರಿ ಮೂರು ಯಾಮವಾಗಿತ್ತು; ತರಳಿಕೆ ನಿದ್ದೆ ಹೋಗಿದ್ದಳು; ಹೊರಗೆ ಸ್ವಚ್ಛವಾದ ಬೆಳುದಿಂಗಳು ಕಾಯುತ್ತಿತ್ತು. ನಾನೊಬ್ಬಳೇ ಗುಹೆಯಿಂದ ಹೊರಗೆ ಬಂದು ಒಂದು ಬಂಡೆಯ ಮೇಲೆ ಮಲಗಿ ಪುಂಡರೀಕನ ವಿಷಯವನ್ನೇ ಧ್ಯಾನಿಸುತ್ತಿದ್ದೆನು. ಆ ಸಮಯದಲ್ಲಿ ಆ ಬ್ರಾಹ್ಮಣ ಕುಮಾರನು ಮೆಲ್ಲಮೆಲ್ಲನೆ ನನ್ನ ಬಳಿಗೆ ಬಂದು "ಮನ್ಮಥಸಹಾಯನಾದ ಚಂದ್ರನು ನನ್ನನ್ನು ಕೊಲ್ಲುತ್ತಾನೆ; ನಾನು ಅನಾಥನಾಗಿ ನಿನ್ನನ್ನು ಮರೆಹೊಕ್ಕಿದ್ದೇನೆ; ಈ ಜೀವ ನಿನ್ನದು, ನನ್ನನ್ನು ರಕ್ಷಿಸು" ಎಂದನು. ಅದನ್ನು ಕೇಳಿ ರೇಗಿದವಳಾಗಿ, "ಗಿಳಿಯಾಗಿ ಹುಟ್ಟು" ಎಂದು ಆತನನ್ನು ಶಪಿಸಿದೆನು. ಕೂಡಲೆ ಆತನು ನಿಶ್ಚೇತನನಾಗಿ ಭೂಮಿಗೆ ಬಿದ್ದು ಸತ್ತುಹೋದನು. ಆತನು ನಿನ್ನ ಗೆಳೆಯನೆಂದು ಪರಿಜನರಿಂದ ಗೊತ್ತಾಯಿತು—ಎಂದು ಆಕೆ ಹೇಳುತ್ತಿದ್ದ ಹಾಗೆಯೇ ಎದೆಯೊಡೆದು ಚಂದ್ರಾಪೀಡನು ನೆಲಕ್ಕೆಬಿದ್ದನು. ಮಹಾಶ್ವೇತೆ ಮೂರ್ಛೆಹೋದಳು. ತರಳಿಕೆ ಅಳುವುದಕ್ಕೆ ಮೊದಲು ಮಾಡಿದಳು. ಮಹಾಶ್ವೇತೆಯ ಆಶ್ರಮಕ್ಕೆ ಚಂದ್ರಾಪೀಡನು ಬಂದನೆಂದು ಕೇಳಿ ಅಷ್ಟು ಹೊತ್ತಿಗೆ ಅಲ್ಲಿಗೆ ಬಂದ ಕಾದಂಬರಿಯೂ ಅವಳ ಜತೆಗಿದ್ದ ಪತ್ರಲೇಖೆಯೂ ಮೂರ್ಛಿತರಾದರು. ಬಳಿಕ ಕಾದಂಬರಿ ಎಚ್ಚತ್ತು ಪ್ರಾಣತ್ಯಾಗಕ್ಕೆ ಉಜ್ಜುಗಿಸಲು, ಅಂತರಿಕ್ಷದಲ್ಲಿ ಚಂದ್ರಕಿರಣಮಯವಾದ ಪ್ರಭಾಮಂಡಲವು ಮೂಡಿ, ಅಲ್ಲಿಂದ "ಮಹಾಶ್ವೇತೆ, ಹಿಂದೆ

ನಾನು ನಿನ್ನನ್ನು ಸಮಾಶ್ವಾಸಿಸಿದ್ದೆನು. ಈಗಲೂ ಆಶ್ವಾಸಿಸಲು ಬಂದಿರುವೆನು. ಪುಂಡರೀಕನ ದೇಹವು ನಿನ್ನ ಸಮಾಗಮಾರ್ಥವಾಗಿ ಇನ್ನೂ ಬೆಳಗುತ್ತಾ ನಿತ್ಯರೂಪತ್ವದಿಂದಿದೆ. ಈ ಚಂದ್ರಾಪೀಡನ ದೇಹವೂ ನಿತ್ಯವಾದದ್ದು. ಕೆಲವು ಕಾಲಾನಂತರ ಚಂದ್ರಾಪೀಡನು ಕಾದಂಬರಿಯನ್ನು ಕೂಡುವನು. ಈತನ ದೇಹವನ್ನು ಅತಿ ಪ್ರಯತ್ನದಿಂದ ನೋಡಿಕೊಳ್ಳುತ್ತಿರಬೇಕು'' ಎಂಬ ದಿವ್ಯಧ್ವನಿ ಕೇಳಿಸಿತು. ಬಳಿಕ ಪತ್ರಲೇಖೆ ಮೂರ್ಛೆ ತಿಳಿದೆದ್ದು ಇಂದ್ರಾಯುಧದ ಬಳಿಗೆ ಹೋಗಿ ಅದರೊಡನೆ ಅಚ್ಛೋದ ಸರಸ್ಸಿನಲ್ಲಿ ಹಾರಿಕೊಂಡಳು. ಕೂಡಲೆ ಸರೋವರದಿಂದ ಕಪಿಂಜಲನು ಎದ್ದು ಬಂದು ಮಹಾಶ್ವೇತೆಗೆ ಹೀಗೆ ಹೇಳಿದನು—ಪುಂಡರೀಕನು ವಿರಹೋದ್ರೇಕದಿಂದ ಚಂದ್ರನನ್ನು ಕುರಿತು ''ನೀನು ಎರಡುಸಲ ಮನುಷ್ಯನಾಗಿ ಹುಟ್ಟು'' ಎಂದು ಶಪಿಸಿದನಂತೆ. ಅದರಿಂದ ಕುಪಿತನಾದ ಚಂದ್ರನು ''ನೀನೂ ನನ್ನೊಡನೆ ಸುಖದುಃಖವನ್ನನುಭವಿಸು'' ಎಂದು ಶಾಪಕೊಟ್ಟು ಪುಂಡರೀಕನ ದೇಹವನ್ನು ತೆಗೆದುಕೊಂಡು ಹೋಗಿ ಚಂದ್ರಲೋಕದಲ್ಲಿ ಕಾಪಾಡುತ್ತಿರುವನು. ಚಂದ್ರನು ನನ್ನನ್ನು ಕುರಿತು ''ನೀನು ಹೋಗಿ ಶ್ವೇತಕೇತು ಪ್ರತಿಗೆಆಯುಷ್ಕಾಮಹೋಮದಾನಗಳನ್ನು ಮಾಡುವಂತೆ ತಿಳಿಸು'' ಎಂದು ಹೇಳಿದನು. ಅಲ್ಲಿಂದ ಹಿಂದಿರುಗಿ ಬರುತ್ತಿರುವಾಗ ಅರಿಯದೆ ನಾನು ಒಬ್ಬ ವೈಮಾನಿಕನನ್ನು ದಾಟಿದೆನು. ಆತನು ಕುಪಿತನಾಗಿ ವಾಹತ್ವವನ್ನು ತಾಳೆಂದು ಶಪಿಸಿದನು. ಆಗ ನಾನು ''ಶೋಕಾಂಧನಾಗಿ ದಾಟಿದೆನೇ ಹೊರತು ಅವಜ್ಞೆಯಿಂದ ದಾಟಲಿಲ್ಲ. ವಾಹತ್ವ ಬಂದರೂ ಬರಲಿ. ನನ್ನ ಮಿತ್ರನ ಬಳಿ ಇರುವಂತೆ ಕರುಣಿಸು'' ಎಂದು ಬೇಡಿಕೊಳ್ಳಲು ಆತನು, ''ಉಜ್ಜಯಿನಿಯಲ್ಲಿ ತಾರಾಪೀಡ ಚಕ್ರವರ್ತಿಗೆ ಮಗನಾಗಿ ಚಂದ್ರನೇ ಚಂದ್ರಾಪೀಡನೆಂಬ ಹೆಸರಿನಿಂದ ಹುಟ್ಟುತ್ತಾನೆ. ಆ ಚಂದ್ರಾಪೀಡನಿಗೆ ನೀನು ವಾಹನವಾಗುವೆ'' ಎಂದು ತಿಳಿಸಿದನು. ಕೂಡಲೆ ನಾನು ತುರಗ ರೂಪವನ್ನು ಹೊಂದಿ ಸಮುದ್ರಾಂತರದಲ್ಲಿ ಬಿದ್ದೆನು. ಪಾರಶೀಕರಾಜನು ನನ್ನನ್ನು ತಾರಾಪೀಡನಿಗೆ ಒಪ್ಪಿಸಿದನು. ಆತನ ಮಗನಾದ ಚಂದ್ರಾಪೀಡನಿಗೆ ಹೀಗೆ ನಾನು ವಾಹನವಾದೆನು. ಅಚ್ಛೋದದಲ್ಲಿ ಮುಳುಗಿದ ಕೂಡಲೆ ವಾಹತ್ವವು ಕಳೆಯಿತು. ಇನ್ನು ಶ್ವೇತಕೇತು ಪ್ರತಿಗಳ ಬಳಿಗೆ ಹೋಗುವೆನು—ಎಂದು

ಹೇಳಿ ಹೊರಟುಹೋದನು. ಮಹಾಶ್ವೇತೆ ಕಾದಂಬರಿಯನ್ನು ಕುರಿತು ತಂಗಿ, ನೀನು ಸಮಾಧಾನಮಾಡಿಕೊ. ನಾವಿಬ್ಬರೂ ಸಮಸುಖದುಃಖ ವೃತ್ತಿಗಳಾದೆವು. ನಮ್ಮ ಕರ್ತವ್ಯವನ್ನು ಮಾಡೋಣ. ಮನಸ್ಸಿನಲ್ಲಿ ದೈವವೆಂದು ಭಾವಿಸಿ ಕಲ್ಲ ಮಣ್ಣ ರೂಪನ್ನು ಪೂಜಿಸುತ್ತಿದ್ದರೇ ಸನ್ನಿಹಿತ ವಾಗುತ್ತಿರಲು ಸಾಕ್ಷಾತ್ ಚಂದ್ರಮೂರ್ತಿಯನ್ನು ಪೂಜಿಸುತ್ತಿದ್ದರೆ ಆತನು ಸನ್ನಿಹಿತವಾಗದಿರುವನೆ ?---ಎಂದು ಸಂತೈಸಿದಳು. ಇತ್ತ ಚಂದ್ರಾಪೀಡನ ಸ್ಥಿತಿಯನ್ನು ಚಾರರಿಂದ ತಿಳಿದು ಚಂದ್ರಾಪೀಡ ವೈಶಂ ಪಾಯನರ ತಾಯಿ ತಂದೆಗಳೂ ಅಲ್ಲಿಗೆ ಬಂದು ತಾಪಸರಂತಿದ್ದರು. ಹೀಗೆ ಪುಂಡರೀಕನು ಶ್ವೇತಕೇತುವ್ರತಿಗೆ ಮಗನಾಗಿ ಹುಟ್ಟಿ, ಕಾಮಪರ ವಶತೆಯಿಂದ ದೇವತ್ವವನ್ನು ಕಳೆದುಕೊಂಡು, ಶುಕನಾಸನಿಗೆ ವೈಶಂಪಾಯ ನನೆಂಬ ಹೆಸರಿನಿಂದ ಮಗನಾಗಿ ಹುಟ್ಟಿ, ಮತ್ತೆ ಕಾಮಿಯಾಗಿ ಮಹಾ ಶ್ವೇತೆಯ ಶಾಪದಿಂದ ಈ ಗಿಳಿಯಾಗಿ ಹುಟ್ಟಿದನು.

ಗಿಳಿಯ ಹೇಳಿಕೆ.—ಜಾಬಾಲಿಗಳು ಹೀಗೆ ಹೇಳಲು ನನಗೆ ಎಚ್ಚ ತ್ತಂತಾಗಿ ಜನ್ಮಾಂತರದಲ್ಲಿ ಕಲಿತ ವಿದ್ಯಾಸಂತತಿಯು ಲಭ್ಯವಾಯಿತು. ನಾನು ಜಾಬಾಲಿಗಳನ್ನು ಕುರಿತು " ಜಾತಿಸ್ಮರತೆ ವಿರಕ್ತಿಗೆ ಹೇತುವೆನ್ನು ತ್ತಾರೆ. ನನಗಾದರೋ ಮಹಾಶ್ವೇತೆಯಲ್ಲಿ ಆದ ಅನುರಾಗವು ಹೆಚ್ಚು ತ್ತಿದೆ. ಚಂದ್ರಾಪೀಡನನ್ನು ನೋಡಬೇಕೆನ್ನಿಸುತ್ತದೆ. ಆತನು ಎಲ್ಲಿ ಹುಟ್ಟಿದ್ದಾನೆಂಬುದನ್ನು ತಿಳಿಸಿ " ಎಂದು ಕೇಳಲು, ಅವರು " ನೀನು ಇನ್ನೂ ಹಾರಲಾರೆ ; ಗರಿ ಮೂಡಿದ ಮೇಲೆ ಹೋಗುವೆಯಂತೆ, ಈಗ ಸುಮ್ಮನಿರು " ಎಂದು ಹೇಳಿ ಹೊರಟು ಹೋದರು. ಸ್ವಲ್ಪ ಹೊತ್ತಾದ ಮೇಲೆ ನನ್ನ ಪೂರ್ವಜನ್ಮದ ಮಿತ್ರನಾದ ಕಪಿಂಜಲನು ನನ್ನನ್ನು ಹುಡುಕಿ ಕೊಂಡು ಬಂದು, ತಂದೆಯಾದ ಶ್ವೇತಕೇತು ವ್ರತಿಗಳು ಆಯುಷ್ಕಾಮ ಹೋಮವನ್ನು ಮಾಡುತ್ತಿರುವರೆಂದೂ ತಾಯಿಯಾದ ಲಕ್ಷ್ಮಿಯೂ ಆ ಕಾರ್ಯದಲ್ಲಿ ಪರಿಚಾರಿಣಿಯಾಗಿರುವಳೆಂದೂ ಆ ಯಜ್ಞ ಮುಗಿಯುವ ವರೆಗೂ ನಾನು ಜಾಬಾಲಿಗಳ ಸಮೀಪದಲ್ಲಿಯೇ ಇರುವಂತೆ ಅವರಿಬ್ಬರೂ ಹೇಳಿಕಳುಹಿಸಿರುವರೆಂದೂ ತಿಳಿಸಿ ಹೊರಟು ಹೋದನು. ಕೆಲಕಾಲಾ ನಂತರ ರೆಕ್ಕೆ ಬಲಿತು ನನಗೆ ಸ್ವಲ್ಪ ಮಟ್ಟಿಗೆ ಹಾರುವ ಶಕ್ತಿಬಂತು. ಚಂದ್ರಾಪೀಡನ ಉತ್ಪತ್ತಿಯೂ ಗೊತ್ತಾಯಿತು. ಆತನನ್ನು ನೋಡದೆ

ಒಂದು ನಿಮಿಷವೂ ಇರಲಾರದೆ, ಆತನ ಬಳಿಗೆ ಹೋಗಬೇಕೆಂದು ಒಂದು ದಿನ ಬೆಳಗ್ಗೆ ಜಾಬಾಲಿಗಳ ಆಶ್ರಮದಿಂದ ತಪ್ಪಿಸಿಕೊಂಡು ಹೊರಟೆನು. ಹಾರುತ್ತಾ ಸ್ವಲ್ಪ ದೂರ ಬಂದ ಮೇಲೆ ಬಳಲಿ ಒಂದು ಗಿಡದ ಮೇಲೆ ಮಲಗಿದೆನು. ಎಚ್ಚರವಾಗಿ ನೋಡುವ ಹೊತ್ತಿಗೆ ಬಲೆಯಲ್ಲಿ ಸಿಕ್ಕಿಬಿದ್ದಿದ್ದೆನು. ನನ್ನನ್ನು ಹಿಡಿದ ಚಂಡಾಲನನ್ನು ಕುರಿತು "ನಾನು ಪ್ರಿಯ ಸಖನನ್ನು ನೋಡಲು ಹೋಗುತ್ತಿದ್ದೇನೆ, ಇನ್ನೂ ಬಹುದೂರ ಹೋಗಬೇಕಾಗಿದೆ, ನನ್ನನ್ನು ಬಿಡು" ಎಂದು ಎಷ್ಟೋ ಅಂಗಲಾಚಿಕೊಂಡೆನು. ಅವನು ಅದೊಂದನ್ನೂ ಕಿವಿಗೆ ಹಾಕಿಕೊಳ್ಳದೆ ಹೊಲೆಯರ ಹಟ್ಟಿಗೆ ನನ್ನನ್ನು ತೆಗೆದುಕೊಂಡು ಹೋಗಿ ಆ ಹಟ್ಟಿಯಲ್ಲಿದ್ದ ಚಂಡಾಲ ಕನ್ಯೆಗೆ ಕೊಡಲು ಆಕೆ ನನ್ನನ್ನು ಒಂದು ಪಂಜರದಲ್ಲಿರಿಸಿದಳು. ಕೆಲವು ದಿನಗಳು ಹಾಗೆಯೇ ಇಟ್ಟಿದ್ದು ಈ ದಿನ ಇಲ್ಲಿಗೆ ತಂದಳು. ಈಕೆಯು ನನ್ನನ್ನು ಏಕೆ ಹಿಡಿಸಿದಳು, ಏಕೆ ಸೆರೆಯಲ್ಲಿಕ್ಕಿದಳು, ಇಲ್ಲಿಗೇಕೆ ತಂದಳು ಎಂಬುದೊಂದೂ ನನಗೆ ತಿಳಿಯದು ಎಂದು ಗಿಳಿ ಹೇಳಿತು. ಹೀಗೆ ಗಿಳಿ ಹೇಳಲು, ರಾಜನು ವಿಸ್ಮಿತನಾಗಿ ಚಂಡಾಲ ಕನ್ಯೆಯನ್ನು ಕರೆಸಲು ಆಕೆ ಬಂದು. ಶೂದ್ರಕನೇ ಚಂದ್ರಾಪೀಡನಾಗಿದ್ದ ಚಂದ್ರನೆಂದೂ, ಗಿಳಿಯೇ ವೈಶಂಪಾಯನನಾಗಿದ್ದ ಪುಂಡರೀಕನೆಂದೂ, ತಾನು ಚಂಡಾಲ ಕನ್ಯೆಯ ರೂಪವನ್ನು ತಳೆದಿದ್ದ ಲಕ್ಷ್ಮಿಯೆಂದೂ ಶ್ವೇತಕೇತುಗಳ ಆಜ್ಞೆಯಂತೆ ಆಯುಷ್ಕಾಮಹೋಮವು ಮುಗಿಯುವವರೆಗೂ ಗಿಳಿಯನ್ನು ಸೆರೆಯಿಕ್ಕಿದ್ದುದಾಗಿಯೂ ಯಜ್ಞಾವಸಾನ ಸಮಯ ಬಂದದ್ದರಿಂದ ಅದನ್ನು ಜನ್ಮಾಂತರ ಸಹಾಯನಾದ ರಾಜನ ಬಳಿಗೆ ತಂದದ್ದಾಗಿಯೂ ತಿಳಿಸಿ, ಇನ್ನು ಅವರಿಬ್ಬರೂ ಈ ದೇಹಗಳನ್ನು ತ್ಯಜಿಸಿ ದಿವ್ಯ ದೇಹಗಳನ್ನು ಹೊಂದಿ, ಇಷ್ಟಜನ ಸಮಾಗಮಸುಖವನ್ನನುಭವಿಸಬಹುದೆಂದು ಹೇಳಿ ಮಿಂಚಿನಂತೆ ಆಕಾಶಕ್ಕೆ ನೆಗೆದಳು. ರಾಜನೂ ಗಿಳಿಯೂ ತಮ್ಮ ತಮ್ಮ ದೇಹಗಳನ್ನು ತ್ಯಾಗಮಾಡಿದರು. ಇತ್ತ ಚಂದ್ರಾಪೀಡನ ದೇಹದಲ್ಲಿ ಪುನಃ ಚೈತನ್ಯವುಂಟಾಗಿ ಆತನೂ ಎದ್ದು ಕುಳಿತನು. ಚಂದ್ರಲೋಕದಿಂದ ಪುಂಡರೀಕನೂ ಬಂದನು. ಅನಂತರ ಚಂದ್ರಾಪೀಡನಿಗೂ ಕಾದಂಬರಿಗೂ ಪುಂಡರೀಕನಿಗೂ ಮಹಾಶ್ವೇತೆಗೂ ವಿವಾಹವಾಯಿತು.

ಕಾದಂಬರಿಯ ವಿಮರ್ಶೆ

ಬಾಣಕವಿಯ ಕಾವ್ಯರಚನೆಯ ರೀತಿಯನ್ನು ಕುರಿತು ಹಿಂದೆ ಹೇಳಿರುವ ಕೆಲವು ಅಭಿಪ್ರಾಯಗಳಿಗೆ ನಿದರ್ಶನವನ್ನು ಪಾಠಕರು ಮೇಲಿನ ಕಥಾ ಸಂಗ್ರಹದಲ್ಲಿ ಕಾಣಬಹುದು. ಈ ಕಾವ್ಯವು ಅದರ ಹೆಸರೇ ತಿಳಿಸುವಂತೆ ಕಾದಂಬರಿಯ ಪ್ರೇಮವನ್ನು ವರ್ಣಿಸುವ ಕಥೆಯಷ್ಟೆ. ಇದರ ಮುಖ್ಯ ಕಥೆಯೇನು ? ಚಂದ್ರಾಪೀಡನು ಬೇಟೆಗೆ ಹೋಗಿದ್ದಾಗ ಧಾರಿತಪ್ಪಿ ಮಹಾಶ್ವೇತೆಯ ಆಶ್ರಮವನ್ನು ಸೇರಿ ಆಕೆಯಿಂದ ಪ್ರೇರಿತನಾಗಿ ಕಾದಂಬರಿಯನ್ನು ನೋಡುವುದಕ್ಕೆ ಹೋಗುವುದು ; ಪ್ರಥಮ ದರ್ಶನ ಕಾಲದಲ್ಲಿಯೇ ಕಾದಂಬರಿಗೆ ಆತನಲ್ಲಿ ಅನುರಾಗ ಹುಟ್ಟಿ ಬೆಳೆಯುವುದು ; ಕಾರಣಾಂತರದಿಂದ ಚಂದ್ರಾಪೀಡನು ಅಗಲಲು ಕಾದಂಬರಿಗೆ ವಿರಹವುಂಟಾಗುವುದು ; ಕೆಲಕಾಲಾನಂತರ ಇಬ್ಬರಿಗೂ ಸಮಾಗಮವಾಗಿ ಅವರು ವಿವಾಹವಾಗುವುದು. ಕಥಾಕಾವ್ಯವನ್ನು ರಚಿಸುವವನು ಈ ಕಥೆಗೆ ಆವಶ್ಯಕವಾದ ಅಂಗೋಪಾಂಗಗಳನ್ನೆಲ್ಲ ಪ್ರಮಾಣವರಿತು ಪುಷ್ಟಿಗೊಳಿಸಿ ಕಾದಂಬರಿಯ ಪ್ರೇಮಜೀವನದ ಚರಿತ್ರೆ ಎದ್ದು ಕಾಣುವಂತೆ ಮಾಡಬೇಕು. ಈ ಕಾವ್ಯದ ಒಟ್ಟಿನಲ್ಲಿ ಮುಖ್ಯ ಕಥೆ ಇರುವುದೆಷ್ಟು, ಪ್ರಾಸಂಗಿಕವಾಗಿ ಬಂದಿರುವ ಸಂಗತಿಗಳೆಷ್ಟು ? ಇವಕ್ಕೂ ಮುಖ್ಯ ಕಥೆಗೂ ಪ್ರಮಾಣವು ಸರಿಯಾಗಿರುವುದೆ ? ಇಲ್ಲವೆಂಬುದು ಈ ಕಥಾ ಸಂಗ್ರಹದಿಂದ ಸ್ಪಷ್ಟವಾಗುತ್ತದೆ. ಕಥೆಯ ಸ್ವಾರಸ್ಯದ ದೃಷ್ಟಿಯಿಂದಲೇ ನೋಡುವುದಾದರೆ ಕಾದಂಬರಿಯ ಜೀವನ ಕಥೆಗಿಂತಲೂ ಗಿಳಿಯ ಜೀವನದ ಕಥೆಯೂ ಮಹಾಶ್ವೇತೆಯ ಜೀವನ ವೃತ್ತಾಂತವೂ ಹೆಚ್ಚು ಚಿತ್ತಾಕರ್ಷಕವಾಗಿವೆ. ಕವಿಗೆ ಬೇಕಾದದ್ದು ಕಥೆಯಲ್ಲ ; ಆತನ ಮುಖ್ಯೋದ್ದೇಶವು ವರ್ಣನೆ ಮತ್ತು ಪದಬಂಧಪ್ರೌಢಿಮೆ. ಕಾದಂಬರಿಯಲ್ಲಿ ವರ್ಣನೆಗಳು ಮೇಲಿಂದ ಮೇಲೆ ಬರುವುವು: ಶೂದ್ರಕ ರಾಜನ ಸಭಾವರ್ಣನೆ, ವಿಂಧ್ಯಾಟವಿಯ ವರ್ಣನೆ, ಜಾಬಾಲಿ ಋಷ್ಯಾಶ್ರಮದ ವರ್ಣನೆ; ಪ್ರತೀಹಾರಿಯ ವರ್ಣನೆ, ಚಂಡಾಲ ಕನ್ಯೆಯ ವರ್ಣನೆ, ಮಹಾಶ್ವೇತೆಯ ವರ್ಣನೆ, ಗಿಳಿಮರಿಯ ಮನೋಭಾವದ ವರ್ಣನೆ, ಕಾದಂಬರಿಯ ಅನುರಾಗದ ವರ್ಣನೆ ; ಇತ್ಯಾದಿ. ಈ ವರ್ಣನೆಗಳಲ್ಲಿ ಪ್ರತಿಯೊಂದನ್ನೂ– ಅದು ಪ್ರಕೃತಿಯ ವರ್ಣನೆಯೇ ಆಗಲಿ, ವ್ಯಕ್ತಿಗಳ ವರ್ಣನೆಯೇ ಆಗಲಿ,

ಭಾವಗಳ ವರ್ಣನೆಯೇ ಆಗಲಿ—ಮುಖ್ಯ ಗೌಣವೆಂಬ ಭೇದವಿಲ್ಲದೆ ಕವಿ ಸಾವಧಾನವಾಗಿ, ಸಂಪೂರ್ಣವಾಗಿ, ಕಣ್ಣಿಗೆ ಕಟ್ಟುವಂತೆ ಚಿತ್ರಿಸಿರುತ್ತಾನೆ. ಈ ವರ್ಣನೆಗೂ ಪದರಚನೆಗೂ ಕಥೆ ಅವಲಂಬನವಾಗುತ್ತದೆ. ಈ ವಿಷಯದಲ್ಲಿ ರವೀಂದ್ರನಾಥ ಠಾಕೂರರು ತಮ್ಮ "ಕಾದಂಬರೀ ಚಿತ್ರ" ಎಂಬ ಲೇಖನದಲ್ಲಿ ಹೇಳಿರುವ ಒಂದೆರಡು ವಾಕ್ಯಗಳನ್ನು ಇಲ್ಲಿ ಉದ್ಧರಿಸಬಹುದು. "ಸಮಗ್ರ ಕಾದಂಬರಿಯು ಒಂದು ಚಿತ್ರಶಾಲೆ. ಸಾಮಾನ್ಯವಾಗಿ ಜನರು ಘಟನೆಯನ್ನು ವರ್ಣಿಸಿ ಕಥೆಯನ್ನು ಬರೆಯುತ್ತಾರೆ; ಬಾಣಭಟ್ಟನಾದರೋ ಮೇಲಿಂದ ಮೇಲೆ ಚಿತ್ರಗಳನ್ನು ಶೃಂಗರಿಸಿ ಕಥೆಯನ್ನು ಹೇಳುತ್ತಾನೆ. ಆದುದರಿಂದಲೇ ಅತನ ಕಥೆಯು ಮುಂದೆ ಸಾಗತಕ್ಕದ್ದಲ್ಲ, ಅದು ವರ್ಣಕಾಂತಿಯಿಂದ ಕೂಡಿದ್ದು. ಚಿತ್ರಗಳಾದರೂ ವಿಶೇಷಸಂಬಂಧವುಳ್ಳವುಗಳಾಗಲಿ, ಧಾರಾವಾಹಿಕವಾಗಿರುವುವಾಗಲಿ ಅಲ್ಲ." "ಬಾಣಭಟ್ಟನಿಗೆ ಒಂದು ವೇಳೆ ಕಥೆಯನ್ನು ಹೇಳಬೇಕೆಂಬ ಸ್ಪಷ್ಟವಾದ ಉದ್ದೇಶವಿದ್ದಿದ್ದರೂ ಆತನು ಭಾಷೆಯ ದೊಡ್ಡ ಗೌರವಕ್ಕೆ ಲಾಘವವನ್ನುಂಟುಮಾಡಿ ಎಲ್ಲಿಯೂ ಕಥೆಯನ್ನು ಓಡಿಸಿಕೊಂಡು ಹೋಗಿಲ್ಲ. ಸಂಸ್ಕೃತ ಭಾಷೆಯನ್ನು ಅನುಚರರಿಂದೊಡಗೂಡಿದ ಚಕ್ರವರ್ತಿಯಂತೆ ಮುಂದು ಮಾಡಿಕೊಂಡು ಕಥೆಯು ಕಣ್ಣಿಗೆ ಬೀಳದಂತೆ ಅದರ ಹಿಂದೆ ಛತ್ರಿಯನ್ನು ಹೊತ್ತುಕೊಂಡು ಹೋಗುತ್ತದೆ. ಭಾಷೆಯ ರಾಜಮರ್ಯಾದೆ ಹೆಚ್ಚುವುದಕ್ಕೆ ಕಥೆಯಿಂದಲೂ ಸ್ವಲ್ಪ ಪ್ರಯೋಜನವುಂಟು. ಆದುದರಿಂದಲೇ ಅದಕ್ಕೆ ಅವಕಾಶ ಸಿಕ್ಕಿರುವುದು; ಅಷ್ಟೇ ಹೊರತು ಅದನ್ನು ಯಾರೂ ಕಣ್ಣೆತ್ತಿ ನೋಡುವುದಿಲ್ಲ." (ಪ್ರಾಚೀನ ಸಾಹಿತ್ಯ—ಕಾದಂಬರೀ ಚಿತ್ರ.)

ಬಾಣಕವಿ ಕಾದಂಬರಿಯನ್ನು ಪೂರ್ಣವಾಗಿ ರಚಿಸಲಿಲ್ಲ. ಚಂದ್ರಾಪೀಡನು ಕಾದಂಬರಿಯ ಪ್ರಥಮ ಸಂದರ್ಶನವನ್ನು ಹೊಂದಿ ಉಜ್ಜಯಿನಿಗೆ ಹಿಂದಿರುಗುವವರೆಗೆ ಮಾತ್ರ ಬರೆದಿದ್ದನು. ಮಿಕ್ಕದ್ದನ್ನು ಅತನ ಮಗನಾದ ಭೂಷಣಭಟ್ಟನು ಬರೆದು ಗ್ರಂಥವನ್ನು ಪೂರ್ಣಮಾಡಿದನು. ಆದಕಾರಣವೇ ಈ ಕಾವ್ಯದ ಪೂರ್ವಾರ್ಧದಲ್ಲಿ ಕಂಡು ಬರುವ ಕವಿತಾ ಕೌಶಲವು ಉತ್ತರಾರ್ಧದಲ್ಲಿ ಕಂಡು ಬರುವುದಿಲ್ಲ. ಬಾಣಕವಿ ತನ್ನ ಮಾಯದ ಕುಂಚವನ್ನು ಬೀಸಿದನೆಂದರೆ ಅಸಂಭವವಾದದ್ದು ಸಂಭವವಾಗಿ

ತೋರುವುದು. ಗಿಳಿ ವಿದ್ವಾಂಸನಂತೆ ರಾಜನನ್ನು ಹೊಗಳುವುದಕ್ಕಾಗಿ ಒಂದು ಕವನವನ್ನು ಕಟ್ಟುವುದು ; ಕಾವ್ಯದ ಬಹು ಭಾಗದ ಕಥೆಯನ್ನು ವಿದ್ವಾಂಸರಿಗಿಂತಲೂ ಚೆನ್ನಾಗಿ ಹೇಳುವುದು. ಇದೆಲ್ಲವೂ ಗಿಳಿಗೆ ಸಾಧ್ಯವೇ ಎಂದು ಕೇಳುವವರಾರು ? ಅದೇ ಮಾಯದ ಕುಂಚವೇ ಕಲ್ಪಿತವಾದದ್ದನ್ನು ಸಹಜವಾದದ್ದೆಂದು ಬೋಧೆಯಾಗುವಂತೆ ಮಾಡುವುದು. ಕಾದಂಬರಿ, ಮಹಾಶ್ವೇತೆ, ಚಂದ್ರಾಪೀಡ, ಶುಕನಾಸ, ಜಾಬಾಲಿ ಮುಂತಾದ ಕವಿಕಲ್ಪಿತ ಪಾತ್ರಗಳು ಚರಿತ್ರೆಯ ವ್ಯಕ್ತಿಗಳಂತೆ, ನಿಜವಾಗಿ ನೋಡಿದ ಜನರಂತೆ, ಚಿರಸ್ಥಾಯಿಯಾಗಿ ವಾಚಕರ ಹೃದಯದಲ್ಲಿ ನೆಲೆಗೊಳ್ಳುವುವು. ಕಾದಂಬರಿ ಚಂದ್ರಾಪೀಡನನ್ನು ನೋಡಿದಾಗ ಆಕೆಗೆ ಆತನಲ್ಲಿ ಅನುರಾಗವುಂಟಾಗುವುದಷ್ಟೆ. ಆ ಅನುರಾಗವನ್ನು ಕವಿ ಎಷ್ಟು ಸೂಕ್ಷ್ಮವಾಗಿ, ಎಷ್ಟು ಸ್ಫುಟವಾಗಿ, ಎಷ್ಟು ಕೋಮಲವಾಗಿ ಚಿತ್ರಿಸಿರುವನು ! ಆ ಪ್ರಣಯದ ಬೆಳವಣಿಗೆಯನ್ನು ಎಷ್ಟು ಸಹಜವಾಗಿ, ಎಷ್ಟು ಸಂಪೂರ್ಣವಾಗಿ ವರ್ಣಿಸಿರುವನು ! ಆದರೂ ಒಂದು ದೃಷ್ಟಿಯಿಂದ ಮಹಾಶ್ವೇತೆಯೇ ಕಾದಂಬರಿಗಿಂತಲೂ ಹೆಚ್ಚಾಗಿ ಕಾವ್ಯಪಾಠಕರ ಹೃದಯದಲ್ಲಿ ಸ್ಥಾನವನ್ನು ಪಡೆಯುತ್ತಾಳೆ. ಪಾಠಕರು ಆಕೆಯನ್ನು ಮೊದಲು ನೋಡುವುದು ಸಿದ್ಧಾಯತನದಲ್ಲಿ ; ಶಿವ ಸಾನ್ನಿಧ್ಯದಲ್ಲಿ ; ವೀಣಾವಾದನ ಮಾಡುತ್ತಿರುವಾಗ. ಆಕೆ ಸುಂದರಿ, ಯೌವನಶಾಲಿನಿ, ಸುಕುಮಾರಿ, ಆದರೆ ತಪಸ್ವಿನಿ. ಆಕೆಯ ಗುಣಗಾಂಭೀರ್ಯವೂ, ಸರಳಸ್ವಭಾವವೂ ದೊಡ್ಡ ನಡತೆಯೂ ಆಕೆಯನ್ನು ಪೂಜ್ಯಳನ್ನಾಗಿ ಮಾಡಿವೆ. ತಾನು ಪತಿವಿರಹದುಃಖಿತೆಯಾದರೂ ಕಾದಂಬರಿಯ ಸುಖಸಾಧನೆಯಲ್ಲಿ ಅತ್ಯಂತ ಉತ್ಸಾಹದಿಂದ ತೊಡಗಿದ ಆಕೆಯನ್ನು ನೋಡಿದವರು ಯಾರು ತಾನೆ ಆಕೆಗೆ ತಲೆಬಾಗರು ? ಕಾದಂಬರಿಯ ಮುಖ್ಯರಸವು ಶೃಂಗಾರವಾದರೂ ಅದರಲ್ಲಿ ನಿರೂಪಿತವಾಗಿರುವ ಪ್ರಣಯವು ಗಂಭೀರವಾದದ್ದು ; ಶುದ್ಧವಾದದ್ದು ; ಪವಿತ್ರವಾದದ್ದು. ಕಾದಂಬರೀ ಮಹಾಶ್ವೇತೆಯರು ಶೃಂಗಾರಸಾರರಾದರೂ ಪತಿವ್ರತೆಯರು, ತಪಸ್ವಿನಿಯರು. ಜಗತ್ತಿನ ಸಾಹಿತ್ಯದಲ್ಲಿ ಬಹು ಭಾಗವು ಪ್ರಣಯವನ್ನು ನಿರೂಪಿಸುವುದೇ ಆಗಿದೆ. ಈ ಪ್ರಣಯ ಸಾಹಿತ್ಯದಲ್ಲಿ ಪ್ರಥಮ ಸ್ಥಾನವನ್ನು ಪಡೆಯಲರ್ಹವಾದ ಗ್ರಂಥಗಳಲ್ಲಿ ಕಾದಂಬರಿಯೂ ಒಂದಾಗಿದೆ

ಪರಿವರ್ತನದ ವಿಮರ್ಶೆ

ನಾಗವರ್ಮನ ಪರಿವರ್ತನಕಾರ್ಯದ ವಿಚಾರವಾಗಿ ಒಂದೆರಡು ಮಾತನ್ನು ಹೇಳಬಹುದು. ಮೂಲ ಸಂಸ್ಕೃತ ಗ್ರಂಥವು ಗದ್ಯದಲ್ಲಿದೆ. ಅದನ್ನು ನಾಗವರ್ಮನು ಕನ್ನಡದಲ್ಲಿ ಚಂಪೂ ರೂಪವಾಗಿ ಪರಿವರ್ತಿಸಿರುತ್ತಾನೆ. ಒಂದು ದೃಷ್ಟಿಯಿಂದ ಹೀಗೆ ಮಾಡಿರುವುದು ಅನುಕೂಲವೆಂದೇ ಹೇಳಬೇಕು. ಗದ್ಯದಲ್ಲಿದ್ದದ್ದನ್ನು ಗದ್ಯಪದ್ಯವಾಗಿ ಬರೆದರೆ ಕಂಡ ಹಾಗೆ ವೈವಿಧ್ಯವುಂಟಾಗುತ್ತದೆ. ಅಲ್ಲದೆ ಗದ್ಯ ವಾಕ್ಯಕ್ಕೆ ಮಿತಿಯಿಲ್ಲ. ಬಾಣನಲ್ಲಂತೂ ವಾಕ್ಯಗಳು ಅನೇಕವಾಗಿ ತುಂಬ ಲಂಬಿಸಿರುತ್ತವೆ. ಪದ್ಯಕ್ಕೆ ಒಂದು ಎಲ್ಲೆಯುಂಟು. ಆದಕಾರಣ ಮೂಲದ ವಾಕ್ಯಗಳನ್ನು ಅಲ್ಲಲ್ಲಿ ಕತ್ತರಿಸಿ ಬೇರೆ ಬೇರೆ ವಾಕ್ಯಗಳನ್ನು ಮಾಡಬೇಕಾಗುತ್ತದೆ. ಓದುವವನ ದೃಷ್ಟಿಯಿಂದ ಇದೂ ಒಂದು ಸೌಕರ್ಯವೇ. ಕೆಲವು ವೇಳೆ ಗದ್ಯದಲ್ಲಿ ಸಂಗ್ರಹವಾಗಿರುವುದನ್ನು ಪದ್ಯದ ಭರ್ತಿಗಾಗಿ ಹಿಗ್ಗಲಿಸಬೇಕಾಗಿಯೂ ಬರಬಹುದು. ಇದರಿಂದ ವಿಶೇಷ ಬಾಧಕವೇನೂ ಇಲ್ಲ.

ಕಾವ್ಯದಲ್ಲಿ ಶಬ್ದವಿರುತ್ತದೆ, ಅರ್ಥವಿರುತ್ತದೆ. ಒಂದು ಭಾಷೆಯಲ್ಲಿನ ಕಾವ್ಯದ ಅರ್ಥವನ್ನು ಮತ್ತೊಂದು ಭಾಷೆಗೆ ತರುವುದು ಸಾಧ್ಯವಾಗಬಹುದು. ಹೀಗೆ ಮಾಡಬೇಕಾದರೆ ಪರಿವರ್ತನಕಾರನು ಮೂಲ ಗ್ರಂಥದ ಭಾವಗಳನ್ನೂ ಅರ್ಥವನ್ನೂ ಚೆನ್ನಾಗಿ ಗ್ರಹಿಸಿರಬೇಕು. ತಾನು ಯಾವ ಭಾಷೆಗೆ ಪರಿವರ್ತಿಸುವನೋ ಅದರ ಪರಿಚಯವನ್ನು ಚೆನ್ನಾಗಿ ಪಡೆದಿರಬೇಕು. ಇಷ್ಟಿದ್ದರೆ ಮೂಲದ ಅಭಿಪ್ರಾಯವನ್ನು ತರುವುದು ಅಸಾಧ್ಯವಾಗಲಾರದು. ಶಬ್ದದಲ್ಲೇ ಅನೇಕ ವೇಳೆ ಒಂದು ಸೌಂದರ್ಯ, ಒಂದು ಶಕ್ತಿ ಇರುತ್ತದೆ. ಮತ್ತಾವ ಶಬ್ದದಿಂದಲೂ ಅದನ್ನು ಪ್ರಕಟಪಡಿಸಲು ಸಾಧ್ಯವಾಗದಿರಬಹುದು. ಅಂಥ ಸಂದರ್ಭಗಳಲ್ಲಿ ಆ ಶಬ್ದವನ್ನೇ ಪರಿವರ್ತನದಲ್ಲಿಯೂ ಹಾಕಬೇಕಾಗುತ್ತದೆ. ಅದು ಸಾಧ್ಯವಾಗದಿದ್ದಲ್ಲಿ ಅಷ್ಟುಮಟ್ಟಿನ ಮೂಲ ಗ್ರಂಥದ ಸ್ವಾರಸ್ಯವು ಕಡಮೆಯಾಗುತ್ತದೆ. ಪದವಿನ್ಯಾಸದಿಂದ ಉಂಟಾಗುವ ಸೌಂದರ್ಯದ ವಿಷಯದಲ್ಲಿಯೂ ಹೀಗೆಯೇ. ಸಂಸ್ಕೃತದಿಂದ ಕನ್ನಡಕ್ಕೆ ಒಂದು ಕಾವ್ಯವನ್ನು ಪರಿವರ್ತನೆಮಾಡುವಾಗ ಆವಶ್ಯಕವಾದೆಡೆಗಳಲ್ಲಿ ಸಂಸ್ಕೃತ ಪದಗಳನ್ನು ಕನ್ನಡದಲ್ಲಿ ಬಳಸಬಹುದಾದ್ದರಿಂದ, ಪರಿವರ್ತನಕಾರನು ಜಾಣನಾದರೆ

ಈ ಕಾರ್ಯವನ್ನೂ ತಕ್ಕಮಟ್ಟಿಗೆ ತೃಪ್ತಿಕರವಾಗಿಯೇ ಸಾಧಿಸಬಹುದು. ಇಂಥ ಸಂದರ್ಭಗಳಲ್ಲಿ ಪರಿವರ್ತನಕಾರನು ಉಚಿತವರಿತು ಸಂಸ್ಕೃತ ಕನ್ನಡ ಪದಗಳನ್ನು ಪ್ರಯೋಗಿಸಿರುವನೇ ಎಂದು ನೋಡಬೇಕು.

ನಾಗವರ್ಮನು ಸಾಧ್ಯವಾದಮಟ್ಟಿಗೂ ಸರಳವಾದ ಕನ್ನಡದಲ್ಲಿಯೇ ಗ್ರಂಥರಚನೆಮಾಡಿದ್ದಾನೆ. ಅವನು ಪರಿವರ್ತನಮಾಡುತ್ತಿರುವುದು ಸಂಸ್ಕೃತ ಗದ್ಯಕಾವ್ಯವೆಂದೂ ಅದರಲ್ಲಿ ಮಾರುದ್ದದ ಸಮಾಸ ಪದಗಳು ಹಲವಿವೆಯೆಂದೂ ಶಬ್ದಾರ್ಥಲಂಕಾರಗಳು ಮೇಲಿಂದ ಮೇಲೆ ಬರುತ್ತವೆಯೆಂದೂ ನೆನಪಿನಲ್ಲಿಟ್ಟಲ್ಲಿ ನಾಗವರ್ಮನ ಸಂಸ್ಕೃತಪ್ರಯೋಗವು ಅಷ್ಟೇನೂ ಹೆಚ್ಚಲ್ಲವೆನ್ನಬೇಕು. ಕಥೆ ಹೇಳುವಾಗ ಅವನ ಶೈಲಿ ತುಂಬಾ ತಿಳಿಯಾಗಿರುತ್ತದೆ. ವರ್ಣನೆಗಳು ಬಂದಾಗ ಸಂಸ್ಕೃತವನ್ನು ತುಂಬಿ ಸಮಾಸಗಳನ್ನು ಹೆಣೆಯುವುದು ಕಂಡು ಬರುತ್ತದೆ. ಇದು ಹೆಚ್ಚಾಗಿ ಕಂಡುಬರುವುದು ಗದ್ಯದಲ್ಲಿ. ಪದ್ಯಗಳಲ್ಲೂ ಒಂದೊಂದು ಸಲ ಬಾಣನ ಕಾದಂಬರಿಗೂ ಕನ್ನಡ ಕಾದಂಬರಿಗೂ ಸ್ಪರ್ಧೆ ಬೀಳುವುದುಂಟು. ಇದಕ್ಕೆ ಒಂದು ಉದಾಹರಣೆಯನ್ನು ಇಲ್ಲಿ ಕೊಡಬಹುದು.—

ಅನಂತರಂ ಚ ಸರಭಸಂ ಇತೋ ಗಜಯೂಥಪತಿ ಲುಲಿತ ಕಮಲಿನೀ ಪರಿಮಲಃ, ಇತಃ ಕ್ರೋಡಕುಲದಶ್ಯಮಾನ ಭದ್ರಮುಸ್ತಾರಸಾಮೋದಃ, ಇತಃ ಕರಿಕಲಭ ಭಜ್ಯಮಾನ ಸಲ್ಲಕೀಕಷಾಯಬಂಧಃ, ಇತಃ ನಿಪತಿತ ಶುಷ್ಕಪತ್ರ ಮರ್ಮರ ಧ್ವನಿಃ, ಇತಃ ವನಮಹಿಷ ವಿಷಾಣಕೋಟಿ ಕುಲಿಶ ಭಿದ್ಯಮಾನ ವಲ್ಮೀಕಧೂಲಿಃ.... .

ಇದರ ಕನ್ನಡ ಪರಿವರ್ತನವನ್ನು ನೋಡಿ—

ಇದೆ ಪರ್ವಿತ್ತು ಮತಂಗಜೋಚ್ಚಲಿತ ಕಂಜಾಳೀರಜಸ್ತೋಮವಿಂ
ತಿದೆ ತೀಡಿತ್ತು ವರಾಹಸಂಕುಳ ದಳನ್ಮುಸ್ತೋತ್ಕರಾಮೋದಮಿಂ
ತಿದೆ ಬಂದತ್ತಿಭಯೂಥನಾಥ ದಳಿತೋದ್ಯತ್ಸಲ್ಲಕೀ ಗಂಧಮಿಂ
ತಿದೆ ತೋಱಿತ್ತುಮದಾಂಧಸೈರಿಭಖುರಪ್ರೋದ್ಧೂತರೇಣುವ್ರಜಂ

ಕನ್ನಡ ಪರಿವರ್ತನಕ್ಕಿಂತಲೂ ಸಂಸ್ಕೃತ ಮೂಲವೇ ಸುಲಭವಾಗಿರುವುದಲ್ಲವೆ ?

ಅಲ್ಲದೆ ಗದ್ಯರೂಪದಲ್ಲಿರುವುದನ್ನು ಪದ್ಯಕ್ಕೆ ಅಳವಡಿಸುವಾಗ "ಇತಃ ನಿಪತಿತ ಶುಷ್ಕಪತ್ರ ಮರ್ಮರ ಧ್ವನಿಃ" ಎಂಬುದು ಕೈಬಿಟ್ಟು

ಹೋಗಿದೆ. ಹೀಗೆಯೇ ಅಲ್ಲಲ್ಲಿ ಕೆಲವು ವಾಕ್ಯಭಾಗಗಳು ಬಿಟ್ಟುಹೋಗಿರುವುದು ಕಂಡುಬರುತ್ತದೆ. ಇದಕ್ಕೆ ಒಂದು ಉದಾಹರಣೆಯನ್ನು ಇಲ್ಲಿ ಕೊಟ್ಟಿದೆ.—

ತೇನ ಚ ಕರ್ಣಾವತಂಸೀಕೃತಾಂ ವಸಂತದರ್ಶನಾನಂದಿತಾಯಾಃ ಸ್ಮಿತ ಪ್ರಭಾಮಿವ ವನಶ್ರಿಯಃ, ಮಲಯಮಾರುತಗಮನಾರ್ಥ ಲಾಜಾಂಜಲಿರಿವ ಮಧುಮಾಸಸ್ಯ, ಯೌವನಲೀಲಾಮಿವ ಕುಸುಮಲಕ್ಷ್ಮ್ಯಾಃ, ಸುರತಪರಿಶ್ರಮ ಸ್ವೇದಜಲ ಕಣಕಾವಲೀಮಿವ ರತೇಃ, ಧ್ವಜಚಿಹ್ನ ಚಾಮರ ಪಿಚ್ಛಿಕಾಮಿವ ಮನೋಭವಗಜಸ್ಯ, ಮಧುಕರ ಕಾಮುಕಾಭಿಸಾರಿಕಾಂ ಕೃತ್ತಿಕಾ ತಾರಾಸ್ತಬಕಾನುಕಾರಿಣೀಂ ಅಮೃತಬಿಂದು ನಿಸ್ಯಂದಿನೀಂ ಅದೃಷ್ಟಪೂರ್ವಾಂ ಕುಸುಮಮಂಜರೀಂ ಅದ್ರಾಕ್ಷಂ.

ಇದರ ಕನ್ನಡ ಪರಿವರ್ತನವು ಹೀಗಿದೆ—

ಸ್ಮರಕಾಂತಾ ರತಘರ್ಮಬಿಂದು ಚಯಮೋ ಮೀನಾಂಕ ಮತ್ತೇಭಚಾ
ಮರಮೋ ನಂದನಲಕ್ಷ್ಮಿಯೊಳ್ನಗೆಯೊ ತಾಂ ಮಂದಾನಿಲಂ ತೆಂಕಣಿಂ
ಬರೆ ಚೈತ್ರಂ ಕುಡುವರ್ಘ್ಯಲಾಜತತಿಯೋ ಪೇಯೆಂಬಿನಂ ಪುಷ್ಪಮಂ
ಜರಿಯಂ ತನ್ಮಿನಿಕರ್ಣಪೂರಕಮನತ್ಯಾಶ್ಚರ್ಯದಿಂ ನೋಡಿದೆಂ ॥

ಇಲ್ಲಿ, ಮೂಲದ ಹಲವು ಭಾವಗಳನ್ನು ಕವಿ ಸಂಗ್ರಹಿಸಿ ಒಂದು ವೃತ್ತದಲ್ಲಿ ಅಡಕ ಮಾಡಿದ್ದಾನೆ. ಒಂದೆರಡು ಭಾವಗಳು ಕೈಬಿಟ್ಟುಹೋಗಿವೆ. ಕವಿ ಕೆಲವನ್ನು ಆರಿಸಿಕೊಂಡು ಕೆಲವನ್ನು ಕೈಬಿಟ್ಟಿರುವನೆಂದು ಹೇಳಬೇಕಷ್ಟೆ. ಈ ವಿಷಯದಲ್ಲಿ ಅವನು ತನ್ನ ವಿಮರ್ಶನ ಬುದ್ಧಿಯನ್ನು ಸರಿಯಾಗಿ ಉಪಯೋಗಿಸಲಿಲ್ಲವೆನ್ನಿಸುತ್ತದೆ. ಉತ್ಪ್ರೇಕ್ಷೆಗಳನ್ನು ಉಳಿಸಿಕೊಂಡ ಕವಿ "ಕೃತ್ತಿಕಾ ತಾರಾಸ್ತಬಕಾನುಕಾರಿಣೀಂ" ಎಂಬ ಸಹಜವಾದರೂ ಪರಮ ಸುಂದರವಾದ ಉಪಮೆಯನ್ನು ಕೈಬಿಟ್ಟಿರುವುದನ್ನು ನಾವು ಮೆಚ್ಚಲಾರೆವು.

ಹೀಗೆ ಅಲ್ಲಲ್ಲಿ ಕವಿ ಎಡವಿರುವನಾದರೂ ಮೂಲದ ಭಾವಗಳನ್ನು ಸಂಗ್ರಹಿಸುವಾಗ ಹಲವು ಕಡೆ ವಿವೇಚನೆಯನ್ನುಪಯೋಗಿಸಿದ್ದಾನೆ. ಒಂದು ಭಾಗವು ಪುನರಾವೃತ್ತವಾಗಿದ್ದರೆ, ಒಂದು ವರ್ಣನೆ ತುಂಬ ಲಂಬಿಸಿದ್ದರೆ, ಅಲ್ಲಿ ತನ್ನ ಕತ್ತರಿಯನ್ನು ಉಪಯೋಗಿಸುತ್ತಾನೆ. ಕೆಲವು

ವೇಳೆ ಮೂಲದಲ್ಲಿನ ಯಾವುದಾದರೂ ಸಂದರ್ಭವು ಉಚಿತವಲ್ಲವೆಂದು ತನಗೆ ತೋರಿದರೆ ಅದನ್ನು ಬಿಟ್ಟು ತನ್ನ ಜಾಣ್ಮೆಯನ್ನು ಪ್ರಕಟಪಡಿಸಿರುವುದೂ ಉಂಟು. ಉದಾಹರಣೆಗೆ—ವೈಶಂಪಾಯನನೆಂಬ ಗಿಳಿಮರಿ ಇದ್ದ ಘುರದಡಿಗೆ ಬೇಡರ ಪಡೆ ಬಂದಾಗ, ತಾನು ಬೇಡರನ್ನು ಕಾಣುವುದಕ್ಕೂ ಅವರ ವಿಚಾರವನ್ನು ತಿಳಿಯುವುದಕ್ಕೂ ಅದೇ ಮೊದಲನೆಯ ಸಲವಾಗಿದ್ದರೂ ರೆಕ್ಕೆಕೂಡ ಇನ್ನೂ ಬಲಿತಿಲ್ಲದ ಆ ಮರಿಗಿಳಿ ನೀತಿಜ್ಞನಾದ ವೃದ್ಧನಂತೆ ವ್ಯಾಧವೃತ್ತಿಯ ದೋಷಗಳನ್ನೆಲ್ಲಾ ತಾನು ಕಾಣದಿದ್ದರೂ ಕೇಳದಿದ್ದರೂ ಪಟ್ಟಿಹಾಕುತ್ತದೆ. ಅದರ ಬಾಯಲ್ಲಿ ಈ ಮಾತುಗಳು ಒಪ್ಪುವುದಿಲ್ಲವೆಂದು ತಿಳಿದು ನಾಗವರ್ಮನು ತನ್ನ ಪರಿವರ್ತನದಲ್ಲಿ ಅದನ್ನು ಸಂಪೂರ್ಣವಾಗಿ ಕೈಬಿಟ್ಟಿರುವಂತೆ ತೋರುತ್ತದೆ.

ಅನೇಕವೇಳೆ ಕವಿ ಮೂಲದಲ್ಲಿರುವುದನ್ನು ಅಲ್ಲಲ್ಲಿ ಬಿಡುವನಾದರೂ ಅಪೂರ್ವವಾಗಿ ಮೂಲದಲ್ಲಿರುವುದನ್ನು ವಿಸ್ತರಿಸಿ ಹೊಸದನ್ನು ಸೇರಿಸುವುದೂ ಉಂಟು. ಇದಕ್ಕೆ ಒಂದು ಉದಾಹರಣೆಯನ್ನು ಇಲ್ಲಿ ಕೊಡಬಹುದು.—

ಏಕತ್ರ ಖಲು ಮದನ ಮಧುಮಾಸ ಮಲಯಮಾರುತ ಪ್ರಭೃತಯಃ ಸಮಸ್ತಾಃ. ಏಕತ್ರ ಚಾಯಂ ಪಾಪಕಾರೀ ಚಂದ್ರಹತಕೋ ನ ಶಕ್ಯತೇ ಸೋಢುಂ. ಇದಂ ಅತಿದುರ್ವಿಷಹ ಮದನವೇದನಾತುರಂ ಚ ಮೇ ಹೃದಯಂ.

ಇದು ಈ ಪದ್ಯದಲ್ಲಿ ಹೀಗೆ ಪರಿವರ್ತಿತವಾಗಿದೆ—

ಇತ್ತ ವಸಂತನಿತ್ತ ಮಲಯಾನಿಲನಿತ್ತ ಮಧುವ್ರತಾಳಿ ಮ
ತ್ತಿತ್ತ ಮದೋತ್ಕಕೋಕಿಲ ಕದಂಬಕವೆಯ್ದೆ ವಿಜೃಂಭಿಸಿತ್ತು ತಾ
ನಿತ್ತಲಡರ್ದು ಚಂದ್ರಹತಕಂ ತಲೆದೋಱಿದನೋವೊ ಕೆಟ್ಟೆನೀ
ಚಿತ್ತಜತಾಪವಗ್ಗಲಿಸಿದಪ್ಪುದು ಮದ್ಧೃದಯಾಂತರಾಳದೊಳ್ ॥

ಇಲ್ಲಿ "ಮದೋತ್ಕಕೋಕಿಲ ಕದಂಬಕ" ಎಂಬ ಭಾಗವು ಮೂಲದಲ್ಲಿಲ್ಲ. ಇದು ನಾಗವರ್ಮನು ಸೇರಿಸಿರುವುದು. ಉಚಿತವಾಗಿಯೂ ಇದೆ. "ಪ್ರಭೃತಯಃ" ಎಂಬ ಮೂಲದ ಪದವು ಈ ಭಾಗವನ್ನು ಸೇರಿಸುವುದಕ್ಕೆ ಅವಕಾಶವನ್ನು ಕೊಡುತ್ತದೆ. ಪದ್ಯವನ್ನು ತುಂಬುವುದಕ್ಕಾಗಿ ಕವಿ ಕೆಲವೆಡೆಗಳಲ್ಲಿ ಹೀಗೆ ಹೊಸ ವಿಷಯಗಳನ್ನು ಸೇರಿಸಿದ್ದರೂ ಸೇರಿಸಿರಬಹುದು;

ಮತ್ತೆ ಕೆಲವೆಡೆಗಳಲ್ಲಿ ಮೂಲದಲ್ಲಿರುವುದನ್ನು ಹಿಗ್ಗಲಿಸಿರಬಹುದು. ಹೀಗೆ ಹಿಗ್ಗಲಿಸಿರುವುದು ಕೆಲವೆಡೆಗಳಲ್ಲಿ ಭಾವಕ್ಕೆ ಪುಷ್ಟಿಯನ್ನು ಕೊಡುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ, ನಾಗವರ್ಮನು ಮೂಲಗ್ರಂಥವನ್ನು ಹೆಜ್ಜೆ ಹೆಜ್ಜೆಗೂ ಅನುಸರಿಸಿದ್ದಾನೆ. ಆದರೂ ಅವನದು "ಮಕ್ಕೀಕಾ ಮಕ್ಕಿ" ಪರಿವರ್ತನವಲ್ಲ. ಮೂಲದ ವಾಕ್ಯಸರಣಿಯನ್ನೇ ಸಾಮಾನ್ಯ ವಾಗಿ ಅನುಸರಿಸಿದರೂ ಆಗಾಗ ಛಂದಸ್ಸಿನ ಸೌಕರ್ಯಕ್ಕಾಗಿಯೋ ಭಾಷಾಮರ್ಯಾದೆಯನ್ನು ಕಾಪಾಡಿಕೊಳ್ಳುವುದಕ್ಕಾಗಿಯೋ ವಾಕ್ಯ ಗಳನ್ನು ಹಿಂದುಮುಂದು ಮಾಡಲು ಹಿಂಜರಿಯುವುದಿಲ್ಲ. ಕೆಲವುವೇಳೆ ಮೂಲದ ಕೆಲವು ಭಾಗಗಳನ್ನೇ ಕೈಬಿಡುತ್ತಾನೆ. ಒಂದೆರಡು ಕಡೆ ತಾನೇ ಸ್ವತಂತ್ರವಾಗಿ ವಿಸ್ತರಿಸುವುದೂ ಉಂಟು. ಆದರೆ ಇವೆಲ್ಲವೂ ಸಣ್ಣ ಸಣ್ಣ ವ್ಯತ್ಯಾಸಗಳು. ಇವುಗಳಿಂದ ಮೂಲದ ಸ್ವಾರಸ್ಯಕ್ಕೆ ಕುಂದುಬರುವುದು ಕಡಮೆಯೆಂದೇ ಸಾಮಾನ್ಯವಾಗಿ ಹೇಳಬಹುದು.

ಗ್ರಂಥಪಾಠ

ಈ ಸಂಗ್ರಹವನ್ನು ಕುರಿತು ಮುಖ್ಯವಾದ ಕೆಲವು ಸಂಗತಿಗಳನ್ನು ಇಲ್ಲಿ ತಿಳಿಸಬೇಕಾಗಿದೆ. ಪ್ರಧಾನಸಂಪಾದಕರು ತಮ್ಮ ಮುನ್ನುಡಿಯಲ್ಲಿ ಹೇಳಿರುವಂತೆ ವಿದ್ಯಾರ್ಥಿಗಳ ಪಾಠಕ್ಕೆ ಪ್ರಮಾಣವು ಅತಿ ಮೀರದಂತೆ ಇರಬೇಕಾದದ್ದು ಸಂಗ್ರಹದ ಒಂದು ಮುಖ್ಯೋದ್ದೇಶ. ಈ ಉದ್ದೇಶ ಸಾಧನೆಗಾಗಿ ಕಥಾಸೂತ್ರಕ್ಕೆ ಆವಶ್ಯಕವಲ್ಲವೆಂದು ತೋರಿದ ಭಾಗ ಗಳನ್ನು, ಅವು ಬೇರೆ ದೃಷ್ಟಿಗಳಿಂದ ಎಷ್ಟೇ ಚೆನ್ನಾಗಿದ್ದರೂ, ಕೆಲವುಕಡೆ ಸಂಪೂರ್ಣವಾಗಿ ಕೈಬಿಟ್ಟಿದೆ; ಕೆಲವುಕಡೆ ಸಂಗ್ರಹಿಸಿದೆ. ಅಲ್ಲದೆ, ಅಲ್ಲಲ್ಲಿ ಪದ್ಯಗಳಲ್ಲಿರುವ ಕೆಲವು ಮಾತುಗಳನ್ನು ಮಾತ್ರ ಆರಿಸಿ, ಜೋಡಿಸಿ ಗದ್ಯ ವಾಗಿ ಬರೆದಿದೆ. ಇಷ್ಟಾದರೂ ಈ ಸಂಗ್ರಹವು ಸ್ವಲ್ಪ ದೊಡ್ಡದಾಗಿದೆ ಯೆಂದೇ ಹೇಳಬೇಕು. ಕರ್ಣಾಟಕ ಕಾದಂಬರಿಯಲ್ಲಿ ಇತರ ಚಂಪೂ ಕಾವ್ಯಗಳಲ್ಲಿರುವಂತೆ ಆಶ್ವಾಸವಿಭಾಗಗಳಿಲ್ಲ; ಪೂರ್ವಭಾಗ ಉತ್ತರಭಾಗ ಎಂದು ಎರಡು ಭಾಗಗಳು ಮಾತ್ರ ಇವೆ. ಪಾಠಕರ ಸೌಕರ್ಯಕ್ಕಾಗಿ ಈ ಸಂಗ್ರಹವನ್ನು ಎಂಟು ಪರಿಚ್ಛೇದಗಳಾಗಿ ವಿಂಗಡಿಸಿ ಅವುಗಳಿಗೆ ಉಚಿತವಾದ ಹೆಸರುಗಳನ್ನು ಕೊಟ್ಟಿದೆ.

ಕರ್ಣಾಟಕ ಕಾದಂಬರಿಯ ಶುದ್ಧಪಾಠವನ್ನು ಗೊತ್ತುಮಾಡಲು ಆವಶ್ಯಕವಾದ ಹಸ್ತಲಿಖಿತ ಪ್ರತಿಗಳು ದೊರೆಯದಿರುವುದರಿಂದ ಬಿ. ಮಲ್ಲಪ್ಪನವರಿಂದ ಮುದ್ರಿತವಾಗಿರುವ ಗ್ರಂಥದಲ್ಲಿಯ ಪಾಠವನ್ನೇ ಸಾಮಾನ್ಯವಾಗಿ ಅನುಸರಿಸಿದೆ. ಕೆಲವೆಡೆಗಳಲ್ಲಿ ಸಂಸ್ಕೃತ ಗ್ರಂಥವನ್ನು ನೋಡಿ, ಕೆಲವೆಡೆಗಳಲ್ಲಿ ಓರಿಯಂಟಲ್ ಲೈಬ್ರರಿಯಲ್ಲಿರುವ ಹಸ್ತಲಿಖಿತ ಪ್ರತಿಯನ್ನು ನೋಡಿ, ಮತ್ತೆ ಕೆಲವೆಡೆಗಳಲ್ಲಿ ಮುದ್ರಿತ ಪುಸ್ತಕದಲ್ಲಿ ಕೊಟ್ಟಿರುವ ಪಾಠಾಂತರಗಳ ಸಹಾಯದಿಂದ, ಅಲ್ಲಲ್ಲಿ ಕೆಲವು ವ್ಯತ್ಯಾಸಗಳನ್ನು ಮಾಡಿದೆ. ಈ ಗ್ರಂಥವು ಹನ್ನೊಂದನೆಯ ಶತಮಾನದಲ್ಲಿ ಹುಟ್ಟಿದ್ದಾಗಿ ತಿಳಿದುಬರುವುದರಿಂದ ಆ ಕಾಲದಲ್ಲಿ ಬಳಕೆಯಲ್ಲಿದ್ದ ಹಳಗನ್ನಡದ ಪ್ರಯೋಗಗಳನ್ನೇ ಉಪಯೋಗಿಸಿದೆ. ಉದಾಹರಣೆಗೆ—ಮುದ್ರಿತ ಗ್ರಂಥದಲ್ಲಿ ಱಟಾಕ್ಷರ ಪ್ರಯೋಗವಿರಲಿಲ್ಲ; ಳ ಕಾರವು ಮಾತ್ರ ಕಂಡುಬರುತ್ತದೆ. ಈ ಗ್ರಂಥದಲ್ಲಿ ಱಟವನ್ನು ಉಚಿತವಾದೆಡೆಗಳಲ್ಲಿ ಪ್ರಯೋಗಿಸಿದೆ.

ಈ ಗ್ರಂಥವನ್ನು ಸಂಗ್ರಹಿಸುವುದರಲ್ಲಿಯೂ ಅದರ ಪಾಠವನ್ನು ಗೊತ್ತುಮಾಡುವುದರಲ್ಲಿಯೂ ಅದರ ಮುದ್ರಣಕ್ಕೆ ಸಂಬಂಧಿಸಿದ ಎಲ್ಲ ಕಾರ್ಯಗಳಲ್ಲಿಯೂ ಉಚಿತವಾದ ಸಲಹೆಗಳನ್ನಿತ್ತು ವಿಶೇಷವಾಗಿ ಸಹಾಯ ಮಾಡಿದ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ಅವರಿಗೂ, ನನ್ನ ಸಂಪಾದಕ ಕಾರ್ಯದಲ್ಲಿ ಮೊದಲಿಂದ ಕೊನೆಯವರೆಗೂ ನನಗೆ ನೆರವಾಗಿ ನಿಂತ ಮಹಾರಾಜರವರ ಕಾಲೇಜಿನ ಉಪನ್ಯಾಸಕರೂ ಪಂಡಿತರೂ ಆದ ಶ್ರೀಮಾನ್ ಟಿ. ಎನ್. ಶ್ರೀಕಂಠಯ್ಯ, ಎಂ.ಎ., ಶ್ರೀಮಾನ್ ಡಿ. ಎಲ್. ನರಸಿಂಹಾಚಾರ್, ಎಂ.ಎ., ಇವರಿಗೂ, ಮುದ್ರಣ ಕಾರ್ಯದಲ್ಲಿ ನನಗೆ ಬೇಕಾದಹಾಗೆ ಸಲಕರಣೆಗಳನ್ನು ಒದಗಿಸಿಕೊಟ್ಟ ವೆಸ್ಲಿ ಪ್ರೆಸ್ ಮತ್ತು ಪಬ್ಲಿಷಿಂಗ್ ಹೌಸಿನ ಅಧಿಕಾರಿಗಳಿಗೂ ನಾನು ಅತ್ಯಂತ ಕೃತಜ್ಞನಾಗಿದ್ದೇನೆ.

ಟಿ. ಎಸ್. ವೆಂಕಣ್ಣಯ್ಯ.

ಕರ್ಣಾಟಕ ಕಾದಂಬರೀ ಸಂಗ್ರಹ

೧. ಕಥಾವತರಣ

ಶ್ರೀಮನ್ನಾಗೇಂದ್ರಭೋಗಸ್ಫುರದರುಣಮಣಿದ್ಯೋತಿಸಂಧ್ಯಾ ನಿಬದ್ಧ
ಪ್ರೇಮಂ ಪ್ರೋದ್ಯತ್ತರಂಗೋಚ್ಚರದಮರನದೀಶೀಕರೋದಾರತಾರಾ
ರಾಮಂ ಹೇಮಪ್ರಭಾಪ್ರಸ್ಫುರಿತ ಗಿರಿಶ ಚಂಚಜ್ಜಟಾಜಾಲಜೂಟ
ವ್ಯೋಮಪ್ರೋದ್ಭಾಸಿ ಚಂದ್ರಂ ತ್ರಿಭುವನಜನಕಾನಂದಮಂ ಮಾಡು
ಗೆಂದುಂ ೧

ಸತತಗಭೀರವೃತ್ತಿಯಿನುದಾರತೆಯಿಂ ಜಗದೇಕಜೀವನ
ಸ್ಥಿತಿಯಿನತಿಪ್ರಸಾದಗುಣದಿಂ ರಸಭಾವವಿಳಾಸದಿಂ ಕವಿ
ಪ್ರತತಿನಿತಾಂತಸೇವ್ಯತೆಯಿನೊಂದಿ ಸರಸ್ವತಿಯಂದದಿಂ ಸರ
ಸ್ವತಿ ದಯೆಗೆಯ್ಗೆ ನಮ್ಮೊಳನುಕೂಲತೆಯಿಂದವೆ ನಿರ್ಮಳತ್ವಮಂ ೨

ಬಾಣಂ ವಲ್ಲಭನಕ್ಕುಮೆಂದು ಪಡೆದಾ ವಾಗ್ದೇವಿಗರ್ಭೋದ್ಭವಂ
ಜಾಣಿಂ ಬಾಣಿಯೆನಿಪ್ಪದೊಂದು ಪೆಸರಂ ಮುನ್ನಿತ್ತನೆಂದಂದು ಪೋ
ಮಾಣೆನ್ನನ್ಯಕವಿಸ್ತುತಿವ್ಯಸನಮಂ ವಾಗ್ಜಾತಚಾತುರ್ಯಗೀ
ರ್ವಾಣಂ ತಾನೆನೆ ಸಂದ ಬಾಣನೆ ವಲಂ ವಂದ್ಯಂ ಪೆಱರ್ ವಂದ್ಯರೇ ೩

ಸತ್ಕೃತಿ ಸಂಸ್ಕೃತದಿಂದೆ ಜ
ಗತ್ಕೌತುಕಮಾಗಿ ಮತ್ತೆ ಕರ್ಣಾಟದೊಳಂ
ಸತ್ಕವಿನಿವಹಂ ಪೊಗೞೆ ಚ
ಮತ್ಕೃತಿಯಂ ಪಡೆದು ಸೊಬಗುವಡೆದತ್ತೀಗಳ್ ೪

ಕೃತಿಪತಿ ನರೇಂದ್ರಚಂದ್ರಂ
ಕೃತಿಯಂ ಪೇೞ್ದಂ ಬುಧಾಬ್ಜವನಕಳಹಂಸಂ
ಕೃತಿ ಕಾದಂಬರಿಯೆನೆ ಸ
ತ್ಕೃತಿಕಥಿತ ಕಥಾವತಾರಮೇಂ ಕೇವಳಮೇ ೫

ಇಳೆಯೊಳದೊರ್ವನಿಂದ್ರನೆನೆ ಸಂದ ಸಮೃದ್ಧಿಯೊಳೊಂದಿ ಕೂಡಿ ತ
ನ್ನೊಳೆ ನೃಪಲಕ್ಷಣಂ ನೆಗೞೆ ದೋರ್ವಳದಿಂ ಚತುರಬ್ಧಿಮೇಖಲಾ
ವಳಯಿತ ಭೂಮಿಗಾದನೆಱೆಯಂ ನೃಪತಿಪ್ರಭುಲೋಕಮಂ ನಿಜೋ
ಜ್ಜ್ವಳತರ ಕೀರ್ತಿಯಿಂ ನೆಱೆಯೆ ಮುದ್ರಿಸಿ ಶೂದ್ರಕನೆಂಬ ಭೂಭುಜಂ ೬

ಕಲಿಮಲಿನಕುಭೃತ್ಸಂಗದ
ಕಳಂಕಮಂ ಕರ್ಚಿ ಕಳೆಯಲೆಂದಾ ಭೂಮಂ
ಡಳಪತಿಯ ಖಡ್ಗಧಾರಾ
ಜಳದೊಳ್ ಸಾಮ್ರಾಜ್ಯಲಕ್ಷ್ಮಿ ಸಲೆ ನೆಲಸಿರ್ಪಳ್ ೭

ಇದು ಕಲಿಭೀತಿಯಿಂ ಕೃತಯುಗಂ ಬಲಿದಿರ್ದಪುದೆಂಬ ಸಚ್ಚರಿ
ತ್ರದಿನೆಸೆದಾವಗಂ ತ್ರಿಭುವನಪ್ರಸವಕ್ಕಿದು ಭೂಮಿಯೆಂಬ ಪೆಂ
ಪೊದವಿರೆ ಪೆರ್ಮೆಯಿಂ ವಿದಿಸೆಯೆಂಬುದು ನಚ್ಚಿನ ರಾಜಧಾನಿಯಾ
ದುದು ಜಗದೊಳ್ ವಿಶೇಷಮೆನಲೊಪ್ಪುವ ಮಾಳವ ಮಧ್ಯದೇಶದೊಳ್ ೮

ಕಂತುಗೆ ತಾನೆ ಮೇಲೆನಿಸಿಯುಂ ಪೊಸಜವ್ವನದಿಂದಮೊಂದಿಯುಂ
ಸಂತತಿ ವೇಟ್ಕುಮೆಂದು ಸಚಿವರ್ ಸಲೆ ಪೇೞೆಯುಮೊಳ್ಪುವೆತ್ತ ಶು
ದ್ಧಾಂತನಿತಂಬಿನೀನಿವಹಮೊಲ್ದೆಳಸುತ್ತಿರೆಯುಂ ಧರಾಂಗನಾ
ಕಾಂತನ ಚಿತ್ತಮೇಕಱಿಯೆನೊಂದದಣಂ ಸುರತೋಪಭೋಗಮಂ ೯

ಅದೊರ್ಮೆ ಕಲವಾದ್ಯದಿಂ ಸರಸ ವಾದ್ಯಗೀತಂಗಳಿಂ
ದದೊರ್ಮೆ ಮೃದುಪಂಚಮಾಂಚಿತ ವಿಪಂಚಿಕಾನಾದದಿಂ
ದದೊರ್ಮೆ ರಸಭಾವಕಂಚುಕಿತ ಚಿತ್ರಕರ್ಮಂಗಳಿಂ
ದದೊರ್ಮೆ ವಿವಿಧಪ್ರಕಾರ ಮೃಗಯಾವಿನೋದಂಗಳಿಂ ೧೦

ಅದೊರ್ಮೆ ನವಕಾವ್ಯಬಂಧರಚನಾವಿಶೇಷಂಗಳಿಂ
ದದೊರ್ಮೆ ವರವೀರವಿಶ್ರುತಕಥಾಪುರಾಣಂಗಳಿಂ
ದದೊರ್ಮೆ ಮುನಿಮಂಡಳೀಪದಪಯೋಜಶುಶ್ರೂಷೆಯಿಂ
ವಿದಗ್ಧಜನವಲ್ಲಭಂ ಕಳೆವನಿಂತು ಪೊೞ್ತಂ ನೃಪಂ ೧೧

ಅಂತು ವನಿತಾಸುಖಪರಾಙ್ಮುಖಂ ಪೊೞ್ತುಗಳೆಯುತ್ತಿರ್ದೊಂದು ದಿವಸಂ ಪ್ರಭಾತಸಮಯದೊಳೊಡ್ಡೋಲಗದೊಳಿರ್ಪಾಗಳ್ ಪ್ರತೀಹಾರಿ ಬಂದು ನಯದಿಂ

ಜನತಾಧೀಶ್ವರ ಬಿನ್ನಪಂ ತ್ರಿದಶಲೋಕಕ್ಕೇೞುತಿರ್ದಾ ತ್ರಿಶಂ
ಕುನರಾಧೀಶನ ಲಕ್ಷ್ಮಿ ಶಕ್ರನ ಮಹಾಹುಂಕಾರದಿಂ ಬಿಳ್ದಳೆಂ
ಬಿನೆಗಂ ವಿಶ್ರುತ ದಕ್ಷಿಣಾಪಥದಿನೊರ್ವಳ್ ಕನ್ನೆ ಚಂಡಾಲೆ ದ
ರ್ಶನತಾತ್ಪರ್ಯದೆ ರಾಜಕೀರಸಹಿತಂ ಬಂದಿರ್ದಪಳ್ ಬಾಗಿಲೊಳ್ ೧೨

ಎಂದು ಬಿನ್ನವಿಸೆ ರಾಜಾಧಿರಾಜಂ ರಾಜಲೋಕದ ಮೊಗಮಂ ನೋಡಿ ದೋಷಮೇಂ ಬರ್ಕೆಂಬುದುಂ ಚಂಡಾಲಕನ್ನೆಯಂ ಪುಗವೇೞ್ದಾಗಳ್

ದನುಜರ ಕಯ್ಯೊಳಿರ್ದಮರ್ದನಾವಗಮೀಯ್ಕೊಳಲೆಂದು ದೈತ್ಯಮ
ರ್ದನನೆನಿಸಿರ್ದವಂ ಕಪಟದಿಂದೆ ವಿಲಾಸಿನಿಯಾದ ವೇಷಮಂ
ನೆನೆಯಿಸಿದಪ್ಪುದೀ ಪಸಿಯ ಬಣ್ಣಮಿವಳ್ಗೆನೆ ಚೆಲ್ವನಾಳ್ದು ಮೆ
ಲ್ಲನೆ ನಡೆತರ್ಪ ನೀಲಮಣಿಪುತ್ರಿಕೆಯಂದದಿನಾದಮೊಪ್ಪಿದಳ್ ೧೩

ಅಂತು ಪುಗುತರ್ಪಾಗಳ್

ಜರೆಯಿಂದಂ ಕೂಡಿ ಬೆಳ್ಪಂ ತಳೆಯೆ ತಲೆ ದಳದ್ರಕ್ತನೀರೇಜಮಂ ಪೋ
ಲ್ತಿರೆ ಕಣ್ ವ್ಯಾಯಾಮದಿಂ ಮೆಯ್ ಸಡಿಲದೆಸೆಯೆ ಮಾತಂಗನಾಗಿರ್ದುಮೇಂ ನಿ
ಷ್ಠುರಮಲ್ತಾಕಾರಮೀತಂಗೆನಿಸಿ ಧವಳವಾಸೋನ್ವಿತಂ ಮತ್ತಮೊರ್ವಂ
ಬರುತಿರ್ದಂ ಬೆನ್ನೊಳಾತ್ಮೋಚಿತಮೆನಿಸಿದ ಚಾತುರ್ಯದಿಂದಾರ್ಯವೇಷಂ ೧೪

ಅಲ್ಲಿಂ ಪೆಱಗೆ

ಅರಗಿಳಿಯ ಪಸುರ್ಪಿಂದಂ
ಮರಕತಮಯಮೆನಿಪ ಪೊನ್ನ ಪಂಜರಮಂ ಪೊ
ತ್ತಿರದೆೞ್ತಂದಂ ಚಂಡಿಕೆ
ವೆರಸಿದ ಚಂಡಾಲಬಾಲಕಂ ಮತ್ತೊರ್ವಂ ೧೫

ಅಂತವರ್ವರಸು ಬಂದಾ ಏಱುಂಜವ್ವನೆಯ ರೂಪಾತಿಶಯಮನೆಮೆಯಿಕ್ಕದೆ ಶೂದ್ರಕಂ ನೋಡುತ್ತುಮತಿವಿಸ್ಮಿತಚಿತ್ತನಾಗಿ ತನ್ನೊಳಿಂತೆಂದಂ

ಇದು ಮೂಲೋಕಕ್ಕಪೊಂದಚ್ಚರಿಯೆನಿಸಿದುದಸ್ಥಾನದೊಳ್ ರೂಪಮಂ ಮಾ
ಡಿದ ವಾಣೀಶಪ್ರಯತ್ನಂ ತ್ರಿಭುವನಜನಕಾಶ್ಚರ್ಯಮಪ್ಪಂತು ರೂಪಂ
ಪದಪಿಂದಂ ಮಾಡಿಯುಂ ನೋಡಿಯುಮಸದೃಶದೊಳ್ ಗರ್ಹಿತಸ್ಪರ್ಶಸಂಭೋ
ಗದೊಳಿಂತೀ ದುಷ್ಟಚಂಡಾಲರ ಕುಲದೊಳಗೇಗೆಯ್ದುನೋ ದುರ್ವಿವೇಕಂ ೧೬

ಇದನಱಿವೆಂ ಕಮಲಭವಂ
ಮೊದಲೊಳ್ ಮಾತಂಗಿಯೆಂದು ತಾಂ ಮುಟ್ಟದೆ ಮಾ
ಡಿದನಕ್ಕುಂ ಕಯ್ಯೊಳ್ ಮು
ಟ್ಟಿದೊಡಿಂತಗ್ಗಳಿಸಿ ತೋರ್ಕುಮೇ ಲಾವಣ್ಯಂ ೧೭

ಎಂದಾ ರೂಪಿಂಗಚ್ಚರಿವಡುತಿರ್ದ ನೃಪರೂಪಚಂದ್ರನಂ ನೋಡಿ ಚಂಡಾಲಕನ್ಯೆ ಪೊಡಮಟ್ಟು ಮಣಿಕುಟ್ಟಿಮತಳದೊಳ್ ಕುಳ್ಳಿರ್ಪುದುಮೊಡನೆಯಾ ಮಾತಂಗಂ ವಿಹಂಗಸಂಗತ ಪಂಜರಮಂ ಪಿಡಿದು ನರೇಂದ್ರನಂ ದೇವ ಬಿನ್ನಪಮೆಂದಿಂತೆಂದಂ

ಇದು ವಿದಿತಾರ್ಥಶಾಸ್ತ್ರನಿದಶೇಷಪುರಾಣಕಥಾಪ್ರವೀಣನಿಂ
ತಿದು ಸಕಲಾಂಗವೇದವಿದನಿಂತಿದು ಕಾವ್ಯಕಲಾಪ್ರಗಲ್ಭನಿಂ
ತಿದು ವಿತತಾದಿವಾದ್ಯವಿದನಿಂತಿದು ಚಿತ್ರಕಥಾಭಿರೂಪನಿಂ
ತಿದು ಗಜವಾಜಿಲಕ್ಷಣವಿಚಕ್ಷಣನೀ ಶುಕನುದ್ಗತಾಂಶುಕಂ ೧೮

ವನಿತೆಯರೊಲವಿನ ಕಲಹದ
ಮುನಿಸುಗಳಂ ತಿಳಿಪುವೆಡೆಯೊಳತಿಚತುರಂ ತಾ
ನೆನಿಸಿರ್ದುಂ ವೈಶಂಪಾ
ಯನನೆನಿಪುದು ಪೆಸರೊಳೀ ಶುಕಂ ಭುವನಪತೀ ೧೯

ದೇವರೆ ಭಾಜನಂ ವಿದಿತರತ್ನಚಯಕ್ಕೆ ದಲೆಂದು ತನ್ನ ಸ
ದ್ಭಾವದಿನೆನ್ನನಾಳ್ದನ ಮಗಳ್ ಪದಪಿಂದಮೆ ತಂದಳಿಂತಿದಂ
ದೇವರ ಪಾದಪಂಕರುಹದಲ್ಲಿಗೆ ಕನ್ಯೆಯದೊಂದು ಭಕ್ತಿಯಂ
ಭಾವಿಸಿ ನೀನಿದಂ ನೃಪತಿ ಕಯ್ಕೊಳವೇಟ್ಟುದು ರಾಜಕೀರಮಂ ೨೦

ಎಂದೊಡನೆಯಾ ಮಾತಂಗಂ ಬಿನ್ನವಿಸಿ ಶುಕಪಂಜರದ ಬಾಗಿಲಂ ತೆಱೆದು ಮುಂದಿರಿಸಲಾ ಶುಕಂ ರಾಜಾಭಿಮುಖನುಮುನ್ನಮಿತ ದಕ್ಷಿಣಚರಣನುಮತಿಸ್ಪಷ್ಟವರ್ಣಸಂಸ್ಕಾರಮಪ್ಪ ವಾಣಿಯಿಂ ಕೃತಜಯಶಬ್ದನುಮಾಗಿ

ತಿರ್ಯಗ್ಜಾತಿಯೊಳೀ ಚಾ
ತುರ್ಯಮಿದೇನೆಂದು ಸಭೆಯ ಚಿತ್ತದೊಳತ್ಯಾ
ಶ್ಚರ್ಯಮೊದವುವಿನಮರಸಂ
ಗಾರ್ಯೆಯನೋದಿತ್ತದೊಂದನಾ ಶುಕರತ್ನಂ ೨೧

"ಸ್ತನಯುಗಮಶ್ರುಸ್ನಾತಂ
ಸಮೀಪತರವರ್ತಿಹೃದಯಶೋಕಾಗ್ನೇಃ
ಚರತಿ ವಿಮುಕ್ತಾಹಾರಂ
ವ್ರತಮಿವ ಭವತೋ ರಿಪುಸ್ತ್ರೀಣಾಂ" ೨೨

ವೀರರ ವೀರ ವಿಮುಕ್ತಾ
ಹಾರಂ ಭವದರಿವಧೂಸ್ತನದ್ವಿತಯಂ ಕ
ಣ್ಣೀರಿಂ ಮಿಂದೆರ್ದೆಗಿರ್ಚಿಂ
ದೋರಂತಿರೆ ಬೆಂದು ಚರಿಸುತಿರ್ಪುದು ತಪಮಂ ೨೩

ಅಂತದನರಸಂ ಕೇಳ್ದು ಚೋದ್ಯಂಬಟ್ಟು ಕುಮಾರಪಾಲಿತನೆಂಬ ಮಂತ್ರಿಮುಖ್ಯನನಿಂತೆಂದಂ

ಗಿಳಿಗೀ ಸ್ಪಷ್ಟಾಕ್ಷರೋಚ್ಚಾರಣಮೆ ಮೊದಲೊಳಾಶ್ಚರ್ಯಮೆಂಬಲ್ಲಿ ಮತ್ತ
ಗ್ಗಳಿಸುತ್ತುಂ ವರ್ಣಮಾತ್ರಾಸ್ವರರುಚಿರಮುಮಾದಾರ್ಯೆಯಂ ವ್ಯಕ್ತದಿಂದ
ಸ್ಖಳಿತಂ ತಾನೆನ್ನನುದ್ದೇಶಿಸಿ ಸುಲಲಿತಮೆಂಬಂದದಿಂದೋದಿ ತೋರ್ದೀ
ಗಿಳಿಗೆಂತೋ ಬುದ್ಧಿಪೂರ್ವಂ ಮನುಜರ ತೆಱದಿಂದೋದುಮಾಶ್ಚರ್ಯಮಾಗಲ್ ೨೪

ಎಂಬುದುಂ ಕುಮಾರಪಾಲಿತನಿಂತೆಂದಂ

ಶುಕಶಾರಿಕಾದಿವಿಹಗ
ಪ್ರಕರಂ ಮುಂ ಕೇಳ್ದ ವಚನಮಂ ನುಡಿವುದು ಕೌ
ತುಕಮಲ್ಲದೀಗಳುಂ ಕೌ
ತುಕಮಿಂತಿಂತೇಕೆ ದೇವ ನೀನಱಿಯದುದೇ ೨೫

ಇದು ಪೂರ್ವಜನ್ಮಸಂಸ್ಕಾ
ರದೆ ಮೇಣ್ ಪುರುಷಪ್ರಯತ್ನದಿಂದಂ ಮೇಣಿಂ
ತುದಯಿಸುಗುಮಲ್ತೆ ಸಂಸ್ಕಾ
ರದೊಳತಿಶಯಚಿತ್ರಮಲ್ತು ಭಾವಿಸಿ ನೋಡಲ್ ೨೬

ಅದಲ್ಲದೆಯುಂ

ನುಡಿ ಮುನ್ನಂ ಸ್ಪಷ್ಟಮಾಗಿರ್ದುದು ಬೞಿಕಮಿದಸ್ಪಷ್ಟಮಾಯ್ತಾಗಿ
ಶಾಪಂಗುಡಲಲ್ಲಿಂದಿತ್ತಲಿಂತೀ ಶುಕಸಮಿತಿಗೆ ತಚ್ಛಾಪದಿಂದಾನೆಗಳ್ಗಂ
ನುಡಿಯಲ್ಕಾಗಂದಿನಿಂ ನಾಲಗೆ ಮಡಿದುದೆನುತ್ತಿಂತು ಪೇೞುತ್ತಿರಲ್ಕಾ
ಗಡೆ ಪೊಣ್ಮಿತ್ತಲ್ಲಿ ಮಧ್ಯಂದಿನಸಮಯಸಮುದ್ಭೂತ ಶಂಖಪ್ರಣಾದಂ ೨೭

ಅದಂ ಕೇಳ್ದು ಮಜ್ಜನಕ್ಕುಜ್ಜುಗಂಗೆಯ್ದೊಡ್ಡೋಲಗಮಂ ಪರೆಯಲ್ವೇೞ್ದು ಅತಿ ಸಂಭ್ರಮದಿನೊಡನೇೞ್ವ ಮಹೀಪಾಲರೊಳಂ ಮುಂದೆ ಬಂದೋದುವ ಮಂಗಳ ಪಾಠಕರ ಜಯಜಯಾದಿ ಮಧುರರವಂಗಳೊಳಮತಿಕ್ಷುಭಿತಮಾದಾಸ್ಥಾನಮಂಟಪದಿಂ ಮನುಜೇಂದ್ರಂ ಪೊಱಮಟ್ಟು ಸಕಳರಾಜಲೋಕಮಂ ವಿಸರ್ಜಿಸಿ ಚಂಡಾಲಕನ್ಯೆಯಂ ವಿಶ್ರಮಿಸಲ್ವೇೞ್ದು ವೈಶಂಪಾಯನನಂ ಮಹಾದೇವಿಯರರಮನೆಗೆ ಕೞಿಪಿಮೆಂದಾ ತಾಂಬೂಲಕರಂಕವಾಹಿನಿಗೆ ಬೆಸಸಿ ಕೆಲಬರರಸುಮಕ್ಕಳ್ವೆರಸೊಳಗಂ ಪೊಕ್ಕು ಮಜ್ಜನಭೋಜನಾನಂತರದೊಳ್

ಬಳಸಿರ್ದಭ್ರಾಳಿಯಿಂದಂ ತುಹಿನಗಿರಿಶಿಲಾಪಟ್ಟವೆಂಬಂತೆ ಚೆಲ್ವಾ
ದ ಲತಾಂತಂ ತಳ್ತ ಶಯ್ಯಾಶ್ರಿತ ಸಿತಮೃದುಳಪ್ರಚ್ಛದಚ್ಛನ್ನ ಶಯ್ಯಾ
ತಲದೊಳ್ ಕಿಱ್ವಾಳವಳ್ ಮೆಲ್ಲನೆ ಕರತಳಪದ್ಮಂಗಳಿಂ ಪಾದಪದ್ಮಂ
ಗಳನಂದೊತ್ತುತ್ತಿರಲ್ ಶೂದ್ರಕನೃಪತಿ ಸುಖಾಸೀನನಾಗಿರ್ದನಾಗಳ್ ೨೮

ಅನಂತರಮನತಿದೂರದೊಳಿರ್ದ ದೌವಾರಿಕೆಯಂ ವೈಶಂಪಾಯನನನೊಡಂಗೊಂಡು ಬರ್ಪುದೆಂದು ತದ್ವೃತ್ತಾಂತಾಕರ್ಣನಕೌತುಕದಿಂ ಬೆಸಸೆ

ಪಡಿಯಱತಿ ವಿನಯವಿನಮಿತೆ
ಪೊಡವಟ್ಟಾ ಕ್ಷಣದೊಳಂತೆ ಮುದದಿಂದಂ ಕ
ನ್ನಡವಕ್ಕಿಯ ಪಂಜರಮಂ
ತಡೆಯದೆ ತಂದವನಿಪತಿಯ ಮುಂದಿಟಿಪುವುದುಂ ೨೯

ಏನೇನಭಿಮತಮಂ ಪೇೞ್
ನೀನಾಸ್ವಾದಿಸಿದೆ ದೇವಿಯರಮನೆಯೊಳೆನ
ಲ್ಕೇನೇನಭಿಮತಮಂ ಪೇ
ೞಾನಾಸ್ವಾದಿಸಿದನಲ್ಲ ನೃಪಕುಲತಿಲಕಾ ೩೦

ಕಳಕಂಠಲೋಚನಚ್ಛವಿ
ವಿಳಾಸಮಂ ತಳೆದ ನೀಲಪಾಟಳಜಂಬೂ
ಫಳ ಮಧುರರಸಮನೀಂಟಿದೆ
ನಿಳೇಶ ಪಿರಿದಟ್ಟಿಯಿಂ ಮನಂ ತಣಿವಿನೆಗಂ ೩೧

ಹರಿವಿದಳಿತ ಮದಗಜಕುಂ
ಭರಕ್ತಸಿಕ್ತಾರ್ದ್ರ ಮೌಕ್ತಿಕಪ್ರಕರದವೋಲ್
ಕರಮೆಸೆವ ದಾಡಿಮೀಬೀ
ಜರಾಜಿಯಂ ತೆಗೆದು ರಸವನಾಸ್ವಾದಿಸಿದೆಂ ೩೨

ಆದತ್ತಾಮಳಕಫಳಾ
ಸ್ವಾದನೆಯಿಂ ತೃಪ್ತಿ ದೇವ ಗಟಿಪುತ್ತಿರಲೇಂ
ಆದತ್ತಮೃತಂ ದೇವಿಯ
ರಾದರದಿಂ ತಮ್ಮ ಕಯ್ಯೊಳೂಡಿದರೆನ್ನಂ ೩೩

ಅಂತು ನುಡಿದ ವೈಶಂಪಾಯನನಂ ನರೇಂದ್ರನಿಂತೆಂದಂ

ಎಂತೆಂತು ನುಡಿಯೆ ವಿಸ್ಮಯ
ವಂತಂತೊದವಿಪುದು ಚಿತ್ತದೊಳ್ ಕೇಳಿದನ
ತ್ಯಂತಂ ನಿನ್ನಯ ನಿಜವೃ
ತ್ತಾಂತಮನೆನಗಱಿಯೆ ಪೇೞ್ವುದತಿಕೌತುಕಮಂ ೩೪

ನಿನ್ನಯ ದೇಶಮೆತ್ತಣದು ಪುಟ್ಟಿದೆಯೆಂತಭಿಧಾನಮಾವನಿಂ
ದಂ ನಿನಗಾಯ್ತು ವೇದನಿವಹ ಸ್ಮೃತಿ ಶಾಸ್ತ್ರ ಕಳಾಕಳಾಪ ಸಂ
ಪನ್ನತೆಯೆಂತು ಬಂದುದು ಭವಸ್ಮೃತಿ ಪುಟ್ಟಿತೊ ಮೇಣ್ ವರಪ್ರಸಾ
ದೋನ್ನತಿಯಾದುದೋ ಮಱಸಲೆಂದು ವಿಹಂಗಮವೇಷಿಯಾದೆಯೋ ೩೩

ದೊರೆಕೊಂಡೆಯೆಂತು ಮುಂ ಪಂ
ಜರಬಂಧನಮಾದುದೆಂತು ನಿನಗೀ ಚಂಡಾ
ಲರ ಸಂಗತಿಯೆಂತಿಲ್ಲಿಗೆ
ಬರವಾಯಿತ್ತೆಂತು ಪೇೞದೆಲ್ಲಮನೀಗಳ್ ೩೪

ಎಂದು ಬೆಸಗೊಳೆ ವೈಶಂಪಾಯನಾಭಿಧಾನಶುಕಂ ಪೇೞಲ್ತು ಗುಳ್ದುದದೆಂತೆನೆ, ಭೂದೇವಿಯ ರುಚಿರಕಟೀಸೂತ್ರಮೆಂಬಂತೆವೊ ಲೊಪ್ಪಂಬೆತ್ತ ವಿಂಧ್ಯಾಚಳದ ಪೇರಡವಿಯೊಳ್

ಕಡಲಂ ಪೀರ್ದನಗಸ್ತ್ಯನೆಂಬ ಪುರುಡಿಂ ಮತ್ತೊಂದನಬ್ಜೋದ್ಭವಂ
ಪಡೆದಂ ಪೆರ್ಗಡಲಂ ಮಹಾಪ್ರಳಯದೊಳ್ ದಿಕ್ಸಂಧಿಗಳ್ ಬಂಧಮಂ
ಬಿಡೆ ಬಿಟ್ಟತ್ತಿಳೆಗಾಗಸಂ ಧರಣಿಯಂ ಪೆರ್ಬಂದಿ ಕಿಱ್ತತ್ತಿದೊಂ
ದೆಡೆ ನೀರ್ ತೀವಿತೆನಲ್ಕೆ ಪೆಂಪುವಡೆಗುಂ ಗುಣ್ಪಿಂದೆ ಪಂಪಾಸರಂ ೩೫

ಅದಱ ಪಡುವಣ ತಡಿಯೊಳ ದಶರಥಸುತನ ಶರಪ್ರಹಾರಜರ್ಜರಿತ ಮಪ್ಪ ತಾಳತರುಷಂಡಸಮೀಪದೊಳ್

ಮರಗಟ್ಟೆಂಬಂತೆ ಸುತ್ತುಂ ಮೊದಲೊಳಜಗರಂ ಸುತ್ತೆ ದಿಕ್ಚಕ್ರವಾಳಾಂ
ತರಮಂ ನೋಡಲ್ಕೆ ನೀಳ್ದಂತಿರೆ ಬೆಳೆದ ಮಹಾಶಾಖೆಗಳ್ ತಾಂಡವಾಡಂ
ಬರದೊಳ್ ನಾನಾವಿಧಂ ನರ್ತಿಪ ನಟನ ಭುಜಾದಂಡಮೋ ಪೇೞಿಮೆಂಬಂ
ತಿರಮೇಯಸ್ಕಂಧಮುಂ ಸಂಧಿಸೆ ಜರಠ ಮಹಾಶಾಲ್ಮಲೀವೃಕ್ಷಮಿರ್ಕುಂ ೩೬

ಭುವನತ್ರಯಮುಮನತ್ಯು
ತ್ಸವದಿಂದಂ ನೋಡಲಿದುವೆ ದಲ್ ವನದೇವೀ
ನಿವಹಕ್ಕೆ ಮಹಾಪ್ರಾಸಾ
ದವೆನಿಸಿ ತೋಱುವುದು ತನ್ನೊಳಾದುನ್ನತಿಯಿಂ ೩೭

ಮತ್ತಮದು ವಿಂಧ್ಯಾಚಳಸೋದರಮುಂ ದಂಡಕಾರಣ್ಯದಧಿಪತಿಯುಂ ವನಸ್ಪತಿಗಳ ನಾಯಕನುಮೆನಿಸಿತದಱಾ

ತಳಿರ್ಗಳಱುಂಬಿನಲ್ಲಿ ತುದಿಗೋಡ ಮೊದಲ್ಗಳ ತಾಣದಲ್ಲಿ ನಾ
ಗರ್ಗಳ ಪೊರೆಯಲ್ಲಿ ಪೋಟ್ಗಳೆಡೆಯಲ್ಲಿ ಕವಲ್ಗಣೆಯಲ್ಲಿ ಸುತ್ತಲುಂ
ಗಿಳಿಗಳ ಪಿಂಡುಗಳ್ ನೆರೆದು ಕೂಡಿಯುಮಲ್ಲಿ ಸಹಸ್ರಮುಂ ನಿರಾ
ಕುಳಮನುರಾಗದಿಂ ಪಲವು ದೇಶದೊಳಿರ್ಪುವು ಬಂದು ಭೂಪತೀ ೪೦

ಎಲವಂ ಮಡಲ್ತುದೆನೆ ಯೆಲೆ
ಕೆಲಕೆಲವಾಗಿರ್ದುವೆಲೆಯು ಪುದುವಿಂದವೆ ಕ
ಟ್ಟಲಿಸಿದವೊಲಿರ್ಪುದಂದ
ಗ್ಗಲಿಸಿದ ಗಿಳಿವಿಂಡುಗಳ ಪೊದಳ್ದ ಪಸುರ್ಪಿಂ ೪೧

ಅಂತಾ ಶುಕಸಂತತಿ ನಿ
ಶ್ಚಿಂತದಿನಿರ್ದಲ್ಲಿ ಜೀರ್ಣಕೋಟರ ವಿರಳಾ
ಭ್ಯಂತರದೊಳಿರ್ದುದೊಂದು ಶು
ಕಂ ತನ್ನಯ ಜಾಯೆವೆರಸು ಪರಿಣತವಯಸಂ ೪೨

ಆ ವೃದ್ಧಶುಕಂಗೊರ್ವನೆ
ದೈವಾಧೀನದೊಳೆ ಪುಟ್ಟಿದೆಂ ಪಾಪಿಯೆನಿ
ನ್ನೇವೇಳ್ದಪೆಂ ಪ್ರಸೂತ್ಯು
ದ್ಭಾವದಿನೆಮ್ಮವ್ವೆ ಕೞಿದಳಂತಾ ಕ್ಷಣದೊಳ್ ೪೩

ಅಂತು ಕೞಿಯೆ ಜಾಯಾವಿಯೋಗದಿಂ ದುಃಖಿತನಾಗಿಯುಮೆನ್ನ ತಂದೆ ಪುತ್ರಸ್ನೇಹದಿಂದಳವಿಗೞಿದ ಹೃದಯಶೋಕಮನಡಂಗಿಸಿರ್ದು ಮತ್ತ್ರಾಣನಪ್ರಯತ್ನತತ್ಪರನಾಗಿ

ಕೞಲಲ್ ನಿಜತನುವೊಂದೆರ
ಡುೞಿಯಲ್ ಗಱುವಿಟ್ಟು ಕುೞಿಯಲಾ ಕರ್ಣಂ ಜೋ
ಲ್ದುೞಿಯಲ್ ಮುಯ್ಪುಗಳಾವಗ
ವೞಿಯಲ್ ಬಲವಾಱಿದಂತು ಮುಪ್ಪಿಂ ಪಾಱಲ್ ೪೪

ಅಂತು ಮುಪ್ಪಿಂ ಪಾಱಲಾಱದೆ

ಪಕ್ಕಿಗಳಲ್ಲಿ ತಿಂದುೞಿದ ನೆಲ್ಗಳ ನುಚ್ಚುಗಳಂ ಫಲಂಗಳಂ
ಪಕ್ಕದೊಳಿರ್ದ ಗೂಡುಗಳಿನಾಯ್ದು ನಗಿಕ್ಕುವನಕ್ಕಱಿಂದೆ ತಾಂ
ಮಿಕ್ಕುದನುಂಡಪಂ ಕಡಿದು ನೆಲ್ಗಳನಂಟಿದ ತಾಱವಣ್ಣ ಬ
ಣ್ಣಕ್ಕೆಣೆಯಾದ ಚಂಚುಪುಟದಿಂದಮೆ ಮಜ್ಜನಕಂ ಮಹೀಪತೀ ೪೫

ಅಂತಾತನೆನಗೆ ಕುಟುಕನಿಕ್ಕಿ ಮಿಕ್ಕುದಂ ತನಗಶನಮಂ ಮಾಡಿ ಜೀವಿಸುತ್ತುಮಿರೆಯಿರೆ

ಚಕಿತೋದ್ಯತ್ಪಕ್ಷಿ ಪಕ್ಷಸ್ವನದೊಳಮರ್ದ ಕೋಳಾಹಳಧ್ವಾನದಿಂ ಕೊ
ರ್ವಿ ಕರೀಂದ್ರೋದ್ಭೂತ ಫೂತ್ಕಾರದೆ ಪುದಿದು ಗುಹಾನೀಕಸುಪ್ತೋತ್ಥಸಿಂಹ
ಪ್ರಕರಪ್ರೋನ್ನಾದದಿಂ ತಳ್ತುಪಗತ ವನದೇವೀಚಯಸ್ವಾಂತ ಸಂತ್ರಾ
ಸಕರಂ ಪೊಣ್ಮಿತ್ತು ವಿಂಧ್ಯಂ ನಡುಗೆ ಘನರವಸ್ಪರ್ಧಿ ಕೈರಾತಘೋಷಂ
೪೬

ಆಂ ಜನಕನೆಱಕೆಯೊಳಗಿ
ರ್ದಂಜುತ್ತುಂ ಕೇಳುತಿರ್ದೆನಿರ್ಪನ್ನೆವರಂ
ಬಿಂಜದಡವಿಯೊಳಗೆಲ್ಲಂ
ನಂಜಿನ ಮೞೆ ಕೊಂಡು ಬಿಟ್ಟ ತೆಱನಾಯ್ತಾಗಳ್ ೪೭

ಅದು ಮೊಱಗು ಮಾಣ್ದು ಕಾರ್ಗಾ
ಲದ ಮುಗಿಲಿದು ಕಡೆಪಮುಡುಗಿದಂಬುಧಿಯೆಂಬಂ
ದದಿನಡವಿ ಮೂಗುವಟ್ಟಿ
ರ್ದುದು ಬೇಂಟೆಯೊಳಾದ ಕಳಕಳಂ ಪಿಂಗುವಿನಂ ೪೮

ಅಂತಾ ಕಳಕಳರವಮಡಂಗಲೊಡನೆಯುದ್ಭೂತವಿಸ್ಮಯನಾಗಿ, ತಂದೆ ಯಿರಿಸಿದ ಪಕ್ಷಸಂಪುಟದೊಳಗಣಿಂ ಪೊಱಮಟ್ಟಿದ್ದೇನೆನುತ್ತುಮಾಂ ಪೊಟ ಲೊಳಗಿರ್ದು ಮೆಲ್ಲನೆ ನಿಳ್ಕಿನಿಳ್ಕಿ ಪೆಳ್ಪಳಿಸಿ ನೋೞ್ಪನ್ನೆಗಮಲ್ಲಿ

ಜರೆಯಿಂದಂ ಪುರ್ಬುಜೋಲಲ್ ತೆರೆ ತರತರದಿಂದುಣ್ಮೆ ಪೊಣ್ಮಲ್ಕೆ ಗಂಟಲ್
ಮುರಿದತ್ತೊಂದೊಂದಱೊಳ್ ತಳ್ತೊಗೆಯೆ ಸೆರೆಗಳೊತ್ತಂಬದಿಂ ಬರ್ಪ ಕೆಮ್ಮಿಂ
ಬಿರಿಯಲ್ ಬೆಟ್ಟಂಗಳಾ ಬೆಟ್ಟೆಯೊಳಿನಿತಡಗುಂ ತನ್ನ ಕಯ್ಯಾಸರೆಂದಾ
ತುರಿಸುತ್ತುಂ ಭ್ರಾಂತಿಯಿಂದೆನ್ನಯ ಮರದಡಿಯೊಳ್ ನಿಂದನೂರ್ವಂ ಪುಳಿಂದಂ ೪೯

ನಿಂದು ಕಣ್ಗಳಿಂ ಶುಕನಿಕಾಯದ ಜೀವಮನೆಯೆ ಪೀರ್ವವೊಲಾ
ಮರನಂ ನೋಡುತು ಮದನೇಕತಾಳೋತ್ಸೇಧಮುಮಭ್ರಂಕಷಮುಂ
ದುರಾರೋಹಮುಮಾದೊಡಂ ಬಗೆಯದೆ ಬಳಸಿದ ಬಳ್ಳಿವಿಡಿದಡರ್ದೇಱಿ

ಜಳಜದ ಮೊಗ್ಗೆಯಂತೆ ಮುಗುಳಂತೆಳೆವಕ್ಕಯ ಕಾಯ್ಗಳಂತೆ ಶಾ
ಲ್ಮಲಿ ಕುಸುಮಂಗಳಂತೆ ತರುನೀಡನಿಕಾಯದಿನೆಲ್ಲವಾಗಳಾ
ಗಳೆ ಗಱಿವೊಯ್ವ ಕಣ್ದೆಱೆವ ತುಪ್ಪುಡೊಡರ್ಚುವ ಕೆಂಪನಾಳ್ವ ಕೋ
ಮಳ ಶುಕಶಾಬಕಪ್ರಕರಮಂ ತೆಗೆದಂ ದಯೆಗೆಟ್ಟು ಲುಬ್ಧಕಂ ೫೦

ಪಱಿದುವು ಗಱಿ ಚಂಚುಗಳುಂ
ಮುಱಿದುವು ತಲೆ ನಡುಗುತಿರ್ದುವೆನ್ನದೆ ತರದಿಂ
ಬಱಿಗೆಯ್ಯುತಿರ್ದನಾ ಮಾ
ಯ್ದೞಿಗುಲಿ ಕರ್ವೇಡನಲ್ಲಿ ಮುದುಗಿಳಿಗಳುಮಂ ೫೧

ಅಂತವೆಲ್ಲವನೊಡನೊಡನೆ ಗಂಟಲಂ ಮುಱಿದು ನೆಲಕ್ಕೀಡಾಡು
ತ್ತಿರ್ದ ಬೇಡನಂ ತೊಟ್ಟನೆ ನೋಡಿ ಪ್ರಾಣಾಪಹಾರಮುಮಪ್ರತೀಕಾರ
ಮುಮಪ್ಪ ಕಷ್ಟಮಂ ಕಂಡು ಭಯಂಗೊಂಡು

ಬಸವಟಿದು ಕಣ್ಣನೀರಿಂ
ದೆಸೆಗೆಟ್ಟೆಲೆ ಮಗನೆ ನಿನ್ನನಿನ್ನಾರ್ ಕಾಯ
ಲ್ಕೆ ಸಮರ್ಥರೆನುತ್ತಾಗಳ್
ಬಿಸುಸುಯ್ದಂ ನೋಡಿ ಜನಕನೆನ್ನಯ ಮೊಗಮಂ ೫೨

ನಿನ್ನಯ ತಾಯನುಯ್ವ ಪದದೊಳ್ ಜವನಕ್ಕಟ ನೋಡು ಕಂದ ಬಂ
ದೆನ್ನುಮನಂತೆ ಕೂಡಿದೆಡೆನೊಕ್ಕಲುವೋಗಿಸನೇಕೆ ಬಯ್ತೆನಾಂ
ನಿನ್ನನೆ ನೋಡಿ ಶೋಕಮನಡಂಗಿಸಿ ಬಾಳ್ಕೆಯಿ ಲೇಸೆನುತ್ತಮಿ
ರ್ಪನ್ನೆಗಮುಮ್ಮ ನಿನ್ನನೊಡಗೊಂಡು ಮುೞುಂಗುವ ಕಾಲಮಾದುದೋ ೫೩

ಎಂದು ಸ್ಮರಿಸಲಾಱದೆ

ಇಱುಕಿ ತೊಡೆಯೆಡೆಯೊಳೆನ್ನಂ
ಪಱಿದೆಱಕೆಗಳಿಂದೆ ಮುಚ್ಚಿ ಮೋಹದೆ ತಾತಂ
ಮಱುಗುತ್ತಿರ್ಪಿನಮೆಯ್ದಿದ
ನಱುಗುಲಿ ಕರ್ವೇಡನೆನ್ನ ಪೊೞಲಿಂಗಾಗಳ್ ೫೪

ಅಡಸುವ ಕಾಳದಂಡಮೆರೆಗೊಳ್ವಸಿತೋರಗಮೆಂಬ ಶಂಕೆ ನೂ
ರ್ಮಡಿಸಿರೆ ಕಾಡ ಪಂದಿಗಳ ಬಲ್ಗಣಿದಿಂ ಪೊಲಸಂಟಿ ನಾವೆಸ ಜೇ
ವೊಡೆಗಳ ಪುಣ್ಗಳಿಂ ತೊರೆವ ನೆತ್ತರ ಕಯ್ ನಡುಗಲ್ಕೆ ನೀಡಿ ಕೀ
ಟಿಡೆಯಿಡೆ ಗಂಟಲಂ ಮುಱಿದನೊರ್ಮೆಯೆ ನಿರ್ಘೃಣನೆನ್ನ ತಂದೆಯಂ ೫೫

ಬೆಱೆತುಳಿದೆನಾಗಿಯುಂ ತನು
ಕಿಱಿದಾಗಿಯುಮತ್ತಮಾಯುಮುಂಟಾಗಿಯು ಮೇ
ಣಱಿಯಂ ಕಾಣಂ ತಂದೆಯ,
ಗಱಿಯೊಳಗಿರ್ದವನನೆನ್ನನಂದು ನೃಶಂಸಂ ೫೬

ಅಂತು ಜೀವಮಂ ಬಿಟ್ಟು ಗೋಣ್ಮುಱಿಲ್ವೆನ್ನ ತಂದೆಯಂ ಮರದ ಮೇಗಣಿಂ ನೆಲಕ್ಕೀಡಾಡಲಾನುಂ ತೊಡೆಯೆಡೆಯೊಳಿರ್ದೊಡಸಂದು ಸುಟ್ಟುರೆಯ ತಱಗೆಲೆಯಂತೆ ತಿಱ್ಱನೆ ತಿರುಗಿ ಬೀೞ್ವಲ್ಲಿಱುಂಕಿದೆಱಂಕೆ ಯೊಳಗಣಿಂ ಸಿಡಿಲ್ದು ದೈವವಶದಿಂ ಗಾಳಿಯೊಳ್ ತೆರಳ್ದ ತಱಗೆಲೆಯ ರಾಶಿಯೊಳ್ ಪೋಗಿ ಬಿಟ್ಟು

ಕಟಿದಿರ್ದ ತಂದೆಯಂ ಬಿಸು
ಟಟಲುಮನಿನಿಸಱಿಯದೆಳವೆಯೊಳ್ ಪಾತಕನೆಂ
ಪಡೆಯ ತಱಗೆಲೆಗಳೊಳಗಿ
ರ್ದಡಿದೆಂ ಖಳನಿಟಿದು ಕಾಣ್ಗುಮೆಂಬೀ ಭಯದಿಂ ೫೭

ಅನ್ನೆಗಮಿತ್ತಲ್

ಇಟಿದು ಮರದಿಂದಮಾಗಳ್
ಕೆಟಗೆಲ್ಲಂ ಪರೆದು ಬಿದ್ದ ಶುಕಸಂತತಿಯುಂ
ಗಟಗಟಿಸಿ ಕಟ್ಟಿ ನಡುಬೆ
ನ್ನಿಟಿವಿನೆಗಂ ಪೊತ್ತು ಪೋದನಾ ಮುದುಬೇಡಂ ೫೮

ಅಂತಾ ಬೇಡಂ ಬೇಡವಡೆಯಂ ಬಟಿಸಂದು ಪೋಗೆವೋಗೆ

ತಂದೆ ಕಟಿದಟಲ ಬೇಗೆಯೊ
ಳಂ ದೂರದೆ ಬಿದ್ದೊಂದು ಕಡುಸೇದೆಯೊಳಂ
ಬಂದೆನ್ನಂ ಪರವಶತೆಯೊ
ಳೊಂದಿಸಿದತ್ತಾಗಳಾ ಪಿಪಾಸೋದ್ರೇಕಂ ೫೯

ಗಱು ಪಾಱಲ್ಕಿಲ್ಲ ಕಾಲುಂ ಬಲಿಯವು ನಡೆಯಲ್ವೇಟ್ಟಿತೆಂಬಂತೆ ಮೂಗುಂ
ಮುಱುವನ್ನಂ ಮುಂದೆ ಮುಗ್ಗುತ್ತೆಡಬಲದೊಳಗಾಂ ಬೀೞುತುಂ ಪಕ್ಕಗೂಡಾ
ಗೊಱಗುತ್ತುಂ ಪೋಗಿ ಮಧ್ಯಾಹ್ನದ ಬಿಸಿಲಳುರಲ್ ಕಣ್ಮಲರ್ನಟ್ಟು ಸುಯ್ಗಳ್
ಪೊಱಮಟ್ಟೊಂದೊಂದನಟ್ಟುತ್ತಿರೆ ಫಿರಿದುಮಟಿಲ್ಕೆನ್ನೊಳಿಂತೆಂದೆನಾಗಳ್ ೬೦

ಬಸನಲೆತ್ತಿಂತುಮೆನಿಪ್ಪವಸ್ಥೆಗಳನೆಯ್ದುತ್ತಿರ್ಪಿನಂ ಜೀವಮಂ
ಬಿಸುಡಲ್ ಜೀವಿಗಪೇಕ್ಷೆ ಪುಟ್ಟದು ವಲಂ ಪೋ ಜೀವದಿಂ ಬಿಟ್ಟಪೇ
ಕ್ಷಿಸುವಂತಪ್ಪುದುಗಾಣೆನಿಂತು ಸಲೆ ತಾತಂ ದುಃಖಮೆಯ್ದಿ ದುರ್ಗದಿ
ಲ್ಲಸುವೆನ್ನಂ ಕೃಪೆಗೆಟ್ಟನುಂ ಪೆಱನದೊರ್ವಂ ಸತ್ತವೋಲಿರ್ದನಂ ೬೧

ಎನ್ನಯ ತಾಯ ಸತ್ತಟಿಲನಾದವಡಂಗಿಸಿ ಮುಪ್ಪಿನೊಳ್ ಮರ
ಲ್ದೆನ್ನನೆ ನೋಡಿ ತತ್ತಿಯೊಡೆದಿಂದುವರಂ ಪಿಡಿದಿರ್ದ ಯತ್ನದಿಂ
ದಂ ನಡಪುತ್ತುಮಿರ್ದುದುಮನೊರ್ಮೆಯುಮಿದಲ್ ಮಱೆದೀ ಕೃತಘ್ನನ
ಪ್ಪೆನ್ನಸು ನಿರ್ಘೃಣಂ ಬಟಿಸಲಲ್ಕಿಣಮಾಡದು ತಂದೆ ಸಾಯೆಯುಂ ೬೨

ಕಡುವೊಡಾತ್ತುದುದು ರವಿಯುಂ
ನಡುವಗಲೊಳ್ ನಿಂದು ಕೆದಱಿದಂ ಕರತತಿಯಿಂ
ಕಿಡಿಗಳನನೆ ಬಿಱುವಿಸಿಲುಂ
ಸುಡುತಿರೆ ನೀರಡಿಕೆ ತಿಣ್ಣಮಾದತ್ತಾಗಳ್ ೬೩

ಬಟ್ಟೆಯ ದೂಳಿದೂವೆ ಮೊದಲಾದುದು ಪೋದಪೆನೆಂಬ ಮೆಯ್ ಜವಂ
ಗೆಟ್ಟು ಪಿಪಾಸೆಯಿಂ ಪೊಡರಲಾರ್ತಪುದಿಲ್ಲೆ ದೆಸೆಗೆಟ್ಟೆ ನೀಗಳೀ
ದಿಟ್ಟಿ ಮರಳ್ದು ನಂದಿದಪುದೆನ್ನ ಮನಸ್ಸಾನಱಿದಪ್ಪೆನಿಲ್ಲ ಪೋ
ಬೆಟ್ಟಿದನಾಗಿ ತಾನೆ ವಿಧಿ ಕೊಂದಪನಾಗಳೆ ಸಾಯದಿರ್ದೊಡಂ ೬೪

ಎಂದು ಚಿಂತಿಸುತ್ತಿರೆಯಿರೆ

ಪ್ರತ್ಯಾಸನ್ನದೊಳಿರ್ಪುದು
ಯತ್ಯಾಶ್ರಮಮಲ್ಲಿ ನೆಗಟ್ದ ಜಾಬಾಲಿಗಳೆಂ
ಬತ್ಯುತ್ತಮ ಯತಿಪತಿಗಳ
ಪತ್ಯಂ ಹಾರೀತನಾಮಮುನಿರ್ಪನದೊರ್ವಂ ೬೫

ಆ ಮುನಿಕುಮಾರಕಂ ಮೀಯಲ್ ಬರುತಿರ್ದ ಬಟ್ಟೆಯೊಳ್ ಕಂಠಗತ
ಪ್ರಾಣನಾಗಿರ್ದೆನ್ನಂ ಕಂಡು

ಗುಣಿಗಳ ಮನಮೆಂದುಮುಕಾ
ರಣದೊಳೆ ಕರುಣಾರಸಾರ್ದ್ರಮೆಂಬೊಳಮದುಕಾ
ರಣದಿಂದೆ ಮುನಿಕುಮಾರಾ
ಗ್ರಣಿ ಕರುಣಿಸಿ ಕೆಲದ ಮುನಿಕುಮಾರರ್ಗೆಂದಂ ೬೬

ಗಿಡುಗಂ ತಂದತ್ತೊ ಮೇಣ್ ಪೆರ್ಮರನ ತುದಿಯಿನೇಂ ಬಿಟ್ಟುದೋ ಸೇದೆಯೊಂದು
ಗ್ಗಡದಿಂದಂ ಸುಯ್ಯು ಪೊದಳ್ದಿಮ್ಮಿಗಪುದು ನಡುಗುತ್ತಿರ್ದುವಿ ಕಣ್ಮಲರ್ ಬಾ
ಯ್ಬಿಡುತಿರ್ದತ್ತಕ್ಕಟಾ ಗೋಣಿಸಿಸು ನಿಲಲುಮಾರ್ತಪ್ಪುದಿಲ್ಲೆಯ್ದೆ ಜೀವಂ
ಬಿಡದನ್ನಂ ಬೇಗಮಿಂತೀ ಗಿಳಿಯ ಮಱಿಯನಬ್ಜಾಕರಕ್ಕುಯ್ವಮಾಗಳ್ ೬೭

ಎಂದಾಂಬೆರಸು ಕಮಳಾಕರಕ್ಕೆ ವಂದು ದಂಡಕಮಂಡಲುಗಳನೊಂ
ದೆಡೆಯೊಳಿರಿಸಿ

ಕುಡಿತೆಯೊಳೆ ತಂದು ನೀರಂ
ಪಿಡಿದೊಯ್ಯನೆ ತೆಱೆದು ತಾನೆ ಚಂಚೂಪುಟದಿಂ
ಕುಡಿಯಿಸುತಡಿಯಣ ತಾವರೆ
ಗೊಡೆಯೆಲೆಗಳ ತಳದ ನೆಟಲೊಳಿರಿಸಿದನೆನ್ನಂ ೬೮

ಅಂತೆನ್ನಂ ಸಪ್ರಾಣನಪ್ಪಂತು ಮಾಡಿ ಸಕಲಪರಿಶ್ರಮಂಗಳನ್ನಱಿಸಿ ಮುನಿಕುಮಾರಂ ಕೃತಸ್ನಾನನಾಗಿ ಪ್ರಾಣಾಯಾಮಪೂರ್ವಕಮಘಮರ್ಷಣಕ್ರಿಯೆಗಳಂ ನಿರ್ವರ್ತಿಸಿ ನಳಿನೀದಳಪುಟದೆ ಕೆಂದಾವರೆಯಲರ್ಗಳಿಂ ದಿವಸಕರಂಗರ್ಘ್ಯಮೆತ್ತಿ ಗೃಹೀತಧವಳವಲ್ಕಲನುಂ ನಿರ್ಧೌತಜಟಾಕಲಾಪನುಂ ಪೂರ್ಣಕಮಂಡಲಾಕಲಿತಕರತಳನುಮಾಗೆನ್ನಂ ಪರ್ಣಪುಟದೊಳ್ ತಳೆದು ನಿರ್ವರ್ತಿತನಿಯಮರಪ್ಪ ಮುನಿಕುಮಾರರ್ವೆರಸು ನಿಜಾಶ್ರಮಕ್ಕೆ ಪೋಗೆವೋಗೆ

ತನುವೆರಸುಯ್ಯಲ್ ಮುನಿಗಳ
ನನಲಂ ಸ್ವರ್ಗಕ್ಕೆ ಸೇತುಗಟ್ಟಿದನೆನೆ ಪಾ
ವನ ಹೋಮಧೂಮವೊಗೆಯಲ್
ಮುನಿಪಾಶ್ರಮಮೆನಗೆ ಕಾಣಲಾದತ್ತಾಗಳ್ ೧೯

ತಲೆವಾಗುತ್ತಿರ್ದುವೆಂಬಂತೆಱಿಪ ಲತೆಗಳಿಂದರ್ಚಿಸುತ್ತಿರ್ದುವೆಂಬಂತಲರ್ಗಳ್ ತಳ್ತಲ್ಲುಗುತ್ತಿರ್ದಖಿಳತರುನಿಕಾಯಂಗಳಿಂ ಕೂಡೆ ಬದ್ಧಾಂಜಳಿಯಾಗುತ್ತಿರ್ದುವೆಂಬಂತೆಸೆವ ಕಿಸಲಯಾಬದ್ಧ ಸಂಛನ್ನ ಶಾಖಾಕುಲದಿಂ ಚೆಲ್ವಾದ ಋಷ್ಯಾಶ್ರಮದ ರಚನೆಯಂ ನೋಡುತುಂ ಪೋದೆ ನಾಗಳ್ ೨೦

ಜಲರುಹ ಬೀಜರಾಜಿಗಳನಾಱಿಪ ಪರ್ಣಕುಟೀರಕಂಗಳಂ
ನಿಲಿಸುವ ದಂಡವೊತ್ತುವ ಮೃಗಾಜಿನಮಂ ಪೊಲುತಿರ್ಪ ಮುಂಜಮೇ
ಖಲೆಗಳನೊಪ್ಪಮಾಡುವ ಸಮಿತ್ಕುಶಮಂ ತರವೋಪ ಧೌತವ
ಲ್ಕಲಮನಲಂಬುವಕ್ಷಮಣಿಯಂ ಸಮೆವೀ ವ್ಯವಸಾಯಮೆತ್ತಲುಂ ೨೧

ಅತಿಥಿಯನಾದರಿಪ್ಪ ಪಿತೃದೈವಮನರ್ಚಿಪ ಧರ್ಮಶಾಸ್ತ್ರಸಂ
ಗತಿಗಳೊಳಿರ್ಪ ಯಜ್ಞವಿಧಿವೇಟ್ವ ಪುರಾಣಮನೋದುವಾಗಮ
ಪ್ರತತಿಗಳಂ ವಿಚಾರಿಸುವ ತತ್ತ್ವನಿರೀಕ್ಷಣೆಗೆಯ್ವ ಯೋಗದು
ನ್ನತಿಕೆಯನಪ್ಪುಕಯ್ವ ಮುನಿಸಂಘದಿನೊಪ್ಪುವುದಾ ತಪೋವನಂ ೨೨

ತಳಿರ್ಗಳಱುಂಬಿನೊಳ್ ತರದೆ ಪೇರ್ಚಿದ್ದ ಕೃಷ್ಣಮೃಗಾಜಿನಂಗಳಿಂ
ಜಳಕಲಶಂಗಳಿಂ ಮುನಿಕುಮಾರಿಯರಿಕ್ಕಿದ ಪಿಷ್ಟಚರ್ಚೆಯಿಂ
ಬಳಸಿಯುಮೇಣಶಾಬತತಿ ನೀರ್ಗುಣಿ ಕಣ್ಗೊಳಿಪಾಳವಾಳಮಂ
ಡಳದಿನದೊಂದು ಮುಂದೆಸೆದು ತೋಱಿದುದಾಗಳಶೋಕಭೂರುಹಂ ೭೩

ಮತ್ತಂ ಗೋಮಯಾವಲಿಪ್ತ ಭೂತಲಮುಂ ಕುಸುಮೋಪಹಾರ ರಮಣೀಯಮುಂ ವಿಸ್ತೀರ್ಣತರಾವಕಾಶಮುಮೆನಿಸಿದ ರಕ್ತಾಶೋಕ ತರುವಿನ ತಣ್ಣೆಲೊಳ್

ಕುಳಶೈಳವ್ರಾತದಿಂದಂ ಬಳಸಿದ ಕನಕಕ್ಷ್ಮಾಧರೇಂದ್ರಂ ಸಮುದ್ರಾ
ವಳಿಯಿಂ ಸುತ್ತಿರ್ದ ಲೋಕಂ ಹುತವಹತತಿಯಿಂ ವೇಷ್ಟಿಸಿರ್ದಧ್ವರಂ ಪ್ರ
ಜ್ವಳಿತಾರ್ಕಾನೀಕದಿಂದಂ ಬಳಸಿದ ಗಗನಾಭೋಗಮೆಂಬಂದದಿಂ ಕ
ಣ್ಗೊಳಿಸುತ್ತಂ ಯೋಗಿವೃಂದಾರಕರ ನಡುವೆ ಜಾಬಾಲಿಯೋಗೀಂದ್ರ
ನಿರ್ದಂ ೭೪

ಭುವನಪ್ರಸ್ತುತ್ಯರೋರಂದದೆ ತಪದೊಳೆ ಕರ್ಮಕ್ಷಯಂ ಗೆಯ್ದು ಮೂಲೋ
ಕವಿದೆಲ್ಲಂ ಕಯ್ಯೊಳಿರ್ದಾಮಳಕಫಳಮೆನಲ್ ಕಾಣ್ಬ ಯೋಗೀಂದ್ರರಿಂತ
ಪ್ಪವರಂ ಕೇಳ್ದೊರೆದು ಪುಣ್ಯಂ ಸಮನಿಸಿದೊಡೆ ಪಾಪಕ್ಷಯಂ ಪ್ರಾಣಿಗೆಂದಂ
ದು ವಿಶೇಷಂ ಕಾಣ್ಬ ಪುಣ್ಯೋದಯಮುದಯಿಸಲಾ ಸ್ಯೈಪನಿನ್ನೇನನೆಂಬೆಂ ೭೫

ಪರಮ ತಪೋನಿಧಿಯೆನಿಸಿದ
ಗುರುವಿಂಗಭಿವಂದಿಸುತ್ತೆ ಹಾರೀತಂ ಕು
ಳ್ಳಿರೆ ನಿಮಗಿದೆತ್ತಣಿಂದಂ
ದೊರೆಕೊಂಡಿತ್ತೆಂದು ತಾಪಸರ್ ಬೆಸಗೊಂಡರ್ ೭೬

ಅಂತು ಬೆಸಗೊಳ್ವುದುಂ ಹಾರೀತಕನೆಂದನಾಂ ಸ್ನಾನಾರ್ಥಂ ಪೋಗುತ್ತಿರೆ ಪಂಪಾಸರೋವರದ ಪಕ್ಕದಡವಿಯ ಪೆರ್ಮರದ ತುದಿಗೋಡ ಗೂಡಿನಿಂ ಬಿಟ್ಟು ದೆಸೆಗೆಟ್ಟು ನಡುವಗಲ ಬಿಸಿಲಳುರೆ ಕುಡಿಯಿಡುವ ಪುಡಿಯೊಳ್ ಪೊರಳುತ್ತುಂ ಕಂಠಗತಪ್ರಾಣನಾಗಿರ್ದುದನೀ ಗಿಳಿಯಂ ಕಂಡು ಕರುಣಿಸಿತಂದೆಂ ನಡಪಿ ಗಱುಮೂಡಿದ ಬಟಿಕ್ಕಂ ಪಾಱಿಪೋಕುಮಲ್ಲದಂದು

ಪರಿಚಯದಿಂ ನಿಲ್ಗೆಂದೆನ್ನ ಸಂಬಂಧಮಂ ನುಡಿಯುತ್ತಿರೆ ಜಾಬಾಲಿ ಮುನೀಂದ್ರನಾ ವಾತಂ ಕೇಳ್ದೀಷದಾವಲಿತ ಕಂಧರನಿದೆತ್ತಣಿಂ ಬಂದುದೆಂದು ಪುಣ್ಯಜಲದಿಂ ಪ್ರಕ್ಷಾಳಿಸುವಂತೆ ಶಾಂತದೃಷ್ಟಿಗಳಿಂದೆನ್ನಂ ಮುನ್ನಂ ಕಂಡಱಿವನಂತೆ ನೀಡುಂ ಭಾವಿಸಿ ನೋಡಿ

ಈತಂ ಮುನ್ನಿನ ಭವದೊಳ್
ನೀತಿಯನುಟ್ಟಿದ್ದೆಸಗಿ ಮೋಹದಿಂದಂ ತಿರ್ಯ
ಗ್ಜಾತಿಗೆ ಬಿಟ್ಟೋರಂದದಿ
ನೀ ತೆಱದಿಂ ಕರ್ಮಫಲಮನುಂಡಪನಲ್ತೇ ೭೭

ಎಂದು ಕಾಲತ್ರಯವೇದಿಗಳ್ ನುಡಿಯೆ ಮುನಿಗಳೆಲ್ಲರ್ ವಿಸ್ಮಿತಾಂತಃಕರಣರಾಗಿ ಮುನೀಂದ್ರನನಿಂತೆಂದರ್

ಮುನ್ನಾವನವಿನಯಮನ್ನೇ
ನಂ ನೆಗೞ್ದಂ ವಿಹಗಯೋನಿಯೆಂತಾದಂ ಮ
ತ್ತಿನ್ನೇನಾದಪನೆನುತ್ತುಂ
ಬಿನ್ನವಿಪುತ್ಕಂಠೆ ಮನದೊಳಾದಪುದೀಗಳ್ ೭೮

ಅದು ಕಾರಣದಿಂ

ಬೆಸಸರ್ ನೀಂ ವೇೞ್ದುದಿರ್ದೀ ಗಿಳಿಯ ಮಱಿಯ ವೃತ್ತಾಂತಮಂ ತಾಮೆನಲ್ ತ್ತಾಪಸವೃಂದಕ್ಕಾ ಮುನೀಂದ್ರಂ ಕಥೆ ಪಿರಿದು ಮಹಾಶ್ಚರ್ಯವಿನ್ನಾ ರಾತ್ರಿಯೊಳ್ ಸಂತಸವಿರ್ಪಂತಾಗೆ ತಾಂ ಕೇಳಿಸಿದಪೆನದಱಿಂದೆಟ್ಟು ನೀಮೆಲ್ಲರುಂ ಪ್ರಾರ್ಥಿಸದೀ ಮಧ್ಯಾಹ್ನಕಾಲೋಚಿತ ಸಮಯದೊಳಾಸಕ್ತಿಯಂ ತಾಳ್ದಿಮೀಗಳ್ ೭೯

ಎಂದು ಮುನಿಗಳೆ ಬೆಸಸು
ತ್ತುಂ ದಿವಸೋಚಿತಮೆನಿಪ್ಪ ನಿಯಮಕ್ಕಿರದ
ಲ್ಲಿಂದೆಟ್ಟು ಪೋದನಾ ಮುನಿ
ವೃಂದಂಬೆರಸಾ ಮುನೀಂದ್ರನಂದವನಿಪತೀ

ಅಂತು ನಿತ್ಯನಿಯಮವ್ಯಾಪಾರಂಗಳಂ ತೀರ್ಚುತ್ತುಮಿರೆ

ಮುನಿನಿವಹಮಾಚಿಲಿಕ್ಕಿದ
ತನುತರ ಕಾಷಾಯವಲ್ಕವಸನಂಗಳನಂ
ದೆನೆಸುರ್ಕಿ ತಾಳ್ದಿದುವೆನೆ ಬೈ
ಗಿನ ಕೆಂಬಿಸಿಲಳುರಲೆಸೆದುವಾಶ್ರಮತರುಗಳ್, ೮೧

ಇನನ ಬಟಿಸಂದ ಸಂಧ್ಯಾ
ವನಿತೆಯ ಪಿಂಗಿದ ವಿರಕ್ತಿ ಪುಟ್ಟಲ್ ಕೃಷ್ಣಾ
ಜಿನಮಂ ತಾಳ್ದಿದಳೊ ನಿಶಾಂ
ಗನೆಯೆಂಬಿನಮುರ್ಬಿ ಮಬ್ಬು ಪರ್ಬಿತಾಗಳ್ ೮೨

ವಳಯಿಾಭೂತ ತಮಸ್ಸಮಾಳಗಹನಂ ಸ್ವಾಷಾಢ ಸಪ್ತರ್ಷಿಸಂ ಕುಳ ಸಂಪೂತಮರುಂಧತೀಸ್ಥಿತಿನುತಂ ಮೂಲಾನ್ವಿತಂ ವ್ಯೋಮವಂ ಡಳಮಾರ್ಯಾಶ್ರಮಮೆಂದು ಬಂದೆಳಸಿದಂ ವೈರಾಗ್ಯದಿಂ ಧೌತವ ಲ್ಕಲಶೋಭಾಂಬರನೆಂದು ಮಿತ್ರವಿರಹೋದ್ವೇಗಾತುರಂ ಚಂದ್ರಮಂ ೮೩

ಅಂದಾ ಬೆಳ್ದಿಂಗಳೊಳಾ
ನಂದದಿನಾರಿಭೆರಸು ಮುನಿಸಮಾಜಸಮೇತಂ,
ತಂದೆಯ ಕೆಲಕ್ಕೆ ಮೆಲ್ಲನೆ
ಬಂದಂ ಹಾರೀತನುಚಿತವಿನಯೋಪೇತಂ, ೮೪

ಆಗಳ್ ಜಾಲಪಾದನೆಂಬ ಶಿಷ್ಯಂ ತಾಳವೃಂತದಿಂ ಬೀಸುತ್ತಿರೆ, ಸನ್ನಿಧಿಕೃತವೇತ್ರಾಸನರಾಗಿರ್ದ ಗುರುಗಳನೆಂದಂ ನೀಂ ವೀ ವಿಹಂಗಶಿಶುವಿನ ವೃತ್ತಾಂತಮನಿರುಳ್ ಬೆಸಸಿದಪೆವೆಂದುದಱಿಂ ಮುನಿಸಮಾಜಂ ತತ್ಕಥಾ ಶ್ರವಣತತ್ಪರಮಾಗಿರ್ದುದೆಂಬುದುಂ, ಜಾಬಾಲಿಮಹಾಮುನಿಗಳ್ ಪೇಟಿಲ್ ತಗುಳ್ದರದೆಂತೆನೆ—

೨. ಚಂದ್ರಾಪೀಡನ ಜೈತ್ರಯಾತ್ರೆ

ಪ್ರಿಯದಿಂದೆ ಮಹಾಕಾಳಾ
ಶ್ರಯನೀಶಂ ನೆಲಸೆ ನಗರಿಯೊಂದಧಿಕಖ್ಯಾ
ತಿಯಿನೆಸೆದು ತೋರ್ಪುದುಜ್ಜಯಿ
ನಿಯೆಂಬ ಪೆಸರಿಂದವಂತಿವಿಷಯಾಂತರದೊಳ್

ಸ್ಮರಭಸ್ಮಾಲಂಕೃತಾಂಗಂ, ರತಿವಿಲಯಯಶಸ್ಸರ್ವಭಕ್ಷಾರ್ಚಿತಾಂಘ್ರಿದ್ವಯಂ ಭೀ
ಕರಶೂಲೋದ್ದಾರಿತಾಂಧಾಸುರನಗತನಯಾನೂಪುರೋದ್ಘೃಷ್ಟಜೂಟಂ,
ಸುರವಂದ್ಯಂ, ಸಂದ ಕೈಲಾಸಮುಮನಿಳಿಸಿ ನಿಂದಂ, ಮಹಾಕಾಳನಾಮಂ,
ಗಿರಿಶಂ, ತಾನೆಂದೊಡುಜ್ಜೈನಿಯ ಮಹಿಮೆಯನೇಂ ಬಣ್ಣಿಸಲ್ ಬಲ್ಲನಾವಂ ೨

ಅಂತಾ ನಗರಿಯೊಳ್ ನಗ ನಹುಷ ಯಯಾತಿ ದುಂಧುಮಾರ ಭಗೀರಥ ಪ್ರತಿಮನುಂ ನಿಜಭುಜಾರ್ಜಿತ ಭೂಮಂಡಲನುಂ ಫಲಿತಶಕ್ತಿತ್ರಯನುಂ ನೀತಿಶಾಸ್ತ್ರಾಭಿಪ್ರಾಯಬುದ್ಧಿಯುಮಧಿಗತಧರ್ಮಶಾಸ್ತ್ರನುಮನೇಕಸಪ್ತತಂತುಪೂತಮೂರ್ತಿಯುಮುಪಶಮಿತ ಜಗದುಪಪ್ಲವನುಮೆನಿಸಿದ ಮಹಾನುಭಾವಂ, ತಾರಾಪೀಡನೃಪನಾತನ ಮಹಿಮೆಯಂ, ಪೇಳ್ವೊಡೆ,

ರಾವಣನೊತ್ತಿ ಕಿಟ್ಟೆ ರಜತಾದ್ರಿಯನತ್ಯಮದಿಂದಮಾ ಮಹಾ
ದೇವನದೊತ್ತು ಮುನ್ನಿಱಿಸಿದಂ ಸ್ಥಿರಮಾಗಿರಲಂತಶೇಷದೋ
ಷಾವಿಳಮಪ್ಪುದೊಂದು ಕಲಿಕಾಲಮದೊದ್ದಮೆ ಕಿಟ್ಟೆ ಧರ್ಮಮಂ,
ಭೂವರನಾವಗಂ ನಿಲಿಸಿದಂ, ನಿಖಿಳಾವನಿರಕ್ಷಣಕ್ಷಮಂ,

ವನನಿಧಿಪರೀತವಿಶ್ವಾ
ವನಿಪತಿಯ ಮಹಾಪ್ರತಾಪದಿಂ ಜೀರ್ದಪಳೆಂ
ಬಿನೆಗಂ ಛತ್ರಚ್ಛಾಯೆಯ
ನೆಸೆಸಗಲದೆ ರಾಜ್ಯಲಕ್ಷ್ಮಿ ಸಲೆ ನೆಲಸಿರ್ದಳ್

ಆ ತಾರಾಪೀಡ ಭೂಭೃತ್ಪತಿಗೆ ಸಕಲಶಾಸ್ತ್ರಾನ್ವಿತಂ ವಿಪ್ರವಂಶ
ಖ್ಯಾತಂ ನೀತಿಪ್ರಯೋಗಪ್ರಭು ನಿಖಿಳದಯೋದ್ಧಾರ ಗಾಂಭೀರ್ಯನಾಭಿ
ಲ್ಯಾತಿಪ್ರೇಮಾರ್ದ್ರಚಿತ್ತಂ ನಿಶಿತಮತಿ ಮಹಾಸತ್ವವೃತ್ತಂ ತ್ರಿವರ್ಗೋ
ಪೇತಂ ಷಾಡ್ಗುಣ್ಯಶೀಲಂ ವರಬುಧನಿವಹ ಸ್ತೋತ್ರಪಾತ್ರಂ ಪ್ರಶಸ್ತಂ ೫

ರಾಮಂಗೆ ಕುಶಿಕತನಯಂ
ವೈಮಾನಿಕನಾಯಕಂಗೆ ವಾಚಸ್ಪತಿಯಾ
ಭೀಮಂಗೆ ದಮನನೆನೆ ನಿ
ಸ್ಸೀಮಗುಣಂ ಮಂತ್ರಿಯೆನಿಸಿದಂ ಶುಕನಾಸಂ ೬

ಅಂತಾ ಮಂತ್ರಿಯೊಳ್ ಸಕಳರಾಜ್ಯಭಾರಮಂ ತಾರಾಪೀಡಂ ನಿಲಿಸಿ ಸುಖೋನ್ಮುಖನಾಗಿ ಪರಿಮಿತಾಪ್ತಜನದೊಡನತಿರಮಣೀಯಮಭಿಮತಮವಿರುದ್ಧಮೆನಿಪ ವಿಷಯಸುಖಾರ್ಣವದೊಳ್ ಮೂಡಿ ಮುಳ್ಗಾಡುತ್ತುಮಿರ್ದು

ಎನಿತೊಳವು ವಿಷಯಸಮುದಯ
ಮನಿತಱೊಳೆಂದುಂ ಪರಮಸುಖಮಂ ಪಡೆದುಂ
ತನಯಮುಖಾಲೋಕನಸುಖ
ಮನದೊಂದನೆ ಪಡೆದನಿಲ್ಲ ತಾರಾಪೀಡಂ ೭

ಅದುಕಾರಣದಿಂ

ಧರಣೀಪಾಲಸಹಸ್ರಸಂವೃತನೆನಲ್ ಸಂದಿರ್ದುಮೇಕಾಕಿಯಂ
ತಿರೆ ಪೃಥ್ವೀವಲಯಾವಲಂಬನನೆನಲ್ ಸಂದಿರ್ದುಂ ನಿರಾಲಂಬನಂ
ತಿರೆ ಕರ್ಣಾಂತವಿಶಾಲಲೋಚನನೆನಲ್ ಸಂದಿರ್ದುಮಂಧನಂ
ತಿರೆ ತನ್ನಂ ಬಗೆವಂ ತನೂಜರಹಿತಂ ವಿಶ್ವಂಭರಾವಲ್ಲಭಂ ೮

ಆ ತಾರಾಪೀಡನರೇಂದ್ರನಂತಃಪುರಪ್ರಧಾನೆಯೆನಿಸಿದ ವಿಳಾಸವತೀ ಮಹಾದೇವಿಯುಂ ತನಗೆ ತನಯರಿಲ್ಲಪ್ಪುದಱಿಂ ರಾಜ್ಯವಿಭವದ ಪರಮಸುಖಂ ವಿಫಳಮಾದವೋಲ್ ಮಱುಗುತ್ತಿರ್ದೊಂದು ದಿವಸಂ ಮಹಾಕಾಳದೇವರಂ ಪೂಜಿಸುತ್ತುಮಿರ್ಪಲ್ಲಿ ಭಾರತಕಥಾಶ್ರವಣದೊಳ್, ಪುನ್ನಾಮ್ನೋ ನರಕಾತ್, ತ್ರಾಯತ ಇತಿ ಪುತ್ರಃ, ಅಪುತ್ರಾಣಾಂ ಕಿಲ ಗತಿರ್ನಾಸ್ತಿ ನ ವಾ

ಸಂತಿ ಲೋಕಾಶ್ಚುಭಾಃ" ಎಂಬೀ ವಾಕ್ಯಾರ್ಥಮಂ ಕೇಳ್ದು ಮನೆಗಾಗಿಳೇ ಬಂದಂತೆಸ್ಸಂತಾಪವೊದವೆ, ಬಾಷ್ಪಾಂಬುವನೋರೆಂತೆ ಸುರಿಯುತ್ತುಮಿರ್ದ್ದೆಳಂತಾ ಸಮಯದೊಳ್ ತಾರಾಪೀಡನರೇಂದ್ರನಲ್ಲಿಗೆಯ್ದಂದಾಕೆಯ ಶೋಕಕಾರಣಮನಱಿದು ದುಃಖದಿಂ ಬಿಸುಸುಯ್ದು,

ನಮಗಿಂತಾದುದು, ಧೈವಪ್ರಾತ್ಮಜ, ಪರಿಷ್ವಂಗಸೆಮತ್ತಾಸ್ವಾದ, ಸೌಖ್ಯವಿದೆಂತುಂ ದೊರೆಕ್ಕೊಂಡಿತ್ತಿಲ್ಲ, ಹೃದಯಕ್ಕೊೞರಂತೆ ಮ್ಮುಂ, ಪುಣ್ಯಕರ್ಮಮನಂತಾಗಿರೆ ಮಾಡದಧೀಗಳಟಿಲಿಂ ಪೇಟಿಂತಟುತ್ತಿರ್ದಳ್, ಕ್ಕುಮೆ, ಬೇಡಂಗಿನೆ, ಮಾಣ್ಬುದೆಂದುಸಿರ್ದಂ ತಾರಾಪೀಡ, ಚಕ್ರೇಶ್ವರಂ,

ಗುರುಜನದಲ್ಲಿ ಮಾಡಧಿಕಭಕ್ತಿಯನರ್ಚಿಸು, ದೇವರ್ಕ್ಕಂ, ಮುನೀ
ಶ್ವರ ಪರಿಚರ್ಯೆಯೊಳ್ ಪಿರಿದುಮಟ್ಟಿಗೆಯಾಗು, ದಿಟಕ್ಕೆ ದಲ್ ಮುನೀ
ಶ್ವರರ್ಗಳೆ ದೈವಮೆಂದವರ ಪಾದಪಯೋರುಹ ಸೇವೆಯಲ್ಲಿ ತ
ತ್ಪರರೆನಿಪರ್ಗೆ ಪೇೞ್ ಪಡೆಯಲಾಱದುದೇಂ ತರಳಾಯತೇಕ್ಷಣೇ ೧೦

ಶರನಿಧಿಯಱಿದದ್ಧಿಂದತಿಗಭೀರಗುಣೋನ್ನತಿಯಿಂದೆ ಸ್ಯಂದನ ಮಂ
ದರಧರ ಬಾಹುಗಳ್ ವಸುಮತೀತಳ ರಕ್ಷಣದಕ್ಷರಪ್ಪ ನಾ
ಲ್ವರುಮನವನೀಶರಂ ದಶರಥಂ ಪಡೆದಂ ತನುಜಾತರಂ ವಯಃ
ಪರಿಣತಿಯೊಳ್ ವಿಭಾಂಡಕ ಮಹಾಮುನಿಮುಖ್ಯ ವರಪ್ರಸಾದದಿಂ ೧೧

ಎಂದಿಪ್ಪು ಮೊದಲ್ಲಾಗಿ ಪ್ರಿಯಮಧುರಂಗಳುಂ ಶೋಕಾಪನೋದನಿಪುಣಂಗಳುಂ ಧರ್ಮೋಪದೇಶಗರ್ಭಂಗಳುಮಪ್ಪ ವಚನನಿಚಯಂಗಳಿನೆಂತಾನುಂ ಸಂತೈಸಿ ಬಿಜಯಂಗೆಯ್ದನಲ್ಲಿಂ ಬಟಿಕ್ಕಂ ವಿಳಾಸವತಿ ಮಹಾದೇವಿಯುಂ ದುಃಖಮಂ ಪತ್ತುವಿಟ್ಟು

ಗುರು ದೇವ ದ್ವಿಜ ಪೂಜಾ
ಪರಿಚರ್ಯೆಯನೆಸಗಿ ಭಕ್ತಿಯಿಂ ಮತ್ತಂ ಪೇ
ಳ್ದರ ಮಾತೆಲ್ಲಂ ಕೇಳ್ದಾ
ದರದಿಂದಂ ಗರ್ಭತೃಷ್ಣೆಯಿಂದೊಡರಿಸಿದಳ್ ೧೨

ಇಂತನೇಕವಿಧದಿಂ, ವಿಳಾಸವತೀ ಮಹಾದೇವಿ, ಪುತ್ರೋತ್ಪತ್ತಿ, ನಿಮಿತ್ತಂ, ಪಲವು, ದಿವಸಮಾಚರಿಸುತ್ತಿರ್ಪುದುಮೊಂದು ದಿವಸಂ

ಸುರುಚಿರಸೌಧದೊಳ್, ನೆಲಸಿರ್ದಲ್, ನಿಜಕಾಂತೆಯ, ವಕ್ತ್ರಬಿಂಬದೊಳ್,
ಕರಿಣಿಯ, ಸೃಕ್ವಮಂ, ಪುಗುವ, ನೀರಜಷಂಡಮೆನಲ್ಕೆ, ಮನೋ
ಹರ, ಶಶಿಮಂಡಳಂ, ಪುಗುವುದಂ, ವಸುಧಾಧಿಪನೆಂದು, ಕಂಡನ,
ಚ್ಚರಿಯೆನಿಸಿರ್ದುದಂ, ನನಸುವೋಲ್, ಕನಸಂ, ಬೆಳಗಪ್ಪ, ಜಾವದೊಳ್ ೧೩

ಅರಸನತಿಹರ್ಷವಿಕಸಿತ,
ಸುರುಚಿರಲೋಚನನಮಾತ್ಯಮುಖ್ಯನನಾಗಳ್,
ಕರೆದು ನಿಜಸ್ವಪ್ನಮನಾ,
ದರದಿಂ, ಪೇಳಲ್ಕೆ, ಪುಳಕಿತಾಂಗಂ ಸಚಿವಂ, ೧೪

ಪಲಕಾಲಕ್ಕೆ ಮನೋರಥಪ್ರಕರಮಿಂದೆಮ್ಮೊಂದು, ಪುಣ್ಯೋದಯಾ
ವಳಿಯಿಂದಂ. ದೊರೆಕೊಂಡುದಿಂದು, ಭುವನಕ್ಕಾನಂದಮಾದತ್ತು, ಮುಂ
ಕೆಲವಾನುಂ, ದಿವಸಕ್ಕೆ, ದೇವ, ಪಡೆವಯ್, ಶ್ರೀಮಂಡನ, ಕ್ಷಾತ್ರಮಂ
ಡಲಮಾಗೋರ್ಜಿತಗಾತ್ರನಂ, ಬಹುಕಳಾಸತ್ಪಾತ್ರನಂ, ಪುತ್ರನಂ, ೧೫

ಅದಲ್ಲದೆಯುಂ

ಭುವನಾಧೀಶ, ನಿಶಾವಸಾನಸಮಯ, ಪ್ರಾಗ್ಭಾಗದೊಳ್, ಶಾಂತರೂ
ಪವಿಸುತ್ಯಂ, ವಿಲಸದ್ದುಕೂಲವಸನಾಲಂಕಾರನೊರ್ವಂ, ದ್ವಿಜ
ಪ್ರವರಂ, ಮೌಕ್ತಿಕಮಾಲಿಕಾವಲಯಮಂ, ಪ್ರೋತ್ಫುಲ್ಲಮಂ, ಪುಂಡರೀ
ಕವನಂದಲೆ, ಮನೋರಮಾಂಕತಳದೊಳ್, ತಂದಿಕ್ಕಿದಂ, ಸ್ವಪ್ನದೊಳ್, ೧೬

ಆನುಮೀ, ಮಾರ್ಗದೊಳ್, ಕಂಡೆನಂತು, ನಿಶಾವಸಾನಸಮಯದೊಳ್ ಕಂಡ, ಕನಸುಗಳವಿತಥಂಗಳಪ್ಪುವದುಕಾರಣದಿಂ, ನಿಖಿಳರಾಜಋಷಿ, ಪ್ರಮೋದಹೇತುಭೂತನುಂ, ರಾಜಮಾಂಧಾತನುಮೆನಿಪ, ಜಗತ್ಪ್ರಖ್ಯಾತಂ, ಜನಿಯಿಸುಗುಮಲ್ಲದೆಯುಂ

ನಿನ್ನಯ ಸಂತಾನಮನುವಿ
ಚ್ಛಿನ್ನಂ ಕ್ಷಿತಿಭಾರಧಾರಣೋಚಿತಗುಣಸಂ
ಪನ್ನಮೆನಲ್ ನೆಗಳ್ದುಂ ಭೂ
ಪೋನ್ನತ ದ್ವಿಜನ್ಮಗದ್ದಾನದ್ವಂದದಿನೆಂದುಂ ೧೭

ಎಂದು ತಾರಾಪೀಡನರೇಂದ್ರನ ಕಯ್ಯಂ ಪಿಡಿದಂತಃಪುರಕ್ಕೆ ಪೋಗಿ ವಿಳಾಸವತಿ ಮಹಾದೇವಿಗೆ ತಾವಿರ್ವರುಂ ಕಂಡ ಕನಸುಗಳಂ ಪೇೞ್ದು ಕೇಳ್ದಾನಂದಪರಂಪರೆಯನೆಯ್ದಿ ಕೆಲವಾನುಂ ದಿವಸದೊಳ್

ಒದವಿದ ನಿಜತೇಜಂ ಘನ
ದೊದವಿಂ ನವಮೇಘಮಾಲೆಗುದಯಿಪ ತೆಱದಿಂ
ಹೃದಯಾನಂದಂ ಭುವನದೊ
ಳೊದವಲ್ಕೆ ವಿಳಾಸವತಿಗೆ ಸುತನುದಯಿಸಿದಂ ೧೮

ಉದಯಿಸೆ ಚಂದ್ರಂ ನೆಲೆಸೆ
ರ್ಚಿದರ್ಣವಂ ಘೂರ್ಣಿಪಂತೆ ಭೋರೆಂದೋರಂ
ದದೆ ಭುವನಮೆಯ್ದೆ ಘೂರ್ಣಿಸಿ
ದುದದೆತ್ತಂ ರಾಜಪುತ್ರಜನನೋತ್ಸವದೊಳ್ ೧೯

ಅಂತಾ ಸಮಯದೊಳ್

ಶುಕನಾಸಸಮನ್ವಿತನು
ತ್ಸುಕಹೃದಯಂ ನೃಪತಿ ಸುತಮುಖಾಲೋಕನ ಕೌ
ತುಕದಿಂ ಬಂದಂ ಮೌಹೂ
ರ್ತಿಕೋಪದಿಷ್ಟಪ್ರಶಸ್ತಲಗ್ನೋದಯದೊಳ್ ೨೦

ಸಹಜವಿಭೂಷಣದ್ಯುತಿರೆ
ಮಹನೀಯಕ್ಷುಣ್ಣಲಕ್ಷಣಂ ಮಿಸುಗೆ ಶುಭಾ
ವಹನೆನಿಸಿದನಂ ಕಂಡಂ
ಮಹಾತ್ಮನಂ ಸುತನನಟ್ಟಿಱುಂದಿನ ಮಹಿಪಂ ೨೧

ಅಡಿಗಡಿಗಾನಂದಾಶ್ರುಗ
ಳೆಡೆವಿಡದುಣ್ಮುತ್ತಿರಲ್ಕೆ ಪಿಡುಗಣ್ಗೊಣರಿಂ,
ಪಿಡಿವಂದದೆ ಕುಡಿವಂದದೆ
ನುಡಿವಂದದೆ ಸುತನನೆಟ್ಟೞಿಂದೀಕ್ಷಿಸಿದಂ,

ಆಗಳ್, ಶುಕನಾಸಂ ಕುಮಾರನಂಗಪ್ರತ್ಯಂಗಂಗಳಂ, ಪ್ರೀತಿವಿಸ್ತಾರಿತಲೋಚನನಾಗಿ ನೋಡಿ ನರೇಂದ್ರಂಗಿಂತೆಂದಂ,

ದೇವ, ಪೆಱತ್ತಾವುದವ್ವ
ಕ್ಕಾವಯವದೊಳಂ ಕುಮಾರನುನ್ನತಿಕೆಯನು
ಉದ್ಭಾವಿಸುತಿರ್ದಪುದಿರ್ತಿದೆ
ಭಾವಿಸು ನೀಂ ಚಕ್ರವರ್ತಿಚಿಹ್ನೋತ್ಕರಮಂ,

ಎಂದು ಮಂತ್ರಿ ಪೇೞುತ್ತಿರಲೊರ್ವ್ವ ಪುರುಷಂ, ಪ್ರಹೃಷ್ಟವದನಂ ತ್ವರಿತಗತಿಯಿಂ ಬಂದ್ದು ಪೊಡವಟ್ಟು ಬಿನ್ನಪವೆಂದಿಂತೆಂದಂ,

ದೈವವಿಧಿರ್ಚ್ಚಿ ಬಂದುದು ಜಗಜ್ಜಯಮಂ ತಳೆ, ದೇವ, ರೇಣುಕಾ
ದೇವಿಗೆ ರಾಮನುತ್ಸವದೆ ಪುಟ್ಟಿದವೋಲ್ ಶುಕನಾಸಮಂತ್ರಿ ಸಂ
ಭಾವಿತೆಯಪ್ಪ ಪಾರ್ವ್ವತಿ ಮನೋರಮೆಗತ್ತ ಭವತ್ಪ್ರಸಾದದಿಂ
ದೀ ವರಲಗ್ನದೊಳ್ ತನಯನತ್ಯಧಿಕೋತ್ಸವಮಾಗೆ ಪುಟ್ಟಿದಂ, ೨೪

ಎಂದು ಬಿನ್ನವಿಸೆ

ಅರಸಂ ಕಲ್ಯಾಣಪರಂ
ಪರೆ ಸಮನಿಸಿತೆಂದು ತೆಗೆದು ತಪ್ಕೈಸುತ್ತುಂ,
ಸರಭಸವೊಲವಿಂ ಸಚಿವೋ
ತ್ತರೀಯಮಂ ಪೂರ್ಣಪಾತ್ರಮೆಂದೆಱೆಕೊಂಡಂ, ೨೫

ಅನಂತರಮೊಸಗೆವಾತಂ ಪೇೞ್ದವಂಗೆ, ಮೆಚ್ಚುಗೊಟ್ಟಲ್ಲಿಂದೆೞ್ದು ಪೊಱಮಟ್ಟು,

ವಿವಿಧವಿಲಾಸಮಂ ತಳೆದು, ಮಂಗಳಕೇಳಿಯನೆತ್ತಿವಟ್ಟು ಮಾ
ನವಪತಿ ನೋಡುತುಂ ಸಚಿವಮಂದಿರಮಂ ಪುಗುತಂದು ಸೂತಿಕಾ
ಭವನಮನೆಯ್ದಿ ಪೆರ್ಮೆಗನುರೂಪಮೆನಲ್ ನಿಜಮಂದಿರೋದ್ಗತೋ
ತ್ಸವಕಿದು ನಾಡೆಯುಂ ದ್ವಿಗುಣಮೆಂಬಿನಮುತ್ಸವಮಂ ನೆಗಟ್ಟಿದಂ, ೨೬

ಅಂತು, ನೆಗೆಟ್ಟಿ, ದಶಮದಿನಪುಣ್ಯಸುಮುಹೂರ್ತದೊಳ್, ಸುವರ್ಣ ಕೋಟಿಗಳಂ ದ್ವಿಜೋತ್ತಮರ್ಗಿತ್ತು ತದನಂತರದೊಳ್,

ಮೊದಲೊಳ್ ಬಂದಪ್ಪೆಯುಂದಿತನ ಜನನಿಯ ವಕ್ತ್ರಾಬ್ಜದೊಳ್ ಚಂದ್ರಮಂ ಪೊಕ್ಕುದನಲ್ತೆ ಕಂಡೆನಾಂ ಸ್ವಪ್ನದೊಳೆನುತೆ ಮನಂಗೊಂಡು, ತತ್ಸ್ವಪ್ನಸಾದೃಶ್ಯದೆ ಚಂದ್ರಾಪೀಡನೆಂಬೀ ಮೊದಲ ಪೆಸರನಿಟ್ಟಂ ತನೂಜಂಗೆ, ಮೂಲೋಕವೊಳಂ ಮಾಂಗಲ್ಯತೂರ್ಯಧ್ವನಿ ಪಸರಿಸಿ ಪರ್ವುತ್ತಿರಲ್ ಸಾರ್ವಭೌಮಂ, ೨೭

ಮನುಮಾರ್ಗದೊಳೇಕಾದಶ
ದಿನದೊಳ್ ತನಯಂಗೆ ವಿಪ್ರಜನಸಮುಚಿತಮಾ
ಯ್ತೆನೆ ಸಚಿವಂ ವೈಶಂಪಾ
ಯನನೆಂಬೀ ಪೆಸರನಿಟ್ಟನಧಿಕೋತ್ಸವದಿಂ, ೨೮

ಅನಂತರಮೇಳ್ಗೆವಡೆವ ಪಾಡಿವದ ಚಂದ್ರನಂತೆ ಚಂದ್ರಾಪೀಡಂ, ಪ್ರತಿದಿನಂ ಪ್ರವರ್ಧಮಾನನಾಗೆ ಚೂಡಾಕರಣಾದಿಕ್ರಿಯಾಕಲಾಪಮುಮಂ ಮಾಡುತ್ತುಮಿರೆ ಶೈಶವವಂ ಪತ್ತುವಿಡುವುದುಂ ಕ್ರೀಡಾವ್ಯಸನಮುಗ್ಗಲ್ವಂತು, ಬಹಿರ್ನಗರದೊಳಮರಮಂದಿರಾನುಕಾರಿಯಪ್ಪ ವಿದ್ಯಾನಿಕೇತನಮಂ ಮಾಡಿಸಿ ನಿಖಿಳ ವಿದ್ಯಾಚಾರ್ಯರುಮಂ ಮಹಾಪ್ರಯತ್ನದಿಂ ನಿಲಿಸಿ, ಶುಭದಿನದೊಳ್ ಧವಳಮಂಗಳ ಪ್ರಸಾಧನಾಲಂಕೃತನುಮಾಚಾರ್ಯಕುಲಪರಿವೃತನುಮಪ್ಪ ನಿಜನಂದನನಂ, ವೈಶಂಪಾಯನನಂಬೆರಸು, ವಿದ್ಯಾಧಿಗಮನದೊಳ್ ಸಮರ್ಪಿಸಿ ಪಂಜರಸ್ಥಿತ ಮದಕೇಸರಿಕಿಶೋರಕದಂತೆಗೆಯ್ದಖಿಳ ವಿದ್ಯಾಭ್ಯಾಸಂಗೆಯ್ಸಿತ್ತುಮಿರೆ

ಪೊಳೆದೆಸೆವ ರತ್ನದರ್ಪಣ
ದೊಳಗೆ ತಳತ್ತಳಿಪ ತರಣಿಕಿರಣಾವಳಿವೋಲ್
ತೊಳಗಿ ಬೆಳಗಿದುವು ವಿದ್ಯಾ
ವಳಿ ನಿಜನಂದನನ ವದನಮಣಿದರ್ಪಣದೊಳ್, ೨೯

ಅಂತು, ಸಕಳಕಳಾಕಲಾಪಮನಪ್ಪುಕಯ್ದು ಶಸ್ತ್ರಶಾಸ್ತ್ರದೊಳತ್ಯಂತ ಪರಿಣತನಾಗುತ್ತುಮಿರೆಯಿರೆ,

ವಿರಳಪರಿವಾರಪರಿವೃತ
ನರಸಂ ಮಾದೇವಿವೆರಸು ನಿಚ್ಚಂ ಬಂದಾ
ದರದಿಂದೆ ನೋಡಿ ಪೋಪಂ
ಗುರುಜನ ಪರಿವೃತನೆನಿಪ್ಪ ನಿಜನಂದನನಂ ೩೦

ಗುಣಮುಂ ರೂಪುಂ ವಿದ್ಯಾ
ಗಣಮುಂ ತಳ್ಪೊಯ್ದು ತನ್ನೊಳೆಸೆಯಲ್ ವಿಬುಧಾ
ಗ್ರಣಿಯೆನಿಪ ಕುಮಾರನೊಳಂ
ದೆಣೆಯಾದಂ ಸಚಿವತನಯನಾ ಕ್ರಮದಿಂದಂ ೩೧

ಶುಕನಾಸಾರ್ಯ ಗುರುತ್ವದಿಂದೆ ಸಹಪಾಂಸುಕ್ರೀಡನಾಭ್ಯಾಸದಿಂ
ದೆ ಕಳಾಜ್ಞಾನ ವಿಶೇಷದಿಂದುಚಿತ ಸೇವಾಜಾತಚಾತುರ್ಯದಿಂ
ದೆ ಕರಂ ಚಿತ್ತಮನಪ್ಪುಕಯ್ದಖಿಳ ವಿಸ್ರಂಭಕ್ಕಮಾವಾಸಮಾ
ಗಿ ಕುಮಾರಂಗೆ ಮಹಾಪ್ರಧಾನತನಯಂ ಮಿತ್ರತ್ವಮಂ ತಾಳ್ದಿದಂ ೩೨

ದಿನಪತಿಯುಂ ದಿನಮುಂ ಬಿಡ
ದನುಬಂಧದಿನಗಲದಂತೆವೋಲ್ ಚಂದ್ರಾಪೀ
ಡನುಮಂತಾ ವೈಶಂಪಾ
ಯನನುಂ ಪದಪಿಂದಮೊರ್ವರೊರ್ವರನಗಲರ್ ೩೩

ಕಮಲವನಕ್ಕನೋದಯವಿರುಳ್ಗಮೃತಾಂಶುಸಮುದ್ಗಮಂ ಸುರ
ದ್ರುಮಕೆ ನವಪ್ರಸೂನವಿಭವಂ ನವಿಲಿಂಗೆ ಕಳಾಪವರ್ಣಮಂ
ತಮರ್ದ ಮುಗಿಲ್ಗೆ ಶಕ್ರಧನುವೋಲ್ ಭುವನತ್ರಯಮಂಗಳಾಭಿರಾ
ಮಮಿದೆನೆ ರಾಜಸೂನುಗೆಸೆದತ್ತನಸುಂ ನವಯೌವನೋದಯಂ ೩೪

ತೊಳತೊಳತೊಳಗುವ ಷೋಡಶ
ಕಳೆಯಿಂ ಕಣ್ಗೊಳಿಪ ಚಂದ್ರನಂದದಿನತ್ಯು
ಜ್ಜ್ವಳತನು ಷೋಡಶವರ್ಷಂ
ಗಳಿಂದೆ ಕಣ್ಗೆಸೆದನಂದು ಚಂದ್ರಾಪೀಡಂ ೩೫

ಅಂತುಪಾರೂಢಯೌವನೋದಯನುಂ ಪರಿಸಮಾಪ್ತ ಸಕಲಕಲಾವಿಜ್ಞಾನನುಮಪ್ಪ ನಿಜನಂದನನಪ್ಪ ಚಂದ್ರಾಪೀಡನಂ ತಾರಾಪೀಡನರೇಂದ್ರಂ ಬರಿಸಲೆಂದು ಬಲಾಧಿಕೃತನಪ್ಪ ಬಲಾಹಕನೆಂಬನಂ ಬೆಸಸೆ, ಬಹುತುರಂಗಪದಾತಿಬಲಪರಿವೃತನಾಗಿ ಬಲಾಹಕಂ ಕುಮಾರನಿರ್ದ ವಿದ್ಯಾನಿಕೇತನಕ್ಕೆ ವಂದು ದೌವಾರಿಕನಿವೇದಿತಂ ಪೊಕ್ಕು ವಿಬುಧಚಿಂತಾಮಣಿಯಂ ಕಂಡವನಿತಳನಿಹಿತ ಚೂಡಾಮಣಿಯಾಗಿ ಪೊಡವಟ್ಟು ಸಮುಚಿತಾಸನದೊಳ್ ಕುಳ್ಳಿರ್ದು ವಿನಯಪುರಸ್ಸರಮಿಂತೆಂದಂ

ಎನ್ನ ಮನೋರಥಕ್ಕೆ ಪರಿಪೂರ್ತಿಯನೆಯ್ದಿಸೆ ಶಸ್ತ್ರಶಾಸ್ತ್ರಸಂ
ಪನ್ನತೆಯಿಂ ವಿರಾಜಿಸೆ ನಿರೀಕ್ಷಿಸಲುತ್ಸುಕೆಯರ್ಕಳಾದಪರ್
ತನ್ನಯ ತಾಯ್ವಿರೆಂದು ಜನಕಂ ಬಟಿಯಟ್ಟಿದನಟ್ಟಿ ಯಿಂ ಪುರ
ಕ್ಕಿನ್ ನಡೆತಂದು ದೇವ ಪಡೆ ಪೌರಜನಂಗಳ ಕಣ್ಗೆ ಪರ್ವಮಂ. ೩೬

ಅದೆ ಪೊಱಗಿಂದ್ರಾಯುಧಮೆಂ
ಬುದೊಂದು ದಿವ್ಯಾಶ್ವಮಟ್ಟಿದಂ ನಿನಗೇಱ
ಲ್ಕದನನಿಲ ಗರುಡ ಜವಮೆನಿ
ಸಿದುದಂ ತ್ರಿಜಗಕ್ಕೆ ರತ್ನಮಂ ನಿಜಜನಕಂ. ೩೭

ಜಳನಿಧಿ ಜಳದಿಂ ಪೊಱಮ
ಟ್ಟಿಳೆಗವತರಿಸಿದುದೆಯೋನಿಸಂಭವಮೀ ಮಂ
ಗಳಹಯಮೆಂದೋಲೈಸಿದ
ನಿಳಾಧಿನಾಥಂಗೆ ಪಾರಶೀಕಾಧೀಶಂ. ೩೮

ಎಂದು ಬಿನ್ನವಿಸುವುದುಂ ನೃಪಪುತ್ರಂ ಚಂದ್ರಂ ತಂದೆಯಾಜ್ಞೆಯಂ ತಲೆಯೊಳ್ ತಾಳ್ದು ಪೊಱಮಡಲೆಂದಭಿನವಜಳಧರಧ್ವಾನ ಗಭೀರವಚನದಿನಿಂದ್ರಾಯುಧಮಂ ಪುಗಿಸೆಂದು ಬೆಸಸಿದಾಗಳ್

ಎರಡುಂ ಪಕ್ಕಂಗಳೊಳ್ ಕಾಂಚನಕಟಕಖಲೀನಾಗ್ರಸಂಲಗ್ನರಿರ್ವರ್
ಭರದಿಂದಂ ಕೀೞ ನೇಣಂ ತೆಗೆದು ಬರೆ ಮಹೋದಗ್ರದೇಹಪ್ರಮಾಣಂ

ಬರೆ ಪೀರ್ವಂತೆತ್ತಮಾಕಾಶಮನನಿಲಜವೋದ್ರೇಕದಿಂ ಪಾಱಿ ನೀಡುಂ
ಖುರಘಾತೋದ್ಧೂತಧಾತ್ರೀರಜಮತಿರುಚಿರಂ ಬಂದುದಿಂದ್ರಾಯು
ಧಾಶ್ವಂ ೩೯

ಆ ದಿವ್ಯಾಶ್ವಮಂ ನೋಡಿ

ಇದಱ ಮಹಾಪ್ರಾಣಕ್ಕೆಗ್ಗಿ
ನ್ನಿದಱೊದವಿದ ತೇಜದೇೞ್ಗೆ ಗಚ್ಚರಿಯಾಗಿ
ರ್ದುದು ದೇವತಾತ್ಮನೋ ಪೇ
ೞ್ದುದು ದಿಟಮೇಱಲ್ಕೆ ಶಂಕೆ ಪುಟ್ಟಿದುದೀಗಳ್ ೪೦

ಇದು ಸಾಮಾನ್ಯದ ವಾಜಿಯಲ್ತು ಪಿರಿದುಂ ನೋಡಲ್ ಮುನೀಂದ್ರೋಗ್ರಶಾಪದಿನೊರ್ವಂ ದಿವಿಜಂ ನಿಜಾಕೃತಿಯನಾದಂ ಬಿಟ್ಟು ದಿವ್ಯಾಶ್ವರೂಪದಿನೀ ಲೋಕದೊಳಿರ್ದನೆಂದು ಬಗೆಯುತ್ತಮಿಂದಮೆಟ್ಟಂದನಂದುದಿತಾರ್ಕಪ್ರಭನೇಱಲೆಂದು ಹಯಮಂ ರಾಜಾಧಿರಾಜಾತ್ಮಜಂ

ಕ್ಷಮೆಯಂ ಮಾಡಶ್ವ ನೀನಾರೆಱಿಯೆನದಱಿನಿಂತೀ ಮೃದ್ವಾರೋಹಣಾತ್ತಿ
ಕ್ರಮಕೆಂದಾರೋಹಣಂಗೆಯ್ವುದುಮೆಂದು ಬಗ್ಗೆಗೊಂಡಂತಿರಾಕೇಕರಾಲೋ
ಕಮುಖಂ ನೋಡುತ್ತುಮೇಱಲ್ ಕರೆವತೆಱದೆ ಹೇಷಾರವಂ ಪೊಣ್ಮೆ ಭೂಭಾ
ಗಮನತ್ತ್ಯುತ್ಸಾಹದಿಂ ದಕ್ಷಿಣಖುರದೆ ಬೆರ್ಕೆಂಟಿತ್ತು ದಿವ್ಯಾಶ್ವಮಾಗಳ್ ೪೧

ಆಗಳ್ ಚಂದ್ರಾಪೀಡನಾಯಿಂದ್ರಾಯುಧಾಶ್ವಮನೇಱಿ ಯಥಾಕ್ರಮದಿಂ ತುರಂಗಾರೂಢನಪ್ಪ ವೈಶಂಪಾಯನಂಬೆರಸು ಪುರಾಭಿಮುಖನಾಗಿ ಬಿಜಯಂಗೆಯ್ಯೆ ಪುರವೀಧಿಯೊಳ್ ಲತಾಂಗಿಯರ್ ಸೂಸುವ ಕುಸುಮಮಿಶ್ರ ಲಾಜಾಂಜಲಿಗಳನಿದಿರ್ಗೊಳುತ್ತೆ ರಾಜಭವನದ್ವಾರದೊಳಿಂದ್ರಾಯುಧದಿಂದವನಿತಳಕ್ಕವತರಿಸಿ ಅರಮನೆಯಂ ಪೊಕ್ಕು ನಿಜಜನಕನಂ ದೂರದೊಳೆ ಕಂಡು ಪೊಡಮಡುವುದುಂ

ಪ್ರವೃದ್ಧಾಶೀರ್ವಾದದಿಂದಂ ಪರಸಿ ಮಗನನಾನಂದದಿಂ ಕಂದ ಬಾಯೆಂ
ದಿರದಾನಂದಾಶ್ರುಬಿಂದುಪ್ರತತಿ ಸುರಿಯೆ ರೋಮೋದ್ಗಮಂ ಕೂಡೆ ಪೊಣ್ಮು
ತ್ತಿರೆ ಬಾಹುದ್ವಂದ್ವದಿಂದಂ ಬರೆತೆಗೆದಪ್ಪಿ ತಕ್ಕೈಸೆಯುಂ ತಾತಪಾದಾಂ
ಬುರುಹಕ್ಕಾನಮ್ರನಾದಂ ನಿಖಿಳನೃಪಸಭಾಂಭೋಜಿನೀರಾಜಹಂಸಂ ೪೨

ಅಂತು ವಿನಯೋನ್ನತಿವೆತ್ತ ನಿಜನಂದನನನರ್ಧಾಸನದೊಳಾ ನೃಪಂ, ಕುಳ್ಳಿರಿಸೆಯುಮೆಂತುಮೊಲ್ಲದಾತ್ಮೀಯ ತಾಂಬೂಲಕರಂಕವಾಹಕ ಪ್ರಸಾರಿತಾಂಬರಾಂಚಲಮುಮಂ ಚರಣಾಗ್ರದಿಂ ನೂಂಕಿ ಚಂದ್ರಾಪೀಡಂ ನೆಲದೊಳ್ ಕುಳ್ಳಿರೆ,

ವಿನಯದಿನಾ ವೈಶಂಪಾ
ಯನನೆಱಗೆ ನರೇಂದ್ರನಪ್ಪಿಬಿಂದಪ್ಪಲ್ಕಾ
ತನುವಾಗಳ್ ತಾರಾಪೀ
ಡ ನರೇಂದ್ರಾತ್ಮಜನ ಪಕ್ಕದೊಳ್ ಕುಳ್ಳಿರ್ದಂ, ೪೪

ಅಡಿಗಡಿಗಾತ್ಮನಂದನ ಮುಖೇಂದುವನುತ್ಸವದಿಂದೆ ನೋಡುತುಂ ನುಡಿಯುತುಮಾ ನೃಪಂ ಕರಸರೋರುಹದಿಂ ಚುಬುಕಾಗ್ರಭಾಗಮಂ ಪಿಡಿದು ನಿಜಾಂಬಿಕಾ ಪದಪಯೋಜಮನೀಕ್ಷಿಸು ಪೋಗು ಸಂತಸಂ ಬಡಿಸು ವಿಲೋಕನೋತ್ಸುಕೆಯರಂ ವಿನಯಾರ್ಣವ ನಿನ್ನ ತಾಯ್ವಿರಂ, ೪೫

ಎಂದು ಬೆಸಸೆ ಅಂತೆಗೆಯ್ವೆನೆಂದು ವೈಶಂಪಾಯನದ್ವಿತೀಯನುಂ ಅಂತಃಪುರ ಪ್ರವೇಶಯೋಗ್ಯ ಪರಿಮಿತಪರಿಜನೋಪದಿಶ್ಯಮಾನಮಾರ್ಗನುಮಾಗಿ ಶುದ್ಧಾಂತಕಾಂತಾಪ್ರಧಾನೆಯಪ್ಪ ನಿಜಾಂಬಿಕೆಯ ಮನೆಯಂ ಪೊಕ್ಕು ವಿನಯರತ್ನಾಕರಂ ಸಾಷ್ಟಾಂಗ ಪ್ರಣತನಾಗೆ, ವಿಳಾಸವತಿ ಮಹಾದೇವಿ ನಿಜತನಯನಂ ವೈಶಂಪಾಯನನುಮನಪ್ಪಿಬಿಂ ತಪ್ಪೈಸಿ,

ವಿನಯದೆ ನಿನ್ನ ತಂದೆಯ ಪ್ರಸಾದದಿನಿಂತು ಸಮಸ್ತ ಸತ್ಕಳಾ
ವನಿತೆಯರೊಳ್ ಮಹೋತ್ಸವದೆ ಕೂಡಿದಿರಿಂತಿರೆ ಬೇಗದಿಂ ವಧೂ
ಜನದೊಡಗೂಡಿಮೆಂದು ಪಿರಿದಪ್ಪಿಬಿನೊಳ್ ಪರಸುತು ಮಾತ್ಮನಂ
ದನ ಶುಕನಾಸನಂದನರನಾ ಸತಿ ಕಣ್ಮಲರಾರೆ ನೋಡಿದಳ್, ೪೬

ತದನಂತರಂ ಸಮಸ್ತ ಜನನಿಯರುಮಂ ಯಥಾಕ್ರಮದಿನಭಿವಂದಿಸಿ, ರಾಜಮಂದಿರಮಂ ಪೊಱಮಟ್ಟು ಬಪ್ಪಾಗಳ್,

ತನಗೆಂದು, ಬೇಱೆ, ಮುನ್ನಮೆ.
ಜನಕಂ, ಮಾಡಿಸಿದ, ನೆಲೆಯ, ಕರುಮಾಡಂ, ಕಾಂ
ಚನ, ಕಲಶತತಿಯಿನೆಸೆದ್ದುದು,
ಕನಕಾದ್ರಿಯನಲ್ಲಿ, ಕಡೆದು, ಕಂಡರಿಸಿದವೋಲ್, ೪೭

ಆ, ಮಂದಿರಮಂ, ಪೊಕ್ಕು, ಮಜ್ಜನಭೋಜನಾದಿ, ದಿವಸವ್ಯಾಪಾರಮಂ, ತೀರ್ಚಿ,

ಭುವನ, ತ್ರಯಮುಮಂ, ಕೈಸಾ
ರ್ಗುಮ್ಮಿದಱಿನೆಂಬಂತೆ, ತನ್ನ, ಮಣಿಮಯ, ಶಯ್ಯಾ
ಭವನಾಂತರಾಳದೊಳ್, ಕ
ಟ್ಟವೇಟ್ಟಿನಿಂದ್ರಾಯುಧಾಶ್ವಮಂ, ನೃಪತನಯಂ, ೪೮

ಅಂತು, ತುರಂಗರತ್ನಮನೆ, ನೋಡಿ, ಪೊಟ್ತುಗಳೆಯುತ್ತುಮಿರ್ಪುದುಂ, ದಿನಲಕ್ಷ್ಮೀಕಾಂತೆ, ಮೆಯ್ವೆಟ್ಟಿದು, ಗಗನರಂಗಾಗ್ರದಿಂ, ವಾರುಣೀ, ಸೇವನೆಗೆಯ್ತರ್ಪಲ್ಲಿ, ಕಾಲಿಂ, ನವಮಣಿಮಯ, ಮಂಜೀರಕಂ, ನುಣ್ಚುತುಂ, ತೀವಿ, ನಿಜಪ್ರದ್ಯೋತದಿಂ, ಪಶ್ಚಿಮಶಿಖರಿ, ಶಿರೋಭಾಗದೊಳ್, ಬಿಟ್ಟುದೆಂಬಂತಿನಬಿಂಬಂ, ರಂಜಿಸಿತ್ತಸ್ತಮಯ, ಸಮಯದೊಳ್, ಮುಕ್ತಪಾದಾವ
ಲಂಬಂ, ೪೯

ಆ, ನಿಶಾಸಮಯದೊಳ್. ನೃಪರೂಪಚಂದ್ರಂ, ಸಂಧ್ಯಾಸಮಯೋಚಿತನಿಯಮಮಂ, ನಿರ್ವರ್ತಿಸಿ, ಮಣಿಮಯ, ಮಂಟಪದೊಳ್, ವೈಶಂಪಾಯನ ದ್ವಿತೀಯನೋಲಗದೊಳಿರ್ಕೆ

ಉದಿತೇಂದುಪ್ರಭೆ, ರಾಹುವಿಂಗಗಿದು, ಕಾಂತಾರೂಪಮಂ, ತಾಳ್ದಿ, ಬಂದುದೊ, ಮೇಣ್, ರಾಜಕುಲಾಧಿದೇವತೆಯೊ, ಬಂದಳ್, ಮೂರ್ತಿಗೊಂಡೆಂಬಿನಂ, ಸುದತೀರತ್ನಮದೊರ್ವಳೆಟ್ಟಿರುತುಮಿರ್ದಳ್, ಸುತ್ತಲುಂ, ನಾಡೆ. ಪೊಣ್ಮಿದ, ಲಾವಣ್ಯದೆ, ಕಾಂಚನಾಕರ, ರಜೋವಿಸ್ತಾರಮಂ, ಮಾಟ್ಪವೋಲ್, ೫೦

ಮಿಸುಗುವ. ಬೆಳ್ದಿಂಗಳ್, ದೆಸೆ.
ದೆಸೆಯೊಳ್; ಪಸರಿಸುವ. ತೆಱದೆ. ಹಾರಮರೀಚಿ,
ಪ್ರಸರಂ, ಬಳಸುತ್ತಿರ್ಕೆ, ಬ
ರ್ಪಸಿಯಳ್, ಪಾಲ್ಗಡಲೊಳೆಸೆವ, ಸಿರಿಯಂ, ಪೋಲ್ತಳ್, ೫೧

ಗಿರಿರಾಜಂ ಗೌರಿಯನಾ
ಹರಂಗೆ ಶುಶ್ರೂಷೆಗೆಯ್ಯಿಸಲೊಡಗೊಂಡುಯ್ವಂ
ತಿರೆ ಸತಿಯ ಪೆಱಗೆ ಕಿಱಿದಂ
ತರದೊಳ್ ಕೈಲಾಸನೆಂಬ ಕಂಚುಕಿ ಬಂದಂ, ೫೨

ಅಂತಾ ಕಾಂತೆವೆರಸು ಕಂಚುಕಿ ಬಂದು ಪೊಡವಟ್ಟು ಕಯ್ಗಳಂ ಮುಗಿದು ದೇವಾ ಬಿನ್ನಪವೆಂದಿಂತೆಂದಂ

ಮುನಿಸಿಂ ತ್ವಜ್ಜನಕಂ ಕುಳೂತಪುರಮಂ ನಿರ್ಮೂಲಿಪಂದಾ ಕುಳೂ
ತನರೇಂದ್ರಂ ಭಯದಿಂ ಕಳತ್ರಸಹಿತಂ ಪೋಗಲ್ ಕುಳೂತೇಶನಂ
ದನೆಯುಂ ಮತ್ತಮನೇಕರುಂ ಸೆಱೆಗೆ ತಂದಿಟ್ಟಲ್ಲಿ ತದ್ರಾಜನಂ
ದನೆಯಂ ಕನ್ನೆಯನಕ್ಕಱಿಂ ನಡಪಿದಳ್ ಮಾದೇವಿ ಕಾರುಣ್ಯದಿಂ, ೫೩

ಅಂತು ನಡಪುತುಮಿರ್ದು

ಪಿರಿದುಂ ಮನ್ನಿಸಿ ನಡಪು
ತ್ತಿರೆ ಪರಮರಹಸ್ಯಭೂಮಿಯೆನಿಸಿದಳಿಂತೀ
ಪರಿಚಾರಿಕೆ ತನಗೆಂದಾ
ದರದಿಂ ನಿಜಜನನಿ ಬೆಸಸಿಯಟ್ಟಿದಳೀಗಳ್ ೫೪

ಧರೆಯೊಳ್ ನೆಗಟ್ದ ಕುಳೂತೇ
ಶ್ವರನ ಮಗಳ್ ಪತ್ರಲೇಖೆಯೆಂಬುದು ಪೆಸರಿಂ
ಪರಿಜನಸಾಮಾನ್ಯದೆ ನೀಂ
ಪರೀಕ್ಷಿಸಲ್ವೇಡ ಸತಿಯನೀ ಗುಣವತಿಯಂ, ೫೫

ಎಂದು ಪೊಡವಡಿಸೆ ಪತ್ರಲೇಖೆಯ ವಿಚಿತ್ರರೂಪನಾ ಕ್ಷತ್ರಿಯಪುತ್ರಂ ವಿಸ್ಮಯಾಕ್ಷಿಪ್ತಚಿತ್ತನಾಗಿ ನೋಡುತಿರ್ದು ದೇವಿಯರ್ ಬೆಸಸಿದಂತೆ ನೆಗಟ್ವೆನೆಂದು ಕಂಚುಕಿಯುಂ ಕಟಿಪಲಿತ ಪತ್ರಲೇಖೆಯುಮಭಿನವಸಮುಪಜಾತಸೇವಾರಸದಿನೊಂದುಪೊಟ್ತಿಗಲದೋಲಗಿಸುತ್ತಿರಲಾಕೆಯ ಶೀಲಾಚಾರವಿನಯಮುಂ ಕಂಡು ತಾಂಬೂಲಕರಂಕವಾಹಿನಿಯುಂ ಮಾಡಿ ನೃಪರೂಪಚಂದ್ರಂ ನಿಜಜನನೀಜನಕರನೋಲಗಿಸುತಿರ್ದನನ್ನೆಗಮುತ್ತಂ

ಯುವರಾಜಪಟ್ಟಬಂಧೋ
ತ್ಸವಮಂ ಮಾಡಲ್ಕೆವೇಟ್ಕುಮಿನ್ನಿರದೆ ವಿಲಾ
ಸವತೀಸುತಂಗೆನುತ್ತಂ
ದೈವನೀಶಂ ಸಚಿವನೊಳ್ ಸಮಾಲೋಚಿಸಿದಂ ೫೬

ನವರತ್ನವ್ರಾತ ಸರ್ವೌಷಧಿಫಲಮಿಳಿತಾಂಭೋಧಿತೀರ್ಥಾಪಗಾವಾ
ರಿ ವಿರಾಜಚ್ಚಂದ್ರಕಾಂತೋಪಲಕಲಶಮನಂದೆತ್ತಿ ಭೂಪಾಲಕಂಠೀ
ರವನಾನಂದಾಶ್ರುಧಾರಾತತಿ ನಿಮಿರ್ವಿನೆಗಂ ಯೌವರಾಜ್ಯಾಭಿಷೇಕೋ
ತ್ಸವಮಂ ಪುತ್ರಂಗಮಾತ್ಯಪ್ರಕರಪರಿವೃತಂ ಮಾಡಿದಂ ಸಾರ್ವಭೌಮಂ ೫೭

ಮರದಿಂ, ಮರಕ್ಕೆ ದಾಂಗುಡಿ
ವರಿವೆಳಲತೆಯಂತೆ, ನೀತಿಮಾಂಧಾತನೊಳಾ,
ವರಿಸಿರ್ದ್ದು, ರಾಜವಿದ್ಯಾ
ಧರನಲ್ಲಿಗೆ, ರಾಜ್ಯಲಕ್ಷ್ಮಿ ನಿಳ್ಕಿದಳಾಗಳ್ ೫೮

ಅಂತು, ಕಿಱಿದು, ಬೇಗಮಿರ್ಪುದುಂ, ಯುವರಾಜಂ, ದಿಗ್ವಿಜಯ, ಪ್ರಯಾಣಮನೆತ್ತಿಕೊಂಡು,

ತುರಗಮಯಂ ನೆಲಂ, ಚಮರಜಾಲಮಯಂ, ದಿನಮಾತಪತ್ರಪಾಂ
ಡುರಮಯಮಂತರಿಕ್ಷಮಿಭಯೂಥಮಯಂ, ದೆಸೆ, ಸೃಷ್ಟಿ, ಭೂತಳೇ
ಶ್ವರಮಯಮಾತಪಂ, ಮಣಿಕಿರೀಟಮಯಂ, ಭುವನತ್ರಯಂ, ಜಯ
ಸ್ವರಮಯಮಂಬರಂ, ಧ್ವಜಮಯಂ, ಮದಗಂಧಮಯಂ, ಸಮೀರಣಂ ೫೯

ಎಂಬಿನಂ, ನಡೆದಖಿಳ, ಧಾತ್ರೀನಾಥರಂ ಗೆಲ್ದು ಕೈಲಾಸಶೈಲಾಂತರ, ಸ್ಥಳದೊಳ್ ಶೋಭಿಸುತಿರ್ಪ ಸುವರ್ಣಪುರಮಂ, ಕೈಕೊಂಡು,

ಜಲನಿಧಿಪರಿವೃತ, ಧಾತ್ರೀ
ತಲಮಂ, ಬಲವಂದು, ಪಿರಿದುಮಾಸತ್ತ ಬಲಂ,
ನಿಲವೇಟ್ಕುಮೆಂದು, ನೃಪಕುಲ,
ಲಲಾಮನಂತಲ್ಲಿ, ಪಲವು, ದಿವಸಮನಿರ್ದಂ ೬೦

೩. ಮಹಾಶ್ವೇತೆಯ ಸಂದರ್ಶನ

ಅಂತಿರುತ್ತುಮೊಂದು ದಿವಸಂ ಯುವರಾಜನಿಂದ್ರಾಯುಧಮನೇಱಿ ಬೇಂಟೆಯ ವಿನೋದದಿಂ ತೊೞಲುತ್ತುಮಿರೆಯಿರೆ,

ಪಿರಿದಪ್ಪಾಶ್ಚರ್ಯ ಪರಂ
ಪರೆ ಸಮನಿಸಲದ್ರಿಶಿಖರದಿಂದಿೞಿದಾಡು
ತ್ತಿರೆಯಿರೆ ನಿಜೇಚ್ಛೆಯಿಂ ಕಿ
ನ್ನರಮಿಥುನಮನವನಿಪಾಲತನಯಂ ಕಂಡಂ,

ಜಗದೊಳಗಪೂರ್ವವೆಂಬೀ
ಬಗೆಯಿಂ ತಾಂ ಪಿಡಿವ ತವಕದಿಂ ಭೋಂಕನೆ ಬಂ
ದಗಣಿತಜವಮುಂ ಕಿನ್ನರ
ಯುಗದ ಸಮೀಪಕ್ಕೆ ಬಿಟ್ಟನಿಂದ್ರಾಯುಧಮಂ,

ಆಗಳ್, ತಮ್ಮೆಡೆಗೆಯ್ತರ್ಪುದಂ, ಕಂಡದೃಷ್ಟಪೂರ್ವಮಪ್ಪುದಱಿಂ, ಕಿನ್ನರದ್ವಯಮತಿಭೀತಿಯಿಂ ಪರಿಯೆ,

ಪಿಡಿದಪನೀಗಳಾ ಪಿಡಿಯಲೆಯ್ದಿದನಾ ಪಿಡಿದಪ್ಪನೀಗಳಾ,
ಪಿಡಿದನೆ, ಕಿನ್ನರದ್ವಯಮನೆಂಬಿನೆಗಂ, ಬೞಸಂದು, ತನ್ನ ಸಂ
ಗಡದವರುಂ ಪರಿಗ್ರಹಮುಮೆಯ್ತರಲಾಱದೆ ಪಿಂದೆ ನಿಲ್ವಿನಂ,
ಕಡುಪಿನೊಳಂದು ಬಿಟ್ಟನತಿಶೀಘ್ರದೆ ವಾಜಿಯನಾ ನೃಪೋತ್ತಮಂ, ೩

ಛಲದಿಂದರಸಂ ತಾಂ ಬೆ
ನ್ನೊಳೆ ಪರಿದೆಟ್ಟಿ ಪಿಡಿಯಲ್ಕನುಗೆಯ್ವುದುಮ
ಸ್ಖಲಿತಂ ಮುಂದಣ ತಾರಾ
ಚಲಶಿಖರಮನೇಱಿದತ್ತು ಕಿನ್ನರಮಿಥುನಂ, ೪

ಏಕೆ ನಿರರ್ಥಕಂ ಮಗುವಿನಂದದೆ ಕೋಟಲೆಗೊಂಡೆನೆಕ್ಕಟಿಂ
ತೇಕೆಯೊ ಕಿನ್ನರದ್ವಯದ ಬೆಂಬಟಿಯಂ ತಗುಳುತ್ತೆ ಬಂದೆನಿಂ
ತೇಕೆಯೊ ಮೂರ್ಖನಂತೆ ಮತಿಗೆಟ್ಟೆನಿದಂ ಪಿಡಿದಲ್ಲಿ ಬರ್ಪುದೇಂ
ವ್ಯಾಕುಲನಾಗುತುಂ ಪಿಡಿಯದಿರ್ದೊಡೆ ಪೇಳ್ ಕಿಡುವೊಂದು ವಸ್ತುವೇಂ ೫

ಏನಾನೊಂದನೆ ಮಾಡಿದೆಂ ಮಗುವಿನಂತೇನಾನುಮೊಂದರ್ಕೆ ಪೇ
ರ್ಚೆನೋ ಕೌತುಕದಿಂದೆ ಬಂದೆನೆನಗೀ ದುರ್ಮೋಹದುದ್ಯೋಗಮಿಂ
ತೇನಾನೊಂದನೊಡರ್ಚಿತಿಂತಿದೆನುತ್ತುಂ ತದ್ವೇಗದಿಂ ವಿಸ್ಮಯ
ಧ್ಯಾನಾಧೀನಮನಸ್ಕನೊಂದಿನಿಸು ಬೇಗಂ ನಿಂದನುರ್ವೀಶ್ವರಂ ೬

ಅಂತು ನಿಂದು

ಪಿರಿದು ಜವಮುಳ್ಳುದಱಿನೀ
ಹರಿ ನಿಮಿಷಕೆ ಪಿರಿದುವರಿಗುಮನಿತಱೊಳೆನಿತಂ
ತರಮನೆಡೆವರಿಗುಮೋ ಚೆ
ಚ್ಚರದಿಂ ಬಟಿಸಂದು ಮಱುಗಿ ಬರ್ಪೆನ್ನ ಬಲಂ ೭

ಎಂದು ಚಿಂತಿಸುತುಮಿರ್ಪುದುಂ

ವಸುಧೆಯ ಬಡಗಣ ದೇಶ
ಕ್ಕೆ ಸೀಮೆಯೆನಿಪುದು ಸುವರ್ಣಪುರಮತ್ತಲ್ ಮಾ
ನಿಸರಿಲ್ಲದಡವಿ ಬಟಿಕ
ತ್ತೆಸೆವುದು ಕೈಲಾಸಮೆಂಬುದಾ ನಗಮಿದಿರೊಳ್ ೮

ಅದಱಿಂದೊರ್ವನೆ ತೆಂಕಲಾವುದೆನುತ್ತುಂ ನೋಡುತ್ತುಮಿನ್ ಪೋಗವೇ
ಡಿದುದರ್ಕಿತಲ್ಲಡೆ ಬೇಱುಪಾಯಮಣಮಿಲ್ಲಂತಲ್ತೆ ತಂತಮ್ಮ ಮಾ
ಡಿದುದಂ ತಾಮುಣವೇಟ್ಕುಮೆಂದು ಪಿರಿದೊಂದುದ್ವೇಗದಿಂದಂ ಮಗು
ಟ್ಚಿದನಿಂದ್ರಾಯುಧಮಂ ನೃಪಾಲತನುಜಂ ರಾಜಾಧಿರಾಜಾತ್ಮಕಂ ೯

ಅಂತು ಕುದುರೆಯಂ ಮಗುಟ್ಚಿ ಮತ್ತಮಿಂತೆಂದಂ

ದಿನಲಕ್ಷ್ಮೀರಶನೈಕಮಧ್ಯಮಣಿಯಾದಂ ಭಾಸ್ಕರಂ ಶ್ರಾಂತಿಯುಂ
ಘನಮಾದತ್ತು ತುರಂಗಮಕ್ಕದಱಿನಾಂ ನೀರ್ದಾಣಮಂ ನೋಡಿ ಮೆ

ಲ್ಲನೆ ಸಾರ್ದಲ್ಲಿ ಬಟಲೆಯಂ ಕಳೆದು ನಾಂ ಪೋಪೆಂ ಬಟಿಕ್ಕೆಂದು ವಾರಿನಿವಾಸಂಗಳನಲ್ಲಿ ನಾಲ್ದೆಸೆಗಳೊಳ್ ನೋಟ್ಟುಂ ಮಹೀವಲ್ಲಭಂ, ೧೦

ಅಂತು ನಿರೀಕ್ಷಿಸುತ್ತುಂ ಪೋಗೆವೋಗೆ,

ಕುಮುದರಜಂಗಳೊಳ್ ಪೊರೆದು ವಾಃಕಣಜಾಲಮನಾಂತು ಕೂಡೆ ವಿಶ್ರಮಿಸಿ ತರಂಗಮಾಲಿಕೆಗಳೊಳ್ ಕಲಹಂಸನಿನಾದ ಬಂಭ್ರಮದ್ಭ್ರಮರರವಂಗಳೊಳ್ ಬೆರಸಿ ಮಾರುತನೊಯ್ಯನೆ ಬಂದು ತೀಡಿದತ್ತು ಮದೋರ್ಸೆದಪ್ಪಿಕೊಂಡು ಕರೆವಂತೆವೊಲಾ ಮನುಜೇಂದ್ರಚಂದ್ರನಂ, ೧೧

ಎಲೆ ತಾರಾಗಂ ಹರಂ ಕಣ್ಣಿಡೆ ಕರಗಿದುದಂತಲ್ತು ರುದ್ರಾಟ್ಟಹಾಸಂ ಜಲಮಾದತ್ತಲ್ತು ಚಂದ್ರಾತಪಮಮೃತರಸಾಕಾರಮಾಯ್ತಲ್ತು ಹೈಮಾಚಲಮಂಭೋರೂಪದಿಂದಂ ಪರಿಣಮಿಸಿದುದಂತಲ್ತು ನೈರ್ಮಲ್ಯಶೋಭಾಕಲಿತಂ ತ್ರೈಲೋಕ್ಯಲಕ್ಷ್ಮೀಮಣಿಮುಕುರಮೆನಲ್ ಚೆಲ್ವದಾಯ್ತಬ್ಜಷಂಡಂ, ೧೨

ಆವುವುಟಿದೆಡೆಗಳೆಂದು ಸ
ರೋವರಮಂ ನೋಡುತಿರ್ಪ ಬಗೆಯಿಂ ಕೈಲಾ
ಸಾವಾಸಮಂ ಬಿಡಂ ಗೌ
ರೀವಲ್ಲಭನೆರೆದೊಡಾರಿದಂ ನೆಟೆ ಪೊಗಟ್ವರ್. ೧೩

ಅಳವಟಿಯುದೆ ತುರಗಮುಖ
ರ್ಕಳ ಬಟಿವಟಿಯನೆ ತಗುಳ್ದು ಬಂದುದುಮಿಾಗಳ್
ಫಳಮಾದತ್ತೊಂದಟಿಯೊಳೀ
ಕೊಳನಂ ಕಂಡುದಟೊಳೆನುತೆ ಮತ್ತಂ ಭೂಪಂ, ೧೪

ಲಲಿತನಿಜಕನಕಮಯ ಶೃಂ
ಖಲೆಯಿಂ ಹರಿಚರಣಯುಗಳಮಂ ನಿಯಮಿಸಿ ಶಾ
ಡ್ವಲತೃಣತತಿಯಂ ಖಡ್ಗದಿ
ನಿಳಾಧಿಪಂ ಕೊಯ್ದು ಮುಂದೆ ಸಾರ್ಚಿದನಾಗಳ್ ೧೫

ಅನಂತರಮಾ ವಿಬುಧಕಮಳಾಕರರಾಜಹಂಸನಾ ಕಮಳಾಕರದೊಳ್ ಕರ ಚರಣ ವದನ ಪ್ರಕ್ಷಾಲನಂಗೆಯ್ದು ಚಾತಕನಂತೆ ಕೃತಜಲಾಹಾರನಾಗಿ,

ಚಕ್ರಾಹ್ವಯದಂತೆ, ಮೃಣಾಳನಾಳಂಗಳಂ ಮೆಲ್ದು, ವಿಯೋಗಿಯಂತೆ, ನಳಿನದಳಂಗಳನುರದೊಳೊತ್ತಿಕೊಂಡು, ತನ್ನೊಳಿಂತೆಂದಂ,

ಅಂಚೆಗಳಿಂಚರದಿಂ ತ
ಣ್ಪಿಂ, ಚೆಲ್ವಿಂ, ಸವಿಯಿನಬ್ಜಘನಸೌರಭದಿಂ,
ಕಾಂಚನಕಮಳಾಕರಮಿದು
ಪಂಚೇಂದ್ರಿಯಸುಖಮನೆನಗೆ ಪಡೆದಪುದೀಗಳ್ ೧೬

ಎನುತುಮಲ್ಲಿಂ ಪೊಱಮಟ್ಟು,

ಲಲಿತ ಲತಾಗೃಹದಿಂದೂ
ಪಲಮಂ ಸಾರ್ದುಂಡೆಸುತ್ತಿ ಮೇಲುದನಾಗಳ್
ತಲೆಗಿಂಬುಮಾಡಿ, ನೃಪಕುಲ
ತಿಲಕಂ ಪಟ್ಟಿರ್ದಿರ್ಪುದುಂ ತತ್ಕ್ಷಣದೊಳ್, ೧೭

ಮುರಿದ ಕೊರಲ್ ಬೞಲ್ದೆಳಪಲ್ಗಾಟಿಪ ಮೆಯ್ ಕಡೆವಾಯ ಲೋಳೆಯೊಳ್
ಪೊರೆದುಗುತರ್ಪ ಪಚ್ಚಪಸಿಯಚ್ಚಗಱುಂಕೆ ಮರಲ್ದ ದಿಟ್ಟಿ ಕ
ತ್ತರಿಮೊನೆಗೊಂಡ ಬಲ್ವಕಿವಿ ಸೂಚಿಸಿದಪ್ಪುದು ಸೋಲ್ತಭಾವಮಂ
ತುರಗಮಿದೇನನಾಲಿಸುತುಮಿರ್ದಪುದೆಂದು ನರೇಂದ್ರಚಂದ್ರಮಂ, ೧೮

ಅಂದದನಚ್ಚರಿವಟ್ಟು ವೀಣಾವಿದ್ಯಾಧರಂ ಭಾವಿಸಿ ನೋಡುತ್ತುಮಿರ್ದನನ್ನೆಗಂ,

ಎಲೆ ಪೆಣ್ದುಂಬಿಯ ಗಾವರಂಬೊರೆದು ಪೊಣ್ಮುತ್ತಿರ್ದ ಪುಷ್ಪಾಸ್ತ್ರ ಚಾಪಲತಾ ಜ್ಯಾರವದಂತೆ ಮಾನುಷಮೆನಿಪ್ಪಿಂದೋಜೆಯೊಳ್ ಸಂದ ಕಾಕಲಿಯಿಂದಂ ಪುದಿದೊಯ್ಯನೊಯ್ಯನೆ ವಿಪಂಚೀನಾದಮಿರ್ದಿರ್ತೀ ಪಳಂ ಚೆಲೆಯುತ್ತಿರ್ದಪುದೆಲ್ತೆ ಸಾಲ್ವುದಿದೆ ತದ್ಗಂಧರ್ವರಂ ಸೋಲಿಸಲ್ ೧೯

ಇದು ಮನುಜರ್ಗಗೋಚರಮೆನಿಪ್ಪ ಹರಾದ್ರಿಯ ತಟ್ಟಲ್ಲಿ ಗೇಯದ ದನಿ ನುಣ್ಪುವೆತ್ತೆಸೆಯುತಿರ್ದಪುದೀಗಳೆ ಪೋಗಿ ನೋೞ್ಪೆನಾ,

ನಿದನೆನ್ನುತುಂ ಕುತೂಹಲಿತಮಾನಸನಂದು ನರೇಂದ್ರನಂದನಂ
ಕುದುರೆಯ ಬೆನ್ಗೆ ವಂದು ನಡೆದಂ ಮೃಗಸೂಚಿತಗೇಯಮಾರ್ಗದಿಂ ೨೦

ಅಂತು ಪೋಗೆವೋಗೆ

ಇದು ಸಿದ್ಧಾಯತನಂ ಮನಂಗೊಳಿಸಿ ತೋಱುತ್ತಿರ್ಪುದಿಲ್ಲಿಂದೆ ಬಂ
ದುದು ವೀಣಾಧ್ವನಿ ತಪ್ಪದೀ ಯೆಡೆಯೊಳಿರ್ದರ್ ಬಾಜಿಸುತ್ತಿರ್ದರೆಂ
ಬುದನಾಂ ನೋಡುವೆನೀಗಳೆಂದು ಮನದೊಳ್ ನಿಶ್ಚೈಸುತುಂ ಮೆಲ್ಲನೆ
ಯ್ದಿದನಾ ಸ್ಥಾನಮನಂದನಂತಮಹಿಮಂ ಭೂಪಾಲವಿದ್ಯಾಧರಂ ೨೧

ಅಂತದನೆಯ್ದಿ ನೋೞ್ಪನ್ನೆಗಮಲ್ಲಿ,

ಹರಹಾಸಾವಯವರ್ಗಗಳಂತಿರಲನಂತಾನಂತಭೋಗಂಗಳಂ
ತಿರೆ ಪೂರ್ಣೇಂದುಕಲಾಳಿಯಂತಿರೆ ಸಿತಾಬ್ಜಾನೀಕಮೊಪ್ಪಲ್ ಶಿಖಾಂ
ತರದೊಳ್ ನಿರ್ಮಲದಿವ್ಯಮೌಕ್ತಿಕಶಿಲಾಲಿಂಗಂ ಚತುರ್ವಕ್ತ್ರ ಸುಂ
ದರಮಲ್ಲಿರ್ದುದು ರತ್ನಪೀಠಘಟಿತಂ ದೇದೀಪ್ಯಮಾನಪ್ರಭಂ ೨೨

ಅಂತಿರ್ದ ಚರಾಚರಗುರುವಪ್ಪ ಶೂಲಪಾಣಿದೇವರಂ ಕಾಣ್ಬುದುವಾ ಪರಮೇಶ್ವರನ, ಸಕಳಜಗದಭೀಷ್ಟಫಲದಾಯಕಮಪ್ಪ ದಕ್ಷಿಣಾಮೂರ್ತಿಯನಾಶ್ರೈಸಿ,

ಅಮೃತಾಂಭೋರಾಶಿಪೂರಪ್ರತಿಮ ನಿಜತಪಸ್ಸಂಚಯಂ ಪರ್ವಿತೋ ಲೋ
ಕಮನೆಂಬಂತಿರ್ದ ದೇಹಾಂಶುಗಳ ಬಳಗದಿಂ ಕಾನನಾನೀಕಮಂ ದಂ
ತಮಯಂ ಮಾಳ್ಪಂತೆ ತಾರಾಚಳಮನಸದಳಂ ಸುಣ್ಣಿಪಂತೊರ್ವಳತ್ಯು
ತ್ತಮದಿವ್ಯಾಕಾರೆ ಕುಳ್ಳಿರ್ದತನುಹರನನಾರಾಧಿಸುತ್ತಿರ್ದಳಾಗಳ್ ೨೩

ಅಂತುಮಲ್ಲದೆಯುಂ

ಕಡೆದರೊ ಶಂಖದಿಂ ತೆಗೆದರೋ ನವಮೌಕ್ತಿಕದಿಂ ಮೃಣಾಳದಿಂ
ಪಡೆದರೊ ದಂತದಿಂದೆಸೆಯೆ ಮಾಡಿದರೋ ರುಚಿರೋಜ್ಜ್ವಲಾಂಗಮಂ
ಬಿಡದಮೃತಾಂಶುರಶ್ಮಿಗಳ ಕುಂಚಿಗೆಯಿಂದಮೆ ಕರ್ಚಿ ಪಾರದಂ,
ದೊಡೆದರೊ ಪೇೞೆನಲ್ ಕರಮೆ ಕಣ್ಗೆಸೆದಿರ್ದುದು ರೂಪು ಕಾಂತೆಯಾ ೨೪

ಪೊಳೆವೆಳನೇಸಱೊತ್ತೆಗೆದ ರಶ್ಮಿಗಳಂತೆ ಮಡಲ್ತು ಕಾಂತಿಯಂ
ತಳೆದೆಳಮಿಂಚಿನೊಳ್ಳಳರ್ಗಳಂತೆ ಕವಲ್ತು ಮೃಗಾಂಕಮೌಳಿ ನಿ
ರ್ಮಳಪದ ಭಸ್ಮರೇಣುಗಳೆನಲ್ ನವಮಜ್ಜನವಾಃಕಣಂಗಳಂ
ತಳೆದು ಪೆಗಲ್ವರಂ ಬಳೆದು ರಂಜಿಸುಗುಂ ಜಡೆಗಳ್ ಮೃಗಾಕ್ಷಿಯಾ ೨೫

ಶಿವನಾಮಾಂಕಿತಮಂ ರ
ತ್ನವಿರಚಿತಮನುತ್ತಮಾಂಗದೊಳ್ ಪಾದೂಯು
ಗ್ಮವನೆಸೆಯೆ ತಳೆದು ಭಕ್ತಿಯೆ
ಭವಸನ್ನಿಧಿಯಲ್ಲಿ ರೂಪುಗೊಂಡಂತಿರ್ದಳ್ ೨೬

ವನರುಹನಾಭನಾಭಿಸಿತಪಂಕಜಬೀಜಮೊ ಪದ್ಮಗರ್ಭನಾ
ನನದೆ ಪೊದೆಳ್ದ ವೇದವಿಮಳಾಕ್ಷರಮಾಲೆಯೊ ಕಯ್ಯ ಸೋಂಕು ಪಾ
ವನತರಮೆಂದು ಸಪ್ತಮುನಿಮಂಡಲಮಿರ್ಪುದೊ ಬಂದು ಪೇಟನಲ್
ವನಿತೆಯ ಮೌಕ್ತಿಕಾಕ್ಷವಲಯಂ ಕೊರಲೊಳ್ ಕರಮೊಪ್ಪಿ ತೋಱುಗುಂ ೨೭

ಎಳವೆಱೆಯೊಳ್ಗದಿರ್ಗಳ್ ಬಂ
ದೆಳಸಿದುವೀಶ್ವರನ ಸನ್ನಿಧಾನದೊಳೆಸೆವೀ
ಲಲಿತಾಂಗಿಯನೆಂಬಿನೆಗಂ
ಪೊಳೆಯುತ್ತುಂ ಬ್ರಹ್ಮಸೂತ್ರಮೇನೊಪ್ಪಿದುದೋ ೨೮

ದಿವಿಜತೆಯಿಂ ದಿವಸಂಗಳ
ಪವಣಱಿಯಲ್ಬಾರದಾದೊಡಂ ಸೊಗಯಿಸಿ ತೋ
ರ್ಪವಯವದಿಂದಂ ಪದಿನೆಂ
ಟು ವರಿಸದಾಕೃತಿಯಿನಬ್ಜಮುಖಿ ಕಣ್ಗೆಸೆದಳ್ ೨೯

ಒದವಿದ ಭಕ್ತಿಯಿನೀಶನ
ಹೃದಯದೊಳಿರ್ದಪಳೆನಲ್ಕೆ ನವಮೌಕ್ತಿಕಲಿಂ
ಗದ ನಡುವೆ ರೂಪುಮಾತ್ರೋಳ
ಗಿದುದೆತ್ತಂ ವಿಮಲಕಮಲದಳಲೋಚನೆಯಾ ೩೦

ರಸಮೊಸರ್ವಂತು ಪಾಡುತಿರೆ ಶುದ್ಧಮನೋಮಣಿದೀಪ್ತಿ ಪೊಣ್ಮಿ ರಾ
ಜಿಸಿದಪುದೋ ಸ್ತುತಿಪ್ರಕರನಿರ್ಮಳವರ್ಣಸಮೂಹಮೊತ್ತುಗೊಂ

ಡೆಸೆವುದೊ ಪೇಳೆನೆಲ್ ಪೊಳೆವ ದಂತಮರೀಚಿಗಳಿಂದಮೀಶ್ವರಂ,
ಗೊಸೆದಭಿಷೇಕಮಂ ಮಗುಳೆ ಮಾಡುವವೊಲ್ ಬಗೆಗೊಪ್ಪಿ ತೋಱಿದಳ್ ೨೧

ಅಂತು ವಿರೂಪಾಕ್ಷದೇವರನಾರಾಧಿಸುತ್ತುಮಿರ್ದ,

ಅತಿಗಂಭೀರೆಯನೂರ್ಜಿತ
ಮತಿಯಂ ನಿರ್ಮಳೆಯನಮಳಧೈರ್ಯಾದಿ ಗುಣಾ
ನ್ವಿತೆಯಂ ದೃಢಪಾಶುಪತ
ವ್ರತೆಯಂ ಕನ್ಯಕೆಯನಂದು ಕಂಡಂ ಕ್ಷಿತಿಪಂ, ೨೨

ಅಂತು, ಕಂಡವನಿತಳಕ್ಕವತರಿಸಿ, ತುರಂಗಮನೊಂದು ತರುಶಾಖೆಯೊಳ್ ಕಟ್ಟಿ, ಭಗವದಿಂದುಮೌಳಿಯ ಪುರೋಭಾಗದೊಳ್ ನಿಂದು, ಪೊಡವಟ್ಟು, ದಿವ್ಯ ಕಾಂತೆಯ, ರೂಪಸಂಪತ್ತಿಗಂ, ಕಾಂತಿಗಮುಪಶಾಂತಿಗಂ, ವಿಸ್ಮಯಂಬಟ್ಟು, ನೋಡುತ್ತುಮಿರ್ದು,

ಕಿನ್ನರಯುಗ್ಮಮೆತ್ತ ವನಮೆತ್ತ ಸರೋರುಹಷಂಡಮೆತ್ತ ಗೀ
ತಂ, ನಯದಿಂದೆ ಬಂದೆಸೆವುದೆತ್ತ ಭವಾಲಯಮೆತ್ತ ಭೋಂಕನೀ
ಕನ್ನೆಯ ಕಾಣ್ಕೆಯೆತ್ತ ಮನುಜಂಗೆನಗೆಂದು ನರೇಂದ್ರನಂದನಂ
ತನ್ನೊಳೆ ತಾನೆ ವಿಸ್ಮಯದೆ ಭಾವಿಸುತಿರ್ದನದೊಂದು ಜಾವಮಂ, ೨೩

ಅಂತು ಭಾವಿಸುತ್ತುಮಿರ್ದು

ಮನುಜನನೆನ್ನನೀಕ್ಷಿಸಿ ಭವಾದ್ರಿಯನೇಱದೆ, ನಾಡೆ, ನೋಡಿ ತೊ
ಟ್ಟನೆ ಕೊಳೆ ವ್ಯಾಯವಾಗದೆ ನಭಕ್ಕೊಗೆದಾಗಳೆ ಪೋಗದಿರ್ದೊಡೊ
ಯ್ಯನೆ ಬೆಸಗೊಳ್ವೆನಾರ್ಗೆ ಸತಿ ನೀಂ ಪೆಸರೇಂ ನಿನಗಿಂತು ತೋರ್ಪ ಜ
ವ್ವನದೊಳಗೀ ತಪಕ್ಕೆ ಗುಱಿಮಾಡಿಸಿದುಬ್ಬೆಗಮಾವುದೆಂಬುದಂ, ೨೪

ಎಂದು ಭಾವಿಸುತ್ತುಮಾ ರಮಣೀಯದೇವಾಯತನದ ನೂತ್ನ ಸ್ತಂಭಮಂ ನೆಮ್ಮಿ ನಿಂದಿರ್ದು, ತದಂಗನಾ ಗೀತಾವಸಾನಸಮಯಮಂ ಪಾರುತ್ತುಮಿರ್ಪುದುಂ,

ಮೃದುಮಧುರ ವಲ್ಲಕೀಗೇ
ಯದ ದನಿ ಪೊಣಲ್ಕೆ ಗೀತದವಸಾನದೊಳು
ನ್ಮದಮಧುಕರಸ್ವನಂ ಪೊ
ಣ್ಮದ ಕುಮುದಿನಿಯಂತೆ ಕಾಂತೆ ಕಣ್ಗೆಸೆದಿರ್ದಳ್ ೨೫

ಅನಂತರಮಾಕೆ ತ್ರೈಲೋಕ್ಯರಕ್ಷಾಮಣಿಯಂ ಪ್ರದಕ್ಷಿಣೀಕರಣಪೂರ್ವಕಂ ನಮಸ್ಕರಿಸಿ,

ಒಸೆದಾಶ್ವಾಸಿಸುವಂತೆ ಪುಣ್ಯತತಿಯಿಂದಂ ಮುಟ್ಟುವಂತಚ್ಛತೀ
ರ್ಥಸಮೂಹಾಂಬುಗಳಿಂದವೆಂದಭಿಷವಂ ಮಾಳ್ಪಂತೆ ಪೂತತ್ವಮಂ
ಪಸರಿಪ್ಪಂತೆ ಬರಂಗಳಂ ಪದಪಿನಿಂದೀವಂತೆ ದೃಕ್ತೃಪ್ತಿ ರಾ
ಜಿಸೆ ದಿವ್ಯಾಂಗನೆ ನೋಡಿದಳ್ ತಗುಳ್ದು ಚಂದ್ರಾಪೀಡಭೂಪಾಲನಂ ೨೬

ಸ್ವಾಗತಮೇ ನಿನಗೆ ಮಹಾ
ಭಾಗನೆ ಮದ್ಭೂಮಿಗೆಂತು ಬಂದಯ್ ನೀನ
ಭ್ಯಾಗತನಾಗಲ್ವೇಳ್ಕೆಂ
ದಾಗಳ್ ನೃಪಸುತನನೆಟ್ಕಱಿಂ ಸತಿ ನುಡಿದಳ್ ೨೭

ಅಂತು ನುಡಿದನಿತಱೊಳೆ ಕೃತಾರ್ಥನಾದೆನೆಂದು ಬಗೆಯುತ್ತುಂ ದೇವಿಯರ್ ಬೆಸಸಿದಂತೆ ಗೆಯ್ವೆನೆಂದಾ ಕಾಂತೆಯ ಬೆಂಬಟಿವಿಡಿದು ನಡೆವ ಶಿಷ್ಯನಂತೆ ಪೋಗೆವೋಗೆ ಕಿಱಿದಂತರದೊಳ್

ಕಾಲದ ಮವುರ್ಗ ಪರ್ವಿದವೊಲಿರ್ದ ತಮಾಲವನಂಗಳಿಂದೆ ಭೃಂ
ಗಾಳಿಯ ಗಾವರಂ ಪುದಿದ ಪುಷ್ಪಲತಾಗೃಹದಿಂದೆ ಚಂದ್ರಿಕಾ
ಜಾಲದವೋಲ್ ಕೆಲಂಬಿಡಿದು ಭೋರ್ಗರೆಯಲ್ ಸುರಿತರ್ಪ ನಿರ್ಝರಾ
ಸ್ಫಾಲನ ಶೀಕರಪ್ರಸರದಿಂದೆಸೆದತ್ತು ಬೃಹದ್ಗುಹಾಂಗಣಂ ೨೮

ಅಂತಾ ಗುಹಾಂಗಣದ ಮುಂದೆ ನಿಂದು ನೋೞ್ಪಲ್ಲಿ

ಅದು ಸುರಭೂಜವಲ್ಕವಸನದ್ವಯಮಂತದು ದಂಡಮಲ್ಲಿ ನೇ
ಱಿದುದದು ಜೋಗವಟ್ಟಿಗೆ ಕಮಂಡಲವರ್ತಿತದು ಭಸ್ಮ ಶಯ್ಯೆಯಂ
ತದು ಶಶಿಮಂಡಲಾಕೃತಿವೊಲಿರ್ದುದು ಶಂಖದ ಪಾತ್ರೆಯೆಂದು ನೋ
ಡಿದನತಿವಿಸ್ಮಯಂಬೆರಸು ತದ್ಗುಹೆಯಂ ನೃಪರೂಪಚಂದ್ರಮಂ ೨೯

ಅನಂತರಮಾ ದಿವ್ಯತಪಸ್ವಿನಿ ಮಾಳ್ಪತಿಥಿಪೂಜೆಯಂ ವಿನಯಪುರಸ್ಸರಂ ಕಯ್ಕೊಂಡು ದರ್ಭಾಸನದೊಳ್ ಕುಳ್ಳಿರಲಾ ನಿತಂಬಿನಿ.

ರಕ್ಷಾಂಕಿತ ತನು ಮೆಲ್ಲನೆ
ವೃಕ್ಷಂಗಳ ಕೆಳಗೆ ಪೋಗಿ ನಿಂದಿರ್ದಾಗಳ್
ಭಿಕ್ಷಾಂ ದೇಹಿಯೆನಲ್ಕಂ
ತಾ ಕ್ಷಣದೊಳ್ ತೀವಿದತ್ತು ಭಿಕ್ಷಾಪಾತ್ರಂ, ೪೦

ಅಂತು ತೀವಿದ ಭಿಕ್ಷಾಪಾತ್ರದ ಪಣ್ಫಲಂಗಳಂ ತಂದು ಕುಡೆ, ನಿರ್ಝರ ಜಲಂಗಳೊಳ್ ಮಿಂದ್ದು ಅಮೃತರಸಸ್ವಾದುಗಳಪ್ಪ ತತ್ಫಲಂಗಳಂ ಮೆಲ್ದು ನೀರಂ ಕುಡಿದೊಂದುದೆಸೆ ತೊಲಗಿರ್ಪುದುಮಾ ಕನ್ನಿಕೆಯುಂ ಕೃತ ಫಲಜಲಾಹಾರೆಯಾಗಿ, ಬಂದೊಂದು ಶಿಲಾತಳದೊಳ್ ಕುಳ್ಳಿರ್ದು ನೋಡುತ್ತುಮಿರ್ಪುದುಮಾ ಗಾಂಭೀರ್ಯರತ್ನಾಕರನುಮನತಿದೂರಮಪ್ಪ ಶಿಲಾತಲದೊಳ್ ವಿಶ್ರಮಿಸಿ ತನ್ನ ಬಂದ ವೃತ್ತಾಂತಮನೆಲ್ಲಮಂ ನೆಱೆಯೆ ಪೇಳ್ದು ಮತ್ತಮಾ ದಿವ್ಯಕಾಂತೆಯನಿಂತೆಂದಂ

ಪಿರಿದೆನಿಸಿರ್ದ ನಿಮ್ಮಯ ಪ್ರಸಾದಮನಾಂ ಪಡೆದೊಂದು ಗರ್ವದಿಂ,
ಪರಿಚಿತನಂತೆ ಬಿನ್ನವಿಸಲುಂ ಬಗೆದಂದಪೆನೆಂತುಟಲ್ತೆ, ಬಿ
ತ್ತರಿಪೊಡೆ ಧೀರರಪ್ಪ ಮನುಜರ್ ಪ್ರಭುಗಳ್ ದಯೆಯಿಂದೆ ತಮ್ಮನಾ
ದರಿಸಿದೊಡಾಗಳಂತೆ ಗಳಪಲ್ ಬಗೆದರ್ಪುದಿದಾವ ವಿಸ್ಮಯಂ, ೪೧

ಆದೊಡಂ

ಮನುಜಂಗೆ ಕೌತುಕಾವಹ
ಮೆನಿತೊಂದಾಶ್ಚರ್ಯಮದಱಿನಿನ್ ಬೆಸಗೊಳ
ಲ್ಕನುಗೆಯ್ಯುತ್ತಿರ್ದಪುದೀ
ಮನಮನನುಗ್ರಹಿಸಿ ದೇವಿ ಪೇಳಲ್ವೇಳ್ಕುಂ ೪೨

ಸುರಮುನಿಸಿದ್ಧಖೇಚರರೊಳಾವ ಕುಲಂ ನಿಜಜನ್ಮದಿಂದಲಂ
ಕರಿಸಿತೊ, ಪಂಚಭೂತಮಯಮಾಗಿಯುಮೀ ತನುವಿಂದುಕಾಂತಿಯಂ
ತಿರೆ, ಪೊಳೆಯುತ್ತುಮಿರ್ದಪುದಿದೇಂ ಪೊಸಜವ್ವನದೇಳ್ಗೆಯೊಳ್, ತಪ
ಶ್ಚರಣಮಿದೇಂ ಪೊದಳ್ದಿಡಿದ ಕಾನನದೊಳ್ ಬಿಡದೊರ್ಬಳಿರ್ಪುದೇಂ, ೪೩

ಎಂದು ಬೆಸಗೊಳ್ವುದಂ ಕಿಱಿದು ಬೇಗಂ ತನ್ನೊಳ್ ತಾನೆ ಭಾವಿಸಿ

ಪೊಳೆವೆಲರ್ಗಣ್ಗಳಿಂ ಮಿಳಿರ್ವ ಬೆಳ್ಪು ರಸಾತ್ಮಕವಾಗಿ ಗಂಡಮಂ
ಡಳತಳದಿಂದಮಂದಿಳಿಯುತಿರ್ದುದೆನಲ್ ನಯನಾಂಬು ಲೋಚನಂ
ಗಳನಿರದುಣ್ಮೆ ಶಬ್ದಮಣಿಮಿಲ್ಲದೆ ತೊಟ್ಟನೆ ಕಣ್ಮುಗುಳ್ದಳ
ಗ್ಗಳಿಪಟಲಿಂದೆ ಮಾನಿನಿ ಮನಕ್ಕತಿವಿಸ್ಮಯವಾಗೆ ಭೂಪನಾ ೪೪

ಅಂತಾ ಕಾಂತೆ ಶೋಕಾಕ್ರಾಂತೆಯಾಗಿ,

ರಸೆಯಂ ತಾಂ ತಾಂಕಿ ಕಲ್ಪಾಂತದ ಬಡಿಸಿಡಿಲೆಯ್ತಂದು ಪೊಯ್ಯಲ್ ನೆಲಂ ಕಂ
ಪಿಸುವಂತತ್ಯಂತ ಶೋಕಾಕುಲತೆಯಿನಟಿಟಿತಿರ್ದಪ್ಪಳೋರಂದದಿಂ ಮ
ಟ್ಟಿಸಲಿನ್ನಾರಾಪರೀ ಶೋಕವನೆನುತೆ ಭಯಂಗೊಂಡಿದೆತ್ತೆತ್ತಲೀಗಳ್
ಬೆಸಗೊಂಡೆಂ ಕೆಮ್ಮನೆಂದುಮ್ಮಳಿಸಿ ಪಿರಿದುಮಂದಾ ನೃಪಂ ವ್ಯಗ್ರನಾದಂ
೪೫

ಅಂತು, ನೃಪನತಿವ್ಯಗ್ರನಾಗಿ, ಮುಖಪ್ರಕ್ಷಾಳನಾರ್ಥಂ, ಪೇರಡ
ವಿಯೊಳಂಜುಳಿಯಿಂ, ಜಲಮಂ, ತಂದು, ದೇವಿಯರವಧಾರಿಸುವುದೆಂದು
ಭೂಪನಿಳಿಂಪನುಪರೋಧಿಸುತ್ತುಮೆಱೆಯೆ

ಅಳವಿಲ್ಲದಟಿತ್ತಿರೆ ಕೆಂ
ಪೆಳಸಿದ ಬಾಷ್ಪಾಂಬುಪೂರ್ಣಲೋಚನಮಂ ತ
ಜ್ಜಳದಿಂದೆ ಕರ್ಚಿ ವಲ್ಲಾಂ
ಚಲದಿಂ ನಿಜವದನಬಿಂಬಮಂ ಸತಿ ತೊಡೆದಳ್

ಅಂತಾ ಕಾಂತೆ, ಶೋಕಾಕ್ರಾಂತೆಯಾಗಿರ್ಪುದಂ, ಕಂಡಿಂತಪ್ಪವರು
ಮ್ಮಟುವರಿದಮದ್ಭುತಮೆಂದು ಮನದೊಳ್ ಭಾವಿಸುತ್ತುಮಿರೆ,

ಉುರಗಮುಖೋಗ್ರದಂಷ್ಟ್ರ ಸಹಜಾತೆಯನೂರ್ಜಿತಕಾಲಪಾಶ ನಿ
ಷ್ಠುರತರರೂಪೆಯಂ ಸಹಜಶಾಕಿನಿಯಂ ವಿಷಕನ್ಯಕಾ ಸಹೋ
ದರಿಯನಪಾರಘೋರ ದುರಿತಾರ್ಣವ ಜಾತೆಯನಾತ್ಮವಲ್ಲಭಾಂ
ತರಿತೆಯನೆನ್ನನಣ್ಣ ಬೆಸಗೊಳ್ವುದೆ ಪೇಳ್ವೆನೆ ತತ್ಪ್ರಪಂಚಮಂ

ಗತಭಾಗ್ಯೆಯೆನಿಪ ಪಾಪಾ
ನ್ವಿತೆಯಂ ಪತಿದುಃಖಭಾಜನೆಯ ವೃತ್ತಾಂತ
ಸ್ಥಿತಿಯನದೇಂ ಕ್ರೇಳ್ದಪೆ ನೃಪ
ಸುತ ಕೌತುಕಮೆಂಬೆಯ ಪೊಡುಸಿರ್ದಪೆನೀಗಳ್ ೪೬

೪. ಮಹಾಶ್ವೇತೆಯ ವೃತ್ತಾಂತ

ಅದೆಂತೆಂದೊಡೆ—ತ್ರಿದಿವದೊಳಚ್ಚರಸ್ಸಿಯರಿರ್ಪುದು, ನಿಮಗೆ ವಿದಿತಮವರೊಳ್ ಸೋಮಮಯೂಖಸಂಭವೆಯರಪ್ಪಚ್ಚರಸ್ಸಿಯರೊಳಗಮೃತಾಂಶುನಿಭಾಸ್ಯೆ, ಗೌರಿಯೆಂಬಳ್ ಪುಟ್ಟಿದಳ್ ಮತ್ತಂ ದಕ್ಷಪ್ರಜಾಪತಿಯ ಕನ್ನೆಯರಿಂದುದಯಿಸಿದ ಗಂಧರ್ವಕುಲದೊಳ್, ಪುರಂದರ, ಪರಮಪ್ರಿಯಮಿತ್ರಂ, ಹಂಸನೆಂಬನೊರ್ವಂ ನೆಗಟ್ದಂ.

ಇಂಗಡಲಿಂಗಮರನದೀ
ಸಂಗಂ ಸಂಘಟಿಪ ತೆಱದೆ, ಗಂಧರ್ವಕುಲೋ
ತ್ತುಂಗನೆನಲ್, ನೆಗಟ್ದಾ ಹಂ
ಸಂಗಾದುದು ಗೌರಿಯೊಳ್, ವಿವಾಹೋತ್ಸಾಹಂ, ೧

ಸಮವಂಶದೆ, ಸಮರೂಪದೆ,
ಸಮವಿಭವದೆ, ಸಮವಯೋವಿಲಾಸದೆ, ಸಮಸ
ತ್ತ್ವಮನದೆ, ಸಮಾನುರಾಗದೆ,
ಸಮಸಂದತ್ತವರ್ಗೆ, ಸಮವಯೋಯೋಗಸುಖಂ,

ನಿನಗೇನಂ ಪೇಟ್ದಪೆನಾಂ, ಮಹಾತ್ಮರೆನಿಸಿದರ್ಾ ತಂದೆಗಂ ತಾಯ್ಗಮೊರ್ವನೆ ನಿರ್ಭಾಗ್ಯನಿವಾಸೆಯೆಂ, ನಿಖಿಲಪಾಪಾಕಾರೆಯೆಂ, ದುಃಖಭಾಜನೆಯೆಂ, ಪುಟ್ಟಿದೆನೆನ್ನನೀಕ್ಷಿಸಲೊಡಂ, ತಾತಂ ಮಹಾಶ್ವೇತೆಯೆಂದನುರಾಗಂಬೆರಸಿಟ್ಟನೆನ್ನ ಪೆಸರಂ ಗಂಧರ್ವಚಕ್ರೇಶ್ವರಂ,

ಅಂತು ನಿಜಜನನೀಜನಕರ್ ಪಲಕಾಲಮನಪತ್ಯರಪ್ಪುದಱಿಂ, ಪುತ್ರನಿಂದಗ್ಗಳಮಪ್ಪ ಪರಮಪ್ರೀತಿಯಿಂ, ನಡಪುತ್ತುಮಿರೆ ಕೆಲವು ದಿವಸದೊಳ, ವಿದಿತ ಸ್ನೇಹಶೋಕಾಯಾಸಮಪ್ಪ ಶೈಶವಂ ಪತ್ತುವಿಡುವುದುಂ,

ಎಸೆವ ವಸಂತಮಾಸದೆ, ವಸಂತಮನಾಂತ ಕುಜಾತಪಲ್ಲವ
ಪ್ರಸರದಿನಾ ವಸಂತಸಮಯಂ ಕುಸುಮಾವಳಿಯಿಂದೆ ಪಲ್ಲವಂ
ಮಿಸುಪೆಳವಾಲೆಯಿಂ ಕುಸುಮಮಂಜರಿ ರಂಜಿಸುವಂತಿರಲ್ ವಿಜೃಂ
ಭಿಸಿದುದು ಯೌವನೋದಯ ವಿಲಾಸಮನುಕ್ರಮದಿಂ ಮದಂಗದೊಳ್, ೪

ಆಗಳೊರ್ಮೆ ವಸಂತದೊಳ್ಪೊಳಲರ್ದು ನವನಳಿನ ಕುಮುದ ಕುವಲಯ ಕಲ್ಹಾರಂಗಳಿಂ ಕಣ್ಗೊಳಿಪಚ್ಛೋದಸರಸಿಗೆ ಜನನಿವೆರಸು ಮಜ್ಜನಕ್ಕೆಂದು ನಡೆತಂದು ನೋಟ್ಪಲ್ಲಿ ಮುಂದೆ, ಮುನಿಕುಮಾರನೊರ್ವನೆಯ್ತರುತಿರೆ,

ಕರತಳಮೊಂದಱೊಳ್ ಮಣಿಕಮಂಡಲು ನಾಳಸಮೇತಮಪ್ಪ ಕೇ
ಸರಫಲದಂತಿರಿರ್ದುದು ಮನೋಜವಿನಾಶದಿನಟ್ಟಿ ತನ್ಮನೋ
ಹರಿಯ ಪೊದಳ್ದ ಕಣ್ಬನಿಗಳಂತಮಲಸ್ಫಟಿಕಾಕ್ಷಮಾಲೆ ಸುಂ
ದರತರಮಾದುದೊಂದು ಕರಪಲ್ಲವದೊಳ್ ಮುನಿಪಾಗ್ರಗಣ್ಯನಾ ೫

ತನಗನುರೂಪಮೆಂಬಿನೆಗಮೊರ್ವ ಕುಮಾರತಪಸ್ವಿ ದೇವತಾ
ರ್ಚನೆಗೆ ವನಕ್ಕೆ ಬಂದು ಪೊಸವೂಗಳನಟ್ಟಿಯೊಳಾಯ್ದು ಕೊಯ್ದು ಬೆ
ನ್ನನೆ ಬರಲೀ ವನಾಂತರಸರೋವರದಲ್ಲಿಗೆ ಮಿಾಯಲೆಂದು ಮೆ
ಲ್ಲನೆ ಬರುತಿರ್ದ ತನ್ಮುನಿಕುಮಾರನನಾಂ ಬಿಡೆ ನೋಡಿದೆಂ ನೃಪಾ

ಸಿರಿ ನೆಲವಿಂದಮಿರ್ಪ ನೆಲೆ ಕಣ್ಗಳ ಪರ್ವಮೆನಿಪ್ಪ ಪಂಕಜೋ
ತ್ಕರಮುಮನಿಂದುಮಂಡಲಮುಮಂ ಮೊದಲೊಳ್ ಸಮೆದಬ್ಜಜಂ ಮನೋ
ಹರಮೆನೆ ಮಾಡಿದೀ ಮೊಗದ ಪೋಲ್ವೆಗೆ ಮುನ್ ನೆಗಟಿಲ್ ತಗುಳ್ಚಿ ಬಿ
ತ್ತರಿಸಿದನಲ್ಲದಿಂತು ಸಮವಸ್ತುಗಳಂ ಪಡೆವಂತು ಗಾಂಪನೇ

ಎಂದು ಭಾವಿಸಿ

ನವಯೌವನದೊಳ್ ಗುಣದೋ
ಷವಿಚಾರಮನಿಂತು ಮಾಡಲೆಡೆಯದ ಭಾವೋ
ದ್ಭವನಿಂ ಪರವಶೆಯಾದೆಂ
ನವಕುಸುಮಾಸವದೆ ಸೊರ್ಕಿದಳಿನಿಯ ತೆಱದಿಂ ೮

ನಿಯತೇಂದ್ರಿಯನೊಳ್ ತೇಜೋ
ಮಯನೊಳ್ ರೂಪೈಕಪಕ್ಷಪಾತದೆ ನೆಱೆ ನೀ
ತಿಯನುೞಿದು ಮುನಿಪನೊಳ್ ನಿ
ರ್ಭಯನಂಗಜನೆನ್ನನಿಂತಿರಲ್ ಸೋಲಿಕುಮೇ ೯

ಪಲಬರ್ ಕಾಂತೆಯರೊಲ್ದು ಪೋದರೊಳರೆಂತುಂ ಕಾಂತರೊಳ್ ಬೇಟವ
ಗ್ಗಲಿಸಲ್ ಕಾಣದೆ ಲಜ್ಜೆಗೆಟ್ಟರೊಳರಿಂತೀ ಲೋಕದೊಳ್ ರೂಪುಗಾ
ಣಲೊಡಂ ತೊಟ್ಟನೆ ಲಜ್ಜೆಗೆಟ್ಟುಱುವುಗೆಟ್ಟೆನ್ನಂತೆ ಕಣ್ಗೆಟ್ಟು ಪೇ
ಚೊಲ್ಪಿಂದಿಂತೆರ್ದೆಗೆಟ್ಟರಾರೆನುತುಮತ್ಯೌತ್ಸುಕ್ಯಮಂ ತಾಳ್ದಿದೆಂ, ೧೦

ಅಂತಾಶ್ಚರ್ಯಮಂ ತಳೆದು ನನ್ನ ನಾನೆ ಸಂತೈಸಿ

ಎನ್ನೆವರಂ ಸಚೇತನೆಯೆನೆನ್ನೆವರಂ ಲಘುವಾಗದಿರ್ಪೆನೋ,
ಅನ್ನೆಗಮೀಗಳೀ ಯೆಡೆಯಿನಾಂ ತೊಲಗಿರ್ಪುದು ಕಜ್ಜಮಲ್ಲದಂ
ದೆನ್ನಯ ಮನ್ಮಥೋಚಿತವಿಕಾರಮನೀಕ್ಷಿಸಿ ಸೋಲ್ತಳಕ್ಕಟಾ,
ಎನ್ನದೆ ಶಾಪಮಂ ಕುಡುವನಂತುಟೆ ಕೋಪಿಗಳಲ್ತೆ ತಾಪಸರ್, ೧೧

ಎಂದು, ಪೋಗಲುದ್ಯೋಗಂಗೆಯ್ದು ನಿಖಿಳಜನಪೂಜಾರ್ಹರನವಜ್ಞೆ
ಗೆಯ್ಯಲಾಗದೆಂದು,

ತೊಳಗುವ ಚಿನ್ನಪೂಗಳಲಕಾವಳಿಯೊಳ್ ಮಿಱುಗಲ್ ಕಪೋಲಮಂ
ಡಳತಲದೊಳ್ ತೆಱಂಬೊಳೆಯೆ ಕೋಮಲಪಲ್ಲವ ಕರ್ಣಪೂರಮಂ
ಜುಳಮಣಿಕುಂಡಲಂ ಪೆಗಲೊಳಾಡೆ ಮರಳೆ ವೆಯಿಕ್ಕದಾಂ ಮನಂ
ಗೊಳಿಪ ಮುನೀಂದ್ರನಾನನಮನೀಕ್ಷಿಸುತುಂ ಪೊಡವಟ್ಟೆನಟ್ಟಿಱಿಂ, ೧೨

ತದನಂತರಂ

ಮದನಂ ದುರ್ಜಯನಿಂದ್ರಿಯಂಗಳನಿವಾರ್ಯಂಗಳ್ ವಸಂತಂ ಮದ
ಪ್ರದನಾಸ್ಥಾನವತೀವರಮ್ಯಮೆನಗಂ ದುಃಖಂಬರಲ್ವೇಟ್ಕುಮ,
ಪ್ಪುದಱಿಂ ಭಾವಿಸಿ ಮದ್ವಿಕಾರಮನೆ ನೋಡುತ್ತಿರ್ಪುದುಂ ಗಾಳಿಗೊ
ಡ್ಡಿದ ದೀಪಾಂಕುರದಂತೆ ತನ್ನ ನಿಯಮಂ ಕಾಮಂ ಚಲಂ ಮಾಡಿದಂ ೧೩

ಅಂತು ಮಾಡೆ

ಪೆಸರೇನಾರ್ಗೀತನೀ ಜವ್ವನಿಗ ತವಸಿ ತೊಟ್ಟಿರ್ಪ ಕರ್ಣಾವತಂಸಂ,
ಪೊಸತೀ ಲೋಕಕ್ಕಿದಾವಂಘ್ರಿಪದ ಪೊಳೆವಪೂಗೊಂಚಲಿಂದಾದುದೋ ನೀಂ,
ಬೆಸಸಲ್ವೇಟ್ಕಿಂತಿದಂ, ಕೌತುಕಮನೆನಗೆನುತ್ತುಂ, ನಮಸ್ಕಾರಪೂರ್ವಂ,
ಬೆಸಗೊಂಡೆಂ ತನ್ಮುನೀಂದ್ರಾನುಚರಮುನಿಯನಾನಂದತಿಪ್ರೀತಿಯಿಂದಂ, [೧೪

ಅಂತು ಬೆಸಗೊಳೆ

ಬೆಸಗೊಳ್ವುದಱಿಂದಿದನು,
ದ್ದಸಮಾಪ್ಪುದು, ತರುಣಿ, ನಿನಗೆ, ಕೌತುಕಮೆನೆ, ಕೇ
ಳ್ಸಿರ್ದಪೆನೆಂದಾ ಮುನಿಪಂ,
ನಸುನಗುತುಂ, ಪೇೞಲಾಗಳುದ್ಯತನಾದಂ, ೧೫

ಅದೆಂತೆನೆ. ಶ್ವೇತಕೇತು, ಮಹಾಮುನಿಗಂ, ಲಕ್ಷ್ಮಿಗಂ, ಕುಮಾರಂ, ಪುಂಡರೀಕನೆಂಬೊನೀತಂಗೆ.ಶೈಶವಂ. ಪತ್ತುವಿಡಲೊಡಮಖಿಳವಿದ್ಯಾಕಲಾಪದೊಳ್, ಪರಿಣತನಂ ಮಾಡಿ, ಯತಿತ್ವಮಂ, ಕಯ್ಕೊಳಿಸೆ, ತದನುಷ್ಠಾನಪರಾಯಣನಾದ ,ಮಹಾನುಭಾವನೀತಂಗೀ ವ್ರತವಿರುದ್ಧಮಪ್ಪ ಕುಸುಮಮಂಜರಿಯೆಂತು ಬಂದುದೆಂಬೆಯಪ್ಪೊಡೆ,

ಇಂದು ಚತುರ್ದಶಿಯಪ್ಪುದ
ಱಿಂದಂ,ಕೈಲಾಸವಾಸಿಯಂ, ಕಾಣಲ್ಕಾ,
ನಂದದೆ, ದಿವದಿಂದಿರ್ಬರು
ಮೊಂದಾಗಿ, ಬರುತ್ತುಮಿರ್ಪುದುಂ, ತತ್ಕ್ಷಣದೊಳ್, ೧೬

ವನದೇವತೆಯೊರ್ವಳ್, ಬಂದು, ಪೊಡವಟ್ಟು, ಭುವನತ್ರಯಾಭಿರಾಮಮೆಪ್ಪ ನಿನ್ನ ಸೌಕುಮಾರ್ಯಕ್ಕೆ, ತಕ್ಕಲಂಕಾರಮಿದಾ, ದಿವ್ಯಕುಸುಮಮಂಜರಿಯನವತಂಸಂ ಮಾಡಿ,ಪಾರಿಜಾತಜನ್ಮಮಂ,ಸಫಲಂಮಾೞ್ಪುದೆಂದು. ಬಿನ್ನವಿಸೆ. ನಿಜರೂಪಸ್ತುತಿಗೆ, ಲಜ್ಜಿಸಿ, ಕೇಳದಂತೆ, ಪೋಗೆ, ಮತ್ತಂ. ಬೆನ್ನನೆ.ಪತ್ತಿ, ಬರುತಿರ್ಪುದುಮಾಂ,ಕಂಡು, ಕಾರುಣ್ಯದಿಂದೀ ಕಾಂತೆಗೆ ಸಂತೋಷಂಮಾಡಿ, ಮೆನೆಲದೇಕೆ ಬೇಡವೇಡೆನೆಯುಂ ಕಿವಿಯೊಳ್ ತೊಡರ್ಚೆ ಪೋದಳೀ ಕುಸುಮಮಂಜರಿಯನೆಂದು, ಸಹಚರಮುನಿ ಪೇೞೆ ಪುಂಡರೀಕಂ, ದರಹಸಿತಾಧರ, ಕಪೋಲತಲನಾಗಿ,

ಎಳಸುತ್ತಿರ್ದಪೆ ಪುಷ್ಪಮಂಜರಿಗೆ ಕೊಳ್ಳೀ ಸುತ್ತಿದೇಕೆಂದು, ಸಂ
ಚಳಿಸುತ್ತುಂ, ನಿಜಕರ್ಣದಿಂ ತೆಗೆದು, ಸೋಲ್ತೆಂ ಕೂಡು, ನೀನೆನ್ನೊಳೆಂ
ದಳಿಮಾಲಾರವದಿಂದೆ ಪೇೞ್ವ, ತೆಱದಿಂ, ಮತ್ಕರ್ಣದೊಳ್, ತಾರಕೋ
ಜ್ಜ್ವಲಮಂ ರಂಜಿಪ ಪುಷ್ಪಮಂಜರಿಯನತ್ಯೌತ್ಸುಕ್ಯದಿಂದಿಕ್ಕಿದಂ, ೧೭

ಇಂ ಪೇೞ್ವುದೇನನೆನ್ನ ಕ
ದಂಪಿನ ನೆಸುಸೋಂಕಿನೊಂದು ಸುಖದಿಂದಾದಂ
ಕಂಪಿಸುತಿರೆ ಕರತಳದಿಂ
ದಂ ಪೋದತ್ತಕ್ಷಮಾಲೆ ನಾಣ್ಬರಸಾಗಳ್ ೧೮

ಅಂತು ಪೋದೊಡಮಱಿಯದಿರಲಾನಾ ಅಕ್ಷಾವಳಿಯಂ ನೆಲಕೆ ಬೀೞ್ವಿನಂ ಪಿಡಿದು ತೊಳಗುವ ಹಾರಮಂ ತಳೆವಂತೆ ಕೊರಲೊಳ್ ತಳೆದು ಸುಖಮಂ ತಳೆಯಲಿಂತಾ ವ್ಯತಿಕರದೊಳೆನ್ನಂ ಛತ್ರಧಾರಿಣಿ ನೋಡಿ

ತಡೆದಿರಲಾಗದಿಂತು ಮೊಗಮಜ್ಜನಮಂ ನೆಱೆ ಮಾಡಿ ದೇವಿಯರ್
ನಡೆಗೊಳಲಿರ್ದಪರ್ ಮನೆಗೆ ಮಜ್ಜನಕೀಗಳೆ ರಾಜಪುತ್ರಿ ನೀಂ
ನಡೆವುದೆನುತ್ತು ಮಿಚ್ಚೆಯಣಮಿಲ್ಲದೊಡಂ ತೆಗೆದಳ್ ಕರಂ ಮನಂ
ಕಿಡೆ ಪೊಸತಪ್ಪದೊಂದು ಪಿಡಿಗಂಕುಶಮಿಟ್ಟು ಮರಳ್ಚುವಂದದಿಂ ೧೯

ಅಂತವಳೆನ್ನನೆಂತಾನುಂ ತೆಗೆಯಲೊಡನೆಯೆ ಕುಮಾರನಾತನ ಧೈರ್ಯಸ್ಖಲನೆಯಂ ನೋಡಿ

ಎನಗನುರೂಪಮಲ್ತಿದು ನಿಕೃಷ್ಟಜನೋಚಿತಮಾರ್ಗಮೆಂಬಿದಂ
ಮನದೊಳಣಂ ವಿಚಾರಿಸದೆ ಸ್ವೈರಣೆಗೆಟ್ಟಱಿವೆತ್ತವೋದುದೆಂ
ಬಿನಮೆರ್ದೆಗೆಟ್ಟು ಮೆಯ್ಯಱಿಯದಿರ್ದಿರಲಕ್ಕುಮೆ ಪುಂಡರೀಕ ಭೋಂ
ಕನೆ ನಿನಗೀಗಳಿಂದ್ರಿಯದ ಡಾವರವೆತ್ತಣಿನೆತ್ತ ಬಂದುದೊ ೨೦

ಎಲ್ಲಿತ್ತೊ ಧೈರ್ಯಮುಪಶಮ
ಮೆಲ್ಲಿತ್ತೊ ಜಿತೇಂದ್ರಿಯತ್ವಗುಣಮೆಲ್ಲಿತ್ತೋ
ಎಲ್ಲಿತ್ತೊ ನಿನ್ನ ಶೌರ್ಯಮ
ದೆಲ್ಲಿತ್ತುಪಭೋಗರಾಗವಿಷಯದ್ವೇಷಂ ೨೧

ಅತಿಶಯದಿಂ ವಿಷಯಾಸ
ಕ್ತತೆ ನಿನ್ನನ್ನಱಿವುಮನಿಂತು ಮಾಡಿತ್ತೆ ನಲವ
ಮತಿ ನಿಷ್ಫಲಮಾಗಮಸಂ
ತತಿ ನಿರ್ಗುಣಮಱಿವು ನಿಷ್ಪ್ರಯೋಜನಮಲ್ತೇ ೨೨

ಎಂತು ಗಡ ನಿನ್ನ ಕಯ್ಯಿಂ
ದಂ ತೊಟ್ಟನ್ನೆ ಬಿಟ್ಟ ಜಪದ ಮಣಿಯುಮನೆಲೆ ಮುಂ
ದಂತುಮಯ್ಯುಱಿಯೆಯೆನಲಿ
ನ್ನೆಂತಿರೆ ನಿನ್ನಂತೆ ವಿಗತಚಿತ್ತರುಮೊಳರೇ ೨೩

ಅದಱಿನಿನ್ನಾದೊಡಂ ನಿನ್ನ ಮನಮಂ ನೀಂ ನಿಲಿಸಿಕೊಳ್ಳೆಂದು ನುಡಿಯೆ ಲಜ್ಜಿತನಾದಂತೆ ಗೆಯ್ದು

ಬೆಸೆದು ಕಪಿಂಜಲ ನೀಂ ಭಾ
ವಿಸದಿರ್ ಬೇಱೊಂದು ತೆಱನನವಳೆನ್ನಂ ವಂ
ಚಿಸಿದಪರಾಧಮನಾಂ ಸೈ
ರಿಸುವೆನೆ ನೋಡೆನುತುಮೆಟ್ಟಿ ಪುಸಿಮುಳಿಸಿಂದಂ ೨೪

ಕುಡು ಚಪಳೆ ಜಪದ ಮಣಿಯಂ
ಕುಡದಿನ್ನೊಂದಡಿಯನಪ್ಪೊಡಂ ಪೋಗದಿರೆಂ
ದೊಡೆ ಕೇಳ್ದು ಜಪದ ಮಣಿಗೆ
ತೊಡನೆಯೆ ಹಾರಮನೆ ತೆಗೆದೆನ್ನೆನ್ನಯ ಕೊರಲಿಂ ೨೫

ಅಂತು ತೆಗೆದು ಕುಡುವುದುಮಾತನುಂ ಮನ್ಮುಖಾಸಕ್ತ ದೃಷ್ಟಿಯಿಂ ಮೆಯ್ಯಱಿಯದಕ್ಷಾವಳಿಗೆತ್ತು ಕಳೆದುಕೊಳ್ವುದುಮಾನಾಗಳಲ್ಲಿಂ ತಳರ್ದು

ಕಳವಳಿಸಿ ಬೆಮರ್ತಾಗಳ್
ಕೊಳದೊಳ್ ಮಿಾಯಲ್ಕತಿಪ್ರಯತ್ನದಿನುಯ್ದರ್
ಕೆಳದಿಯರೆಂತಾನುಂ ತೆಗೆ
ದಳವಿಲ್ಲದೆ ಬಂದ ನದಿಯನಿದಿರೇಱುವವೊಲ್ ೨೬

ಅಂತುಮಯ್ಯಲ್ ನಿಜಜನನಿಯೊಡನೆರೆತಾನುಮರಮನೆಗೆ ಬಂದು ಮದೀಯ ಮಂದಿರಮಂ ಪೊಕ್ಕು ತದ್ವಿಯೋಗದೊಳ್ ಮೆಯ್ಯಱಿಯದೆ

ಮನೆಗೇಂ ಬಂದೆನೋ ಬಾರೆನ್ನೋ ಸಖಿಯರೊಳ್ ಕೂಡಿರ್ದೆನೋ ಕೂಡದಿ
ರ್ದೆನೊ ಮೇಣ್ ನಿದ್ರೆಯೊಳಿರ್ದೆನೋ ಪಿರಿದುವೆಚ್ಚತ್ತಿರ್ದೆನೋ ಮಾನಮಿ
ರ್ದೆನೊ ಮಾತಾಡುತುಮಿರ್ದೆನೋ ವ್ಯಸನದೊಳ್ ಸಂದಿರ್ದೆನೋ ರಾಗಮಿ
ರ್ದೆನೊ ಪೇಚಾಂ ನಗುತಿರ್ದೆನೋ ಮನದೊಳಂದಾಸತ್ತುಟುತ್ತಿರ್ದೆನೋ ೨೭

ಇದು, ದಿವಮೊ, ರಾತ್ರಿಯೋ, ಮೇ
ಣಿದು. ದುಃಖಮೊ, ರುಜೆಯು, ಕಳವಳಮೊ, ಪೇಟ್ಟಿದು, ಪೊ
ಲ್ಲದೊ, ತಾನಿದೊಳ್ಳಿತೋ, ಮೇ
ಣಿದೆಂಬುದಂ, ಬಗೆಯಲಾರ್ತೆನಿಲ್ಲಾ, ಕ್ಷಣದೊಳ್

ಅನಂತರಂ, ಸಖೀಜನಮುಮನಶೇಷಪರಿಜನಮುಮಂ, ಬಾಗಿಲೊಳ್. ನಿಲಿಸಿ, ಕನ್ಯಾಂತಃಪುರಪ್ರಾಸಾದಮನೇಱಿ, ತದೀಯಮಣಿಗವಾಕ್ಷನಿಕ್ಷಿಪ್ತ ಮುಖಿಯೆನಾಗಿ,

ಅದು, ಪೀಯೂಷಪಯೋಧಿ, ಪೂರ್ಣಲಹರೀಸಂತಾನದಿಂ, ಚೆಲ್ವುವೆ
ತ್ತುದೊ, ಮಾಣಿಕ್ಯನಿಧಾನದಿಂ. ಸಮೆದು, ತೋಱುತ್ತಿರ್ದುದೋ, ಚಂದ್ರಬಿಂ
ಬದಿನೊಪ್ಪಂಬಡೆದತ್ತೊ, ಮೇಣ್, ಪಸದನಂಗೊಂಡಿರ್ದುದೋ, ಪೇಟೆನಲ್,
ಪದೆದಾಂ, ನೋಡಿದೆನಾತನಿರ್ದ, ದೆಸೆಯಂ, ನಟ್ಟಾಲಿಬೀಟ್ವನ್ನೆಗಂ,

ಆ ದೆಸೆಯಿಂ, ಬರ್ಪೆಲರುಮ
ನಾ, ದೆಸೆಯಿಂದೆಸೆವ, ಕುಸುಮ, ಪರಿಮಳಮುಮನಂ,
ತಾ ದೆಸೆಯಿನೆಸೆವ ವಿಹಗನಿ
ನಾದಮುಮಂ, ಪಾರ್ತೆಗೇಳೆಲ್ಲಾನೊಡರಿಸಿದೆಂ,

ಅನ್ನೆಗವೆನ್ನ, ತಾಂಬೂಲಕರಂಕವಾಹಿನಿ, ಮಕರಿಕೆಯೆಂಬಳ್, ಪೆಱಗೆ, ಕಿಱಿದು, ಬೇಗಂ, ಮಾಯಲೆಂದು, ನಿಂದನಂತರಂ, ಮತ್ಸಮೀಪಕ್ಕೆ, ಬಂದು, ಮೆಲ್ಲನಿಂತೆಂದಳ್

ತುಡಿಸಿದನಾವನೀ, ಕುಸುಮಮಂಜರಿಯಂ, ನಿನಗಾತನಕ್ಕ. ತ
ನ್ನೊಡವರುತಿರ್ದ, ತಾಪಸ್ಸಕುಮಾರನನಾಗಳೆ, ವಂಚಿಸಲ್ಕೆ, ತ
ಳ್ತಿಡಿದ, ಲತಾಪ್ರತಾನದೊಳಪೊಕ್ಕುಳಿದೊಯ್ಯನೆ, ಸಾರ್ದು ಮೆಲ್ಲೊಡಂ
ಬಡೆ, ಬೆಸಗೊಂಡನೆನ್ನನನುರಾಗದಿನೆಯ್ದೆ, ಭವತ್ಪ್ರಪಂಚಮಂ,

ಈ ಕನ್ನೆಯಾರ್ಗೆ ಪೆಸರೇ
ನೇಕಿಲ್ಲಿಗೆ, ಬಂದಳಾರ ಮಗಳೆಸೆವಳರ್ದ
ಬ್ಜಾ ಕರದಿನೆತ್ತಪೋದಪ
ಳೇಕೆಯೆನಲ್, ಮುನಿಕುಮಾರಕಂಗಿಂತೆಂದೆಂ, ೭೨

ಅದೆಂತೆಂದೊಡೆ, ದಿನಕರಮರೀಚಿಯಿಂದಾದಪ್ಸರಸೆಯೊಳುದಿಸಿದ ಗೌರಿಗಂ ಗಂಧರ್ವಲೋಕಾಧಿಪತಿಯಪ್ಪ ಹಂಸಂಗಂ, ಮಗಳಾಗಿ, ಮಹಾಶ್ವೇತೆಯೆಂಬ ಪೆಸರಿಂ ನೆಗಳ್ತೆವೆತ್ತಳದಲ್ಲದೆಯುಂ, ಇಂದು ಜನನಿಯೊಡನೀ ಸರೋವರಮಂ ಮಿಾಯಲೆಂದು ಬಂದಾತ್ಮನಿವಾಸಮಪ್ಪ ಹೇಮಕೂಟಾಚಲಕ್ಕೆ ಪೋಗುತಿರ್ದಪಳೆಂಬುದುಂ ಕಿಱಿದು ಬೇಗಮೇನಾನುಮಂ ತನ್ನೊಳೆ, ಬಗೆಯುತ್ತುಮಿರ್ದನಂತರಮೆನ್ನನಿಂತೆಂದಂ,

ಎಳವೆಯೊಳಂ ಗಾಂಭೀರ್ಯಮ
ನೊಳಕೊಂಡ ಭವತ್ಸ್ವರೂಪಮಂ ಕಂಡೀ ಕೋ
ಮಳೆಯಂ ಪ್ರಾರ್ಥಿಸಿದೊಡೆ ನಿ
ಷ್ಫಳಮಾಗದೆನುತ್ತೆ ಬಂದೆನಾನಿಂದುಮುಖೀ, ೩೩

ಎಂದು ನುಡಿಯಲಾನಾಗಳಾದರಂ ಬೆರಸು ಕಯ್ಗಳಂ ಮುಗಿದು

ಬೆಸಸುವುದರ್ಕೆಂತದಿರ್ಕೆಮ ಭವದ್ವಿಧರಪ್ರತಿಮಪ್ರಭಾವರೀ
ಕ್ಷಿಸುವರೆ ಮುನ್ನಮದ್ವಿಧರನೆನ್ನವೊಲಾದಿಮೆ ನೋಂತಳಾವೆಳೆ
ನ್ನನೆಸೆವುದು ನನ್ನಿಯಂ ನುಡಿಯೆ ಕಾರ್ಯವನೆನ್ನವಳೀಕೆಯೆಂದು ಭಾ
ವಿಸಿ ಕೃತಕೃತ್ಯೆಯಪ್ಪೆನೆನಲಾಗಳೆ ಸಂತಸದಿಂತಮೆಯ್ದಿದಂ, ೩೪

ಅಂತುಮಲ್ಲದೆಯುಂ

ಕೆಲದೊಳಳುರ್ತುರ್ಕಾಮುರ್ಗಿಲೆ ಪರ್ವಿದುದ್ದೆಂಬಿನೆಗಂ ಕಱಂಗಿ ಕ
ಟ್ಟಲಿಪ ತಮಾಲಪಾದಪದ ಪಲ್ಲವಮಂ ಪಿಟಿದೊಂದು ನಿರ್ಮಲೋ
ಪಲತಲದಲ್ಲಿ ತದ್ರಸದಿನಾಗಳೆ ನೋಡಿ ನಿಜೋತ್ತರೀಯ ವ
ಲ್ಕಲವಸನೈಕದೇಶಮನೆ ಸೀಳ್ದದಱೊಳ್ ಬರೆದಂ ತಳೋದರೀ, ೩೫

ಅನಂತರಂ

ಏಕಾಂತದೊಳೀ ಲೇಖಮ
ನಾ ಕನ್ನೆಗೆ ಪೋಗಿ ಕುಡುವುದೆಂದಟ್ಟಿದನೆಂ
ದಾಕೆ ನುಡಿಯುತ್ತುಮಂದ
ಪ್ರಾಕಟವದನಡೆಪದ್ಮೊಳಗಣಿಂ ತೆಗೆದಾಗಳ್, ೩೬

ಆ ಲೇಖನಮಂ ಕಳೆದುಕೊಂಡು ನಿಮಿರ್ಚಿ ನೋಱ್ಪನ್ನೆಗಮಲ್ಲಿ

"ದೂರಂ ಮುಕ್ತಾಲತಯಾ
ಬಿಸಸಿತಯಾ ವಿಪ್ರಲೋಭ್ಯಮಾನೋ ಮೇ
ಹಂಸ ಇವ ದರ್ಶಿತಾಶೋ
ಮಾನಸಜನ್ಮಾ ತ್ವಯಾ ನೀತಃ ೩೭

ಎನಗಾಸೆದೋಱಿ ಬಿಸಸಿತ
ಮೆಸೆಸುವ ನಿಜತಾರಹಾರಲತೆಯಿಂದಂ ಹಂ
ಸನ್ವೊಲ್ ಮಾನಸಸಂಭವ
ಮೆನಿಪ ಮದೀಯಾಭಿಮಾನಮಂ ಕಟ್ಟುಯ್ಯಾ ೩೮

ಎಂಬೀ ಆರ್ಯೆಯಂ ಭಾವಿಸಿ ನೋಡಿ,

ಮೊದಲೊಳ್ ಸೊರ್ಕಿದವಂಗೆ ಕಳ್ ವಿಷದಿನೞ್ಕಿರ್ದಂಗೆ ದುರ್ನಿದ್ರೆ ಕಾ
ಣದವಂಗುರ್ವಿದ ಮರ್ವು ದಿಗ್ಭ್ರಮೆ ಪದಂಗೆಟ್ಟಂಗೆ ಪೈಶಾಚಿಕಂ
ಗೆ ದುರಾವೇಶವಧಾರ್ಮಿಕಂಗೆ ಕುಮತಂ ತತ್ತ್ವಪ್ರಮೂಢಂಗೆ ಬೀ
ಸಿದ ಕಣ್ಮಾಯದ ಕುಂಚದಂತಿರೆನಗಾದತ್ತಾಗಳೇನೆಂಬುದೋ. ೩೯

ತದನಂತರಂ

ಅಮರ್ದಂ ಪೀರ್ದಳೊ ಮೇಣ್ ವರಂಬಡೆದಳೋ ಪುಣ್ಯೋದಯಂ ತನ್ನೊಳೇಂ
ಸಮಸಂದಿರ್ದುದೊ ನಾಕಲೋಕಸುಖಮಂ ಕಯ್ಕೊಂಡಳೋ ದೈವವೀ
ರಮಣೀರತ್ನದ ಮೇಲೆ ಮೇಣ್ ನೆಲಸಿತೋ ತ್ರೈಲೋಕ್ಯರಾಜ್ಯಾಭಿಷೇ
ಕಮೆ ಕೈಸಾರ್ದುದಿವಳ್ಗೆನುತ್ತೆ ಪದಪಿಂದಾ ನಾಕೆಯಂ ನೋಡಿದೆಂ ೪೦

ಅಂತು ನೋಡಿ ಪಿರಿದುಮಕ್ಕಱಿಂ ಕೆಲಕ್ಕೆ ಕರೆದು ಕುಳ್ಳಿರಿಸಿ,

ಪರೆದಿರ್ದ ಕುರುಳ್ಗಳನೋ
ಸರಿಸಿ ಕದಂಪುಗಳನೊಯ್ಯನೆಟಿವುತ್ತಂದಾ
ಳರಸೆಂಬ ಭೇದಮೆಪ್ಪು
ಬರ್ಪರೊಳಂ ಪಲ್ಲಟಿಸಿತೆಂಬಿನಂ ಮನ್ನಿಸಿದೆಂ ೪೧

ಅಂತಾದರಿಸುತ್ತುಮಿರ್ದು

ಎಂತೆಂತು ಕಂಡೆ ಕಣ್ಬರಿ
ವೆಂತೆಂತೇನೆಂದು ನುಡಿದನಾತನ ಕೆಲದೊಳ್
ನ್ನಿಂ ಕಡೆದ ಬೇಗವೆನಿತೆನಿ
ತಂತರವಂ ಬರುತುಮಿರ್ದನೆಮ್ಮಯ ಬಟಿಯಂ, ೪೨

ಎಂದು

ಒಡನೆಯವರೆಲ್ಲರುಮನುಟಿ
ದಡ್ಡಪದವಳುಮಾನುಮೊಂದು ಮಾಡದ ಮೇಲಿ
ರ್ದಡಿಗಡಿಗೆ ಮಗುಟ್ದು ಮಗುಡ್ದ
ನುಡಿಯನೆ ಕೇಳುತ್ತೆ ಕಳೆದೆನಂತಾ ಪಗಲಂ, ೪೩

ಅನ್ನೆಗಂ

ಮದನಾತುರೆಯಪ್ಪೆನ್ನೀ
ಹೃದಯದ ರಾಗವನೆ ಪಚ್ಚುಗೊಂಡಂತಿರೆ ಕೆಂ
ಪೊದವಿದ ಪಡುವಣ ದೆಸೆಗೆ
ಯ್ದಿದನರುಣರುಚಿಪ್ರಕಾಶನಪ್ಪ ದಿನೇಶಂ, ೪೪

ಕೆಂದಾವರೆಗಳ್ ಮಧುಕರ
ವೃಂದಮನೊಳ್ಕೊಂಡು ಮುಗಿಯೆ ರವಿವಿರಹದ ನೋ
ವಿಂದರವಿಂದಿನಿ ಮೂರ್ಛೆಗೆ
ಸಂದರ್ದ ಕಟ ಲಿಸಿದರಿದಮಂ ಪ್ರಕಟಿಸುಗಂ, ೪೫

ಆಗಳೆನ್ನ ಕೊಡೆವಿಡಿದವಳ್ ಬಾಗಿಲಿಂ ಪರಿತಂದು ಕೊಳನ ತಡಿಯಲ್ಲಿ ಕಂಡ ಮುನಿಕುಮಾರರಿರ್ವರೊಳೊರ್ವನರಮನೆಯ ಬಾಗಿಲೊಳಕ್ಷಾವಳಿಯಂ ಬೇಡಲ್ಕೆ ಬಂದು ನಿಂದಿರ್ದಪನೆಂದು ಪೇಟ್ದುದುಂ,

ನಿನಗೇವೇಟ್ದಪೆನಾಂ ಭೋಂ
ಕೆನಲಾ ತಾಪಸಕುಮಾರವೆಸಗೊಳ್ವುದುಮಾ
ತನೆಗೆತ್ತು ಬಾಗಿಲೊಳ್ ತೊ
ಟ್ಟನೆ ಬಂದಿರ್ದಂತಿರಾದೆನಿರ್ದಂತಿರ್ದುಂ, ೪೬

ಆಗಳೊರ್ವ ಕಂಚುಕಿಯಂ ಕರೆದು ಬೇಗಮೊಡಗೊಂಡು ಬಾಯೆಂದು ಪೇೞಲೊಡನೆ ಎಳವಿಸಿಲ್ ಬೆಳ್ದಿಂಗಳ ಬೞಿಯಂ ಬರುತಿರ್ದುದೆಂಬಂತಾ ಕಂಚುಕಿಯೊಡವರುತಿರ್ದ ಕಪಿಂಜಳನಂ ಕಂಡು

ಇದಿರೆೞ್ದು ಪೊಡವಡುತ್ತೇ
ೞಿದ ಕನಕಾಸನಮನಿತ್ತು ಬೇಡೆನೆಯೆನೆ ತ
ತ್ಪದಯುಗಮಂ ಕರ್ಚಿ ಪದಾ
ಬ್ಜದಿರ್ಪನಾಂ ತೊಡೆದೆನುತ್ತರೀಯಾಂಶುಕದಿಂ ೪೭

ನುಡಿಯಲ್ ಮುನಿಪಂ ಬಗೆದೆ
ನ್ನಡಿಪದವಳ್ ಕೆಲದೊಳಿರ್ದೊಡಾಕೆಯ ದೆಸೆಯಂ
ಕಡೆಗಣ್ಣಿಂ ನೋೞ್ಪುದುಮಾ
ಗಡೆ ಲಜ್ಜಿಸಿದಪ್ಪನೆಂದು ನೋೞದಿನಱಿದೆಂ ೪೮

ಆಗಳಱಿದಿವಳೆನ್ನ ಶರೀರದಿಂ ಬೇೞಲ್ಲಳ್ ಮುನಿಶಂಕರಾ ನೀಂ ಬೆಸಸಿಮೆಂಬುದುಂ

ನುಡಿವೊಡೆ ಲಜ್ಜಿಸಿ ನಾಲಗೆ
ಪೊಡರ್ದಪುದಿಲ್ಲಕ್ಕ ಬಿಣ್ಕೆಯಂ ಬೇರುಮನುಂ
ಡಡವಿಯೊಳಗಿರ್ಪ ಮುನಿಗಳ
ನಡೆವಳಿಯೆತ್ತೆತ್ತ ಯುವತಿಜನದನುರಾಗಂ ೪೯

ಅದಲ್ಲದೆಯುಂ

ನಗೆಗೆಡೆಯಾಗೆ ದೈವವಶನೆನ್ನನೆನೊಡರ್ಚಿಸಿತೀಗಳಕ್ಕ ರಾ
ಗಿಗಳ ನಿಕೃಷ್ಟಚೇಷ್ಟೆಗನುಗೆಯ್ದು ಪೆಣ್ಪಿತಿದೆ ನಿನ್ನ ಮುಂದೆ ಪೇೞ್
ಬಗೆವೊಡೆ ಕಟ್ಟದೀ ಜಡೆಗೆ ತಕ್ಕುದೊ ಮೇಣ್ ಪೊದೆದಿರ್ದ ನಾರ ಸೀ
ರೆಗೆ ದೊರೆಯೋ ತಪಕ್ಕಿದನುರೂಪಮೊ ಮೇಣ್ ಸುಕೃತಕ್ಕುಪಾಯಮೋ ೫೦

ಆದೊಡಂ

ಪೇೞಲೆವೇಡಿದಪ್ಪುದು ಶರಣ್ ಪೆಱತಾವುದುಮಿಲ್ಲ ಕೇವಲಂ ಪೇೞದಿರಲ್ಕನರ್ಥಮದಱಿಂದಸುವಂ ನೆಱೆ ಬಿಟ್ಟುಮಾಗಳಾಂ.

ಪಾಲಿಸವೇೞ್ಕುಮೆನ್ನೆಯ ಸಹಾಯನ ಜೀವಮನೊಂದು ಲಜ್ಜೆಯಂ
ಪಾಲಿಸದೆಯ್ದೆ ಪೇೞಲನುಗೆಯ್ದಪೆನುತ್ಪಲಲೋಲಲೋಚನೇ, ೫೧

ಅದೆಂತೆನೆ

ಒದವಿದ ಮುನಿಸಿಂದಂ, ನಿ
ನ್ನಿದಿರೊಳ್ ಬಿಡೆ ನುಡಿದು ಬಿಟ್ಟು ಮುನಿಪನ ಪೂಗೊ
ಯ್ವುದುಮಂ, ಬಿಸುಟ್ಟು ನಿಲಲಾ
ಱದೆ ಮತ್ತೊಂದೆಡೆಗೆ ಪೋದೆನುಬ್ಬೆಗದಿಂದಂ, ೫೨

ಅನ್ನೆಗಂ, ನೀಮುಂ, ನಿಜಾವಾಸಕ್ಕೆ, ವಂದಿರ್ದಾಗಳಾನೇಕಾಕಿಯಾಗಿರ್ದುಮೇಗೆಯ್ಯುತ್ತಿರ್ದಪನೆಂದು, ಕುತೂಹಲಂಬೆರಸು, ಮುನ್ನಿನೆಡೆಗೆ, ಬಂದು ನೋೞ್ದು ಕಾಣದೆ ವ್ಯಗ್ರಮನನಾಗಿ

ತರುಣಿಯ ಬೆನ್ನೊಳಂಗಭವನಾಡಿಸಿದಂದದೊಳಾಡಿ ಗೋರಿಗೊಂ
ಡೆರಲೆವೊಲಾಗಿ, ಪೋದನೊ ಭಯಂಬೆರಸೆನ್ನ ಮೊಗಕ್ಕೆ ನಾಣ್ಚಿ ಮೆ
ಯ್ಗರೆದನೊ ಕೋಪದಾಗ್ರಹದಿನೆನ್ನ ನಗಲ್ದನೊ ಕಾಣದೆನ್ನನೆ
ಲ್ಲೆರದಱಸುತ್ತುಮಿರ್ದಪನೊ ಬಾಲತಮಾಲವನಾಂತರಾಳದೊಳ್ ೫೩

ಎಂದು ವಿಕಲ್ಪಿಸುತ್ತುಮಿರ್ದು

ಕಿೞಿಯಂದು ತೊಟ್ಟಗಲ್ದಾ
ನೞಿಯದನಂ ಕ್ಷಣಮಗಲ್ದು ನಿಲಲಾಱದೆ ಮೆ
ಯ್ಮಱುಗಿ ಮದೀಯ ವಯಸ್ಯನ
ನಱಸುತ್ತುಂ ಮಗುೞೆ ಮನದೊಳಾಂ ಚಿಂತಿಸಿದೆಂ, ೫೪

ಮದನಮದೋದ್ರೇಕದಿನೆ
ನ್ನಿದಿರೊಳ್ ಧೃತಿಗೆಟ್ಟ ಸಿಗ್ಗಿನಿಂ ತನ್ನೊಳ್, ಪೊ
ಲ್ಲದನೆತ್ತಾಚರಿಸುಗುಮೋ
ಒದವಿದ ಸಿಗ್ಗಿಂದಮಾರುಮೇನನೊಡರ್ಚರ್ ೫೫

ಎಂದಱಸಿ, ನೋಡುತ್ತುಮೆಂತೆಂತು, ಕಾಣದಿರ್ಪನಂತಂತೇನಾನುಮಂ ಮನದೊಳ್, ಭಾವಿಸುತ್ತುಮಿರ್ದು,

ಇರಿಪುದಯುಕ್ತಮಿನ್ನೆನಗರಣ್ಯದೊಳೊರ್ವನನೆಂದು ಶಂಕೆಯಿಂ,
ತರುತಳದೊಳ್ ತಮಾಲವನದೊಳ್ ಘನಚಂದನವೀಥಿಯೊಳ್ ನಿರಂ
ತರ ಲತಿಕಾಗೃಹಂಗಳೊಳನೇಕ ಲತಾಭವನಂಗಳೊಳ್ ಸರೋ
ವರತಟದೊಳ್ ತೊಟಲ್ದಱಸಿ ನೋಡಿದೆನುತ್ಪಲಲೋಲಲೋಚನೇ ೩೬

ಅಂತು ನೋಡುತಿರ್ಪನ್ನೆಗಮೊಂದು ಸರಸ್ಸಮಿಾಪದೊಳ್ ವನ ನಿರಂತರತೆಯಿಂ ಕುಸುಮಮಯಮುಂ ಪರಭೃತಮಯಮುಂ ಮಯೂರ ಮಯಮುಮಪ್ಪಾಗಿ ವಸಂತಜನ್ಮಭೂಮಿಯುಮಾದಂತಿರಲತಿಮನೋಹರ ಮಾದ ಲತಾಗೆಹದೊಳ್ ಉತ್ಸೃಷ್ಟಸಕಲವ್ಯಾಪಾರನುಂ ವಿಗತನಿಮೇಷನುಮೆನಿಸಿ ಬರೆದನಂತೆಯುಂ ಕಂಡರಿಸಿದನಂತೆಯುಂ ಮರವಟ್ಟನಂತೆಯುಂ, ಯೋಗಸಮಾಧಿಸ್ಥಿತನಂತೆಯುಮುಪರತವಶನಾದಂತೆಯುಮಿರ್ದನಲ್ಲಿ ದೆಯುಂ,

ಒಳಗೊಳಗಳ್ಳುರ್ವ ಮನೋಜಾ
ನಳಧೂಮಸ್ತೋಮಮಯ್ದೆ ಸುತ್ತಿರ್ದುದೊ ಕ
ಣ್ಗಳನೆನೆ ತಳ್ತೆ ಮೊದುಱುಗಲಿ
ನಿಟಿದುವು ಮಿಗೆ ಬಾಷ್ಪವಾರಿ ಧಾರಾಪೂರಂ, ೩೭

ಏನಂ ವಿಧಿ ಮಾಡಿದನೋ
ತಾನಿಲ್ಲಿಗುಪಾಯಮೆಂತು ಭೋಂಕನೆ ಬಱಿದೀ
ಜ್ಞಾನನಿಧಿ ಸೂಱೆವೋದಪು
ದಾನಿನ್ನೇಗೆಯ್ವೆನೆಂದು ತಳವೆಳಗಾದೆಂ, ೩೮

ಅದಲ್ಲದೆಯುಂ

ಗುಣಿಯೆನಿಸಿದ ಚಾತುರ್ಯದ
ಕಣಿಯೆನಿಸಿದ ಮುನಿಕುಮಾರಕ ಪ್ರತತಿಯೊಳ್
ಗ್ರಣಿಯೆನಿಸಿದ ಮತ್ಸಖನಂ,
ಕ್ಷಣಮಾತ್ರದಿನಿಂತಿರೆಪೆದು ಪೊಸೆಗುಮ್ಮೆ ಮದನಂ, ೩೯

ಎಂದಾತನಿರ್ಪ ಲತಾಮಂಟಪದೊಳಗಣ ಚಂದ್ರಕಾಂತಶಿಲಾತಳಕ್ಕೆ ಬಂದು

ಪೊರೆಯೊಳ್ ಕುಳ್ಳಿರ್ದೊಯ್ಯನೆ

ಕರತಳದಿಂದೆತ್ತಿ ತನುವನೀಗಳ್ ನೀನಿ

ರ್ಪಿರವಿನ ಪರಿಯೇನೆಂದಾಂ

ಸರೋಜಮುಖಿ ಮುಕುಳಿತಾಕ್ಷನಂ ಬೆಸಗೊಂಡೆಂ ೬೦

ಅಂತು ಬೆಸಗೊಳ್ವುದುಮಾಗಳೆಡೆವಿಡದೆ ಮುಚ್ಚಿ ಬೆಚ್ಚಂತಿರ್ದ ಕಣ್ಗಳನೆಂತಾನುಂ ತೆಱೆದು

ಬಸವಲ್ಲದೞ್ತಿ ಕೆಂಪೊಡ

ರಿಸೆ ತೀವಿರೆ ಬಾಷ್ಪಸಲಿಲಮಚ್ಛಾಂಬುಗಳಿಂ

ಮುಸುಕಿದ ರಕ್ತಾಂಭೋರುಹ

ದೆಸೆಟಿಂ ಪೋಲ್ತೆಸೆವ ಕಣ್ಗಳಿಂದೀಕ್ಷಿಸಿದಂ ೬೧

ಅಂತು ಕಿಱಿದು ಬೇಗಮೆನ್ನಂ ಭಾವಿಸಿ ನೋಡಿ

ನೀಂ ತಿಳಿದಿರ್ದುಂ ಮದ್ವೃ

ತ್ತಾಂತಮನೇನೆಂದು ಕೇಳೆಯ ಬೆಸಗೊಂಡಪೆಯೆಂ

ದಿಂತಿದನುಸಿರ್ದೆಂ ಲಜ್ಜೆಯಿ

ನೆಂತಾನುಂ ಶೀರ್ಯಮಾಣ ವಿರಳಾಕ್ಷರದಿಂ ೬೨

ಎಂಬುದುಮದು ನೀನೆರೆದಂತೆ ನಿಶ್ಚಯಮಪ್ಪುದಾದೊಡಂ

ಇನಿತನೆ ಪುಂಡರೀಕ ಬೆಸಗೊಂಡಪೆನಿಂತಿದು ಧರ್ಮಶಾಸ್ತ್ರಸಂ

ಜನಿತರಹಸ್ಯಮೋ ಯಮಮೊ ಪೇೞ್ ಪೆಱತೇನಪವರ್ಗಮಾರ್ಗಮೋ

ಮನದೊಳಣಂ ವಿಚಾರಿಸದೆ ಸ್ವೈರಣೆಗೆಟ್ಟುಱಿವೆತ್ತವೋದುದೀ

ಮನಸಿಜನೆಂಬ ಪಾತಕನಿನಿಂತಪಹಾಸ್ಯಮನೆಯ್ದಲಕ್ಕುಮೇ ೬೩

ಅದಲ್ಲದೆಯುಂ

ಅಗರುವ ಧೂಪಧೂಮಲತೆಯೆಂದಸಿತಾಹಿಗೆ ಸಾರ್ವ ನೆಯ್ದಿಲ್ಗೊ

ಳ್ಮುಗುಳಿನ ಮಾಲೆಯೆಂದಸಿಯನಪ್ಪುವ ಮಾಣಿಕಮೆಂದು ಕೆಂಡಮಂ

ನೆಗಪುವ ಫುಣ್ಯಮೆಂದು ವಿಷವಲ್ಲಿಗೆ ನೀರೆಱೆವೆಗ್ಗನಂತೆ ಕೆ

ಮ್ಮಗೆ ಸುಖಮೆಂದಸದ್ವಿಷಯ ಸೌಖ್ಯದೊಳಿಂತೆಱಗಲ್ಕೆ ತಕ್ಕುದೇ ೬೪

ಅದಲ್ಲದೆಯುಮತಿಬಹುಳರಜದೊಳ್ ಪೊರೆದಪೊನಲ್ಗಳಂತುನ್ಮಾರ್ಗದಿಂ ಪರಿವಿಂದ್ರಿಯಂಗಳಂ ನಿವಾರಿಸದೆಯುಂ, ಕದಡಿದ ಮನಮಂ ನಿಯಾಮಿಸದೆಯುಮಿಂತಿರ್ಪುದುಚಿತಮಲ್ಲಮನಂಗನೆಂಬ ದುರಾಚಾರನಂ ನಿವರ್ತಿಸಲ್ವೇಟ್ಕುಮೆಂಬುದುವಾಕ್ಷೇಪಂಗೆಯ್ದು ಮೆದುಱುಗಲಿನಿೞಿವ ತೋರಕಣ್ಬನಿಗಳಂ ಬಸಿಯುತ್ತು ಮೆನ್ನನಿಂತೆಂದಂ,

ಅಪರಿಮಿತೋಕ್ತಿಯೊಳೇಂ ಸ
ತ್ತ್ವಪರೀತನೆ ಮದನ ದಾವದಹನಂ ತಳ್ತಿ
ರ್ದಪುದಿಲ್ಲ ನಿನ್ನನದಱಿಂ
ದುಪದೇಶಂಗೆಯ್ಯುತಿರ್ಪುದಿದು ಸುಖಮಲ್ತೇ, ೭೫

ಆವಂಗಿಂದ್ರಿಯವರ್ಗಮುಂಟು, ಮನಮುಂಟಾವಂ ದಿಟಂ ಕಾಣ್ಬನಿನ್ನಾವಂ ಕೇಳ್ವನದಂತೆ ಕೇಳ್ದ ನುಡಿಯಂ ಕಯ್ಕೊಳ್ವನಂತಲ್ಲದಿನ್ನಾವಂ ಪೊಲ್ಲದಿದೊಳ್ಳಿತೆಂದಱಿವನಾತಂ ಕೇಳ್ದಪಂ ನಿನ್ನ ಸದ್ಭಾವಂಬೆತ್ತುಪದೇಶಮಂ ಕೆಳೆಯ ಪೇಡೆನ್ನೊಂದಿಗಂ ಕೇಳ್ವನೇ ೭೬

ಅಡುವಂತಾದಪುವೇವೆನೆನ್ನವಯವಂಗಳ್ ಕೂಡೆ ಕಣ್ಣಾಲಿಗಳ್
ಸುಡುವಂತಾದಪುದೇವೆನೆಯ್ದೆ ಹೃದಯಂ ಬೇವಂತುಟಾದಪ್ಪುದೀ
ಮೊಡಲೋರಂತುರಿವಂದವಾದಪುದಿದರ್ಕೇಂ ಮಾಣಿಸಲ್ಕಾರ್ಪೆಯ
ಪ್ಪೊಡೆ ದಲ್ ಮಾಣಿಪುದೆಂಬಿದಂ ನುಡಿದು ಮಾತಂ ಮಾಣ್ದನಬ್ಜಾನನೇ ೭೭

ಅಂತುಸಿರದಿರೆ ಮತ್ತಮಾನಾತನಂ ಸಂಬೋಧಿಸಲೆಂದು,

ಎನಿತು ಪುರಾಣೋಕ್ತಿಗಳಿಂ
ದೆನಿತಾಗಮವಿಷಯವಚನದಿಂದೆನಿತು ನಿದ
ರ್ಶನದಿಂದನುನಯದೆ ಪೇಳ್ದೆನ
ದನಿತುಂ ಕಿವಿವೊಕ್ಕುದಿಲ್ಲ ತನ್ಮನಸಿವರನಾ, ೭೮

ಅಂತು ಮೆಯ್ಯಱಿಯದಿರ್ದನಂ ಕಂಡು ಭಯಂಗೊಂಡುಪದೇಶಕ್ಕಂದೆಡೆಯಿಲ್ಲದೆ

ದೆಸೆಗೆಟ್ಟೇನನುವಂ ಚಿಂತಿಸ್ಸುತಿರೆ ಫಲಸ್ಪೋಂ ಪೊಲ್ಲದಿನ್ನೊಳ್ಳಿತೆಂಬು
ದ್ದಸವಂ ಪ್ರಾಣ್ದೀಗೆಳೆಲ್ಲಂದದೊಳವೆನಗೆ ಮಾತೇಂ ಸುಹೃತ್ಪ್ರಾಣಮಂ ರ
ಕ್ಷಿಸವೇಟ್ಕುಂ ಬೇಗಮಾಂ ರಕ್ಷಿಸುವ ತೆಱನುಮ್ಮೆತ್ತಲೆಂದೊಡಂ ನಿಶ್ಚಯಂ ಭಾ
ವಿಸಿ ನೋಟ್ಪಂದಾಕೆಯಂ ತರ್ಪುದನುಟಿಯೆ ಬಟಿಕ್ಕಿಲ್ಲ ಬೇಱೊಂದುಪಾಯಂ ೧೯

ಅದಱಿಂದಿನ್ನಾಕೆಯಲ್ಲಿಗೆಂತಾದೊಡಂ ಪೋಗೀತನವಸ್ಥಾಂತರಮಂ ಪೇೞಲ್ವೇಡಿದಪ್ಪುದೆಂದು ಮತ್ತಂ

ಎನಗಂ ಕೃತ್ಯಮಿದಲ್ಲದಿರ್ದೊಡಮವಶ್ಯಂ ಪೋಪೆನೆಂತಾನುಮೆ
ನ್ನನಿವಂ ಕುತ್ಸಿತವೃತ್ತಿ ಕಷ್ಟಮಿದು ಬೇಡೆಂದೆಂಗುಮೋ ಲಬ್ಧಚೇ
ತನನೆಂದಾತನ ಪಕ್ಕದಿಂದುಸಿರದಿರ್ದಾನಾಗಳೇನಾನುಮೊಂ
ದು ನೆವಂ ಮಾಡಿ ಮಹೋತ್ಕಟತ್ವದೆ ದಿಟಂ ಬಂದೆಂ ಚಕೋರೇಕ್ಷಣೇ ೨೦

ಇದು ಮನ್ಮಿತ್ರನವಸ್ಥೆ ತದ್ವಿರಹಸಂತಾಪಾನುರಾಗಕ್ಕೆ ತ
ಕ್ಕುದನ್ನಾಂ ಬಂದೆಡೆಗಂ ಮೃಗಾಕ್ಷಿ ನಿನಗಂ ಪೋಲ್ವಂತುಟಂ ನೀನೆ ಬ
ಲ್ಲೆ ದಲಿಂತೆರೆದಿವೆಳೇನನೆಂದಪಳೊ ಕೇಳ್ವಂ ಮಾತನೆಂದೇನುಮೆ
ನ್ನದೆ ಮದ್ವಕ್ತ್ರಮನಾ ಕಪಿಂಜಳಕನಾಗಳ್ ನೋಡುತಿರ್ದಂ ನೃಪಾ ೨೧

ಕನಸಿನೊಳಮಾ ಕಪಿಂಜಲ
ಮುನಿವದನದೊಳನೃತಭಾಷೆ ಪೊಱಮಡದದೆಱಿಂ
ದೆನಗಾವುದಿಲ್ಲಗುತ್ತರ
ಮೆನುತುಂ ಬಗೆಯುತ್ತುಮಿರ್ದೆನಿರ್ಪನ್ನೆವರಂ ೨೨

ಆಗಳೂರ್ವಲತಿಸಂಭ್ರಮಂಬೆರಸು ದೌವಾರಿಕೆ ಬಂದು ಪೊಡವಟ್ಟು ರಾಜಪುತ್ರಿ, ನೀನಸ್ವಸ್ಥಶರೀರಿಣಿಯಾಗಿರ್ದುದಂ ಪರಿಜನದಿಂ ಕೇಳ್ದು ಮಹಾದೇವಿಯರ್ ನಿನ್ನಲ್ಲಿಗೆ ಬಿಜಯಂಗೆಯ್ದಪರೆಂಬುದುಂ ಕಪಿಂಜಲಂ ಕೇಳ್ದು ನೆರವಿ ಕವಿತಪುದೆಂದಂಜಿ ಬೇಗಮೆಟ್ಟು

ತಡೆದಿರಬಾರದು ನೇಸಱ್
ಪಡುತಂದುದು ಪೊಟ್ಟು ಪೋಯ್ತು ಪೋದಪೆನೆಂತಾ
ದೊಡಮೆನ್ನ ಕೆಳೆಯನಸುವಂ
ಪಿಡಿವುದು ನೆಱಗೊಡ್ಡಿ ಬೇಡಿದೆಂ ಮೃಗನಯನೇ ೨೩

ಎಂದು ನುಡಿದು ಮಱುಮಾತುಗುಡಲವಸರಮಿಲ್ಲದಿರೆ, ಮದೀಯಾಂಬಿಕೆಯ ಮುಂದೆ ಪರಿತರ್ಪ ದೌವಾರಿಕೆಯರಿಂ ಸಾಹಸಿಗಳಿಂ ಚಾಮರದಡಪದ ಕನ್ನಡಿಯ ಪರಿಚಾರಕಿಯರಿಂ ಕೂಡೆ ಸಂದಣಿಸಿದ ಬಾಗಿಲೊಳ್ ತಾನುಂ ನುಸುಳ್ದು ಪೋದನನ್ನೆಗಮಿತ್ತಲ್

ದೀನಾಸ್ಯೆ ಜನನಿ ಬಂದೆಸಿ
ತಾನುಂ ಪೊೞ್ತಿರ್ದು ಮನೆಗೆ ಪೋದಳ್ ಗಡ ತಾ
ನೇನೆಂದಳದೇಗೆಯ್ದಳ
ದೇನಾಯ್ತೆಂದಱಿಯೆನಾಗಳೆರ್ದೆಗೆಟ್ಟವಳೆಂ ೭೪

ಅನ್ನೆಗಮಿತ್ತಲಂಭೋಜಿನೀಜೀವಿತೇಶ್ವರನಸ್ತಂಗತನಪ್ಪುದುಂ, ಪಾತಾಳಪಂಕಕಲುಷಿತ ಮಹಾಪ್ರಳಯಜಲಧಿಗಳ್ ಪ್ರೇರೆದಪ್ಪಿ ಕವಿದು ಭುವನಂಗಳೆಲ್ಲಮನೊಳಕೆಯ್ಯಲುಕ್ಕಿದುವೆಂಬಂತಿಡಿದೆಡರೆಗೊಂಡು ಕಱ್ತಲೆ ಕವಿಯೆ ಕಿಂಕರ್ತವ್ಯತಾಮೂಢೆಯೆನಾಗಿ ತರಳಿಕೆಯನಿಂತೆಂದೆಂ,

ಮನಮುಮಖಿಳೇಂದ್ರಿಯಂಗಳು
ಮಿನಿಸಪ್ಪೊಡಮೆನ್ನವಲ್ಲಮೇಗೆಯ್ವೆನೊ ಪೇ
ಳೆನಗೀಗಳಾ ಕಪಿಂಜಲ
ಮುನಿ ನಿನ್ನಯ ಮುಂದೆ ನುಡಿದು ಪೋದುದನಱಿಯಾ ೭೫

ಮನೆಗೆ ಬರಲ್ ಕಪಿಂಜಲಮಹಾಮುನಿಗಂ ಮಱುಮಾತನಿತ್ತೆನಿ
ಲ್ಲೆನಗದಱಿಂದಮಿನ್ ಪ್ರಣಯಭಂಗಮದಾವುದೊ ಕೆಟ್ಟೆನತ್ತಲೋ
ಪ್ಪನುಮಿದನಿಂತೆ ಕೇಳ್ದೊಡೆ ನಿರಾಶೆಯೊಳಕ್ಕಟ ಸಾಗುಮಂತಱಿಂ
ಮುನಿವಧದೋಷಮಾವ ತೆಱದಿಂ ಕಳೆಗುಂ ಕಮಲಾಯತೇಕ್ಷಣೇ ೭೬

ಎಂದು ನುಡಿಯುತ್ತುಮಿರ್ಪನ್ನೆಗಂ

ಇಳೆಯಂ ನೋಡಲ್ಕೆ ರಸಾ
ತಳದಿಂ ಪೊಱಮಡುವ ನಾಗರಾಜನ ಪೆಡೆಯೊಳ್
ಪೊಳೆವರುಣಕಿರಣಮಣಿಮಂ
ಡಳದಂದದಿನೆಸೆದುದಿಂದುಮಂಡಳಮಾಗಳ್ ೭೭

ಇತ್ತ ವಸಂತನಿತ್ತ ಮಲಯಾನಿಲನಿತ್ತ ಮಧುವ್ರತಾಳಿ ಮ
ತ್ತಿತ್ತ ಮದೋತ್ಕಕೋಕಿಲಕದಂಬಕವೆಯ್ದೆ ವಿಜೃಂಭಿಸಿತ್ತು ತಾ
ನಿತ್ತಲಡೆದುರ್ಗ ಚಂದ್ರಹತಕಂ ತಲೆದೋಱಿದನೋ ವೊ ಕೆಟ್ಟೆನೀ
ಚಿತ್ತಜತಾಪವಗ್ಗಲಿಸಿದಪ್ಪುದು ಮದ್ಧೃದಯಾಂತರಾಳದೊಳ್ ೭೮

ಉದಯಿಸಲೊಡಂ ಚಂದ್ರಹತಕಂ ವಿಷಮಜ್ವರಿತಂಗೆ ಮತ್ತೆ ಕೆಂ
ಡದ ಮಱೆ ಕೊಂಡುದಗ್ಗಲಿಸಿದೈಕಿಲವಂಗೆ ಹಿಮಪ್ರಪಾತಮಾ
ದುದು ಪಿರಿದಪ್ಪ ನಂಜುಪುಗುಳ್ವರ್ಬಿದವಂಗಸಿತಾಹಿದಂಶಮಾ
ದುದು ದಿಟವೆಂದು ತಲ್ಲಣದಿನಾಗಳೆ ಭೋಂಕನೆ ಮೂರ್ಛೆವೋಪುದುಂ ೭೯

ಆಗಳತಿಸಂಭ್ರಮಂಬೆರಸು ತರಳಿಕೆ ತಂದ ಚಂದನದ ಚರ್ಚೆಗಳಿಂ ಮತ್ತಮನೇಕ ಶಿಶಿರೋಪಚಾರಂಗಳಿಂದುಪಚರಿಸಲ್ಪದಱಿನೆಂತಾನುಂ ಮೂರ್ಛೆಯಿಂದೆೞ್ಚತ್ತು ನೋೞ್ಪುದುಂ ಚಂದನಪಂಕಾರ್ದ್ರಂಗಳಪ್ಪ ಕರಕಮಲಂಗಳಂ ಮುಗಿದು

ಇನಿತಂ ಪ್ರಾರ್ಥಿಪೆನಕ್ಕ ನಿನ್ನನುೞಿ ನೀಂ ಲಜ್ಜಾಭರಾವೇಶಮಂ
ನಿನಗೀ ತಂದೆಯ ತಾಯೊಳಪ್ಪ ಭಯಮಂ ಕೇಳ್ ಪೋಪಮಾನಾಱನಿ
ನ್ನಿನಿತಂ ನೋಡುತುಮಿರ್ಪೆ ನೀನಕರುಣಂ ಮೇಣ್ ಪೋಗು ನೀನೆಂದು
ಪೇೞ್ ಮನದಿಂ ಮುನ್ನಮೆ ಪೋಗಿ ನಿನ್ನಿನಿಯನಂ ತಂದಪ್ಪೆನಬ್ಜಾನನೇ ೮೦

ಎಂದು ತರಳಿಕೆ ನುಡಿಯೆ

ಇದನೇನೆಂದಪ್ಪ ನಾಣೇಂ ಗುರುಗಳುಮೆನಗಿನ್ನೇಕೆ ಪೇೞ್ ಮೃತ್ಯುವೊಲ್ ಮೂ
ಡಿದನಲ್ತೇ ಚಂದ್ರನುಂ ತಾನಿರದೆ ಕರುಣದಿಂದುಯ್ವುಡೇೞ್ ಪೋಪಮಾ ದೇ
ಹದೊಳೆಂದೀ ಪ್ರಾಣಮುಳ್ಳನ್ನಗಮ ತಡೆಯದಾತ್ಮೇಶನಂ ಕಾಣ್ಬೆನೋ ಪು
ಣ್ಯದಿನೆಂದಾನಾಂ ಜ್ಯೇಷ್ಠೆಗೆಟ್ಟಂದವಳನ ಪಿಡಿದಲ್ಲಿಂದವೆಂತಾನುಮೆದ್ದಂ ೮೧

ಅಂತೇೞಲೊಡನೆ

ಬಿದಿ ಮತ್ತೇನನಿದಂ ತೋ
ಱದಪನೊ ಪಾತಕಿಗೆನುತ್ತೆ ಭಯಮಂ ಚಿತ್ತ
ಕ್ಕೊದವಿಸಿ ಬಲಗಣ್ ಕೆತ್ತಲ್
ಮೊದಲಿಕ್ಕಿತು ದುರ್ನಿಮಿತ್ತಸೂಚಕಮಾಗಳ್ ೮೨

ಅದನೇವೇಳ್ದೆನನಂತರಂ। ತ್ರಿಭುವನಪ್ರಾಸಾದರಮ್ಯ ಪ್ರಣಾ
ಳದವೊಲ್। ಕಣ್ಗೆಸೆವಿಂದುಮಂಡಲದಿನೇಂ। ಗಂಗಾಪ್ರವಾಹಂಗಳು।
ಣ್ಮಿದುವೋ। ಚಂದನವಾರಿಪೂರಮುಟಿದತ್ತೋ। ಕ್ಷೀರವಾರಾಶಿ! ಪೊ
ಣ್ಮಿದುದೋ। ಪೇಳೆನೆ। ಲೋಕದೊಳ್ ಕ್ಷುಬ್ಧಿದ್ದು ಪರ್ವಿತ್ತಿಂದುಚಂದ್ರಾತಪಂ। ೩೩

ಅಂತು ಪರ್ವಿದ, ಬೆಳ್ದಿಂಗಳೊಳ್, ಗೃಹೀತವಿವಿಧಕುಸುಮತಾಂಬೂಲ
ರಾಶಿಯಪ್ಪ, ತರಳಿಕೆವೆರಸು, ಮದೀಯಪರಿಚಿತಪರಿಜನಮುಮಱಿಯದಂತು,
ಕರುಮಾಡದಿಂದವನಿತಳಕ್ಕವತರಿಸಿ ಪ್ರಮದವನಪಕ್ಷದ್ವಾರದಿಂ ಪೊಱಮಟ್ಟು,
ಪೋಗುತ್ತುಮಾ ಪ್ರದೇಶಮನೆಯ್ದಿವರ್ಪಾಗಳ್,

ಮೊದಲೊಳೆ। ಕೆತ್ತಿದತ್ತು। ಬಲಗಣ್ಣಿನಗೇನನೊಡರ್ಚಲಿರ್ದುದೋ।
ಬಿದಿಯೆನುತುಂ। ಭಯಂಬೆರಸು। ಮುನ್ನಮೆ। ಶಂಕಿಸುತಿರ್ದೆನೋವೊ। ಮ
ತ್ತಿದು। ಪೆಱತೇನೆನುತ್ತುಮಿರ್ದೆ ಪವ್ವನೆ। ಪಾಱಲದೊಂದು। ಕೇಳಲಾ
ದುದು। ಪುರುಷಪ್ರಲಾಪರುದಿತಸ್ವನಮಾ। ಗಹನಾಂತರಾಳದೊಳ್। ೩೪

ಅದೆಂತೆಂದೊಡೆ

ಉರಿದೆಂ। ಬೆಂದೆನಿದೇನನಂತು। ನೆಗಟ್ದಯ್। ನಿಸ್ತ್ರಿಂಶ। ಪುಷ್ಪಾಸ್ತ್ರ। ನಿ
ಷ್ಠುರ। ಪೇಳ್। ಪೊಲ್ಲದನೇನನಾಚರಿಸಿದಳ್। ನಿನ್ನೊಳ್। ಮಹಾಶ್ವೇತೆ। ಭೀ
ಕರ। ದೋಷಾಕರ। ಕೂಡಿತೇ। ಬಗೆದುದುಂ। ಚಂಡಾಲ। ತೆಂಗಾಳಿ। ಪೇಳ್।
ಪಿರಿದೊಂದುತ್ಸವಮಾಯ್ತೆ। ಕೇಡನಱಿದಯ್। ಹಾ ಶ್ವೇತಕೇತುವ್ರತೀ। ೩೫

ಪರಿಚಯಮಿಲ್ಲ। ಕಂಡಱಿಯೆಯೋ। ಸಖ ತೊಟ್ಟನಲಿಂತು। ಬಿಟ್ಟು। ಪೋ
ಪರೆ। ಕಠಿನಾತ್ಮನಾದೆ ಚಿರವಾರನಗಿರ್ದಪರಿತ್ತವೋ। ಪೆನೊ।
ರ್ಬರುಮೆನಗಾಸೆಯಿಲ್ಲ। ದೆಸೆ। ಪಾಟ ಸೆಗಿರ್ದಪುದು। ಧನಾದೆನಾರ್।
ಶರಣೆನಗೆನ್ನ। ಬಾಳ್ಕೆಯೆ ನಿರರ್ಥಕಮೆಂದೆನುತುಂ ಪಲುಂಬುತುಂ। ೩೬

ಉಸಿರದೆ। ನೀನಿರಲ್। ನುಡಿವೆನಾರೊಡನಾಟವು ನಾಡುತಿರ್ಪನೀ।
ಪುಸಿಮುಳಿಸೇಕೆ। ಪೇಳ್। ಕೆಳೆಯ। ನಿನ್ನಯ ಕೂರ್ಮೆಯದೆತ್ತವೋಯ್ತು। ನೋ
ಯಿಸದಿರಿಸೆಟ್ಟು। ನೋಡಿ ನುಡಿಯೆಂದೆನಿತುಂ। ತೆಱದಿಂ। ಕಪಿಂಜಲಂ।
ದೆಸೆದೆಸೆಗಿರ್ದು। ಬಾಯ್ಬಿಡುತುಮಿರ್ದುದನಾಲಿಸಿದೆಂ। ಮಹೀಪತೀ। ೩೭

ಅದನಾಂ ಕೇಳ್ದಿರ್ದೆಗೆಟ್ಟು ಮೆಯ್ಮಱುಗಿ ಸತ್ತಂತಾಗಿ ಕಣ್ಣೀರ ಪೂರದಗುರ್ವಿಂ ದೆಸೆಗಾಣದಂದಡಪುತುಂ ತಾಗುತ್ತುಮೋರಂತೆ ಮೇಲುದಱೊಳ್ ಗುಲ್ಮಲತಾಳಿಗಳ್ ತೊಡರಲೊರ್ವರನೂಂಕಿಕೊಂಡುಯ್ವುಮಾರ್ಗದೆ ಪೋದೆಂ ಬಳಿಕತಂತನಿರ್ದೆಡೆಗೆ ಹಾಹಾಕ್ರಂದನಂಗೆಯ್ಯುತುಂ

ಅನ್ನೆಗಂ ೮೮

ಘಟಿಲನೆ ಬರ್ಪೆನ್ನಂ ಕ್ಷಂ
ಡಟಲೆರ್ಮುಡಿಯಾಗೆ ಪತ್ತಿ ಕೆಳೆಯನ ಕೊರಲಂ
ಪಟುವಿಸಿ ಕಪಿಂಜಲಂ ಬಾ
ಯ ಬಿದಬ್ರಹ್ಮಣ್ಯವೆಂದು ಬಿಡೆ ಪುಯ್ಯಲ್ಚಲ್ ೮೯

ಆಗಳ್ ತತ್ಕ್ಷಣವಿಗೆತಜೀವಿತನಾಗಿರ್ದ ನಿಷ್ಪಾಪನೆನಿಪ ಮಹಾನುಭಾವನಂ ಮಹಾಹತಕಿಯೆನಿಪ್ಪ ಮಂದಭಾಗ್ಯೆಯೆಂ ಭೋಂಕೆನೆ ಕಂಡು ಮೂರ್ಛೆವೋಗಿ ಬಿಟ್ಟು ಪಾತಾಳತಲವಿವರಮಂ ಪೊಕ್ಕಂತೆ ಮಹಾಂಧಕಾರಂ ಕವಿಯೆ

ಏನಾದೆನೆಲ್ಲಿ ಬಿಡ್ದೆನ
ದೇನಂ ಬಾಯಟಿದು ಪಟುವಿಸುತ್ತಿರ್ದೆನೊ ಪೇ
ಡೇನನೊಡರ್ಚಿದೆನೆತ್ತಣಿ
ನಾನಾಗೆಂದೇನುಮಱಿಯೆನಂತಾ ಕ್ಷಣದೊಳ್ ೯೦

ಪಲವು ಭವಂಗಳೊಳ್ ನೆರಪಿದೆನ್ನಯ ಪಾಪಮೊ ಮೇರೆಗೆಟ್ಟು ಕೋಟಲೆಗಳನುಣ್ಬೆನೆಂಬಟಿಲ ಸ್ವೈರಣೆಯೋ ಕಡುಪಿಂ ತಗುಳ್ದು ನಟ್ಟಲೆವಸಮಾಸ್ತ್ರಪ್ರಕೃತೆಯೊ ದೈವಿಕಮೋ ನಿನಗೇನನೆಂಬೆನಗ್ಗಲಿಸಿಯೆ ಬಿಂದುದೆಂತುಮಸು ಪೋಗದೆ ಕಲ್ಲೆರ್ದೆಯೆಂ ಮಹೀಪತೀ ೯೧

ಇನಿಸಂ ಮೂರ್ಛೆಯಿನೆಟ್ಟಿ
ತ್ತನಂತರಂ ದೀರ್ಘಶೋಕವುಂ ಬಿಡೆ ಸುಡೆ ಕಿ
ರ್ಚಿನ ಕೀಡಿಯಂ [ಪೆ] ನೆಲದೊಳ
ಗಿನಿಸುಂ ಮಿಡುಮಿಡನೆ ಮಿಡುಕುವೆನ್ನಂ ಕಂಡೆಂ ೯೨

ಅಂತೆನ್ನ ಸಾವಿಲ್ಲದುದುಮಾತನ ಸಾವುಮದಿವಟಿಲನೊದವಿಸೆ ಬಾಯು ಬಿದು ಮೆಯ್ಯುಬಿಯದವಳೆಂ

ಪರಿಹರಿಸಿ ಪೋಗಲಕ್ಕುಮೆ।
ಕರುಣಿಸದೊರ್ವಳನನಾಥೆಯಂ ಭಕ್ತೆಯನಾ
ತುರೆಯಂ ದುಃಖಿತೆಯಂ ಸ್ಮರ
ಪರಿಭೂತೆಯನನ್ಯಗತಿಕೆಯಂ ಬಾಲಕಿಯಂ। ೯೩

ತರಳಿಕೆ ಸಕ್ಕಿಯಲ್ತೆ। ಬೆಸಗೊಳ್ ಯುಗಕೋಟಿವೊಲಾದುದಾಗಳಾ।
ವಿರಹದೆ ಬೆಂದಿವಳ್ಗೆ ಪಗಲೆಂಬುದನೀ ಮುಳಿಸೇಕೆ ನಿನ್ನ ತ್ತೊ
ಟ್ಟಿರೊಳಿನಿತೇಕೆ। ಭಕ್ತಜನವತ್ಸಲ ನಿರ್ದಯನಾದೆ ನಾಥ ನೀಂ।
ಕರುಣದಿನೊಮ್ಮೆಗ ಕಣ್ದೆಱೆದು ತೀರ್ಚುಗೆ ಮದೀಯಮನೋರಥಂಗಳಂ। ೯೪

ಕರುಣಿಸು ದೈವಮೆ ಪಾಲಿಸು
ಹರಾದ್ರಿ ರಕ್ಷಿಸೆಲೆ ರಾತ್ರಿ ಶರಣಾಗು ಸರೋ
ವರಮೆ ವನದೇವಿಯರಿರಾ
ನೆರೆದಿಲ್ಲರುಮೆನಗೆ ಪುರುಷಭಿಕ್ಷಮನಿಕ್ಕಂ। ೯೫

ಆವ ತೆಱದಿಂದಮಾರುಂ
ಕಾವರುಮಂ ಕಂಡೆನಿಲ್ಲ ನಾಂ ಬರ್ಪಿನಮೆ
ಕ್ಕಾವಳಿ ನೀನುಂ ವಲ್ಲಭ
ಜೀವಮನೀನಿನಸು ಪಿಡಿಯಲಾರ್ತಯುಮಿಲ್ಲಂ। ೯೬

ಎಂದು ಮಾಣದೆ ಮತ್ತಮಿಾತನನೆತ್ತ ವೇಟ್ಟುಮೆಂದು ಕಪಿಂಜಲ ಮಹಾಮುನಿಯಡಿಯೊಳಡಿಗಡಿಗೆ ಪೊರಳ್ದು ಮದವಟಲೊದವೆ ತರಳಿಕೆಯ ನಪ್ಪಿ ಪೊಱತ್ತೆ ಪಱಿವಿಸಿ ಪಲುಂಬಿ ಪಂಬಲಿಸಿಯುಮಾ ಮನೋಹರನ ಮಂದ್ಯೈಸಿ ನಿಂದ ಚಂದನದಣಿ ನಿಂ ಪಗಿಲು ಪತ್ತಿ ಬೆಳ್ಕುಱಿಸಿ ರಂಜಿಸುವ ಕೆಂಜಡೆಯ ಮೊದಲಿಂ ಬೆಡಂಗುವಡೆದು ಮಿಱುಪ ಪೆಱೆನೊಸಲೊಳಂ ಕವಿವ ಜಡೆಯ ತೊಂಗಲಿಂ ಸಂಗಳಿಸಿ ಬೆಡಂಗನೊಸಕೊಂಡ ಗಂಡಮಂಡ ಲಂಗಳೊಳಂ ಕೋಮಲಮೃಣಾಳಿಶೀತಂಸಿತಂಗಳಪ್ಪಸೇಶಂಗಳೊಳಂ

ಮಲಯಜರಸಲುಳಿತ ನಳಿನೀದಳಾವಕುಂಠಿತಮಾದ ಮೆಲ್ಲೆರ್ದೆಯೊಳಮೊರ್ಮೆ ಕಳವಳಿಸಿ ಕರತಳದಿನೆಱವಿಯುಂ ಪುಂಡರೀಕನ ಪಕ್ಕದಿಂ ತೆರಳದೆಯುಂ ನಿಷ್ಕರುಣಿಯಾದೆಯೆಂದೊರ್ಮೆ ಸಂಭ್ರಮದಿನುಪಾಲಂಭನಂ ಮಾಡಿಯುಂ ಕೊರಲಂ ತಪ್ಪೈಸಿಯುಂ ಬಿಡದಳವಿಲ್ಲದೆಡೆಯುಡುಗದಟ್ಟುತ್ತುಮೊಱೆದುಮನುಪದಿಷ್ಟಂಗಳುಮದೃಷ್ಟಪೂರ್ವಂಗಳುಮತಿಕೃಪಣಂಗಳುಮಪ್ಪ ಚಾಟುಸಹಸ್ರಂಗಳೊದವೆ ಕಣ್ಣೀರ ಪೂರದಿಂ ತೇಂಕಾಡುತ್ತುಮಶ್ರುಪ್ರವಾಹಜನ್ಮಭೂಮಿಯುಂ ಪ್ರಲಾಪಶಿಖರಸಹಸ್ರಸಂಭೂತೆಯುಂ ದುಸ್ಸಹದುಃಖಪ್ರಸೂತೆಯುಮಾದೆನೆಂದಾತ್ಮೀಯ ವೃತ್ತಾಂತಮನಾತಂಗೆ ನಿವೇದಿಸುತ್ತುಮಿರ್ಪುದುಂ

ಪಿಂತಾದ ದುಸ್ಸಹಾವ
ಸ್ಥಾಂತರ ಸಂತತಿಯನಾಗಳನುಭವಿಸುತುಮಿ
ರ್ಪಂತಿರ್ದಳ ಚೈತನ್ಯಮ
ನಂತಾಗಳೆ ಹರಿಯಿಸಿತ್ತು ಮೂರ್ಛಾವೇಗಂ ೯೭

ಅಂತು ಮೂರ್ಛೆವೋಗಿ ಬೀೞ್ವುದುಂ

ಒದವಿದ ತಲ್ಲಣಂಬೆರಸು ಚೆಚ್ಚರದಿಂ ಪಿಡಿದೆತ್ತಿ ಶಂಕೆಯಿಂ
ಸುದತಿಯ ಪಾಂಗಿದೇನೆನುತುಮಾಕೆಯ ಕಣ್ಮಲರಿಂದಮುಣ್ಮಿ ಮಾ
ಣದೆ ಸುರಿಯುತ್ತುಮಿರ್ಪ ಜಲಧಾರೆಗಳಿಂದಮನಾಂದದೊಂದು ಮೇ
ಲುದಱ ಸೆಱಂಗಿನಿಂ ನಯದೆ ಬೀಸಿದನಾ ಮನುಜೇಂದ್ರಚಂದ್ರಮಂ ೯೮

ಅಂತು ಬೀಸಿ ಮೂರ್ಛೆಯಿಂದೆಚ್ಚಱಿಸಿ

ಇನಿವಿರಿದೊಂದವಸ್ಥೆಯುಮನೆಯ್ದಿಸಿದೆಂ ಬೆಸಗೊಂಡ ಪಾಪಕ
ರ್ಮನೆನೆನದಱಿಂದಮೀ ಕಥೆಯೆ ಮಾಣ್ದುದು ಕೇಳಲಸಹ್ಯಮೆಂಬುದೇಂ
ಮನಕತಿದುಸ್ಸಹಂಗಳೆನಿಸಿರ್ದ ಸುಹೃಜ್ಜನದುಃಖಸಂಕುಲಂ
ನೆನೆದೊಡಮಂತೆ ಕೇಳ್ದೊಡೆ ನವವ್ಯಥೆಯಂ ನೆಱೆ ಮಾಡದಿರ್ಕುಮೇ ೯೯

ಎಂತಾನುಂ ನಿಲೆ ಪಿಡಿಯಿಸು
ಸಂತತಿಯಂ ಸ್ಮರಣಶೋಕಶಿಖಿಗಿಂಧನಮಾ
ಪ್ಪಂತೆಸಗಲ್ತಗದಿದನೆಂ
ದಿಂತುಸಿರ್ದಂ ಕರುಣದಿಂದಮುಗೆ ಕಣ್ಬನಿಗಳ್ ೧೦೦

ಎನುತ್ತುಂ ನುಡಿಯೆ ನಿಡಿಸುಯ್ದುಂ ಗುಡಗುಡನೆ ಸುರಿವ ಕಣ್ಬನಿಗಳಂ ಮಿಡಿಯುತ್ತುಂ ಮತ್ತಮಿಂತೆಂದಳ್

ಇದನೇನೆಂದಪ್ಪೆಂ ಲಜ್ಜಾಕರಮನಸುಸ ಪೋದಾ ಮಹಾರಾತ್ರಿಯೊಳ್ ಪೋಗದ ಮತ್ಪ್ರಾಣಂಗಳಿನಾ ಪೋದಪುವೆ ಕೇಳುತುಮಿರ್ಪ ನಿಂತಕಂ ನೋಡಲುಂ ಪೇಸಿದನೆನ್ನಂ ಕಷ್ಟೆಯಂ ಕಲ್ತೆರ್ದೆಯುವಳುಮನೆಱ್ದಂದು ಪೇಡ್ ಸಾವುಮೆನ್ನಲ್ಲಿ ಪುಗದು ಮತ್ತಂ ನಿಸ್ತ್ರಪಾಗ್ರೇಸರೆಯೆಂದೆನುಡಿವಲ್ಲಿಂದವೇಂ ಕಷ್ಟಮುಂಟೇ ೧೦೧

ಆ ವಜ್ರಪಾತದಿಂ ಮೇ
ಲೇವೇೞ್ದಪೆನಱಿದು ಪೇೞಲುಂ ಕೇಳಲುಮಿ
ನ್ನಾವಂಗಮನಲ್ಪಾಶ್ಚ
ರ್ಯಾವಹಮೊಂದಾದುದಾಗಳದನುಸಿರ್ದಪ್ಪೆಂ ೧೦೨

ಅದೆಂತೆಂದೊಡರತೀ ಯವಸ್ಥಾಂತರದೊಳೆಡೆವಿಡದೞುತ್ತಿರ್ದೆನ್ನಡಪದವಳ್ ಮೊಗಮಂ ನೋಡಿ

ತರಳಿಕೆ ಮಾಣದಿನ್ನನಿಸನಟ್ಟಿಪೆ ಸಂಗಡಿಸಿಂಧನಂಗಳಂ
ವಿರಚಿಸು ಬೇಗಮಿನ್ ಚಿತಿಯನೇಂ ತಡವೀ ಕ್ಷಣಮೆನ್ನ ಜೀವಿತೇ
ಶ್ವರನೊಡವೋಗವೇೞ್ಕುಮೆನಗೆಂಬುದುಮೊರ್ಮೆಯೆ ಚಂದ್ರಮಂಡಲಾಂ
ತರದೊಳದೊರ್ವನೆಂದು ಪೊಱಮಟ್ಟಿೞಿತಂದನಮರ್ತ್ಯಮಾರ್ಗದಿಂ ೧೦೩

ಧವಳಾಂಗಪ್ರಭೆ ದೆಸೆಯಂ
ಧವಳಿಸೆ ತನಿಗಂಪನಾಳ್ದ ಕಡುದಣ್ಪಿನಸುಂ
ಕವಿತರೆ ನೀಡಿದನಾಗಳ್
ದಿವಿಜೇಭಕರಾನುಕಾರಿ ನಿಜಕರಯುಗಮಂ ೧೦೪

ಅಂತತಿಶೀತಲಸ್ಪರ್ಶಂಗಳಪ್ಪ ಮೃಣಾಳಕೋಮಲಂಗಳೆನಿಪ ಕರಾಂಗುಳಿಗಳಿನೆನ್ನ ಮುಂದುಪರತನಾದ ಪುಂಡರೀಕನನೆತ್ತಿಕೊಂಡು

ಬಗೆಗೆಟ್ಟು ಸಾವ ಬಗೆಯಂ
ಮಗಳೆ ಮಹಾಶ್ವೇತೆ ಬಗೆಯದಿರ್ ಕೂಡುವೆ ನೀಂ
ಮಗುಳ್ದೆಯುಮಾತನನೆನುತುಂ
ಮಗುಳ್ದಾತಂಬೆರಸು ಗಗನಮಾರ್ಗಕ್ಕೊಗೆದಂ ೧೦೫

ಅಂತಾ ವ್ಯತಿಕರದೊಳೆನಗತಿಸಂಭ್ರಮಮುಂ ವಿಸ್ಮಯಮುಂ ಕೌತುಕಮು ಮೊಗೆಯೆ ಪಿರಿದುಮಂಜಿ ಕಪಿಂಜಲನನಿದೇನೆಂದು ಬೆಸಗೊಳೆಯುಮಾತ ನೆನಗೆ ಮಱುಮಾತುಗುಡದುನ್ಮುಖನಾಗಿ

ಎನಗಂ ಪೇೞದೆಯುಂ ಭೋಂ
ಕೆನಲೆನ್ನಯ ಸಖನನೆತ್ತಿವುಯ್ದ ಪೆಮ್ಮಾಣಿಂ
ದೆನುತುಂ ಕೋಪದಿನಾ ಪುರು
ಷನ ಪೆಱಗನೆ ತಾನುಮಂತರಿಕ್ಷಕ್ಕೊಗೆದಂ ೧೦೬

ಅಂತು ಮೂವರುಂ ನೋಡೆ ನೋಡೆ ಚಂದ್ರಮಂಡಲ ಮಧ್ಯದೊಳ್ ಪುಗೆ ಕಪಿಂಜಲನ ಪೋಗಿಂಗೆ ಶೋಕಷಿರ್ಮಡಿಯಾಗೆ ಕಿಂಕರ್ತವ್ಯತಾ ಮೂಢೆಯೆನಾಗಿ

ತರಳಿಕೆ ಪೇೞದೇನಱಿವೊ ನೀನೆನಲೆನ್ನ ವೊಲಾಗಳಳ್ಕಿ ನಿಂ
ಪರವಶೆಯಾಗಿ ನಿಂದುಮವಳೆನ್ನಯ ಸಾವಿನೊಳಾದ ಶಂಕೆಯಿಂ
ಕರುಣಮನಪ್ಪುಕಯ್ದುಸಿರ್ದಳಾನಱಿಯೆಂ ಸತಿ ಬಂದು ತಂದೆಯಂ
ತಿರೆ ಪದೆದಾ ಮಹಾಪುರುಷನಾಱಿಸಿದಂ ಭವದೀಯಶೋಕಮಂ ೧೦೭

ಇನ್ನರ ನುಡಿ ಕನಸಿನೊಳಂ
ನನ್ನಿಯೆನಲ್ ಕೇಳ ದಿವ್ಯಪುರುಷಂ ಪ್ರತ್ಯ
ಕ್ಷಂ ನಿನ್ನ ಮುಂದೆ ನುಡಿಯ
ಲ್ಕಿನ್ನುಮದೇನೆಂಬ ಸಂದೆಗಕ್ಕೆಡೆಯುಂಟೇ ೧೦೮

ನಿನ್ನಯ ಜೀವಿತೇಶ್ವರನ ಜೀವಮನಿನ್ನಿ ಪಡೆದಪ್ಪೆಲೆಂದೆ ಲೋ
ಕೋನ್ನತನಪ್ಪ ದಿವ್ಯಪುರುಷಂ ವಿಗತಾಸುವನುಯ್ದನೞ್ಕಱಿಂ
ನಿನ್ನುಮನೀಗಳಾಱಿಸಿದನಂತಿದಱಿಂದಿದು ನನ್ನಿಯಪ್ಪುದ
ಲ್ತೆನ್ನದೆ ಮಾಣ್ಬುದರ್ಕೆ ಪೆಱತೇಂ ಮರಣವ್ಯವಸಾಯಮೆಂಬುದಂ ೧೦೯

ನಿಸದಂ ಕಪಿಂಜಲಂ ಜೀ
ವಿಸುತಿರೆ ನಿನ್ನಲ್ಲಿಗೆಯ್ದಿದಿರನದಱಿಂ ರ
ಕ್ಷಿಸವೇೞ್ಕುಮಾವ ತೆಱದಿಂ
ದಸುವಂ ನಿನ್ನಲ್ಲಿಗಾತನೆಯ್ತರ್ಪಿನೆಗಂ ೧೧೦

ಎಂದವಳ್ ಕಾಲಮೇಲೆ ಬೀೞ್ವುದುಂ

ಪಿರಿದುಮಿದಂತುಟೆಂದು ಬಗೆದುಂ ನೆಱೆ ಬಾಷ್ಪೆಯೊಳಾದ ತೃಷ್ಣೆಯಂ
ಪರಿಹರಿಸಲ್ಕೆ ಮಾರ್ಗಮಿರದಾಗಿಯುಮುಕ್ಕೆವದಿಂದಮಂತೆ ಪೆಂ
ಡಿರ ಬಗೆ ಸಾಜದಿಂ ಕುಟಿಲಮಾಗಿಯುಮಿಂತು ದುರಾಶೆಯಿಂದಮೋ
ಸರಿಸದೆ ನನ್ನ ನಾನೆ ಬಿಡಲಾಱದ ಪಾತಕಿಯೆಂ ಮಹೀಪತೀ ೧೧೧

ಅಱಿವೆನ್ನಂ ತರಳಿಕೆ ಮೆ
ಯ್ವಱಿಯಿಂ ಪಿಡಿದೊಯ್ಯನೆತ್ತಿ ಮೆಲ್ಲನೆ ತಡಿಗಾ
ಗೆತ್ತಂದೀ ಕೊಳದೊಳ್ ನೀ
ರಿಱಿಯಿಸೆ ನೀರಿಱಿದೆನಿಲ್ಲಿ ಬೆಳಗಪ್ಪಾಗಳ್ ೧೧೨

ಅಂತು ನೀರಿಱಿದು ತದನಂತರಂ

ಆತನ ಪರಮಪ್ರೀತಿಯಿ
ನಾತನ ವಲ್ಕಲದಿನಾತನಕ್ಷಾವಳಿಯಿಂ
ದಾತನ ಕಮಂಡಲುವಿನಿಂ
ದಾತನ ವೇಷಮನೆ ತಾಳ್ದಿ ತಳೆದೆಂ ವ್ರತಮಂ ೧೧೩

ಅಂತು ತಳೆದು ಮದೀಯ ಮಂದಭಾಗ್ಯತೆಯುಮಂ ದೈವದ ದಾರುಣತೆಯುಮಂ ದುಃಖದ ದುಸ್ಸಹತೆಯುಮಂ ಪದಾರ್ಥದನಿತ್ಯತೆಯುಮಂ ಭಾವಿಸಿ ನೋಡಿ

ಮನಮಂ ನಿಗ್ರಹಿಸುತ್ತ ಸದ್ವಿಷಯದತ್ತಲ್ ಪೊರ್ದದಂತಾಗೆ ಮಾ
ಡಿ ನಿರುದ್ಧೇಂದ್ರಿಯೆಯಾಗಿ ಬಂಧುಜನಮಂ ತಾಯ್ತಂದೆಯಂ ಪತ್ತುವಿ
ಟ್ಟೆನಗಿನ್ನೊರ್ವರುಮೇವರೆಂಬ ಬಗೆಯಂ ನಿಶ್ಚೈಸಿ ಲೋಕೈಕನಾ
ಥನನಾನಾಗಳನಾಥೆಯೆಂ ಶರಣೆನುತ್ತಾಶ್ರೈಸಿದೆಂ ಸ್ಥಾಣುವಂ ೧೧೪

ಜಪದಿಂ ತಪದಿಂದೊಡಲಂ
ಕ್ಷಪಿಯಿಸಿದಪೆನೆಂಬೊಡದು ಕೃತಜ್ಞತೆ ಗಡ ಚಃ
ಜಪವೆಣಿಸುವ ನೆವದಿಂದಂ
ನೃಪ ತದ್ಗುಣಗಣಮನೀಗಳೆಣಿಸುತ್ತಿರ್ಪೆಂ ೧೧೪

ಅಯಶಕ್ಕೀಡಾದ ನಿರ್ಲಕ್ಷಣೆಯನಶುಭೆಯಂ ನಿಷ್ಫಲೋತ್ಪನ್ನೆಯಂ ನಿರ್ದಯೆಯಂ ನಿಃಸ್ನೇಹೆಯಂ ನಿಸ್ತ್ರಪೆಯನಸುಖೆಯಂ ನಿಂದ್ಯೆಯಂ ನಿಷ್ಫಲಪ್ರಾಣೆಯನಾದಂ ಕ್ರೂರೆಯಂ ಬ್ರಾಹ್ಮಣಹನನಮಹಾಪಾಪಮಂ ಗೆಯ್ದ ನಿಸ್ತ್ರಿಂಶೆಯನೆನ್ನಂ ಪಾಪೆಯಂ ನೀಂ ಬೆಸಗೊಳ್ವ ಫಲಮೇಂ ಪೇೞ್ ಮಹೀಪಾಲಚಂದ್ರಾ ೧೧೫

ಸೊಗಯಿಪ ಸಸಿ ಶರದದ ಬೆ
ಳ್ಮುಗಿಲೊಳ್ಪೊರೆಯಿಂದಮುಯ್ದು ಮುಸುಕಿರ್ದುದೆನಲ್
ಸೊಗಯಿಪ ದುಗುಲದ ಸೆಱಗಂ
ಮೊಗಕ್ಕೆ ತೆಗೆದಾಗಳಿರದೆ ಗೋಟಿಟ್ಟುಟ್ತಳ್ ೧೧೬

ಅಂತೞುತ್ತಿರ್ದಳನೆಂತಾನುಂ ಸಂತೈಸಿ

ಮೊದಲೊಳ್ ಗೌರವಮಂ ಮಾ
ಡಿದುದಲ್ಲದೆ ತನ್ನ ವಾರ್ತೆಯಂ ನೆಱೆ ಸದ್ಭಾ
ವದಿನಾದ್ಯಂತಂ ಸತಿ ಪೇ
ೞ್ದುದರ್ಕೆ ಹೃತಹೃದಯನಾಗಿ ಚಂದ್ರಾಪೀಡಂ ೧೧೮

ಇನಿಸೊಗೆತರ್ಪನ ಕಣ್ಣನಿಗ್ಗಳಿಂದಮೆ ನೇಹಮನುಂಟುಮಾಡುವಂಗನೆಯರೊಳೇನಪಾರಭವಭೋಗಮನಿಂತಿರೆ ಪತ್ತುವಿಟ್ಟು ಕಾನನದೊಳೆ ನಟ್ಟು ನಿಂದು ಸುಕುಮಾರಮೆನಿಪ್ಪ ಶರೀರಮಂ ಕಱುತ್ತಿ ನಿವಿರಿದೊಂದು ಘೋರತಪಕೊಡ್ಡಿದೆ ನಿನ್ನವೊಲಾರ್ ಕೃತಜ್ಞೆಯರ್ ೧೧೯

ಸತ್ತವರೇೞ್ವರೆ ಪೇೞೊಡ
ಸತ್ತೊಡೆ ತಮ್ಮೞಲಿನಳವಿಯುಂ ಮಟ್ಟಿ ಸಲೆಂ
ದುತ್ತವಳಿಕೆಯೊಳೆ ಸಾವರ್
ಸತ್ತವರವಗರ್ವ ಹಿತಮನಾಚರಿಸುವರೋ ೧೨೦

ಅವರವರ್ಗೆಯ್ದ ಕರ್ಮಫಲವಿರ್ದೆಡೆ ಬೇಱದಱಿಂದೆ ಮೇಲೆ ಕೂ
ಡುವರೊಡಸತ್ತರೆಂಬೊಡದು ಕೂಡದು ಕೇವಲಮಾತ್ಮಘಾತದೋ
ಷವೆ ಪೆಱತಿಲ್ಲ ಸತ್ತರೊಡಸಾಯದೆ ನಿಂದೊಡೆ ಮಾಡಲಕ್ಕುಮಿ
ತ್ರವರ್ಗಜಲಾಂಜಲಿಪ್ರಭೃತಿದಾನವಿಶೇಷಮಹೋಪಕಾರಮಂ ೧೨೧

ಸತ್ತಳೆ ಕಾಮದೇವನ ಪರೋಕ್ಷದೊಳಾ ರತಿ ಪಾಂಡು ಸತ್ತೊಡಂ
ಸತ್ತಳೆ ಕುಂತಿ ಮತ್ತಮಭಿಮನ್ಯುಕುಮಾರಕನಂದು ಸತ್ತೊಡೇ
ನುತ್ತರೆ ಸತ್ತಳೇ ನೆಗಳ್ದ ಸಿಂಧುನೃಪಾಲಕನಂದು ಸತ್ತೊಡಂ
ಸತ್ತಳೆ ದುಶ್ಶಳಾವನಿತೆಯಿಂತಿವು ನೀವಱಿದಂದವಲ್ಲವೇ ೧೨೨

ಅಂತುಮಲ್ಲದೆಯುಂ

ಆನಾಶ್ವಾಸಿಸಿದನಿತಱೊ
ಳೇನಾ ಚಂದ್ರಮನೆ ನಿನ್ನನಾಶ್ವಾಸಿಸಿದಂ
ತಾನೆಂದೊಡದೇನೆಂಬುದೊ
ಮಾನಿನಿ ತದ್ವಿಧರ ವಚನಮವಿತಥಮೆ ವಲಂ ೧೨೩

ಅದಱಿನನಿಂದ್ಯಮಪ್ಪ ನಿಜಚರಿತಮಂ ನಿಂದಿಸಲಾಗದೆಂದನೇಕ ಪುರಾಣ ಕಥಾಪ್ರಕಥನದೊಳಂ ಬಹುಪ್ರಕಾರ ಸಾಂತ್ವವಚನದೊಳಮೆಂ ತಾನುಮರಸಂ ಸಂತೈಸಿ

ವಿನಯದೊಳೆ ಮತ್ತಮೆಂದೊ
ಯ್ಯನೆ ನಿರ್ಝರವಾರಿಯಂ ನಿಜಾಂಜಲಿಯಿಂ ತಂ
ದನುವಿಸಿ ವದನಪ್ರಕ್ಷಾ
ಳನಮಂ ಮಾಡಿಸಿದನಂದು ಚಂದ್ರಾಪೀಡಂ ೧೨೪

ಅಂತು ಮಾಡಿಸಿ ಮನೋಭವವಿಜೃಂಭಿತಂಗಳಂ ಮನದೊಳ್ ಭಾವಿಸುತ್ತುಂ ವಿಸ್ಮಯಾಕ್ಷಿಪ್ತಚಿತ್ತನಿಂತೆಂದಂ

ತರಳಿಕೆಯೆಂಬಳ್ ನಿಮ್ಮಯ
ಪರಿಚಾರಿಕೆಯೆತ್ತವೋದಳೆಲ್ಲಿರ್ದಪಳೆಂ
ದರಸಂ ಬೆಸಗೊಳ್ವುದುಮಾ
ದರದೆ ಮಹಾಶ್ವೇತೆ ಪೇೞಲುದ್ಯತೆಯಾದಳ್ ೧೨೫

೫. ಕಾದಂಬರಿಯ ಪ್ರಥಮ ಸಂದರ್ಶನ.

ಅದೆಂತೆನೆ—

ಮೊದಲೊಳ್ ನಿನಗಾಂ ಪೇಳ್ದಮೃ
ತದಿನುದಯಿಸಿದಪ್ಸರೋಂಗನಾನ್ವಯದೊಳ್ ಪು
ಟ್ಟಿದಳಲ್ಲಿ ಮದನಮುದವತಿ
ಮದಿರೇಕ್ಷಣೆ ಮದಿರೆಯೆಂಬ ಕನ್ಯಾರತ್ನಂ ೧

ಆ ಕನ್ನೆಯ ಕಯ್ವಿಡಿದಂ
ಸ್ವೀಕೃತ ಗಂಧರ್ವರಾಜ್ಯ ಮಹಿಮೋದಯನ
ಪ್ರಾಕೃತ ನಿಜವಿಭವ ಕೃತಾ
ಧೀಗ್ಕೃತ ಬುಧಜನಮನೋರಥಂ ಚಿತ್ರರಥಂ ೨

ಆ ದಂಪತಿಗಧಿಕ ಪ್ರೇ
ಮೋದಯವೊದವಲ್ಕೆ ಪುಟ್ಟಿದಳ್ ಭುವನಜನಾ
ಹ್ಲಾದಂ ಜನಿಯಿಸುವಿನೆಗಂ
ಕಾದಂಬರಿಯೆಂಬ ಪೆಸರ ಕನ್ಯಾರತ್ನಂ ೩

ಒಡನುಂಡೊಡನಿರ್ದೊಡವಳೆ
ದೊಡನಾಡಿಗಳಾಗಿ ನೃತ್ಯಗೀತಂ ಮೊದಲಾ
ಗೊಡನೊಡನೆ ಕಲ್ತು ಕಲೆಗಳ
ನೆಡೆವಿಡದಿರ್ದ್ದಗ್ಗಳವಾಯ್ತು ಪರಮಪ್ರೇಮಂ ೪

ಅನಂತರಂ ಶೈಶವಮಂ ಪತ್ತುವಿಟ್ಟು ಪುರ್ದುಮಾ ಕಾದಂಬರೀದೇವಿಯುಂ ಮದಿರೆಯ ಹತವೃತ್ತಾಂತಮಂ ಕೇಳ್ದತ್ಯಂತಶೋಕಾಕ್ರಾಂತೆಯಾಗಿ

ಇರಲಿಂತಪ್ಪೊಂದು ಶೋಕಾಕುಲತೆಯೊಳೆ ಮಹಾಶ್ವೇತೆ ಮತ್ತಾಸೆಯಿಂ ತಾಂ
ನೆರೆದೇನಾನಿಂತು ಕನ್ಯಾವ್ರತದೊಳೆ ಕಳೆವೆಂ ಕಾಲಮಂ ತಂದೆಯಿನ್ ತಾ
ನಿದಾವಂಗೆನ್ನನೀಯಲ್ ಬಗೆದು ಮನದೊಳಂತುಜ್ಜುಗಂಗೆಯ್ದೊಡಂ ಚೆ
ಚ್ಚರವೆನ್ನೀ ಪ್ರಾಣಮಂ ತಾಂ ಬಿಡದಿರೆನೆನುತುಂ ನಿಶ್ಚಯಂಗೆಯ್ದುಳಾಗಳ್ ೫

ಅಂತು ಪ್ರಾರೂಢಯೌವನೆಯಪ್ಪ ಮಗಳ ನಿಶ್ಚಯಮಂ ಮದಿರಾ ಮಹಾದೇವಿಯುಮರಸು ಚಿತ್ರರಥನುಂ ಕರ್ಣಪರಂಪರೆಯಿಂ ಪರಿಜನದತ್ತಣಿಂ ಕೇಳ್ದು ಪಿರಿದುಮಳಲ್ದು ಕ್ಷೀರೋದನೆಂಬ ಕಂಚುಕಿಯಂ ಕರೆದೆನ್ನಲ್ಲಿಗಟ್ಟಿದೊಡಾತಂ ಬಂದು

ತನ್ನ ಮಹಾವ್ಯತಿಕರದೊಳ್
ಮುನ್ನವೆ ಬೆಂದವರ್ಗೆ ಮತ್ತೆ ಕಾದಂಬರಿಯಿಂ
ದಂ ನೋವು ಬಂದುದದಱಿಂ
ದಿನ್ನುಸುವಿನೊಳಾನೆ ಶರಣಮಾ ವ್ಯತಿಕರದೊಳ್ ೭

ಎಂದು ಜನನೀಜನಕರಟ್ಟಿದರೆಂದು ನುಡಿಯೆ ಗುರುಗಳ್ ತಾವೇನನೊಂದಂ ಬೆಸಸಿದರದನೇ ಕೊಳ್ವುದಿನ್ನೆನ್ನ ಜೀವಂ ಬೆರಸಾನಿಂತಿರ್ಪುದಂ ತಾಂ ಬಯಸುವ ಬಗೆಯೆಂತೆಂದೊಡೆಂದಿಂತು ಕಾದಂಬರಿಗಾದಂ ಬುದ್ಧಿವೇಳ್ದಟ್ಟಿದೆನಿರದಧಿಕಪ್ರೇಮದಿಂ ಸಾವಿದಲ್ಲಂ ಬೆರಸತ್ತಲ್ ಪೋದಳಂತಾಗಳೆ ತರಳಿಕೆಯುಂ ನೀವುಮೆಯ್ತಂದಿರೀಗಳ್

ಎಂದು ಪೇಳ್ದಳನ್ನೆಗಮಿತ್ತ ಲಾಂಛನಚ್ಛಲದಿಂ ಶೋಕಾನಲದಗ್ಧಮಪ್ಪ ಮಹಾಶ್ವೇತಾಹೃದಯಮಂ ವಿಡಂಬಿಸುವಂತೆಯುಂ ಮುನಿಕುಮಾರವಧಮಹಾಪಾತಕಮಂ ತಾಳ್ದಿದಂತೆಯುಮಾಗಿ ನಿಖಿಲಲೋಕ ನಿದ್ರಾಮಂಗಲಕಲಶದಂತೆ ಕುಮುದಿನೀಬಾಂಧವಂ ಗಗನಾಂಗಣದೊಳೆಸೆಯೆ ಸುಪ್ತೆಯಾದ ಮಹಾಶ್ವೇತೆಯಂ ನೋಡಿ ಚಂದ್ರಾಪೀಡಂ ಪಲ್ಲವಶಯನತಲದೊಳ್ ಮೆಯ್ಯನಿಕ್ಕಿ ಬೀಡಂ ನೆನೆದು

ಈ ಯವಸರದೊಳ್ ವೈಶಂ
ಪಾಯನನುಂ ಪತ್ರಲೇಖೆಯುಂ ಭೂಪರುಮಾ
ನೀ ಯಂದದಿನಗಲಲ್ಕೆನಿ
ತಾಯಸಮಂ ಪಡುವರೆಂದು ಚಿಂತಿಸುತಿರ್ದಂ ೮

ಅಂತು ಚಿಂತಿಸುತಿರ್ದಿರುಳಂ ಕಳೆದು ಬೆಳಗಪ್ಪುದುಂ ಕೃತಪ್ರಾಭಾತಿಕ ನಿಯಮನಾಗೆ ಮಹಾಶ್ವೇತೆಯುಮಘಮರ್ಷಣ ನಿಯಮ ಜಪಂಗಳಂ ಮಾಡುತಿರ್ದಳನ್ನೆಗಮಿತ್ತ ಷೋಡಶವರ್ಷವಯಸ್ಕನುಮುದಾತ್ತಾಕಾ

ರನುಂ ರಾಜಕುಲ ಸೇವನಾತಿಚತುರನುಮಪ್ಪ ಕೇಯೂರನೆಂಬ ಗಂಧರ್ವಕುಮಾರಂಬೆರಸು ತರಳಿಕೆ ಮಹಾಶ್ವೇತೆಯಲ್ಲಿಗೆ ಬಂದಿರ್ವರುಂ ದೂರಾವನತೋತ್ತಮಾಂಗರಾಗಿ ಪೊಡವಟ್ಟು ಕುಳ್ಳಿರ್ದು

ನಾಡಾಡಿಯಲ್ತು ರೂಪಿನ
ಗಾಡಿಯಿದೆಲ್ಲಿರ್ದು ಬಂದುದೆನುತುಂ ಚಂದ್ರಾ
ಪೀಡನನತಿವಿಸ್ಮಯದಿಂ
ನೀಡುಂ ನೋಡುತ್ತಮಿರ್ದನಾ ಕೇಯೂರಂ

ಆಗಳ್ ಮಹಾಶ್ವೇತೆಯುಂ ನಿರ್ವರ್ತಿತಾನುಷ್ಠಿತೆಯಾಗಿ ತರಳಿಕೆಯ ಮೊಗಮಂ ನೋಡಿ

ನುಡಿದಾನಟ್ಟಿದುದನೊಡ್ಡಿ
ಬಡಿಸಿದ್ದೊ ಮತ್ತೆ ಬೆಸಯನೆಂದೊಡಿ ತಂಗಿಗಳ್
ನುಡಿ ಪೋಗು ನೀನೆನುತ್ತೆ
ನ್ನೊಡನಟ್ಟಿದಳಲ್ತೆ ತನ್ನ ವೀಣಾಧರನಂ ೧೦

ಎಂಬುದುಮಾತನಂ ಬೆಸಗೊಳೆ

ಮನಮಂ ನೋಡಲಿದೇಕೆ ತಮ್ಮ ಮನಮಂ ತಾಂ ನೋಡಲೇನಾಂ ತಪೋ
ವನದೊಳ್ ಕೋಟಲೆಗೊಂಡು ದುಃಖದೆ ತಪಂಗೆಯ್ಯುತ್ತಿರಲ್ ಮತ್ತೆಯುಂ
ಮನದೊಳ್ ತಾಂ ಸುಖದಿಂದಮಿರ್ಪಳವಳೆಂಬುದ್ವೇಗದಿಂದಕ್ಕನಿಂ
ತಿನಿತೊಂದಂ ನುಡಿದಟ್ಟಿದಳ್ ಪಿರಿದುಮುಂತೆ ನಟ್ಟಲೇಂ ತಕ್ಕುದೋ ೧೧

ಎಂದಿವು ಮೊದಲಾಗಿ ಕಾದಂಬರಿ ನುಡಿದ ನುಡಿಗಳಂ ಕೇಯೂರಕಂ ಬಿನ್ನವಿಸಲದಂ ಕೇಳ್ದು ತನ್ನೊಳ್ ತಾನೆ ಭಾವಿಸಿ

ಬಂದಪೆ ಪೇೞ್ದಪೆ ನಯ
ದಿಂದಲ್ಲಿಗೆ ತಕ್ಕುದೆಲ್ಲಮಂ ಮುನ್ ನೀಂ ಪೋ
ಗೆಂದು ಕಟಿಪಲ್ಕೆ ಪೋದಂ
ಮುಂದಾ ಕೇಯೂರಕಂ ಸುವಿಲುಳಿತಹಾರಂ ೧೨

ಅಂತಾತಂ ಪೋಗೆ ಚಂದ್ರಾಪೀಡನನಿಂತೆಂದಳ್

ಇದೆ ಸಾರಿರ್ಪುದು ರಾಜಧಾನಿ ಪಿರಿದುಂ ಚಿತ್ರಾವಹಂ ಬಂದು ನೋ
ಟ್ಪುದು ನೀನೆನ್ನೊಡಸಂದು ಮತ್ಸಖಿಗಮೆಂತುಂ ಬುದ್ಧಿವೇಟಲ್ಕೆ ವೇ
ಟ್ಪುದು ಮತ್ಪ್ರಾಣಸಮಾನೆಯಾಕೆ ನಿಜದಿಂದಸ್ವಸ್ಥೆ ಗಂಧರ್ವಲೋ
ಕದೊಳೆಂದಕ್ಕೆ ಭವದ್ವಿಲೋಕನಸುಖಂ ಭೂಪಾಲವಿದ್ಯಾಧರಾ ೧೩

ಅದಲ್ಲದೆಯುಂ ಮದೀಯಪ್ರಾರ್ಥನೆಯಂ ನಿರರ್ಥಕಂ ಮಾಡ ದಿಂದು ಬಂದಲ್ಲಿ ವಿಶ್ರಮಿಸಿ ನಾಳೆ ಬೀಡಿಂಗೆ ಬಿಜಯಂಗೆಯ್ವುದೆಂದು ಮತ್ತಮಿಂತೆಂದಳ್

ನಿನ್ನನಕಾರಣಬಾಂಧವ
ನಂ ನೋಡಿಯೆ ಶೋಕವಳಿದುದು ಸುಜನರ ಲೋ
ಕೋನ್ನತರ ಪರಹಿತರ ನಿ
ಮ್ಮನ್ನರ ಬರವಾರ್ಗೆ ಸುಖಮನುತ್ಪಾದಿಸದೋ ೧೪

ಎಂದು ನುಡಿದೊಡೆ

ಇನಿತಂ ಪ್ರಾರ್ಥಿಸಲೇಂ ನೀ
ನಿನಿತೆಸಗುವುದೆಂದು ಬೆಸಸುವುದು ಸಾಲ್ಗುಂ ನೀ
ಮೆನಗೆಂದು ವಿನಯದೊಳ್ ಕಾ
ಮಿನಿಪಿಂತನೆ ನಡೆದನಂದು ಚಂದ್ರಾಪೀಡಂ ೧೫

ಅಂತು ಬರುತ್ತುಂ ಹೇಮಕೂಟಮನೆಯ್ದಿ ವಿಚಿತ್ರಮೆನಿಸಿದ ಚಿತ್ರರಥ ರಾಜಧಾನಿಯಂ ಪೊಕ್ಕು ಸಪ್ತಕಕ್ಷ್ಯಾಂತರಂಗಳ ಕಾಂಚನಮಯ ತೋರಣಂಗಳಂ ನುಸುಳ್ದು ಕನ್ಯಾಂತಃಪುರದ್ವಾರಮನೆಯ್ದಿ ವರ್ಪಾಗಳ್

ಇದು ಸ್ತ್ರೀಮಯಮಪ್ಪ ಲೋಕಮಿದು ಬೇಱೊಂದಂಗನಾದ್ವೀಪಮಿಂ
ತಿದು ನಿಷ್ಪೂರುಷಜೀವಲೋಕಮಿದು ಸರ್ಗಕ್ಕೆಂದು ಪದ್ಮೋದ್ಭವಂ
ಸುದತೀರತ್ನಸಮೂಹಮಂ ಪದಪಿನಿಂ ಬಯ್ಚಿಟ್ಟ ಭಂಡಾರಮ
ಪ್ಪುದೆನಲ್ ಸಂದಣಿಸಿರ್ದ ಸುಂದರಿಯರಂ ಕಂಡಂ ನರೇಂದ್ರಾತ್ಮಜಂ ೧೬

ಎರಡುಂ ಪಕ್ಕದೊಳೋಲಗಕ್ಕೆ ಪದಪಿಂ ಬಂದಿರ್ದ ಕಾಂತಾಜನೋ
ತ್ಕರರತ್ನಾಭರಣ ಪ್ರಭಾಪ್ರಸರವಾದಂ ತಳ್ತು ತದ್ವೀಥಿಕೆಯಂ

ತರದೊಳ್ ಪೆರ್ಬೊನಲಿಂದದಿಂ ಪರಿಯೆ ಕಂಡಂ ತಾ ಪ್ರಭಾಪೂರದೊಳ್
ಭರದಿಂ ತಾನಿದಿರೀಸುವಂತೆ ನಡೆದಂ ಭೂಪಾಲವಿದ್ಯಾಧರಂ ೧೭

ಪೊಳೆಯುತ್ತಿರ್ಪ ಮಹಾವರಾಹವದನೋದ್ಯದ್ದಂಷ್ಟ್ರಮಂ ನೆಮ್ಮಿ ನಿಂ
ದಳೊ ಭೂಕಾಂತೆಯೆನಲ್ಕೆ ನೀಲವಸನಪ್ರಚ್ಛನ್ನ ಪರ್ಯಂಕಮಂ
ಡಳದೊಳ್ ಬೆಳ್ವಿಸೆದಿರ್ದ ಕೌಳುಡೆಯನೊಂದಂ ನೆಮ್ಮಿ ಕುಳ್ಳಿರ್ದ ಕೋ
ಮಳೆಯಂ ದೂರದೆ ನೋಡಿ ಕಂಡನರಸಂ ಕಾಂದಬರೀದೇವಿಯಂ ೧೮

ಅಂತಿರ್ದ ಗಂಧರ್ವರಾಜನಂದನೆಯನತಿದೂರದೊಳ್ ವಿಸ್ಮಿತಾಂತರಂಗನಾಗಿ ನೋಡಿ

ಇವಳಂ ನೋಡಲ್ ಪಡೆದೆ
ನ್ನ ವಿಲೋಚನಮಾವ ನೋಂಪಿಯಂ ನೋಂತುವೊ ಮಾ
ಯ್ದ ವಿಧಾತ್ರನೇಕೆ ವಿರಚಿಸ
ನೊ ವಿಲೋಚನಮಯಮೆನಲ್ ಮದಿಂದ್ರಿಯಚಯಮಂ ೧೯

ಬಗೆಯೊಳ್ ಪಿರಿದುಂ ಕೌತುಕ
ಮೊಗೆಯಲ್ಕನ್ಯೋನ್ಯವೊಲ್ದು ನೋಡುತ್ತಿರ್ಪ
ನ್ನೆಗವೊರ್ಮೆದಲರ್ವರದಿ
ಟ್ಟಿಗಳುಂ ಸಮದಿಟ್ಟಿಯಾದುವಂತಾ ಕ್ಷಣದೊಳ್ ೨೦

ಅಂತು ನೋಡಿ

ಈತಂ ಕೇಯೂರಂ ಪೇ
ಳ್ದಾತಂ ಪುಗುತರ್ಪನೆಂದೆನುತ್ತುಂ ತದ್ರೂ
ಪಾತಿಶಯಕ್ಕಚ್ಚರಿವ
ಟ್ಟಾ ತರುಣಿಯುಮಂತೆ ಬಿಡದೆ ನೋಡುತ್ತಿರ್ದಳ್ ೨೧

ಒದವೆ ಪುಲಕಾಂಕುರಂಗಳ್
ಮೊದಲೊಳ್ ಭೂಷಣದ ರವಮೆರಡನೆಯ ಸೂಚ್ ಮು
ನ್ನಿದಿರೇಳ್ಪೆ ತಾಂ ಬಟಿಕ್ಕಿರ
ದಿದಿರೆಟ್ಟಿದಳ್ ತರಳನಯನೆ ಸಂಭ್ರಮದಿಂದಂ ೨೨

ಪಲವು ದಿವಸಕ್ಕೆ ಕಂಡೊಗೆ
ದೊಲವಿಂ ಬಿಗಿಯಪ್ಪಿದಳ್ ಮಹಾಶ್ವೇತೆಯನಾ
ಲಲನೆ ಮಹಾಶ್ವೇತೆಯುಮಾ
ಲಲನೆಯನನುರಾಗದಿಂದಮಪ್ಪಿದಳಾಗಳ್ ೨೩

ಅನಂತರಂ ಮಹಾಶ್ವೇತೆ ಕಾದಂಬರಿಯನಿಂತೆಂದಳ್ ಚಂದ್ರಾಪೀಡನೆಂಬೀ ಮಹಾನುಭಾವಂ ಭಾರತವರ್ಷದ ರಾಜನುಂ ಕ್ಷಪಿತ ಪ್ರಜಾಪೀಡನುಮೆನಿಸಿದ ತಾರಾಪೀಡನರೇಂದ್ರಂಗೆ ನಂದನಂ ದಿಗ್ವಿಜಯ ಪ್ರಸಂಗದಿಂ ಬೞಿಸಂದೀ ಪ್ರದೇಶಕ್ಕೆ ಬಂದನಲ್ಲದೆಯುಂ ಪರಿತ್ಯಕ್ತಸಕಲ ಸಂಗೆಯಾಗಿ ಕಲ್ಲೆರ್ದೆಯಳೆನಿಸಿದೆನ್ನಂ ಕಾಣಲೊಡನೆ ಸ್ವಭಾವಸರಳತೆಯನಪ್ಪುಕಯ್ಯು ನಿಜಗುಣದಿಂ ನಿಷ್ಕಾರಣಬಂಧುವುಂ ನಿರ್ನಿಮಿತ್ತಮಿತ್ರನುಮೆನಿಸಿದನೀ ಮರ್ತ್ಯಲೋಕದ ಸಫಲತೆಯುಮಂ ಸೌಭಾಗ್ಯದ ಭಾಗ್ಯಮುಮಂ ಮನುಷ್ಯರ ಗ್ರಾಮ್ಯತೆಯುಮಂ ನೀನುಂ ಕಾಣ್ಬೆಯೆಂದೆಂತಾನುಮಿಲ್ಲಿಗೊಡಗೊಂಡು ಬಂದೆಂ

ಅರಸನನಾಂ ಕಂಡಱಿಯೆಂ
ಪರಿಚಯಮಿಲ್ಲೆನ್ನೊಳಿಂದು ಮಿಗೆ ತಾಂ ನಾಣ್ಚು
ತ್ತಿರದಿಂದೆನ್ನೊಳದೆಂತಂ
ತಿರೆ ನೀಂ ನೆಗೞ್ವುದು ನಿರಂತರಂ ಕಮಲಮುಖೀ ೨೪

ಎಂದು ಮಹಾಶ್ವೇತೆ ಕಾದಂಬರಿಗಱಿಪುವುದುಂ ಚಂದ್ರಾಪೀಡನುಂ ಕಯ್ಗಳಂ ಮುಗಿಯೆ ಸರ್ವಾಂಗಪುಳಕಮಂ ತಳೆದು

ಪಿರಿದೊಂದಟ್ಟುಱೊಳೊಲ್ದು ನೋೞ್ಪವಳ್ ದೀರ್ಘಾಪಾಂಗದೇಶಕ್ಕೆ ಚೆಚ್ಚರಮಾಗಳ್ ಪರಿತಂದ ಸೇದ್ಯೊದವಲ್ ಘರ್ಮೋದಬಿಂದೂತ್ಕರಂ ಸುರಿಯುತ್ತಿರ್ಪುದು ಕಣ್ಣ ಪಾಪೆಗೆಲೆ ನೋಡೆಂಬಂದದಿಂ ಸ್ನೇಹನಿರ್ಭರವಾ ಕಾಂತೆಗೆ ಭೋಂಕೆನಲ್ ಸುರಿದುವಾನಂದಾಶ್ರುಬಿಂದೂತ್ಕರಂ ೨೫

ಅನಂತರಂ ಪರಿಜನಂ ಸಂಭ್ರಮಂಬೆರಸು ತಂದು ಶಯನತಳಶಿರೋಭಾಗದೊಳಿಕ್ಕಿದ ಹೇಮಪದಾಂಕಿತಾಸನದೊಳರಸಂ ಕುಳ್ಳಿರೆ ಕಾದಂಬರಿ

ಮಹಾಶ್ವೇತೆಯೊಡನೆ ನಿಜಪರ್ಯಂಕದೊಳ್ ಕುಳ್ಳಿರ್ಪುದುಂ ಮಹಾಶ್ವೇತೆಯು ಕಣ್ಣುಱಿದು ವೇಣುರವಂಗಳುಮಂ ವೀಣಾಸ್ವನಾದಂಗಳುಮಂ ಗೀತಸ್ವನಂಗಳುಮಂ ಮಾಗಧಿಯರ ಜಯಶಬ್ದಂಗಳುಮಂ ಪ್ರತೀಹಾರಿಯರ್ ನಿವಾರಿಸುತ್ತುಮಿರ್ದರನ್ನೆಗಂ

ಪ್ರಿಯದಿಂ ಕಾಂತೆ ಮಹಾಶ್ವೇ
ತೆಯ ಕಾಲಂ ತಾನೆ ಕರ್ಚಿ ಪದಪಿಂದೆ ನಿಜ
ಪ್ರಿಯಸಖಿಯೆನಿಸಿದ ಮದಲೇ
ಖೆಯೆಂಬಳಿಂ ನೃಪನ ಕಾಲ್ಗಳಂ ಕರ್ಚಿಸಿದಳ್ ೨೬

ಅನಂತರಂ ತಾಂಬೂಲಪ್ರದಾನೋದ್ಯತೆಯಾದ ಕಾದಂಬರೀದೇವಿಯರ್ ಮಹಾಶ್ವೇತೆಯಿಂತೆಂದಳ್

ಭುವನಾಧೀಶ್ವರಸುತನೀ
ನವಾಗತಂ ಮಾನ್ಯನಪ್ಪನಾರಾಧ್ಯನೆ ದಲ್
ನವಗೆಲ್ಲ ತೆಱದಿನದಱಿಂ
ದೀವುದರಸಂಗೆ ಮುನ್ನಮೀ ತಂಬುಲಮಂ ೨೭

ಎಂದು ನುಡಿಯೆ

ಅನಕ್ಕ ನಾಣ್ಚುವೆಂ ಪಿಡಿ
ನೀನೆ ನೃಪಂಗಿಕ್ಕು ತಂಬುಲಮನಱಿವೆನೆ ಪೇ
ಜೇನುಮನಾನೆಂದತಿ ಲ
ಜ್ಜಾನತಮುಖಿಯಾಗಿ ಕಾಂತೆ ಮೆಲ್ಲನೆ ನುಡಿದಳ್ ೨೮

ಅಂತು ನುಡಿಯೆ ಮಹಾಶ್ವೇತೆ ಮತ್ತಮಾಗ್ರಹಿಸೆ ತಂಬುಲಂಗುಡಲುಜ್ಜುಗಂಗೆಯ್ದು

ಬೆಮರಿಂ ಮುಟುಗಿದಪೆಂ ಸಂ
ಭ್ರಮದಿಂ ಬಿಟ್ಟಪ್ಪೆನರಸ ಕಯ್ಗುಡು ನೀಂ ಬೇ
ಗಮೆನಿಪ್ಪ ತೆಱದೆ ತಾಂಬೂ
ಲಮಿಳಿತಮಂ ಕಾಂತೆ ನೀಡಿದಳ್ ನಿಜಕರಮಂ ೨೯

ಆಗಳ್ ಪಂಚೇಂದ್ರಿಯವೃತ್ತಿಗಳೆ ಬೇಱೆ ಬೇಱೆ ರೂಪಂದಳೆದುವೆನಿ
ಪಱಿಗುಳಿಗಳಿಂ ಮನಂಗೊಳಿಸುವ ಕರಕಮಲಂಗಳಂ ಚಂದ್ರಾಪೀಡಂ ನೀಡೆ
ಎನಸುಂ ಮುಂದೆ ನಖಾಂಶು ನಿಳ್ಕೆ ನೃಪಹಸ್ತಾನ್ವೇಷಣಂಗೆಯ್ವವೋಲ್
ನಿನಗೆನ್ನಂ ಬಿಡದುಣ್ಮಿದೀ ಬೆಮರೆ ಕಯ್ನೀರಾಗಿರಲ್ ತೋರ್ಕೆಗೊ
ಟ್ಟನನಂಗಂ ಪಿಡಿ ನಿನ್ನ ಕಯ್ಯೆಡೆಯನೊಂದಿರ್ದಪ್ಪುದಿನ್ನೆನ್ನ ಜೀ
ವನವೆಂಬಂದದಿನಿಕ್ಕಿದಳ್ ನಡುಗುತುಂ ತನ್ವಂಗಿ ತಾಂಬೂಲಮಂ ೩೦

ಅನಂತರಂ ಮಹಾಶ್ವೇತೆಗಂ ತಾಂಬೂಲಮಂಗೊಟ್ಟಳನ್ನೆಗಮೊರ್ವಂ ಕಂಚುಕಿ ಬಂದು ಗಂಧರ್ವರಾಜನುಂ ಮದಿರಾಮಹಾದೇವಿಯುಂ ನಿಮ್ಮಂ ನೋಡಲುತ್ಕಂಠರಾಗಿ ಕರೆಯಲಟ್ಟಿದರೆಂಬುದುಂ ಮಹಾಶ್ವೇತೆ ಪೋಗಲುದ್ಯೋಗಂಗೆಯ್ದರಸಂಗಿರ್ಕೆದಾಣಮಾವುದೆಂದು ಕಾದಂಬರಿಯಂ ಬೆಸಗೊಳ್ವುದುಮಾಕೆಯಿಂತೆಂದಳ್

ಮೊದಲೀಯರಸನನಾಂ ಕಾ
ಣ್ಬುದುಮೆನ್ನಯ ತನುವುಮೆನ್ನದೆನೆ ಮನೆಯಾ
ರದು ನೃಪತಿಗೆಲ್ಲಿ ಬಗೆ ಬ
ರ್ಪುದಾಮೆಡೆ ಭವನಮನೋಜ್ಞಮಲ್ಲಿಯೆ ನಿಲಿಸಿಂ ೩೧

ಎಂಬುದುಂ ಮಹಾಶ್ವೇತೆ ನಿಜಪ್ರಾಸಾದಸಮೀಪವರ್ತಿಯಪ್ಪ ಪ್ರಮದವನಕೇಳೀಶೈಲದ ರತ್ನಭವನದೊಳರಸನಿರ್ಕೆಗೆಂದು ಪೇೞ್ದು ಚೈತ್ರರಥನಂ ಕಾಣಲ್ಕೆ ಪೋದಳಿತ್ತಲಾ ಕ್ರಾಂತೆಯು ಪಿಂತನೆ ಚಂದ್ರಾಪೀಡಂ ವಿನೋದಾರ್ಥಂ ಕಾದಂಬರಿಯ ಬೆಸದಿಂ ಪ್ರತೀಹಾರಪ್ರೇಷಿತೆಯರಪ್ಪ ವೀಣಾವೇಣುವಾದ್ಯನಿಪುಣೆಯರುಂ ಗೀತಕಲಾಕುಶಲೆಯರುಂ ದುರೋದರಕ್ರೀಡಾರಾಗಿಣಿಯರುಂ ಚಿತ್ರಕರ್ಮಚತುರೆಯರುಂ ಸುಭಾಷಿತಪಠನಪರಿಣತೆಯರುಮೆನಿಸಿದ ಕನ್ನಿಕೆಯರೊಡನೆ ಕೇಯೂರಕೋಪದಿಶ್ಯಮಾನಮಾರ್ಗನಾಗಿ ಕೇಳೀಶೈಲಮಣಿಮಯಭವನಕ್ಕೆ ಬಿಜಯಂಗೆಯ್ದನನ್ನೆಗಮಿತ್ತಲ್ ಗಂಧರ್ವರಾಜಪುತ್ರಿ ವಿಸರ್ಜಿತ ಸಕಲಸಖೀಜನೆಯುಂ ಪರಿಮಿತಪರಿಚಾರಿಕಾನುಗಮ್ಯಮಾನೆಯುಮಾಗಿ ತನ್ನ ಕನ್ನೆಮಾಡಮನೇಱಿ ಶಯ್ಯಾತಳದೊಳ್ ಮೆಯ್ಯನಿಕ್ಕಿ

ಮನವಱಿಗುಂ ನರೇಂದ್ರಸುತನೆಂದು ನಿಸಕ್ಕೆನೆ ಸುತ್ತಲುಂ ಸಖೀ
ಜನವಿರೆಯುಂ ವಿಚಾರಿಸೆನೆ ದುಃಖದೊಳಕ್ಕನಿರಲ್ಕೆ ಲಜ್ಜೆಗಾ
ಯೆನೆ ಗುರುಗಳ್ಗೆ ಬೆಳ್ಕುವೆನೆ ಚೇಟಿಕೆಯರ್ ನೆರೆದಿರ್ದರೆಂಬುದಂ
ನೆನೆಯೆನೆ ಕೆಟ್ಟೆನೇನನಿರದಿಂತುಟು ವಿಭ್ರಮದಿಂದಮೊಡರ್ಚಿದೆಂ ೨೧

ಕಿಱುಗೂಸುಗಳುಂ ಮೊದಲಾ
ಗಱಿದಪರೆನೆ ಮದನಹತಕನಿಂದಂ ನೆಱೆ ಮುನ್
ನುಱಿವೋದಕ್ಕಂ ತಾಂ ಪೇ
ೞಱಿಯಳೆ ಮುನ್ನಮೆ ಮದೀಯ ಧೈರ್ಯಚ್ಯುತಿಯಂ ೨೨

ಏನೆಂಬರೊ ತಾಯ್ತಂದೆಯ
ರೇನಂ ಗಂಧರ್ವಲೋಕಮೆನ್ನುಗುಮೊ ಕೇಳ್ದಂ
ತೇನೆಂಬೆನದೇಗೆಯ್ದಪೆ
ನೇನೆವದಿಂ ಮಱಸಿದಪ್ಪೆನೆನ್ನಯ ತಪ್ಪಂ ೨೪

ತನುವಂ ತೆಯ್ದಪ್ಪಳಕ್ಕಂ ವ್ರತದೊಳೆನುತೆ ಕನ್ಯಾವ್ರತಕ್ಕಂತೆ ಪೂಣ್ದಿ
ರ್ದನದಂ ಕೇಳ್ದಿರ್ದರಂತೆನ್ನಯ ಕೆಳದಿಯರಾ ಮಾರ್ಗದಿಂದಂತೆ ಕೇಯೂ
ರಕಯ್ಯೊಳ್ ಮುನ್ ಮಹಾಶ್ವೇತೆಗೆ ಮಿಗೆ ನುಡಿದಾನಟ್ಟಿಯುಂ ಮತ್ತದೇ
ನೆಂಬೆನೊ ಬಂದತ್ತೆತ್ತಣಿಂದೆಂದಱಿಯೆನೆನಗೆ ಮುತ್ತಾಪದಿಂ ವಿಪ್ರಲಂಭಂ ೨೫

ಪೆಱತಂತಿರ್ಕೆಂದುಂ ಕೇ
ಳ್ದಱಿಯೆಂ ಕಂಡಱಿಯೆನರಸನೆಂದಾರೆಂದಾ
ನಱಿಯೆಂ ನಾಣ್ಗಿಡುವಿನಮಾ
ತೆಱದಿಂದೆನ್ನಂ ವಿಡಂಬಿಸಲ್ಕೊಡರಿಕುಮೇ ೨೬

ಎಂದು ಯುವರಾಜಾಭಿಮುಖಹೃದಯೆಯಾಗಿ ಮನಂಗೊಟ್ಟತಿಪ್ರೇಮವಶದಿನಸ್ವತಂತ್ರೀಕೃತೆಯುಂ ಪರವಶೀಭೂತೆಯುಮನಿಸಿರ್ದಳಿತ್ತಲ್ ಚಂದ್ರಾಪೀಡಂ ಕ್ರೀಡಾಪರ್ವತದ ಮಣಿಮಯಭವನದೊಳ್

ಅಡಿಯೊತ್ತಲ್ ಕ್ಕೆಯ್ಯ್ದೂರಕ
ನೆಡೆದಿರುಬಿದೊಳ್ಪೆಸೆ ಕನ್ಯಕಾಸಂಕುಳಮಂ
ದಡಕಿಲ್ಗೊಂಡೊಪ್ಪುವ ಕಾ
ಳುಡೆಯಿಂ ಸೊಗಯಿಸುವ ಪಾಸಿನೊಳ್ ಪ್ಪಟ್ಟಿರ್ದಂ ೩೭

ಇಂತು ಗಂಧರ್ವರಾಜನಂದನೆಯು ನೆಗಪ್ತೆಗೆ ಡೋಲಾಯಮಾನ ಚಿತ್ತನಾಗಿ ತನ್ನೊಳಿಂತೆಂದಂ

ಕುಸುಮಶರಾಸ್ತ್ರಪುಷ್ಪರಜದಿಂ ಪೊರೆದಂತಿರೆ ಬಾಷ್ಪವಾರ್ರಿಗಳ್
ಪಸರಿಸೆ ರಾಗವಗ್ಗಲಿಸೆ ಚಾರುಚಲನ್ನಯನತ್ರಿಭಾಗದಿಂ
ಕುಸಿಕುಸಿದೆನ್ನನೀಕ್ಷಿಸುವಳಾನಿನಿಸೀಕ್ಷಿಸಲಾ ಲತಾಂಗಿ ಲ
ಜ್ಜಿಸಿ ತನುವಂ ನಿಜಸ್ಮಿತಸಿತಾಂಶುಕಪಲ್ಲವದಿಂ ಮುಸುಂಕುವಳ್ ೩೮

ಉದಕಾಂತಃಪಾತಿಪೊಲ್ ಸ್ನೇಹದ ಲವಮುಮನಸುಂ ಪರ್ವಿ ಮದ್ಭಾವವಸ್ತೋದ್ಯ
ನ್ಮದದೊಳ್ ತೋಱುತ್ತುಮಿರ್ದಪ್ಪುದು ಕನಸಿನವೋಲೆನ್ನ ತತ್ಕಾಂಕ್ಷೆ ಕಯ್ಸಾ
ರದುದಂ ತೋಱುತ್ತುಮಿರ್ದತ್ತ ನಗೆ ಪಿರಿದುಮಾ ಚಿತ್ತದೊಳ್ದಾಸೆ ದಲ್ ಮಾ
ಯದ ಕುಂಚಂಬೋಲ ಸಂಭಾವ್ಯಮನೆ ದಿಟವೆನಲ್ ತೋಱುತಿರ್ದಪ್ಪುದಿಂಗಳ್ ೩೯

ಎನಗಿನಿತು ಚಿಂತೆಯೇಕೆ ಗ
ಡೆನಗದಿ ದಿಟಮಪ್ಪುದಾದೊಡಪ್ರಾರ್ಥಿತಮಾ
ವನಿತೆಯ ಮನಮಂ ಪ್ರಕಟಿಸಿ
ಮನೋಭವಂ ತಾನೆ ಕಳೆದಪಂ ಸಂದೆಯಮಂ ೪೦

ಎಂದವಧಾರಿಸಿ

ಹರಿಣೀ ರೋಮಂಥಫೇನಪ್ರಸೃತಕಣಲವಸ್ಪಾರದಿಂ ನಾಂದು ಯೋಷಿ
ಚ್ಚರಣಾಲಕ್ತಕಾಂತಿಮಿಂ ಕೆಂಪಡರ್ದ ಲತೆಯ ಬಾಡೊಂಪದಿಂದೊಟ್ಟಿ ಪುಷ್ಪೋ
ತ್ಕರಕೇಣ ಸ್ತೋಮದೊಳ್ ತಳ್ತ ಚಲಿತ ಯಮುನಾವಾರಿವಿಸ್ತಾರಮಂ ಮಾಂ
ಕರಿಸಲ್ ಸಾಲ್ದಿರ್ದ ಹಾರೀತಕ ಹರಿತಶಿಲಾಪಟ್ಟದೊಳ್ ಭೂಪನಿರ್ದಂ ೪೧

ಅಂತಾ ಸಮಯದೊಳ್

ಬಿಸಿಲೆಲ್ಲಂ ಬಿಸನಾಳಪಾಲಕದಿನಾಗಳ್ ಕೂಡೆ ಪೀರ್ಗಂದುದಾ
ಗಸಮೆಲ್ಲಂ ಸುಧೆಯಿಂದೆ ಲೇಪಿಸಿದುದುರ್ವೀಚಕ್ರಮೆಲ್ಲಂ ಪಯಃ
ಪ್ರಸರಾಪೂರದೆ ತೇಂಕಿದತ್ತು ದೆಸೆಯೆಲ್ಲಂ ಚಂದನಾಸಾರದಿಂ
ಮುಸುಕಿತ್ತೆಂಬಿನಮೊಂದು ಬೆಳ್ವೆಳಗು ಪರ್ವಿತ್ತೆಯ್ದೆ ರೋದೋಂತಮಂ ೪೨

ಅಂತು ಪಸರಿಸುವ ಬೆಳಗಿನ ಬಳಗಮಂ ನೋಡಿ

ಪರಿಭಾವಿಸಲಾರ್ಗಂ ತಾ
ನರಿದಾಯ್ತೊರ್ಮೆದಲೆ ಚಂದ್ರನುದಯಿಸಿದನೊ ಪೇಳ್
ಸುರಸಿಂಧು ಗಗನವಂ ಶೀ
ಕರನಿಕರದೆ ಸಿಂಪಿಸುತ್ತೆ ಧರೆಗಿೞಿದಪುದೋ ೪೩

ಎಂದತಿಕುತೂಹಲಂಬೆರಸು ಬೆಳಗಿನ ಬರ್ಪ ದೆಸೆಯಂ ನೋೞ್ಪಿನಮಾಗಳ್ಪೆರ್ಗಿಂ ಪೊರೆದ ದುಗುಲದಿಂ ಬಾಸಣಿಸಿ ಚಂದನಾನುಲೇಪಂ ತೀವಿದ ಸಿಪ್ಪಂ ಪಿಡಿದು ಕಯ್ಗೊಟ್ಟು ನಡೆವ ಪಡಿಯಱತಿಯುಂ ಮಾಲತೀಕುಸುಮಮಾಲಿಕೆಯಂ ಪಿಡಿದ ತಮಾಳಿಕೆಯುಂ ಸುಯ್ಯೆಲರಿಂ ಪಾಱುದಪುವೆನಿಪ ದುಕೂಲಂಗಳಂ ಪಿಡಿದು ನೆಲನನುಗ್ಘಡಿಪ ಕೇಯೂರಕನುಮೊಡವರೆ ಕನ್ಯಕಾಪರಿವೃತೆಯುಂ ಛತ್ರಚಾಮರವಿರಾಜಿತೆಯುಮಾಗಿ ಮದಲೇಖೆ ಬರುತಿರ್ದಳಾಕೆಯ ಕೆಲದೊಳ್ ಬರ್ಪ ತರಳಿಕೆಯ ಕಯ್ಯ ಸಿತಾಂಶುಕಾಚ್ಛಾದಿತ ರತ್ನಮಯಪಟಲಕದೊಳ್

ಪೊಳೆವೆಳದಿಂಗಳೊಳ್ಮುಗಿಲ್ಗಳಿಂ ಸುರಸಿಂಧುವ ಶೀಕರಂಗಳಿಂ
ಜಳನಿಧಿಯಲ್ಲಿ ಪೊಮ್ಮಪೊಳೆವ ತಾರೆಗಳಿಂ ಸಮೆದಂತೆ ಶಾರದಂ
ಗಳ ಜಸದೇೞ್ಗೆ ಲಕ್ಷ್ಮಿಯ ಮುಗುಳ್ನಗೆ ಜೊನ್ನದ ಬಾೞ್ಕೆ ರತ್ನಸಂ
ಕುಳದಧಿದೈವಮುಂದೆಸೆದುದುಜ್ಜ್ವಳಮೌಕ್ತಿಕಹಾರಮಂಡಳಂ ೪೪

ಅದಂ ಕಂಡು

ಎಲೆ ಚಂದ್ರಾತಪರುಚಿಯಂ
ಗೆಲೆವಂದೀ ಧವಳಿಮಕ್ಕೆ ಕಾರಣವೀ ನಿ
ರ್ಮಳತಾರಹಾರಮಿಂತೀ
ಗಳೆಂದು ಬಗೆದಂ ನರೇಂದ್ರನಂದನನಾಗಳ್ ೪೫

ಅಂತು ಬಗೆಯುತ್ತುಮಿರ್ದು ಮದಲೇಖೆಯ ಬರವಂ ಕಂಡಾಕೆಯಂ ಪರ್ಯಂಕದೊಳ್ ಕುಳ್ಳಿರವೇೞ್ದು ನೃಪರೂಪಚಂದ್ರಂ ಸಿಂಹಾಸನದೊಳ್ ಕುಳ್ಳಿರ್ಪುದುಮಾ ಕಾಂತೆ ತಾನೆೞ್ದು ಮಲಯಜಾನುಲಿಪ್ತದೇಹನುಮಂ ಮಾಲತೀಕುಸುಮದಾಮಶೇಖರನುಮಂ ಮಾಡಿ ದುಕೂಲಂಗಳನುಂ ಕೊಟ್ಟು ಹಾರಮಂ ಪಿಡಿದುಕೊಂಡಿಂತೆಂದಳ್

ಮನವೊಲ್ದೀ ಮಧುರೋಕ್ತಿಗಾರೆಣೆಸರೀ ಮೆಲ್ಪಿಂಗದಾರ್ ಮೆಚ್ಚರೀ
ವಿನಯಕ್ಕಾರೊಳಗಾಗರೀ ರುಜುಗುಣಕ್ಕಾರ್ ಕ್ರೂರರೀ ನಿನ್ನ ಪೆಂ
ಪಿನ ಬಿಣ್ಪಿಂಗಿರದಾರ್ ಮರುಳ್ಗೆಣೆಸರೀ ಸನ್ಮೂರ್ತಿಗಾರ್ ನೆಟ್ಟನಾ
ಳ್ತನದೊಳ್ ನಿಲ್ಲದರೀ ಮನೋಹರತೆಗಾರ್ ಸೋಲರ್ ಮಹೀವಲ್ಲಭಾ ೪೬

ಹೃದಯಮ್ಮನೊಪ್ಪುಗೊಂಡ ನಿಮಗಿನ್ನೆಗುಟ್ಟುಂ ಕುಡುವೊಂದುವಸ್ತು ವಾ
ವುದೊ ಗಡ ಜೀವಿತೇಶ್ವರರೆನಿಪ್ಪವರ್ಗಂ ಪ್ರತಿಪಾದ್ಯಮಪ್ಪುದಾ
ವುದೊ ಬರವಿಂದೆ ಮಾಡಿದುಪಕಾರಮನಿನ್ನದನೇತಱಿಂದೆ ನೀ
ಗಿದಪೆನೊ ಎಂದು ಚಿತ್ರರಥನಂದನೆ ತೋರಿಸಿದಪ್ಪಳಟ್ಟಱಿಂ ೪೭

ಕನ್ನೆ ನಿಜಜೀವಿತಮುಮಂ
ತನ್ನುಮನಿರದಿತ್ತು ತೊಟ್ಟುತನಮಂ ತಾಂ ಕೊಂ
ಡುಂ ನೆಱೆಯಳ್ ಸುಜನರ್ಗಿನ್
ನಿನ್ನನ್ನರ್ಗೇನೆ ಮಾಡಿಯುಂ ತಣಿವುಂಟೇ ೪೮

ಅದಱಿನಿಂಗಡಲ ಕಡೆಪದೊಳೊಗೆದ ನೂತ್ನರತ್ನಂಗಳೊಳ್ ಹಾರಮೇ ಶೇಷಮಪ್ಪುದಱಿಂ ಶೇಷವೆಂಬ ಪೆಸರೆಸೆಯೆ

ವರುಣಂಗಿತ್ತಂ ರತ್ನಾ
ಕರನಂತಾ ವರುಣನಟ್ಟಱಿಂದಿತ್ತಂ ಚಿ
ತ್ರರಥಂಗೆ ಕೂರ್ಮೆಯಿಂ ಚಿ
ತ್ರರಥಂ ನಿಜತನುಜೆಗಿತ್ತನಿದನವನಿಪತೀ ೪೯

ಇಂತಿದನಾ ಕಾದಂಬರೀದೇವಿ

ಹಾರಂಗಳೊಳೆಸೆವೀ ಮಣಿ
ಹಾರಂ ಮದನಾವತಾರಮೆನಿಸಿದ ನಿನ್ನಾ
ಕಾರಕ್ಕೆಣೆಯಕ್ಕುಮೆಂದವ
ಧಾರಿಸಿ ತಾಂ ನಿಮಗೆ ಕುಡುವೆನೆಂಬೀ ಬಗೆಯಿಂ ೫೦

ಪೊಳೆವ ಸುಧಾಸೂತಿನಭ
ಸ್ಸ್ಥಳದೊಳ್ ಕಣ್ಗೊಳಿಪ ತೆಱದೆ ಯುವರಾಜನುರ
ಸ್ಸ್ಥಳದೊಳ್ ಮುಕ್ತಾವಳಿ ಕ
ಣ್ಗೊಳಿಸುಗುಮೆಂದಕ್ಕಱಿಂದಮಟ್ಟಿದಳಿಗಳ್ ೫೧

ಆಭರಣದ ಪೊಱೆಯಂ ತಳೆ
ವಾಭರಣಪ್ರಿಯರ ತೆಱದೆ ಸದ್ಗುಣಗಣರ
ತ್ನಾಭರಣರ್ ನಿಮ್ಮೊಂದಿಗ
ರಾಭರಣದ ಪೊಱೆಯನೇಕದಂ ಪೊತ್ತಿರ್ಪರ್ ೫೨

ಆದೊಡಂ ನಿಮಗಿದು ಪ್ರೀತಿಯೆನೆ ಭಾವಿಸಲ್ವೇಟ್ಟುದಪ್ಪುದಲ್ಲದೆಯುಂ

ಸಿರಿಯೊಡನೆ ಪುಟ್ಟೆ ತಂದಾ
ಹರಿ ಕೌಸ್ತುಭವೆಂಬ ಕಲ್ಲ ಮುಱಿಯುಮನತ್ಯಾ
ದರದಿಂದೆಂದುಂ ತಾನಾ
ಗುರದೊಳ್ ತಳೆದಿರ್ಪನೇಕೆ ನೀವಱಿಯದುದೇ ೫೩

ಅದಱಿಂ ನಾರಾಯಣಂಗಂ ನಿಮಗಂ ಲಕ್ಷ್ಮಿಗಂ ಕಾದಂಬರಿಗಂ ಕೌಸ್ತುಭಕ್ಕಂ ಶೇಷಾಭಿಧಾನಹಾರಕ್ಕಂ ವಿಶೇಷಮೇನುಮಿಲ್ಲವಾಗಿ ಕಯ್ಕೊಂಡು ಕಾದಂಬರೀಪ್ರಣಯಕ್ಕೆ ನಿಮಿರ್ಕೆಯ್ಯುಂ ಮಾಳ್ಪುದೆಂತಾನುಂ ಕಯ್ಕೊಳ್ಳದಿರಲಾಕೆ ಭಗ್ನಪ್ರಣಯೆಯಾದಪ್ಪಳಪ್ಪೊಡೆ ತನ್ನಂ ಬಿಡುವಳೆಂದು

ತರಳಿಕೆಯ ಕಯ್ಯೊಳಟ್ಟಿದ
ಳರಸ ಮಹಾಶ್ವೇತೆ ತಾನೆ ಬೇಱೊಂದನೆನು
ತ್ತಿರಸಲ್ಲದೆಂದು ಮುತ್ತಿನ
ಸರಮನದಂ ಕೊರಲೊಳಾಕೆ ಕಟ್ಟಿದಳಾಗಳ್ ೫೪

ಅಂತು ಕಟ್ಟೆ ಬೞಿಗಾಗಿ ವಿನಯರತ್ನಾಕರನಿಂತೆಂದಂ

ಮದಲೇಖೇ ಬಲ್ಲೆ ನೀಂ ಕಯ್ಕೊಳಿಸಲೆಮಗೆ ಮಾತಾಡಸಲ್ಲೆಂಬವೊಲ್ ತೋ
ಱಿದೆ ನೀಂ ನಿನ್ನೊಂದು ವಾಕ್ಕೌಶಲಗುಣಮನಿದಂ ನಿಮ್ಮ ಸೌಜನ್ಯಜಾಲಂ
ಪುದಿದಿರ್ದತ್ತೆನ್ನನಾನಿನ್ನೆನಗೊಡೆಯನೆ ಚಿತ್ತಕ್ಕೆ ಬಂದಂತುಟೇ ಮಾ
ಳ್ಪುದು ದಲ್ ಕಾದಂಬರೀದೇವಿಯ ಗುಣಪಣದಿಂ ಮಾಱುವೋದೆನ್ನನೀಗಳ್ ೫೫

ಎಂದಿಂತು ಮೊದಲಾಗಿ ಕಾದಂಬರೀ ಸಂಬಂಧಂಗಳಪ್ಪ ನುಡಿಗಳಂ ನುಡಿದು ಮದಲೇಖೆಯಂ ಕಟಿಪಿ ಪಿರಿದು ಬೇಗಗವಿರೆ,

ಅದೊ ರಜನಿಯನನುರಾಗದೆ
ಹೃದಯವ್ಮನೇಱಿಸಿದನೆಂಬಿನಂ ಮಂಡಲಮ
ಧ್ಯದೊಳೆಸೆಯಲಾತ್ಮಲಾಂಛನ
ಮುದಯಿಸಿದಂ ರಜನಿನಾಥನುದಯಾಚಲದಿಂ ೫೧

ಜಗಮಿದು ಮೌಕ್ತಿಕದಿಂದಂ
ತೆಗೆದುದೊ ದಂತದೊಳೆ ಸಮೆದುದೋ ಪಾಲ್ಗಡಲಿಂ
ದೊಗೆದುದೊ ಪೇೞೆಂಬಿನೆಗಂ
ಸೊಗಯಿಸಿದುದು ಸಾಂದ್ರಚಂದ್ರಿಕಾವಿಸ್ತಾರಂ ೫೨

ಅಂತಾ ಚಂದ್ರಿಕೆಯೊಳ್ ನೃಪರೂಪಚಂದ್ರನ ಕೇಳೀಶೈಲದ ತಪ್ಪಲೊಳ್ ನಡಪಾಡುತ್ತಿರ್ಪುದುಂ ಪರಿಜನಂಗಳ್

ತೆರೆಗಳ್ ಮೆಲ್ಪಿಂದೆ ನೀರ್ವಿಜ್ಜಣಿಗೆಯ ತೆಱದಿಂ ಬೀಸೆ ಹಂಸದ್ವಯಂಗಳ್
ತರದಿಂ ಕಣ್ಣೆಯ್ದೆ ನೀರ್ವಕ್ಕಿಗಳುಲಿಯೆ ದಳನ್ನೀಲನೀರೇಜಿನೀಬಂ
ಧುರಗಂಧೋದ್ಗಾರಿ ಲೀಲಾಸರದ ಪುಳಿನದೊಳ್ ಸಿಂದುವಾರೋಪಧಾನಂ
ಬೆರಸೊಪ್ಪಂಬೆತ್ತುದೀ ಮುತ್ತಿನ ಪಡುಶಿಲೆಯೊಳ್ ದೇವ ಕುಳ್ಳಿರ್ಪುದೀಗಳ್ ೫೩

ಎಂಬುದುಂ ಕುಳ್ಳಿರೆ ಕೇಯೂರಕಂ ಭೋಂಕನೆ ಬಂದು ದೇವಾ ಕಾದಂಬರೀದೇವಿ ನಿಮ್ಮಂ ನೋಡಲೆಂದು ಬಂದಳೆಂದು ಬಿನ್ನವಿಸಲರಸನತಿ ಸಂಭ್ರಮದಿನಿದಿರೇೞ್ವನ್ನೆಗಮಿತ್ತರೆಯಂತಲ್ಪಸಖೀಜನಪರಿವೃತೆಯುಮಪನೀತಾಶೇಷರಾಜಚಿಹ್ನೆಯುಂ ಮದಲೇಖಾದತ್ತಹಸ್ತಾವಲಂಬೆಯುಮಾಗಿ ಕಾದಂಬರೀದೇವಿ ಬಂದು ನಿಜಪ್ರೀತಿಯಂ ತೋಱಲೆಂದು ಪರಿಜನದಂತೆ ನೆಲದೊಳ್ ಕುಳ್ಳಿರೆ ಚಂದ್ರಾಪೀಡದೇವನುಂ ಮೌಕ್ತಿಕಶಿಲಾತಲದೊಳ್ ಕುಳ್ಳಿರಿಮೆಂದು ಮದಲೇಖೆ ಪಿರಿದುಮಾಶ್ವಾಸಿಸೆಯುಮಾಗಳ್ ನೆಲದೊಳ್ ಕುಳ್ಳಿರ್ದು ಗಂಧರ್ವರಾಜನಂದನೆಯನಿಂತೆಂದಂ

ನೋಡಲ್ಕೊಡಂ ಕೃತಾರ್ಥರೆನಿಪರ್ಗ್ಗಳೊಳೇನವಕಾಶಮುಂಟೆ ಮಾ
ತಾಡುವೊಡಿಂತನುಗ್ರಹಿಸುವಲ್ಲಿಗೆ ತಕ್ಕುದದಾವ ಭಂಗಿಯಿಂ
ನೋಡುವೊಡೆನ್ನೊಳಿಲ್ಲ ಗುಣಲೇಶಮುಮಿನ್ನೆ ತೆಱದಿಂದನುಗ್ರಹಂ
ಮಾಡುವುದಕ್ಕೆ ದೇವಿಯರದೊಂದು ಋಜುತ್ವಮೆ ಮುಖ್ಯಕಾರಣಂ ೫೯

ವಿಭವದೆ ನೆಗೞ್ದನ್ವಯದೊಂ
ದಭಿಮಾನಮದೇವುದೆಂದು ಪೊಸ ಸೇವಕರೊಳ್
ರಭಸದೆ ನಿಜಸೌಜನ್ಯ
ಪ್ರಭಾವಮಂ ಮೆಱೆವಿರಲ್ಲದೆಲ್ಲಂ ಪೆಱತುಂಟೇ ೬೦

ಇನಿಸುಂ ದಾಕ್ಷಿಣ್ಯಮುಮಂ
ಮನದೊಳ್ ಭಾವಿಸದೆ ಭೃತ್ಯನನೆ ಧನ್ಯನೆನಿಂ
ತನಿತಾದರಮೇಕೆಯೊ ಪರಿ
ಜನದೊಳ್ ಬೆಸಕಯ್ದು ಬರ್ದುಕಿಮೆಂಬೊಂದೆಡೆಯೊಳ್ ೬೧

ಪರರ್ಗುಪಕರಿಪೆಡೆಗಳ್ಗುಪ
ಕರಣಂ ತನು ತೃಣದ ತೆಱದೆ ಲಘು ಜೀವಿತಮೆಂ
ಬೆರಡುಂ ಪಾವುಡಮಿಂತೀ
ಬರವಿಂಗೆನಲೆನಗೆ ಲಜ್ಜೆಯಾದಪುದೀಗಳ್

ಎಂದು ನುಡಿಯೆ ಮದಲೇಖೆ ಮಾರ್ಕೊಂಡು ನೀವಿಂತು ಕೀೞ್ಪಟ್ಟು ನುಡಿಯೆ ಕಾದಂಬರೀದೇವಿ ಖೇದಿಸುವಳೆಂದು ನುಡಿಯೆ ಕಾದಂಬರೀದೇವಿ ಕೃತಪ್ರಸ್ತಾವೆಯಾಗಿ

ಅವನೀಪಾಲಕಚಕ್ರವರ್ತಿ ವಿಭು ತಾರಾಪೀಡನೆನ್ನಂ ವಿಳಾ
ಸವತೀದೇವಿಯದೆನ್ನಳಾರ್ಯಶುಕನಾಸಂ ತಾನದೆನ್ನಂ ಮಹೀ
ಭುವನಂ ನೋಡುವೊಡೆಂತುಟಿಲ್ಲಗೆನಿತಾವುಜ್ಜೈನಿಯೆಂತಿರ್ಪುದೊ
ಪ್ಪುವುದೇ ಭಾರತವರ್ಷಮೆಂದು ಬೆಸಗೊಂಡಳ್ ಕಾಂತೆ ಭೂಕಾಂತನಂ ೬೩

ಎಂದಿವು ಮೊದಲಾಗಿ ಪಲವುಮಂ ಬೆಸಗೊಳುತ್ತುಂ ಪಿರಿದು ಬೇಗ ಮಿರ್ದು ಕಾದಂಬರಿ ಕೇಯೂರಕನುಮಂ ಪರಿಜನಮುಮನರಸನ ಸಾರೆ

ಯಿರವೇಟ್ಟು ತನ್ನ ಕನ್ನೆಮಾಡಕ್ಕೆ ಪೋಗಿ ಶಯನತಳಮನಲಂಕರಿಸಿದ್ದಱತ್ತ ಕೇಯೂರಕನಱಯೊತ್ತೆ ಮುನ್ನಿ ದೆಗಡೆಯೊಳೆ ಯುವರಾಜನಿರ್ದು ಕಾದಂಬರೀದೇವಿಯ ನಿರಹಂಕಾರಮುಮಂ ಮಹಾಶ್ವೇತೆಯ ನಿಷ್ಕಾರಣವತ್ಸಲತೆಯುಮಂ ಮದಲೇಖೆಯ ಸುಜನತೆಯುಮಂ ಪರಿಜನದ ಮಹಾನುಭಾವತೆಯುಮಂ ಗಂಧರ್ವರಾಜಲೋಕದ ಸಮೃದ್ಧತೆಯುಮಂ ಕಿಂಪುರುಷ ವಿಷಯದ ರಮ್ಯತೆಯುಮಂ ಮನದೊಳ್ ಭಾವಿಸುತಿರ್ಪನ್ನೆಗಂ

ಇರುಳೊರಂತಿರೆ ಕಾದಂ
ಬರಿಯನೆ ನೋಡುತ್ತುಮಿರ್ದು ಘೋಂಪಿಸೆ ನಿದ್ರಾ
ತುರನಾಗಿ ಪಟ್ಟೆ ಸಾರ್ವಂ
ತಿರೆ ಸಾರ್ದಂ ಚಂದ್ರನಪರದ್ವೀಪಾವನಮಂ ೭೪

ಅದೆ ಚಕ್ಕವಕ್ಕಿಗಳ ಹೃದ
ಯದ ರಾಗಂ ಪುದಿದುದೆನಿಸಿ ಕೆಂಪಂ ಕಯ್ಕೊಂ
ಡುದಯಾದ್ರಿಯಿಂದಮುದಯಿಸಿ
ದುದು ಬಿಂಬಂ ಚಕ್ರವಾಕಚಕ್ರೇಶ್ವರನಾ ೭೫

ಆಗಳ್ ಚಂದ್ರಾಪೀಡಂ ಪ್ರಕ್ಷಾಳಿತಮುಖಕಮಲನುಂ ಕೃತಸಂಧ್ಯಾವಂದನನುಂ ಗೃಹೀತತಾಂಬೂಲನುಮಾಗಿ ಕೇಯೂರಕ ಕಾದಂಬರಿಯೆಲ್ಲಿರ್ದಳುಪ್ಪವಡಿಸಿದಳೆಲ್ಲೆಂಬುದಂ ನೋಡಿ ಬಂದುಱುಪುವುದೆಂಬುದುಮವಂ ಪೋಗಿ ಬಂದು ದೇವ ಮಂದರಪ್ರಾಸಾದದ ಕೆಟಗಣ ಸೌಧತಳವೇದಿಕೆಯೊಳ್ ಮಹಾಶ್ವೇತೆವೆರಸಿರ್ದಪಳೆಂದು ಬಿನ್ನಪಂಗೆಯ್ಯಲೊಡಂ ಗಂಧರ್ವರಾಜನಂದನೆಯಲ್ಲಿಗೆ ಬರ್ಪನ್ನೆಗಮನೇಕಪರಿವ್ರಾಜಿಕಾಸಮಾಜಂ ಸುತ್ತುಮೋಲಗಿಸುತ್ತಿರ್ಪಂತಃಪುರಾಭ್ಯರ್ಹಿತರೊಳಾದರಂಬೆರಸು ಸಂಭಾಷಿಸುತ್ತುಂ ಸೌಧತಳವೇದಿಕೆಯೊಳ್ ಗಂಧರ್ವರಾಜಬಾಂಧವವೃದ್ಧರಂ ವೇತ್ರಾಸನಾದಿ ದಾನದಿಂ ಸನ್ಮಾನಿಸುತ್ತುಮಿರ್ದ ಮಹಾಶ್ವೇತೆಯ ಪೆಱಗೆ

ಎರಡುಂ ಬಂಚಂಗಳಿಂದಿಂಚರಮೊಸರ್ವಿನೆಗಂ ಕಿನ್ನರದ್ವಂದ್ವಮೊತ್ತುತ್ತಿರೆ ನಾನಾಭಂಗಿಯಿಂ ನಾರದತನಯೆ ನಯಂಬೆತ್ತುದೆಂಬಂತೆ ಪಾಡುತ್ತಿರೆ ಪುಣ್ಯೋಪೇತಮಂ ಭಾರತಮನೆಸೆವ ಪೌರಾಣಿಕರ್ ಪಕ್ಕದೋದುತ್ತಿರೆ ಕೇಳುತ್ತಿರ್ದ ಕಾದಂಬರಿಯನವನಿಪಂ ದೂರದೊಳ್ ಕಂಡನಾಗಳ್ ೭೬

ಪೊಳೆವ ಸುಲಿಪಲ್ಲ ನುಣ್ಪೆಳ
ಗೆಳಸಿದ ತಾಂಬೂಲಬದ್ಧ ಕೃಷ್ಣಿಕೆಯಿಂ ಕ
ಣ್ಗೊಳಿಪ ನಿಜಾಧರಮಂ ಕೋ
ಮಳೆ ನೋಡುತ್ತಿರ್ದಳಮಳಮಣಿದರ್ಪಣದೊಳ್ ೬೭

ಅಂತಿರ್ದಳನೆೞ್ದು ವಂದು ಸುಧಾವೇದಿಕೆಯೊಳಿಕ್ಕಿದಾಸನಮನಲಂಕರಿಸಿ ಕಿಱಿದು ಬೇಗಮಿರ್ದು ಮಹಾಶ್ವೇತೆಯಂ ಮಂದಸ್ಮಿತವದನನಾಗಿ ನೋೞ್ಪುದುಂ ವಿದಿತಾಭಿಪ್ರಾಯೆಯಾಗಿ ಕಾದಂಬರಿಯನಿಂತೆಂದಳ್

ಚಂದ್ರಿಕೆಯಿಂದಂ ದ್ರವಿಯಿಪ
ಚಂದ್ರೋಪಲದಂತೆ ನಿನ್ನ ಗುಣಗಣದಿಂದಂ
ಚಂದ್ರಮುಖಿ ನಾಂದನಾಗಿ ನ
ರೇಂದ್ರಂ ನುಡಿಯಲ್ಕಮಱಿಯದಿರ್ದಪನೀಗಳ್ ೬೮

ಅಱಿಯದೆ ಪೋದೆಡೆಯಂ ಬಿಡ
ದೆಱಸುತ್ತಿಂತಿರ್ಪನೆನುತುಮುಮ್ಮಳದಿಂದಂ
ಪೆಱಗಿರ್ದ ರಾಜಲೋಕಂ
ಮಱುಗದೆ ಮಾಣದು ಕುಮಾರನಂ ಕಾಣ್ಬಿನೆಗಂ ೬೯

ಕಮಲಿನಿಗೆ ಕಮಲಬಂಧುಗೆ
ಕುಮುದಿನಿಗಾ ಕುಮುದಿನೀಶ್ವರಂಗಂತೀಗಳ್
ತಮಗಂತಿರ್ಪೆಡೆಗಳ್ ದೂ
ರಮಾದೊಡಂ ಪ್ರೀತಿ ಮಾಣದಾಕಲ್ಪಾಂತಂ ೭೦

ಅದಱಿಂದರಸಂಗೆ ಪೋಗಲ್ವೇೞ್ಕುಮೆಂದು ನುಡಿಯೆ ಕಾದಂಬರಿಯುಮಿಂ ತೆಂದಳ್

ತವಗೆನ್ನ ಪೆಱತೆಂ ಸ್ವಾಧೀ
ನವೆನಿಪ ಪರಿಜನದೊಳೆನ್ನ ಮನದೊಳ್ ಬೇಱೆಂ
ಬವಳಾನಲ್ಲಣಮದಱಿಂ
ದವಕ್ಕ ಮತ್ತಾರ್ಗೆ ತಾವಿದಂ ಪೇೞ್ದಪಿರಾ ೭೧

ಎಂದು ನುಡಿದು ಗಂಧರ್ವಕುಮಾರಕರಂ ಕರೆದರಸನಂ ಬೀಡಿಂ ಗೆಯ್ದಿಸಿಮೆಂದು ಪೇೞ್ದು ವಿದಗ್ಧವಿದ್ಯಾಧರನೆೞ್ದು ಮಹಾಶ್ವೇತೆಗೆ ನಮಸ್ಕಾರಂಗೆಯ್ದು ಕಾದಂಬರಿಗೆ ಕಯ್ಗಳಂ ಮುಗಿದು

ಪಿರಿದು ನುಡಿಯೇವುದೆನಗನ್
ಪರಿಜನದೊಳಗೊರ್ವನೆಂದು ದೇವಿಯರೆನ್ನಂ
ಪರಿಭಾವಿಪುದೆಂಬುದನುಸಿ
ರ್ದರಸಂ ಪೊಱಮಟ್ಟನಾಗಳಂತಃಪುರಮಂ ೭೨

ಅಂತು ಪೊಱಮಡೆ

ಬರತೆಗೆದುದೊ ನೃಪನ ಗುಣೋ
ತ್ಕರಮೆನೆ ಕಟಿಪಲ್ಕೆ ಕಡೆಯ ಬಾಗಿಲ್ವಾಡಂ
ಬರೆಗಂ ಬಂದುದು ಕಾದಂ
ಬರಿ ಪೊಱತಾಗಳಕನ್ಯಕಾ ನಿಕುರುಂಬಂ ೭೩

ಆಗಳಾ ಕನ್ನಿಕೆಯರಂ ಮಗುೞ್ಚಿ ಕೇಯೂರಕಂ ಸಾರ್ಚಿದಿಂದ್ರಾಯುಧ ಮನೇಱಿ ಗಂಧರ್ವರಾಜಕುಮಾರರೊಡನೆ ಹೇಮಕೂಟದಿಂ ಪೊಱಮಟ್ಟು ಪೋಗುತ್ತುಮಿರ್ದು

ಅಗಲಲಸಹ್ಯಮೆಂದು ಪೆಱಗೀ ಬೞಿಸಲ್ವಳಿ ಮುಂದೆ ಬಂದಳೀ
ತಗೆವೊಡೆ ಚಿತ್ತದುತ್ಕಲಿಕೆಯಿಂ ನಭಕೀ ನೆಗೆತಂದಳಾಗಳುಂ
ಮೊಗಮನೆ ನೋಡಲೆಂದುರದೊಳೀ ನೆಲಸಿರ್ದಪಳೆಂದೆನುತ್ತುಮಾ
ಮೃಗಶಿಶುನೇತ್ರೆಯಂ ಬಿಡದೆ ಭಾವಿಸಿದಂ ನೃಪರೂಪಚಂದ್ರಮಂ ೭೪

ಅಂತು ಪೋಗೆವೋಗೆ ಮಹಾಶ್ವೇತಾಶ್ರಮದಚ್ಛೋದಸರೋವರದ ತೀರದೊಳಿಂದ್ರಾಯುಧದ ಪಜ್ಜೆವಿಡಿದು ಬಂದು ಬಿಟ್ಟಿರ್ದ ನಿಜಸ್ಕಂಧಾವಾರಮಂ ಕಂಡಾ ಗಂಧರ್ವಕುಮಾರರಂ ಮಗುೞ್ಚಿ ಕಟಕಜನಮಾನಂದಮುಮತಿಕೌತುಕಮುಂ ಕಯ್ಗಣ್ಮೆ ತನತನಗೆ ಪೊಡಮಡುತ್ತಿರಲರಮನೆಯಂ ಪೊಕ್ಕು ವೈಶಂಪಾಯನನುಂ ಪತ್ರಲೇಖೆಯುಂ ಬೆರಸು ಸಕಲರಾಜಲೋಕಮಂ ಮನ್ನಿಸಿ ತನ್ನ ಪೋದ ಬಂದ ವೃತ್ತಾಂತಮೆಲ್ಲಮಂ ಪೇೞುತ್ತುಮಾ ಪಗಲಂ ಕಳೆದು

ತರಳಾಕ್ಷಿಯನಾ ಕಾದಂ
ಬರಿಯಂ ರಣರಣಕವಿಕಲಹೃದಯದಿನೋರಂ
ತಿರೆ ಚಿಂತಿಸುತ್ತುಮಿರ್ದಾ
ಯಿರುಳನದೆಂತಾನುಮವನಿಪಾಲಂ ಕಳೆದಂ ೭೫

ಅಂತು ಕಳೆದಾ ಮಱುದಿವಸಮಾ ಕನ್ನೆಯನೆ ನೆನೆಯುತ್ತುಮಾಸ್ಥಾನ ಮಂಟಪದೊಳಿರ್ಪನ್ನೆಗಂ ಪಡಿಯಱಂ ಬೆರಸು ಕೇಯೂರಕಂ ಭೋಂಕನೆ ಬಂದು

ವಿನಯಂಕಯ್ಗಣ್ಣ ದೂರಾಂತರದೊಳೆಱಗೆ ಕಂಡಿತ್ತ ಬಾ ಯಿತ್ತ ಬಾ ಯೆಂಬಿನಮೆಯ್ತಂದಂಘ್ರಿಪದ್ಮಕ್ಕೆಱಗೆ ತೆಗೆದು ತಪ್ಕೈಸಿದಂ ಪ್ರೀತಿಯಿಂ ಮುನ್ನ ನಿಜಾಪಾಂಗಾವಲೋಕಂ ಬಟಿಕೆ ಹೃದಯಮಲ್ಲಿಂ ಬಟಿಕ್ಕಂತೆ ರೋಮಾಂಚನಿಕಾಯೋದ್ಭೇದಮಲ್ಲಿಂ ಬಟಿಕೆ ಭುಜಯುಗಂ ಸುತ್ತೆ ರಾಜೇಂದ್ರಚಂದ್ರಂ

ಅನಂತರಂ [೭೬

ಒಸರ್ದಪುದು ನುಡಿಯೊಳೆಲವಿನ
ರಸಮೆನೆ ನಸುವೆಳ್ಪ ಮಂದಮಂದಸ್ಮಿತದಿಂ
ಪಸರಿಸುತಿರೆ ಯುವರಾಜಂ
ಬೆಸಗೊಂಡಂ ಪ್ರೀತಿಯಿಂದೆ ಕೇಯೂರಕನಂ ೭೭

ಅರಸಿಯರ್ಗೆ ಮಹಾಶ್ವೇತೆಗೆ
ಪರಿಜನನಿವಹಕ್ಕೆ ಕುಶಲಮೇ ಪೇಳೆನಲಾ
ದರದಿಂದೆ ದೇವ ನೀಮಿ
ತಿರೆ ಬೆಸಗೊಂಡಂತೆ ಕುಶಲಮತ್ತವರ್ಗೆಲ್ಲಂ ೭೮

ಎಂದಾಗಳರ್ಪುರ್ವೊರೆದ ದುಗುಲ್ಲದ ಬಾಸಣಿಗೆಯಂ ಕಳೆದು ತಾವರೆಯ ನೂಲಿಂ ಸುತ್ತಿದ ಸಿರಿಕಂಡದುರುಳಿಯಂ ಪತ್ತಿಸಿದ ಮೃಣಾಳನಾಳವಲಯದಿಂ ಮುದ್ರಿಸಿದ ನಳಿನೀಪತ್ರಪುಟಮಂ ತೆಗೆದು ಕಾದಂಬರೀದೇವಿಯಟ್ಟಿದ ಮದನವೇದನೆಯ ಬಿನ್ನಣಂಗಳಪ್ಪ ಪಸುರ್ಸೆವ ಪ್ಪಾಲ್ಗಡಕೆಯ ಗೊಂಚಲುಮಂ ಖಚರಕಾಮಿನಿಯರ ಕದಂಪಿನ ಬೆಳ್ಪನಪ್ಪುಕಯ್ವ ಕಪ್ಪುರವಳ್ಳಿಯ ಬಿಳಿಯೆಲೆಯ ಬೀಳೆಯಮುಮಂ ಎಳವೆಱೆಯ ಮುಱುಗಿಗಳನೇಳಿಪ ಕಪ್ಪುರದ ಪಳುಕುಗಳುಮಂ

ಕತ್ತುರಿಯ ಕಂಪಿನಿಂ ಸೊಂಪಂ ತಳೆದ ಮಲಯಜವಿಲೇಪನಮುಮನ್ನರಸಂಗೆ ತೋಱಿ ಕಾದಂಬರಿಯ ಚೂಡಾಮಣಿಮರೀಚಿ ರಂಜಿತಾಂಜಲಿಸಮಭ್ಯರ್ಚನಮುಮಂ ಮಹಾಶ್ವೇತೆಯ ಕಂಠಗ್ರಹಕುಶಲವಚನ ಸಂಬೋಧನಮುಮಂ ಮದಲೇಖೆಯ ನಮಸ್ಕಾರಮುಮಂ ತಮಾಲಿಕೆಯ ಪಾದಪ್ರಣಾಮಮುಮಂ ಬಿನ್ನವಿಸಿ ಮಹಾಶ್ವೇತೆಯಿಂತೆಂದಟ್ಟಿದಳೆಂದೆಂತೆನೆ

ವಿದಿತೆಯೆನಾಂ ತನಗೆಲ್ಲಂ
ದದೊಳಂ ಪರಿಹೃತಸಮಸ್ತಸಂಗೆಯೆನೆನ್ನೀ
ಹೃದಯಂ ನೋಡಲ್ ಬಯಸಿದ
ಪುದಕಾರಣಪಕ್ಷಪಾತಿಯೆನಿಸಿದ ತನ್ನಂ ೭೯

ಮತ್ತಂ ತನ್ನಗಲ್ಕೆಯಿಂ ಗಂಧರ್ವರಾಜನಂದನೆಗೆ ಶೀತೋಷ್ಣಭವನಮಾದು ಮದುವೆಗಟಿಪಿದ ಮನೆಯಂತೆ ನಿರ್ವೃತ್ತಮಹೋತ್ಸವಮಾಗಿರ್ಪುದಂ ತುವಲ್ಲದೆಯುಂ

ತನು ಬಸವಳಲು ಮತ್ಸಖಿಗೆ ಮನ್ಮಥನನ್ನನೆನಿಪ್ಪ ತನ್ನುಮಂ
ನೆನೆದಪಳೊಮ್ಮೆ ಬಂದೆನಗೆ ಮಾಳ್ಪುದು ಪೆರ್ಮೆಯನೆಮ್ಮ ನಣ್ಪಿನಿಂ
ಜನಿಯಿಸಿದೀ ಕದರ್ಥನೆಗೆ ಸೈರಿಪುದಿಲ್ಲಗೆ ಬರ್ಪುದೆಂದು ಪೇ
ಟ್ಟಿನಿವಿರಿದೊಂದು ದರ್ಪಮೆನಗಾದುದು ತನ್ನಯ ನಿರ್ಮಳತ್ವದಿಂ ೮೦

ಎಂದು ನುಡಿಯಲ್ವೇಟ್ಟಿಳದಲ್ಲದೆಯುಂ

ಇದನಿದಾಶಯನೀಯದೊಳ್ ಮಱೆತು ದೇವರ್ ಬಂದಿರೆಂದಿಗಳ
ಟ್ಟಿದಳೆಂದೊಯ್ಯನೆ ಚಾಮರಾಂಗನೆಯ ಕಯ್ಯೊಳ್ ಕೊಟ್ಟನಾತ್ಮೋತ್ತರೀ
ಯ ದುಕೂಲಾಂಚಲಸೂಕ್ಷ್ಮ ಸೂತ್ರವಿವರವ್ರಾತಂಗಳಿಂ ಕೂಡೆ ನು
ಣ್ಗದಿರ್ಗಳ್ ಸೂಸುವಶೇಷಮೆಂಬಮಳತಾರೋದಾರಮಂ ಹಾರಮಂ ೮೧

ಕುಡುವುದುಂ ವಿದಗ್ಧವಿದ್ಯಾಧರನಿಂತೆಂದಂ

ಪದಪಿಂ ತವಮ್ಮಾಳ್ಗೆಳನಿಂ
ತು ದೇವಿಯರ್ ನೆನೆವುದೆಂಬುದಿದು ಸಕಲಗುಣಾ
ಸ್ಪದೆಯೆನಿಪ ಮಹಾಶ್ವೇತೆಯ
ಪದಕಮಲಾರಾಧನೆಯ ತಪಃಫಲಮಲ್ತೇ ೮೨

ಎನುತ್ತುಮೆಲ್ಲಮಂ ಪ್ರೀತಿವೆರಸು ತಾನೇ ಕಯ್ಕೊಂಡು ಕಿಱಿದು ಬೇಗ ಮಿರ್ದಲ್ಲಿಂದಮೆೞ್ದು ಸನ್ಮಾನಪುರಸ್ಸರಮಖಿಳರಾಜಲೋಕಮುಮಂ ಪ್ರಧಾನ ನಿವಹಮುಮಂ ವಿಸರ್ಜಿಸಿ

ಅನೆಟ್ಟಿಂದ ಬಟಿಕೆ ಚಿತ್ರರಥರಾಜಾವಾಸದೊಳ್ ಪಾರ್ತೆಯೇ
ನಾ ನೀರೇಜದಳಾಕ್ಷಿಗೇಂ ಬಿನದಮೇಗೆಯ್ವಳ್ ಮಹಾಶ್ವೇತೆ ತಾ
ನೇನೆಂಬಳ್ ಮದಲೇಖೆ ತತ್ಪರಿಜನಾಲಾಪಂಗಳೇನಲ್ಲಿ ನೀ
ನೇನಂ ಮಾಡುತುಮಿರ್ದೆಯೆಂದು ಬೆಸಗೊಂಡಂ ಚಂದ್ರಚೂಡಾಹ್ವಯಂ ೮೩

ಎಂದು ಬೆಸಗೊಳ್ವುದುಂ ಕೇಯೂರಕಂ ದೇವರ್ ಬಿಜಯಂಗೆಯ್ಯ ಲೊಡನೆ

ಹೃದಯಭವ ಪ್ರಯಾಣಪಟಹಧ್ವನಿಯೆಂಬಿನಮೆತ್ತಲುಂ ಪೊದ
ಳ್ದೊದವಿದ ರತ್ನನೂಪುರಕಲಾಪಕಲಧ್ವನಿಗಂಜೆವಿಂಡು ತಂ
ಡದಿನುಲಿಯುತ್ತಿರಲ್ ಕೆಳದಿಯರ್ವೆರಸಾಗಳೆ ನಿಮ್ಮನೀಕ್ಷಿಸಲ್
ಪದೆದಿರದೇಱಿದಳ್ ತರುಣಿ ತನ್ನಯ ರನ್ನದ ಕನ್ನೆಮಾಡಮಂ ೮೪

ಆಗಳ್ ಚಿತ್ರರಥನಂದನೆ ತುರಗಖುರಲುಳಿತಧೂಳೀಧೂಸರಮಪ್ಪ ಭವದ್ಗಮನಮಾರ್ಗಮಂ ನೋಡುತ್ತುಮಿರ್ದು ಕಿಱಿದು ಬೇಗದಿಂ ನೀಂ ತಿರೋಹಿತದರ್ಶನನಪ್ಪುದುಮಾ ದಿಗಂತಮೆಲ್ಲಮುಮಂ ದುಗ್ಧೋದಧಿ ಧವಳ ದೀರ್ಘಂಗಳಪ್ಪಪಾಂಗಾವಲೋಕನದಿಂ ತೇಂಕಾಡಿಸುತ್ತುಂ ಪಿರಿದು ಬೇಗ ಮಲ್ಲಿಯೆ ನಿಂದು ಬಿಸುಸುಯ್ದಲ್ಲಿಂದಮೆೞ್ದು ಕ್ರೀಡಾಪರ್ವತಕ್ಕೆ ವಂದು

ಇದು ನಿಂದ ನವೇಂದೂಪಲ
ವಿದು ಭವನಂ ಪೂಜೆಗೆಯ್ದ ಶೀಕರತಲಮಿಂ
ತಿದು ನೃಪನಾರೋಗಿಸಿದ ಪವ
ಳದ ನೆಲೆಯಿದು ಪವಡಿಸಿರ್ದ ಚಂದನತಲ್ಪಂ ೮೫

ಎಂದು ಪರಿಜನಂಗಳ್ ಪೇೞೆ ಮಗುೞೆ ಮಗುೞೆ ಕೇಳುತ್ತುಂ ನೀಂ ವಿರ್ದೆಡೆಗಳಂ ನೋಡುತ್ತುಂ ಪಗಲಂ ಕಟಿಪಿ ಮಹಾಶ್ವೇತಾನಿರೋಧದಿಂದಂತಾನು ಮಲ್ಲಿಯೆ ಕೃತಾಹಾರೆಯಾಗಿ ಕಿಱಿದು ಬೇಗಮಿರ್ದು ಚಂದ್ರೋದಯಮಾಗ

ಲೊಡನೇ ನಾನುಮಂ ಚಿಂತಿಸುತ್ತು ಮಲ್ಲಿಂದಮೆಟ್ಟು ಸೆಜ್ಜೆವನೆಯೊಳ್ ಮೆಯ್ಯ ನೀಡಾಡಿ ದಾರುಣಮೆನಿಪ ದಾಹಜ್ವರದಿನಿಕ್ಕುವಟ್ಟರತೆ ನಾನುಂ ವ್ಯಾಧಿ ಕಯ್ಕೊಂಡಂತಾರೊಳಂ ನುಡಿಯದೆ ಪೊರಳುತ್ತುಮಿರ್ದುಗ ಬೆಳಗಾಗಲೊಡನೆನ್ನಂ ನಿಮ್ಮಲ್ಲಿಗಟ್ಟಿದಳೆಂಬುದುಮವದೆಲ್ಲಮಂ ಕೇಳ್ದಲ್ಲಿಗೆ ಪೋಗಲುದ್ಯುಕ್ತನಾಗಿ ಮನುಜೇಂದ್ರಚಂದ್ರನಿಂದಾಯುಧದ ಬೆನ್ಗೆ ವಂದು ಪತ್ರಲೇಖೆಯಂ ಪೆಱಗನೇಱಿಸಿ ವೈಶಂಪಾಯನನಾದಿ ಪರಿಜನಮನಿರಲ್ವೇೞ್ದು ತುರಗಾರೂಢನಪ್ಪ ಕೇಯೂರಕನೊಡವರೆ ಹೇಮಕೂಟಕ್ಕೆ ವಂದು ಕನ್ಯಾಂತಃಪುರದ್ವಾರಮನೆಯ್ದೆ ವಂದು ಪಡಿಯಱನ ಕಯ್ಯೊಳ್ ಕುದುರೆಯಂ ಕೊಟ್ಟು ಕಾದಂಬರೀಪ್ರಥಮದರ್ಶನ ಕೌತುಕೆಯಪ್ಪ ಪತ್ರಲೇಖೆವೆರಸು ಪುಗುತಂದಿದಿರ್ವರ್ಪ ವರ್ಷವರನಂ ಕಾದಂಬರೀದೇವಿಯೆಲ್ಲಿರ್ದಪಳೆಂಬುದುಮಾತಂ ಪೊಡವಟ್ಟು ದೇವ ಮತ್ತಮಯೂರವೆಂಬ ಕೇಳೀಶೈಲದ ತಾವರೆಗೊಳದ ಹಿಮಗೃಹದೊಳಿರ್ದಪಳೆಂದು ಬಿನ್ನವಿಸೆ ಕೇಯೂರಕೋಪದಿಶ್ಯಮಾನಮಾರ್ಗನಾಗಿ ಪ್ರಮದವನದೊಳಗೆ ಬರುತುಂ

ಬಿಸಿಲೆಲ್ಲ ಪಸಲೆಗವಿದುದು
ಪಸುರ್ವೆಳಗಿಂದೆನಿಪ ಬಾಳೆಕದಳೀವನದೊಳ್
ಬಿಸರುಹದಳಂಗಳಿಂ ಪೊದೆ
ಯಿಸಿರ್ದ ಹಿಮಗೃಹವನವನಿಪಾಲಂ ಕಂಡಂ ೮೬

ಕುಳಿರ್ವ ಹಿಮಾಲಯದೊಳ್ ಕೋ
ಮಳೆ ನಿಜಪರಿವಾರಸಹಿತಮಿರ್ದಪಳ್ ಹಿಮವ
ತ್ತಳದೊಳ್ ತರಂಗಿಣೀಸಂ
ಕುಳದಿಂ ಬಳಸಿರ್ದ ದಿವಿಜನದಿಯೆಂಬಿನೆಗಂ ೮೭

ಅಂತು ಕಾದಂಬರೀದೇವಿಯಂ ದೂರದೊಳೆ ಕಂಡನನಂಗಮೂರ್ತಿ ನಾರಾಯಣಂ ಬಂದನೆಂದು ಪೇೞಲುತ್ತರಳತಾರಕೆಯಾಗಿ

ಬರವನದಾರ್ ಪೇೞ್ಟಟ್ಟಿದ
ರರಸಂ ಬಂದಪನೆ ಕಂಡಿರೇ ನೀವೆನಿತಂ
ತರ್ಪಾವೆಡೆಯೆನುತೆನುತುಂ
ಪರಿಜನಮಂ ಕಣ್ಣಸನ್ನೆಯಿಂ ಬೆಸಗೊಂಡಳ್ ೮೮

ಅಂತು ಬೆಸಗೊಳುತ್ತುಂ ಗೆಂಟಱೊಳ್ ಬರುತ್ತಿರ್ದ ಯುವರಾಜನಂ ಕಂಡು

ನಡುಗುತ್ತುಂ ಮೇಲುದಂ ದೊರ್ವರೊದಲೆತ್ತೆಗೆದು ಹಾರಾಂಶುವಂ ಸಾರ್ಚುತುಂ ಸೋ
ರ್ಮುಡಿಯಂ ಸಸ್ವೇದಹಸ್ತಾಬ್ಜದಿಂ ನೆಱಿಪುತ್ತುಂ ವಕ್ತ್ರ ಪ್ರತಿಚ್ಛಾಯೆಯಂ ಕ
ಯ್ಗುಡು ನೀನೆಂಬಂದದಿಂ ನಿರ್ಮಲತರ ಮಣಿಬದ್ಧಾವನೀಭಾಗಮಂ ತ
ನ್ನೆಡಗಯ್ಯಿಂ ಮೆಲ್ಲನೊತ್ತುತ್ತೆ ಸೆವರ್ವರ್ಸೆಯಿಂ ಕಾಂತೆಯೆಂತಾನುಮೆೞ್ದಳ್ ೫೯

ಆಗಳ್ ಮನುಜಮಕರಧ್ವಜನೆಯ್ದೆ ವಂದು ಮುನ್ನಿನಂದದೊಳ್ ಕಾದಂಬರಿಗೆ ಮಹಾಶ್ವೇತಾಪ್ರಣಾಮಪುರಸ್ಸರಮುಪದರ್ಶಿತ ವಿನಯನುಮಾಗಿ ಕಯ್ಗಳಂ ಮುಗಿವುದುಮಾಕೆಯುಂ ಕಯ್ಗಳಂ ಮುಗಿದು ಲಲಾಟಿಕಾಚಂದನಭರದಿನೆಱಗಿದಂತೆ ಕಿಂಚಿದವನತಮುಖಿಯಾಗಿ ಮುನ್ನಿರ್ದ ಕುಸುಮಶಯನದೊಳ್ ಕುಳ್ಳಿರೆ ವಿದಗ್ಧವಿದ್ಯಾಧರಂ ದೌವಾರಿಕೆಯರ್ ಕೆಲದೊಳಿಕ್ಕಿದ ಮಣಿಮಯಾಸನಮಂ ಕಾಲೊಳ್ ನೂಂಕಿ ನೆಲದೊಳ್ ಕುಳ್ಳಿರ್ದುಂ ಕಾದಂಬರೀದೇವಿಗೆ ಕೇಯೂರಕಂ ಪೊಡವಟ್ಟು

ವಸುಧಾಧೀಶನ ಪರಮ
ಪ್ರಸಾದಭಾಗಿನಿಯನಡಪವಳಿತಿಯನವಧಾ
ರಿಸು ಪತ್ರಲೇಖೆಯೆಂಬುದು
ಪೆಸರಿಂದಾ ಸತಿಯನರಸಿಯಂ ಕಾಣಿಸಿದಂ ೬೦

ಅಂತಾ ಪತ್ರಲೇಖೆಯಂ ನೋಡಿ

ಎನಿತೊಂದು ಪಕ್ಷಪಾತಮೊ
ವನಿತೆಯರಂ ಮಾಡುವೆಡೆಯೊಳಬ್ಜಭವಂಗಂ
ದಿನಸುಂ ಕಾಂತೆಯ ರೂಪನೆ
ಮನದೊಳ್ ಗಂಧರ್ವಕನ್ನೆ ಭಾವಿಸುತಿರ್ದಳ್ ೬೧

ತನಗಾಗಳ್ ಪೊಡವಟ್ಟಳಂ ಪದಪಿನಿಂ ಪೊಣ್ಮುತ್ತ ಬಾ ಯಿತ್ತ ಬಾ
ಯೆನುತುಂ ತನ್ನ ಕೆಲಕ್ಕೆ ಕಾಂತೆ ಕರೆದಾದಂ ಭ್ರಾಂತಿಯಿಂದಂ ಸಖೀ
ಜನಮೆಲ್ಲಂ ನಡೆ ನೋಡೆ ಪಿಂತಿರಿಸಿಕೊಂಡಾಗಳ್ ಮೊದಲ್ಗೊಂಡೆಲಂ
ಪಿನೊಳಾಕಾಂತೆಯ ಮೆಯ್ಯನೊಯ್ಯನೆ ಟಿಂವುತ್ತಿರ್ದಳ್ ಕರಾಂಭೋಜದಿಂ ೬೨

ಆಗಳ್ ಯುವರಾಜಂ ಕೃತಸಕಲಾಗಮನೋಚಿತೋಪಚಾರನಾಗಿ ತದವಸ್ಥೆಯಪ್ಪ ಚಿತ್ರರಥನಂದನೆಯಂ ನೋಡಿ

ಪರಿತಾಪಮಾವ ತೆಱದಿಂ
ದೊರೆಕೊಂಡುದೊ ದೇವಿ ನಿನಗೆ ನೋವಿದು ನಿನ್ನಿಂ
ಪಿರಿದೆನ್ನ ದದಱಿನೆಂತುಂ
ಸರೋಜಮುಖಿ ನಿನ್ನ ಸುಖಮನಾಂ ಬಯಸಿದಪೆಂ ೯೩

ಎಂದು ನುಡಿಯೆ ಕಾದಂಬರೀದೇವಿ ಶಾಲೀನತೆಯನವಲಂಬಿಸಿ ನುಡಿಯಲಱಿಯದೆ

ಸುದತಿ ಪೆಱತೊಂದು ನೆವದಿಂ
ಕೆದಱಿದಳೆಂದಿನಿಸು ಮಂದಹಾಸದ್ಯುತಿಯಂ
ವದನಾಬ್ಜ ಪರಿಮಳಾಗತ
ಮದಾಳಿ ಪಟಲಾಂಧಕಾರಮಂ ಬೆದಱಿಪವೋಲ್ ೯೪

ಆಗಳಾ ಕಾದಂಬರೀದೇವಿಯ ಕೆಳದಿ ಮದಲೇಖೆಯೆಂಬಳ್ ಮೂರ್ತಿ ನಾರಾಯಣನ ಮೊಗಮಂ ನೋಡಿ

ಇದನೇನೆಂದಪುದೆಂತುಟೆಂದುಸಿರಲಾರ್ಗಂ ಭಾರದೀ ತಾಪದೊಂ
ದೊದವೆಂತೀ ಸುಕುಮಾರಭಾವಯುತೆಗಾದಂ ತಾಪಮಂ ಮಾಡದಾ
ವುದು ಪೇೞಿಂತುಟೆ ದಲ್ ಮೃಣಾಳಿನಿಗೆ ತೀವ್ರಾಗ್ನಿಸ್ವರೂಪಂಗಳಾ
ಗದೆ ಮಾಣ್ದುರ್ವೆ ಚಂದ್ರಿಕಾಪ್ರಸರಮುಂ ನೀಹಾರವಿಸ್ತಾರಮುಂ ೯೫

ನೀರೇಜ ತಾಳವೃಂತ ಸ
ಮೀರಾದಿಗಳಿಂದೆ ತಾಪವೊದವಿದಪುದು ನೋ
ಡೀ ರಮಣಿಗೆ ಧೀರತ್ವದ
ನಾರತಸಂಗತಿಯದೊಂದೆ ಜೀವಾಧಾರಂ ೯೬

ಎಂದು ಕಾದಂಬರೀಹೃದಯಗತಮಪ್ಪುದನೆ ಮದಲೇಖೆ ನುಡಿಯೆ ತನ್ನ ನುಡಿಗಳ್ಗೆ ಪ್ರತ್ಯುತ್ತರದಂತೀತೆಱದೊಳಮಿಾ ನುಡಿ ಘಟಿಯಿಸುವುದೆಂದು ಸಂದೇಹದೋಲಾಧಿರೂಢಚಿತ್ತನಾಗಿ ಮಹಾಶ್ವೇತೆವೆರಸು ಪ್ರೀತ್ಯುಪಚಯಚತುರಂಗಳಪ್ಪ ವಚನಂಗಳಂ ನುಡಿಯುತ್ತುಂ ಪಿರಿದು ಬೇಗಮಿರ್ದು ಗಂಧರ್ವರಾಜನಂದನೆಯಿಂ ತನ್ನನಂತಾನುಂ ಬಿಡಿಸಿ ಬೀಳ್ಕೊಂಡು ನಿಜಸ್ಕಂಧಾವಾರಕ್ಕೆ ಪೋಗಲೆಂದು ತದೀಯಭವನಮಂ ಪೊಱಮಟ್ಟಿಂದ್ರಾಯುಧದ ಬೆನ್ಗೆ ವಂದಾಗಳ್ ಕೇಯೂರಕಂ ದೇವ ಪತ್ರಲೇಖೆಯಂ ಕೆಲವು ದಿನಕ್ಕೆ ಕಟಿಪಿದಪೆವಿರಿಸುವುದೆಂದು ಪ್ರಥಮದರ್ಶನಜನಿತ ಪ್ರೀತಿಯಪ್ಪ ಕಾದಂಬರೀದೇವಿಯ ಬೆಸದಿಂ ಮದಲೇಖೆ ಬಿನ್ನಪಂಗೆಯ್ದಟ್ಟಿದಳೆಂಬುದುಂ ಮನುಜಮಕರಧ್ವಜನಿಂತೆಂದಂ

ಆರ್ಗೆ ಪಡೆದಪರಿದಂ ಕೇ
ಯೂರಕ ದೇವೀಪ್ರಸಾದಮಂ ಧನ್ಯೆಯಿವಳ್
ಸಾರಿರ್ದಪಳ್ ಗಡಿಂತೀ
ಕಾರುಣ್ಯಪದಕ್ಕೆ ಪತ್ರಲೇಖೆಯೆ ನೋಂತಳ್ ೯೭

ಎಂದು ಪತ್ರಲೇಖೆಯನಿರಲ್ವೇೞ್ದು ನಡೆಗೊಂಡು ನಿಜಸ್ಕಂಧಾವಾರಮಂ ಪುಗುವಾಗಳ್

ಚರನುಜ್ಜೈನಿಯಿನೊರ್ವನಾಗಳೆ ಬರಲ್ ಕಾಣುತ್ತುಮೌತ್ಸುಕ್ಯದಿಂ
ಪರಿವಾರಂಬೆರಸೆಮ್ಮ ತಂದೆಯುಮಶೇಷಾಂತಃಪುರಸ್ತ್ರೀಜನಂ
ಬೆರಸೆಮ್ಮಬ್ಬೆಯುಮಿರ್ದರೇ ಸುಖದಿನೆಂದಾವಿರ್ಭವತ್ಪ್ರೀತಿನಿ
ರ್ಭರವಿಸ್ತಾರಿತನೇತ್ರನಂದು ಬೆಸಗೊಂಡಂ ಚಂದ್ರಚೂಡಾಹ್ವಯಂ ೯೮

ಅಂತು ಬೆಸಗೊಳ್ವುದುಮಾ ಲೇಖವಾಹಕಂ ಪೊಡವಡುತ್ತುಮೆಯ್ದೆವಂದು ದೇವರ್ ಬೆಸಸಿದಂದದೊಳೆಲ್ಲರುಂ ಸುಖದಿನಿರ್ದರೆಂದು ಬಿನ್ನವಿಸಿ ನಿಮ್ಮ ತಂದೆಯರಟ್ಟಿದ ರಾಜಾದೇಶಮಿದೆಂದು ಲೇಖನದ್ವಿತಯಮಂ ನೀಡೆ

ಯುವರಾಜನೃಪಂ ನಯವಿನ
ಯವಿನೂತಂ ತಲೆಯೊಳಾಂತು ಕಯ್ಕೊಂಡು ಮಹೋ
ತ್ಸವದಿಂದಂ ರಾಜಾದೇ
ಶವನಾಗಳ್ ಬಿರ್ಚಿ ನೋಡಿ ತಾಂ ಬಾಚಿಸಿದಂ ೯೯

ಅದೆಂತೆನೆ ಸ್ವಸ್ತಿ ಸಕಲರಾಜಶಿಖಂಡಶೇಖರಾರ್ಚಿತಚರಣಾರವಿಂದನುಂ ಪರಮಮಾಹೇಶ್ವರನುಂ ಮಹಾರಾಜಾಧಿರಾಜನುಮೆನಿಸಿದ ಶ್ರೀಮತ್ತಾರಾಪೀಡದೇವಂ ಸಕಲಗುಣಸಂಪದಾಯತನನಪ್ಪ ಯುವರಾಜನಂ ಪರಮಾಶೀರ್ವಚನಪುರಸ್ಸರಂ ಕಾರ್ಯಮಂ ಬೆಸಸಿರ್ಪಂ

ಪ್ರಜೆಯೆಲ್ಲಂ ಕ್ಷೇಮದಿಂದಿರ್ದುದು ಕುಶಲದಿನಿರ್ದಪ್ಪೆವಾವಾದೊಡಂ ದಿಗ್ವಿಜಯಂಗೆಯ್ಯಲ್ಕೆ ಪೋದಂ ಪಲವು ದಿವಸಮಾದತು ಕಾಣಲ್ಕೆ ಬೇಟ್ಕುಂ ವಿಜಯಾಲಂಕಾರನಂ ಪುತ್ರನನೆನುತೆ ಮಹೋತ್ಕಂಠೆಯಿಂ ತನ್ನ ಮಾತೃವ್ರಜಮಿರ್ದತೊೞಲೆಯಂ ಬಾಚಿಸುವುದು ತಡಮೆಟ್ಟಂದು ತಾಂ ಕಾಣ್ಬುದೆಮ್ಮಂ ೧೦೦

ಎಂದು ಬಾಚಿಸಿ ಕುದುರೆಯನೇಱಿರ್ದಂದದೊಳೆ ಪ್ರಯಾಣಭೇರಿಯಂ ಪೊಯ್ಸಿ

ಮುಂದಿರ್ದ ಮೇಘನಾದನ
ನೆಂದಂ ನೀನಿರ್ದು ಪತ್ರಲೇಖಾಂಗನೆಯಂ
ಮುಂದಿಟ್ಟು ಬಟಿಕೆ ಬರ್ಪುದು
ತಂದಪನೆಲ್ಲವರಮಾಕೆಯಂ ಕೇಯೂರಂ ೧೦೧

ಕೇಯೂರಂಗೆ ನೀನಿಂತು ಪೇೞ್ವುದು

ನೆನೆಯದೆ ತಮ್ಮ ವತ್ಸಲತೆಯಂ ಪರಿಭಾವಿಸದೊಳ್ಪನಟ್ಕಱಂ ಮನದೊಳಱಂ ವಿಚಾರಿಸದೆ ನಿಸ್ಪೃಹತಾತ್ಮಕನೆಂಬಳ್ಕೆಭಕ್ತನುಮುಪಚಾರಶೀಲನುಮೆನಿಪ್ಪಿನೆಗಂ ನುಡಿಯೊಂದು ಮಾಟವೊಂದೆನಿಸಿದ ಮಾನವಂಗೆನಗೆ ದೇವಿ ಪಸಾದಮನೇಕೆ ಮಾಡಿದಳ್ ೧೦೨

ಅದಲ್ಲದೆಯುಂ,

ಎನಸುಂ ಕಯ್ವಾರದಿಂದಿಲ್ಲದ ಗುಣಗಣಮಂ ರಾಗದಿಂ ಕೆಮ್ಮನೀ ಪಾಂಥನೊಳಧ್ಯಾರೋಪಣಂಗೆಯ್ದನವರತಂ ಬಣ್ಣಿಸುತ್ತಿರ್ಪಳೀ ಮರ್ತ್ಯನೊಳಾಪ್ರೊಳ್ಪೆಪ್ಪುದೆಂತೀ ತೆಱನುಮರಿದೆನುತ್ತಂ ಮಹಾಶ್ವೇತೆಯಂ ತಾಂ ಮನದೊಳ್ ಮೇಣ್ ಮಾತಿನೊಳ್ ಮೇಣಱುಗುಮರಸಿಯೆಂದಾಂ ಕರಂ ನಾಣ್ಚಿದಪ್ಪೆಂ ೧೦೩

ಜನಕಾಜ್ಞೆ ಮಿಾಱಲೆಂಗವೆ
ತನುವಿಂತವರೊಡವೆಯಾಗಿ ಸಲ್ಗೆಮ ಗಂಧ
ರ್ವನಿವಾಸಕ್ಕನುವಿಸುವೀ
ಮನವಪ್ಪೊಡೆ ತನಗೆ ಮಾಱುವೋದತ್ತೀಗಳ್ ೧೦೪

ಎಂದಿವು ಮೊದಲಾಗಿ ಪಲವುಮಂ ಗಂಧರ್ವರಾಜನಂದನೆಗೆ ಕೇಯೂರಕನಿಂ ಬಿನ್ನವಿಸಲ್ವೇೞ್ಕುಮೆಂದು ಮೇಘನಾದಂಗೆ ಪೇೞ್ದು ಕೆಲದೊಳಿರ್ದ ವೈಶಂಪಾಯನಂಗಂ ಕಟಕಮಂ ಸಂವರಿಸಿಕೊಂಡು ಬರ್ಪುದೆಂದುಮೊಪ್ಪಿಸಿ ನಿಜಪುರಾಭಿಮುಖನಾಗಿ ತಳರ್ದಂ.

೬. ಚಂದ್ರಾಪೀಡನ ಪುನರಾಗಮನ

ಅಂತು ತಳರ್ದು ನಡೆಗೊಂಡು ರಮಣೀಯ ಪ್ರದೇಶಂಗಳೊಳ್ ಬೀಡಂ ಬಿಡುತುಂ ಕೆಲವಾನುಂ ದಿವಸದಿಂ ನಿಜರಾಜಧಾನಿಯಪ್ಪುಜ್ಜೈನಿಯಂ ಪೊಕ್ಕಾಕಸ್ಮಿಕಾಗಮನಸಂಜಾತಹರ್ಷರಾಗಿ ಪೌರಜನಂಗಳ್ ಪೊಡವಡುತಿರೆ ಭೋಂಕನೆ ರಾಜಭವನಮನೆಯ್ದುವರ್ಪಾಗಳ್ ಪರಿಜನನಿವಹಂ ಪರಮೋತ್ಸವದಿಂ ಪರಿದು ತಾರಾಪೀಡಂಗೆ ಬಿನ್ನವಿಸಲಾತಂ ಸುತ್ತಿರ್ದ ಮೂರ್ಧಾಭಿಷಿಕ್ತರ್ವೆರಸಿದಿರೊಳ್ ಬಂದು ಕಾಲ ಮೇಲೆ ಮೊಟ್ಟಿದ ವಿನಯಾಭಿರಾಮನಂ ತಕ್ಕೈಸಿ ಪರಸಿ ದಿಗ್ವಿಜಯ ಸಂಬಂಧಿಯಪ್ಪ ವಾರ್ತೆಯಂ ಕೇಳೆ ಪೇೞುತ್ತುಂ ಕಿಱಿದು ಬೇಗಮಿರ್ದು ವೈಶಂಪಾಯನಂ ಬೀಡನೊಡಗೊಂಡು ಬಂದಪನೆಂದಾರ್ಯ ಶುಕನಾಸಂಗೆ ಪೇೞ್ದು ನಿಜಜನನೀಗೃಹದೊಳ್ ಮಜ್ಜನಭೋಜನಾದಿಗಳಂ ಮಾಡಿ ಬಯ್ಗುಂಬೊೞ್ತಪ್ಪುದುಂ ನಿಜಭವನಕ್ಕೆ ಬಂದು

ಅರಮನೆಯುಮವಂತಿಯುಮು
ರ್ವರೆಯುಂ ರಾಜ್ಯಮುಮಿದೆಲ್ಲಮೇವುದೊ ಕಾದಂ
ಬರಿಯಿಲ್ಲದೆಂದು ವಿರಹಾ
ತುರಹೃದಯಂ ನೃಪತನೂಭವಂ ಚಿಂತಿಸಿದಂ ೧

ಅರಸನಿರುಳಾಗೆ ಪಗಲಿನ
ಬರವಂ ಪಗಲಾಗಲಿರುಳ ಬರವಂ ಪಾರು
ತ್ತಿರುಳುಂ ಪಗಲುಂ ಗಂಧ
ರ್ವರಾಜನಂದನೆಯ ವಿರಹದಿಂ ಚಿಂತಿಸಿದಂ ೨

ಮತ್ತಂ ಚಿತ್ರರಥನಂದನೆಯ ವಾರ್ತೆಯಂ ಕೇಳಲುತ್ಕಂಠಿತನಾಗಿ ಪತ್ರಲೇಖೆ ಬರ್ಪ ಸಯ್ಪನೇ ಬಯಸುತ್ತುಮಿರಲಾಕೆಯಂ ಕೆಲವಾನುಂ ದಿವಸಕ್ಕೊಡಗೊಂಡು ಬಂದು ಮೇಘನಾದಂ ಪ್ರಣಾಮಪುರಸ್ಸರಂ ಕಾಣಿಸೆ ನೃಪರೂಪಚಂದ್ರನದಿರೇೞ್ವುದುಂ ಪತ್ರಲೇಖೆ ತದಂಘ್ರಿಕಮಲಕ್ಕೆಱಗಿದಾಗಳಾಕೆಯಂ ಕುಳ್ಳಿರವೇೞ್ದು

ನಿರುಪಮ ಚಾರಿತ್ರ್ಯಲಂ
ಕರಣೆ ಮಹಾಶ್ವೇತೆಗಂ ಸಪರಿಜನ ಕಾದಂ
ಬರಿಗಂ ಕುಶಲಮೆ ಪೇಳೆಂ
ದರಸಂ ತಾಂ ಪತ್ರಲೇಖೆಯಂ ಬೆಸಗೊಂಡಂ ॥ ೩

ಅಂತು ಬೆಸಗೊಳ್ವುದುಮಾಕೆ ದೇವರ್ ಬೆಸಸಿದಂದದೊಳೆಲ್ಲರುಂ ಕುಶಲದಿನಿರ್ದರದಲ್ಲದೆಯುಂ ಕಾದಂಬರೀದೇವಿ ಪರಿಜನಂಬೆರಸು ನಿಮಗೆ ತನ್ನ ಪೊಡವಡಿಕೆಯಂ ಬಿನ್ನವಿಸಲ್ವೇಳ್ದಟ್ಟಿದಳೆಂಬುದುಂ ತತ್ಸಂಬಂಧಿಯಪ್ಪ ವಾರ್ತೆಯಂ ಕೇಳಲತಿಕುತೂಹಲನಾಗಿ ಮೇಘನಾದಂಗೆ ಮಚ್ಚುಗೊಟ್ಟಾತಂಬೆರಸು ರಾಜಲೋಕಮಂ ವಿಸರ್ಜಿಸಿ ದೂರೋತ್ಸಾರಿತಪರಿಜನಂ ಪತ್ರಲೇಖಾದ್ವಿತೀಯನಾಗಿ ವಲ್ಲಭಬಾಲೋದ್ಯಾನಮಂ ಪೊಕ್ಕು ಕುಳ್ಳಿರ್ದು ಪತ್ರಲೇಖೆಯ ಮೊಗಮಂ ನೋಡಿ ಎನಿತುದಿನಮಿರ್ದೆ ಗಂಧರ್ವನಂದನೆಯೊಂದು ಪದಪದೆಂತುಟೆಂದು ನೃಪರೂಪಚಂದ್ರಂ ಬೆಸಗೊಳ್ವುದುಂ ದೇವ ನೀವಿತ್ತ ಬಿಜಯಂಗೆಯ್ಯಲೊಡನೆಯಾಂ ಕೇಯೂರಕನೊಡನೆ ಪೋಗಿ ಮುನ್ನಿನಂದದೊಳೆ ಪಟ್ಟಿರ್ದ ಕಾದಂಬರೀ ದೇವಿಯ ಕೆಲದೊಳ್ ಕುಳ್ಳಿರ್ದು ಪೊಸತೆನಿಸಿದ ಪ್ರಸಾದಮನನುಭವಿಸುತ್ತುಮಿರ್ದೆನಲ್ಲದೆಯುಂ

ಪದಪಿನ ಮಾತುಗಳ್ ಪಲವುಮಂ ಬಿಡದಾಡಿದೊಡಲ್ಲಿ ಪುರ್ಪುದಾ
ವುದು ಗಡ ದೇವ ಮನ್ನಯನದೊಳ್ ನಯನಂ ಕರದೊಳ್ ಕರಾಬ್ಜವಂ
ಗದೊಳೆಸೆವಂಗಯಷ್ಟಿ ಪೆಸರಕ್ಕರದೊಳ್ ನಿಜವಾಣಿ ಕೂರ್ಮೆಯೊಳ್
ಹೃದಯವದೊರ್ಮೆಯುಂ ನೆಲಸಲಂಗನೆಗಿಂತಿರೆ ಪೋದುದಾ ದಿನಂ ೪

ಅಂತು ಬಯ್ಗಂಬೊಟ್ಟಪ್ಪುದುಮೆನ್ನ ಕಯ್ಯಂ ಪಿಡಿದು ಹಿಮಗೃಹದಿಂ ಪೊಱಮಟ್ಟು ಸುಯ್ಯುತ್ತುಂ ಬಂದು ನಿಷಿದ್ಧಾಶೇಷಪರಿಜನೆಯಾಗಿ ವಲ್ಲಭಬಾಲೋದ್ಯಾನಮಂ ಪೊಕ್ಕು ಮರಕತಸೋಪಾನಶೋಭಿತಮುಂ ಸುಧಾಧವಳಿತಮುಮಪ್ಪ ರಮಣೀಯ ಪ್ರಮದವನಮಧ್ಯವೇದಿಕೆಯ ಮಣಿಸ್ತಂಭಮಂ ನೆಮ್ಮಿ

ಅವಧರಿಸಿ ಮನದೊಳೇನಾ
ನುವನಾಗಳ್ ಕನ್ನೆ ಸುಡಿಯಲೊಡರಿಸಿ ನಿಷ್ಕಂ
ಪವೆನಿಪ್ಪ ತಾರೆಗಳ್ವೆರ
ಸೆದೆಯಿಕ್ಕದೆ ನೋಡುತಿರ್ದಳೆನ್ನಯ ಮೊಗಮಂ ॥ ೫

ಎನಗೀಗಳ್ ನಿಕ್ಕುವಂ ವಲ್ಲಭತೆಯೆಡೆಯೊಳೆಮ್ಮಬ್ಬೆಯಿಂದಯ್ಯನಿಂದ ಕ್ಕನಿಂ ಪ್ರಾಣಂಗಳಿಂದತ್ಯಧಿಕಮೆನಿಸಿ ಮಚ್ಚಿತ್ತದೊಳ್ ನಿಂದೆ ನೀಂ ನಿನ್ನನದೆಂದಾಂ ಕಂಡೆನಂದಿಂ ಬೞಿಕೆ ಸಖಿಯರಂ ಪತ್ತುವಿಟ್ಟೆ ಮನಂ ನಿನ್ನನೆ ನೀಡುಂ ನಾಡೆ ನಂಬಿರ್ದಪುದಱಿಯೆನಿದನ್ನೆಂತುಮಾಂ ಪತ್ರಲೇಖೆ ೬

ಎನಗಾದುದೊಂದು ಪರಿಭವ
ಮನಕಾರ್ಗೆ ದೂಱಿದಪೆನಾರ್ಗೆ ಪೇೞ್ದಪೆನಿದನಾಂ
ನಿನಗುಸಿರ್ದೆನಂತರಂ ಸುಖ
ದಿನೆನ್ನ ತನುವಿಂದೆ ಪತ್ತುವಿಡಿಸುವೆನಸುವಂ ೭

ಪಿರಿಯರ್ಗಿದು ಗುಣಮೊ ಪೇೞ್
ಪರಿಚಯಕಿದು ಫಲಮೊ ತರುಣಿ ಬಿಸತಂತುವಿನೊಳ್
ದೊರೆಯೆನಿಪೆಳಮನದೆನ್ನಂ
ಪರಿಭವಿಪುದೆ ಕಂಡು ಕನ್ನೆಯಂ ಯುವರಾಜಂ ೮

ಇನ್ನೆನ್ನನಿಂತು ನೃಪನಿಸ
ಕಂ ನಿತ್ತರಿಸಲ್ಕೆ ಕುಡದು ಮಱುವುಟ್ಟಿನೊಳಂ
ನಿನ್ನೊಡನೆ ಕೂಟವೆನಗ
ಕ್ಕೆನ್ನಯ ತಪ್ಪಿಂಗೆ ಸತ್ತು ಶುದ್ಧೆಯೆನಪ್ಪೆಂ ೯

ಎಂದು ಚಿತ್ರರಥನಂದನೆ ನುಡಿದು ಮೂಣ್ಬುದುಮಾನತಿಭೀತೆಯೆನ್ನಾಗಿ ದೇವಿ, ಯುವರಾಜಂ ನಿನ್ನ ಕುಸುಮಸುಕುಮಾರಮಪ್ಪ ಮನವನೇಕೞಿಂ ನೋಯಿಸಿದನದಾವುದಪರಾಧಂ ಮಾಡಿದಂ ಯುವರಾಜನ ದೋಷಮಿದಲ್ತು ಕಾಮನ ದೋಷಂ

ಇಲ್ಲಿಗೆ ಮನುಜಮನೋಜನೆ
ಬಲ್ಲನುಪಾಯಮನದಕ್ಕೆ ನೀನೀಗಳ್ ತ
ಳ್ಕಿಲ್ಲದೆ ಬೆಸಸೆನ್ನಂ ಭೂ
ವಲ್ಲಭನುಮನಿಂದೆ ತಂದಪೆಂ ಚಂದ್ರಮುಖೀ ೧೦

ಎಂದು ಬಿನ್ನವಿಸೆ

ಪದೆದನ್ನಂ ಕಾಮನಿತ್ತಂ ತನಗೆನಲುದು ಪೊರ್ದಲ್ ನೆವಂ ಕೂರ್ಪೆನಾನೆಂ
ಬುದು ವೇಶ್ಯಾಲಾಪವಾಕಂ ತನ್ನಯ ವಿರಹದೆ ಸತ್ತಪ್ಪೆನೆಂಬಂದು ದೃಷ್ಟ
ಕ್ಕದಸತ್ಯಂ ಬರ್ಪೆನಾನೆಂಬುದು ಚಪಲತೆ ತಾಂ ಬರ್ಪುದೆಂದಂದು ಸೌಭಾ
ಗ್ಯದ ಗರ್ವಂ ಮೇಲೆ ಬಿಪ್ಪಾನೆಳಸಿದಪೆನೆನಲ್ ಬಂಧಕೀ ಧಾರ್ಷ್ಟ್ಯಮಕ್ಕುಂ ೧೧

ಅದಱಿನೊಂದುಮಂ ಪೇೞ್ಬುಟ್ಟಲಱಿಯೆನೆಂದು ಗಂಧರ್ವರಾಜನಂದನೆ ಕಿಱಿದುಬೇಗಮಿರ್ಪನ್ನೆಗಂ ದಿವಸಾವಸಾನಸಮಯಮಾಗೆ ಸುರಭಿಗಂಧೋದ್ಗಾರಿಗಳಪ್ಪ ದೀವಿಗೆಗಳಂ ಪಿಡಿದು ದೀಪಧಾರಿಣಿಯರ್ ವಂದು ನಿಜನಿಯೋಗಾಶೂನ್ಯಾರ್ಥಮಾಗಿ ಗೆಂಟಱೊಳೆ ಬಳಸಲ್ವರಂ ಸೈರಿಸದೆ ತರಳಿಕೆಯ ಕಯ್ಯ ತಂಬುಲಮಂ ಕಳೆದುಕೊಂಡೆನಗೆ ಪಿರಿದನುಗ್ರಹದಿನಿತ್ತು ಕೇಯೂರಕ ನೀಂ ಪತ್ರಲೇಖೆಯನೊಡಗೊಂಡು ಪೋಗಿ ಕಟಕಮಂ ಪುಗಿಸೆಂದು ತನ್ನ ತೊಟ್ಟ ತುಡುಗೆಗಳೆಲ್ಲಮನೆನಗಂಗಚಿತ್ತಮನಿತ್ತಂ ತಾನುಂ ಬೀೞ್ಕೊಳಿಸಿ ಕಟಿಪೆ ಕೇಯೂರಕಂಬೆರಸು ಮೇಘನಾದನಲ್ಲಿಗೆ ವಂದಾಗಳತಂ ದೇವರ್ ಬೆಸಸಿದಂದದೊಳೆ ಕೇಯೂರಕಂಗೆ ಪೇೞ್ವುದುಮದೆಲ್ಲಮಂ ಕೇಳ್ದತಂ ಹೇಮಕೂಟಕ್ಕೆ ಪೋದನಾನುಂ ಮೇಘನಾದನೊಡನಿತ್ತಲ್ ಬಂದೆನದಲ್ಲದೆಯುಂ

ನಿನ್ನಯ ವಿರಹೋದ್ರೇಕದಿ
ನಿನ್ನುಂ ತಳಿರ್ವಾಸೆಯ ಮೇಲೆ ಪೊರಳುತ್ತಿರ್ದಾ
ಕನ್ನೆಯ ರೂಪೆನ್ನಿದಿರೊಳ್
ಸನ್ನಿದಮಾದಂತೆ ತೋಱುತಿರ್ದಪುದೀಗಳ್ ೧೨

ಎಂದು ಪತ್ರಲೇಖೆ ಬಿನ್ನಪಂಗೆಯ್ಯೆ

ಮನದಟಲಿಂ ಪೊಣ್ಮುವ ಕ
ಣ್ಬನಿಹುಱುಗಲನೆಮೆಯೊಳಾಂತು ನಿಡುಸುಯ್ದು ಧರಂ
ತನಿಗೆತ್ತಲ್ ಮನಮಿಕ್ಕೊ
ಯ್ಯನೆ ನುಡಿದಂ ಪತ್ರಲೇಖೆಗವನಿಪತನಯಂ ೧೩

ಅದೆಂತೆನೆ

ಪ್ರಮದದೊಳಿನ್ನ ಕಂಧರದೊಳಿರ್ದಿರುಳಿಕ್ಕಿದ ತೋರಹಾರಮುಂ
ಹಿಮಗೃಹಕಪ್ರವೃತ್ತಕಮುಮಂತಿರೆ ನಿನ್ನಯ ಪ್ರೇಙ್ಖ ಮಾತುಮಾ
ರಮಣಿಯದೊಂದು ಭಾವಗತಮಂ ನೆಱೆ ಸೂಚಿಸೆ ಮತ್ತೆ ಸಂದೆಗಂ
ಸಮನಿಸಿತೆಂದೊಡಿನ್ನ ನಗದೊಂದು ವಿಮೋಹಿಪ ಶಾಪಮಾಗದೇ ೧೪

ಎಂದು ಪತ್ರಲೇಖೆಯೊಡನೆ ನುಡಿಯುತ್ತುಮಿರ್ದು

ಪೊದಲಿಂ ಗಂಭೀರಭಾವಂ ತನಗೆ ನಿಜಮೆನಲ್ ಸಂದ ರತ್ನಾಕರಂ ಕಾ
ಮುದಯಿಂದಂ ಕ್ಷೋಭಿಸಿರ್ದುಂ ಸಹಜವೆನಿಪ ತನ್ನೊಂದು ಮರ್ಯಾದೆಯಂ ದಾಂ
ಟದವೋಲಿಂತಪ್ಪವಸ್ಥಾಂತರಮಡಸಿದೊಡಂ ತನ್ನ ಮರ್ಯಾದೆಯಂ ದಾಂ
ಟದನಂ ಗಾಂಭೀರ್ಯರತ್ನಾಕರನೃಪನನದೇಂ ಬಣ್ಣಿಪಂ ಬಣ್ಣಿಪಾತಂ ೧೫

ಅಂತು ಧೀರೋದಾತ್ತವೃತ್ತಿಯನವಲಂಬಿಸುತುಂ ಕತಿಪಯದಿನಂಗಳ್ ದಿನಸಹಸ್ರಾಯಮಾಣಮಾಗಿ ಪೋಗುತ್ತುಮಿರಲೊರ್ಮೆ ನಗರಿಯಂ ಪೊಱಮಟ್ಟು ಪೋಗಿ

ತೆರೆದೊಂಗಲ್ ಪೊರೆದಿರ್ದ ತಣ್ಪಲರ್ಗಳಿಂ ಮೆಲ್ಪಣ್ಚರಂಗೆಯ್ವ ಹಂ
ಸರಥಾಂಗಂಗಳನಿರ್ಪವೆತ್ತಳವುಟಿಲ್ಲಾಣಂಗಳಿಂ ಕಣ್ಗೆ ವಂ
ದಿರೆ ಶಿಪ್ರಾತಟನೀತಟಸ್ಥಲಿಗಳೊಳ್ ಲೀಲಾವಿನೋದೈಕ ತ
ತ್ಪರನಾಗಳ್ ನಡಪಾಡುತಿರ್ದನವನೀಶಂ ಪತ್ರಲೇಖಾನ್ವಿತಂ ೧೬

ಅಂತಿರ್ದ ತರಂಗಿಣೀ ತೀರಾಂತರದೊಳ್ ಕಾರ್ತಿಕೇಯನ ದೇಗುಲಕಾಗಿ ದೂರಾಗಮನಖೇದನಿವೇದಕಂಗಳಪ್ಪ ಕೆಲವು ಕುದುರೆಗಳ್ ಬೆರಸಿ ಬರ್ಪುದಂ ಕಂಡೀ ವಾರುವಂಗಳಾರವೆಂದಿರೆ ಯುವರಾಜದೇವನಂ ಕಂಡು ದೂರದಿಂ ಕುದುರೆಯಿಂದಮಿಳಿದೆಳ್ದು ವಂದಡಿಗೆಱಗಿದ ಕೇಯೂರಕನನತಿಪ್ರೀತಿಯಿಂ ನೋಡಿ ನಿನ್ನ ಕಾಣ್ಕೆಯೊಳೆ ಸಪರಿವಾರೆಯಪ್ಪ ಕಾದಂಬರೀದೇವಿಯ ಕುಶಲಮನಱಿಯಲಾದುದು

ಪರಿಜನಸಮೇತ ಕಾದಂ
ಬರಿಯ ಮಹಾಶ್ವೇತೆಯೊಂದು ಸಂದೇಶಂ ಪೇಳ್
ನಿರವಿಸಿದುದುಂಟೆ ಬರ್ಪ ಪ
ಸರದೊಳ್ ನಿನಗೆಂದು ನೃಪಸುತಂ ಬೆಸಗೊಂಡಂ ೧೭

ಅಂತು ಬೆಸಗೊಳ್ವುದುಂ ಸಂದೇಶಮಪ್ಪೊಡೆ ಕಾದಂಬರಿಯ ದೆಸೆಯೊಳ್ ಮೇಣ್ ಮಹಾಶ್ವೇತೆಯ ದೆಸೆಯೊಳೊಂದುಮಿಲ್ಲಂ ಪತ್ರಲೇಖೆಯಂ ಕಟಿಪಿ ಮೆಗುಪ್ಪಾಂ ದೇವರುಜ್ಜೈನಿಗೆ ಬಿಜಯಂಗೆಯ್ದ ವಾರ್ತೆಯಂ ಬಿನ್ನವಿಸೆ ಮೊಗಮಂ ನೋಡಿ ಬಿಸುಸುಯ್ದುಟಿಲಿಂದಮಿಂತುಟೆ ವಲಮೆಂದು ಮಹಾಶ್ವೇತೆ ತನ್ನಾಶ್ರಮಕ್ಕೆ ಪೋಗೆ ಕಾದಂಬರಿ ತೊಟ್ಟನದೃಷ್ಟವಜ್ರಾಭಿಘಾತೆಯಾದಂತೆ ನಿಮೀಲಿತ ನಯನೆಯಾಗಿ

ಅಂತಾ ಪದದೊಳ್ ಮೂರ್ಛಿತೆ
ಯಂತೆವೊಲುನ್ಮತ್ತೆಯಂತೆವೋಲಟ್ಟಿದಳಾ
ದಂತೆವೊಲಂತಃಪೀಡಾ
ಕ್ರಾಂತಿಯಿನೊಂದಿಸಿತು ಪೊಟ್ತು ಮರವಟ್ಟಿರ್ದಳ್ ೧೮

ಅಂತಿರ್ದ ಮಹಾಶ್ವೇತೆ ಪೋದುದನಱಿಯದೆ ಕಿಱಿದುಬೇಗಕ್ಕಕೆ ಕಣ್ಗಳಂ ತೆಱೆದು ಲಜ್ಜಿತೆಯಾದಂತೆಯುಂ ವಿಸ್ಮೃತೆಯಾದಂತೆಯುಂ ವಿಸ್ಮಯಸ್ತಬ್ಧದೃಷ್ಟಿಯಾಗಿ ಮಹಾಶ್ವೇತೆಗೀ ವೃತ್ತಾಂತಮಂ ಪೇಟಿಮೆಂದಲ್ಲಿಂದೆಟ್ದು ತನ್ನದಿರೊಳ್ ನಿಂದಿರ್ದೆನ್ನಂ ನೋಡಿ

ಇಂತು ಭವದ್ವಿಧರ್ ಪರಿಜನಂಗಳಿರಲೆನಗೀ ಯವಸ್ಥೆಯೆಂ
ಬಂತೆಯುಮೀ ನಿರರ್ಥಕರಿನಾಪುದು ತೀರ್ದಪುದೆನ್ನ ಕಜ್ಜಮೆಂ
ಬಂತೆಯುಮಿನ್ನುಮೆನ್ನಿದಿರೊಳಿರ್ದಪೆ ನಿರ್ದಯ ಪೋಗು ಬೇಗಮೆಂ
ಬಂತೆಯುಮೆನ್ನನಶ್ರುಪಿಹಿತಾಕುಲದೃಷ್ಟಿಗಳಿಂದೆ ನೋಡಿದಳ್ ೧೯

ಅಂತು ನೋಡಲೊಡನೆನ್ನಂ ಪೋಗೆಂದಳೆಂದಱಿದು ದೇವಿಗೆ ಪೇಟದೆ ದೇವರ ಶ್ರೀಪಾದಂಗಳಂ ಕಾಣಲ್ಕೆ ಬಂದೆಂ ದೇವ ನೀನೊರ್ವನೆ ಶರಣಮೆಮಗೆ ಪರಿಜನ ಪ್ರಾಣತ್ರಾಣಾಕುಲಮತಿಯಪ್ಪೆನ್ನ ಬಿನ್ನಪಮಂ ದೇವರವಧಾರಿಸಿ ಪ್ರಸಾದಂಗೆಯ್ವುದು ಪತ್ರಲೇಖೆ ಪೇಟ್ದವಸ್ಥಾಂತರಂಗಳನಾಂ ಬಿನ್ನವಿಪೊಡೆ ಪುನರುಕ್ತಮೆಂದು ಬಿನ್ನವಿಸಿದ ಕೇಯೂರಕನ ಮಾತಂ ಕೇಳ್ದು ಸಾಲ್ಗುಮಿನ್ ಕೇಳಲಾಱೆನೆಂದು ಮನುಜೇಂದ್ರಚಂದ್ರನೆಂತಾನುಂ ಕೇಯೂರಕನನಿಂತೆಂದಂ ಪತ್ರಲೇಖೆಯ ಪೇಟ್ಕೆಯೊಳಂ ನಿನ್ನ ನುಡಿಯೊಳಮದೆಲ್ಲಮಂ ನೆಱೆಯಱಿದೆಂ ದುಃಖೈಕದಾನವ್ಯಸನಿಯುಂ ದುರ್ಘಟಘಟನಾ

ಪಂಡಿತನುಂ ಯತ್ಕಿಂಚನಕಾರಿಯುಮಪ್ಪ ಹತವಿಧಿಯೋಗೆಮಾರ್ಗಂ ಬಗೆಯ
ಲಗೋಚರಮದೆಂತೆನೆ

ಮೊದಲೊಳ್ ತತ್ಕನ್ನರದ್ವಂದ್ವದ ಬಟಿಸಲೆತ್ತಾನುಮಚ್ಛೋದಮಂ ಸಾ
ರ್ಪುದದೆತ್ತಂ ತಲ್ಲಿಗೊಂದಿಂಚರಮೆಸಗುವುದೆತ್ತಾ ಮಹಾಶ್ವೇತೆಯಂ ಕಾ
ಣ್ಬುದದೆತ್ತಾ ಕಾಂತೆ ಕಾದಂಬರಿಯನೆನಗೆ ತಾಂ ತೋರ್ಪುದೆತ್ತಾನು
ವೆನ್ನೊಳ್
ಮದನವ್ಯಾಪಾರವೆತ್ತಂ ಜನಕನ ಬೆಸದಿಂದಿಂತಗುರ್ದ್ದುರ್ಪುದೆತ್ತಂ ೨೦

ಮಗುಟ್ಟಾನಿಲ್ಲಿಗೆ ಬರ್ಪುದುಂ ತನುವಿನೊಳ್ ಪ್ರಾಣಂಗಳಂ ದೇವಿ ತಾ
ಳ್ದುಗುಮೋ ಮೇಣ್ ಮದಲೇಖೆ ಪಾತ್ರೆಯಱಿದೊಂದುದ್ಯೋಗದೆತ್ತಾನುವಿ
ಲ್ಲಗೆ ತಾಂ ಬರ್ಕುಮೊ ಮಚ್ಚಿ ಮತ್ಪರಿಚಯಕ್ಕಾದಂ ಮಹಾಶ್ವೇತೆ ತೊ
ಟ್ಟಗೆ ತನ್ನ ತನುವಿಂದೆ ಪತ್ತುವಿಡಳೆತ್ತ ಪಿಂದೆ ಕೇಯೂರಕಾ ೨೧

ಮನದನ್ನರೆನಿಪ ನಿಜಪರಿ
ಜನದ ಸಖೀಜನದ ದೆಸೆಯೊಳಾದ ಸಮಭ್ಯ
ರ್ಥನೆಯಿಂದೆ ದೇವಿ ತನ್ನಯ
ತನುವಂ ನಿಲೆ ಪಿಡಿವ ಬಾಸೆಯಂ ಮಾಡುಗುಮೋ ೨೨

ಎಂಬುದುಂ ಕೇಯೂರಕನಿಂತೆಂದಂ

ಪರಿಜನಮುಮಾಪ್ತರುಂ ಸಂ
ವರಿಸಲ್ ನಿತ್ತರಿಪರೆಂಬುದಂತಿರ್ಕೆ ಚಿ
ತ್ರರಥತನೂಜೆಯೆ ನಿನ್ನಯ
ಬರವಿನೊಳಾದಾಸೆಯಿಂದೆ ನಿತ್ತರಿಸಿದಪಳ್ ೨೩

ಅದಱಿಂ ದೇವರ್ ಬರವಿನೊಳಾದಂ ಬವಸೆಯನೆ ಮಾೞ್ಪುದೆನೆ
ಕಿಱಿದು ಬೇಗಮೇನಾನುಮಂ ತನ್ನೊಳೆ ಭಾವಿಸುತ್ತೆ

ತಂದೆಗೆ ತಾಯ್ಗೆ ಪೇೞ್ದು ಗಮನೋದ್ಯಮನಾಗಲೆವೇೞ್ಕುಮಲ್ಲದಿ
ರ್ದಂದವರ್ಗೆ ಕ್ಕುಮೇಗವನುತಾಪಪರಂಪರೆ ಪೇೞ್ದು ಪೋಪೆನೆಂ
ಬಂದುದು ನಾಡೆ ಲಜ್ಜೆ ಪೆಱತಿನ್ನದಱಿಂ ಶುಕನಾಸನಂದನಂ
ಬಂದಪನಾತನಿಂದವಱಿವಂತಿರೆ ಪೇೞಿಸಿ ಮತ್ತ ಪಂಚಮಂ ೨೪

ಮಹಾರಾಜಾಧಿರಾಜನುಮಪ್ಪೆನ್ನ ತಂದೆಯುಂ ಗಂಧರ್ವಲೋಕಾ
ಧಿಪತಿಯಪ್ಪ ಚಿತ್ರರಥಮಹಾರಾಜನುಮೊಂದಾಗಿ ಮದುವೆಯಂ ಸಂದಿಸು
ವಂತು ಮಾಡ್ವೆನೆಂದಾತನ ಬರವನೆ ಬಯಸುತ್ತುಮಿರೆ

ಬಂದುದು ಕಟಕಂ ದಶಪುರ
ಕೆಂದೆಲ್ಲರ್ ನುಡಿಯೆ ಕೇಳ್ದು ಭೋಂಕನೆ ಜೀವಂ
ಬಂದಂತುತ್ಸಾಹದಿನಾ
ನಂದಪರಂಪರೆಯನೆಯ್ದಿದಂ ಯುವರಾಜಂ ೨೫

ಅಂತೆಯ್ದಿ ಕೇಯೂರಕಂಗಿಂತೆಂದಂ ವೈಶಂಪಾಯನಂ ಬಂದನಿ
ನ್ನೆಮ್ಮ ಕಾರ್ಯಸಿದ್ಧಿ ಕರತಳವರ್ತಿಯಾದುದು

ಈಗಳೆ ಪತ್ರಲೇಖೆವೆರಸಂಗನೆಯಲ್ಲಿಗೆ ಮುಂದೆ ಪೋಗು ನೀಂ
ಬೇಗಮಿನಿವಳ್ ಪಸಾಯಿತೆ ಮನೋಹರಿಗೀಕೆಯದೊಂದು ಕಾಣ್ಕೆಯಿಂ
ದಾಗಿಯುಮಾ ತನ್ನೂದ್ಧರಿಗೆ ಧೀರತೆಯುಂ ನಿಜಜೀವರಕ್ಷಣೋ
ದ್ಯೋಗಮುಮಸ್ಮದಾಗಮನನಿಶ್ಚಯಮುಂ ದೊರೆಕೊಳ್ಗುಮಾವಗಂ ೨೬

ಎಂದು ರಾಜಪುತ್ರಂ ಪೆಱಗಿರ್ದ ಪತ್ರಲೇಖೆಯಂ ನೋಡಿ

ಪಿರಿದುಂ ಕೂರ್ಪೆಯೊ ಕಾದಂ
ಬರಿಗೆಯ್ದಂ ಪೋದಪ್ಪೆ ಮುಂದೆ ಪೇಳ್ದೆನಲಾಜ್ಞಾ
ಕ್ಷರಮನೆ ಬೆಸಗೊಳ್ವೆಂ ದೇ
ವರೆನ್ನನಿಂತೇಕೆ ಮಗುಳ್ದೆ ಬೆಸಗೊಂಡಪಿರೇ ೨೭

ಎಂದು ಪತ್ರಲೇಖೆ ತನ್ನ ಗಮನಮಂ ನಿಶ್ಚೈಸುವುದುಮರಸನಾ
ಕೆಯನಿಂತೆಂದಂ ನೀಂ ಪೋಗಿ ಕಾದಂಬರೀದೇವಿಗೆ ಬದ್ಧಾಂಜಲಿಯಾಗಿ
ಪ್ರಣಾಮಪುರಸ್ಸರಮಪ್ಪೆನ್ನ ಬಿನ್ನಪಮಂ ಪೇೞ್ವುದದೆಂತೆನೆ

ಮೊದಲೊಳೆ ಬಂದು ಕಾಣಲೊಡನಂತಿರೆ ತನ್ನ ನಿಸರ್ಗವತ್ಸಲ
ತ್ವದಿನೆನಗಾ ಪ್ರಸಾದಪದಮಂ ದಯೆಗೆಯ್ದ ಮಹಾನುಭಾವೆಗಾ
ಸುದತಿಗೆ ಪೇೞ್ವುಬರ್ಪಿನಿತು ಗೌರವಮಂ ಮೊದಲಾಗಿ ಮಾಡಲಾ
ಱದೆ ಖಳಶೋಳಿಯೊಳ್ ದೊರೆಗೆ ಬಂದನನೆನ್ನನದೇನನೆಂದಪೆಂ ೨೮

ಅದೆಂತು ದೊರೆಕೊಳ್ಗುಮೆನ್ನ ಬರವಿಂಗೆ ಸಾಫಲ್ಯಮಿ
ನ್ನದೆಂತುಚಿತಮಕ್ಕುಮಾತ್ಮಗುಣಬೃಂದಮಿಂತೀ ಜಗ
ಕ್ಕದೆಂತು ನಯನೋತ್ಸವಂ ಸತತಮಕ್ಕುಮಂತಾಗೆ ಯ
ತ್ನದಿಂ ನಿಜ ಶರೀರಮಂ ನಿಲಿಸವೇಳ್ಪುದಿನ್ ದೇವಿಯರ್ ೨೯

ಎಂದು ಬಿನ್ನವಿಸೆಂದು ಬೆಸಸಿ ಅನಂತರಮೀ ಬಿನ್ನಪಮಂ ಪತ್ರಲೇಖೆ ಮಱೆಯದಂತು ಮಾಳ್ಪುದೆನ್ನನೊಡಗೊಂಡು ಪೋಗಲ್ಕೀಕೆವೆರಸು ಮಹಾಶ್ವೇತಾಶ್ರಮಕ್ಕೆ ನೀನೆ ಮಗುೞೆ ಬರ್ಪುದೆಂದು ಕೇಯೂರಕಂಗೆ ಬೆಸಸಿ ಬೀಳ್ಕೊಳಿಸಲೊಡಮವನನೇಕಾಶ್ವೀಯಬಲಸಮನ್ವಿತನಪ್ಪ ಮೇಘನಾದಂ ಬೆರಸು ಪೋದನಿತ್ತ ನೃಪರೂಪಚಂದ್ರನವರಗಲ್ಕೆಯಿಂ ಸಚಿಂತನಾಗಿ ಕಿಱಿದು ಬೇಗಮಿರ್ದು ವೈಶಂಪಾಯನಪ್ರತ್ಯುದ್ಗಮನಾರ್ಥಂ ತಂದೆಯಂ ಬೀಳ್ಕೊಂಡು ನಗರಿಯಂ ಪೊಱಮಟ್ಟು ಶಿಪ್ರಾನದಿಯಂ ದಾಂಟಿ ದಶಪುರದ ಬಟ್ಟೆವಿಡಿದು ನಡೆಯುತ್ತೆ ಯೋಜನತ್ರಿತಯಮಂ ಪೋಗೆ ಮುಂದರ್ಧಗವ್ಯೂತಿಮಾತ್ರದಲ್ಲಿ ಬೀಡಂ ಬಿಡುವ ಕಟಕಮಂ ಕಂಡು ತನ್ನೇಱಿದ್ದವಾರುವದೊಡವಪರ್ ನಾಲ್ಕಯ್ದು ಕುದುರೆಗಳ್ವೆರಸು ಬೀಡಂ ಪೊಕ್ಕು ಗೆಂಟಱೊಳೆ ಮೆಲ್ಲಮೆಲ್ಲನೆಱಗುವ ರಾಜಪುತ್ರಸಹಸ್ರಂಗಳ ಮೊಗಮಂ ನೋಡಿ ಚಂದ್ರಾಪೀಡಂ ವೈಶಂಪಾಯನನೆಲ್ಲಿರ್ದಪನೆಂದು ಬೆಸಗೊಳ್ವುದುಂ ಬಲಾಹಕನಿಂತು ಬಿನ್ನವಿಸಿದಂ ದೇವರ್ ಬಿಜಯಂಗೆಯ್ಯಲೊಡನೆ ಮಱುದಿವಸಂ ವೈಶಂಪಾಯನಂ ಪ್ರಯಾಣಭೇರಿಯಂ ಪೊಯ್ಸಿ ಕಟಕಮೆಲ್ಲಮಂ ಮುಂದೆ ನಡೆಯಲ್ವೇೞ್ದು ಪುರಾಣಂಗಳೊಳ್ ಪುಣ್ಯತೀರ್ಥಮೆಂದು ಕೇಳಲಪ್ಪುದಱಿನಾನೀ ಯಚ್ಛೋದಮಂ ಮಿಂದು ಸಿದ್ಧಾಯತನದ ಭಗವದ್ಭವಾನೀವಲ್ಲಭಂಗೆ ಪೊಡವಟ್ಟು ಪೆಱಗೆ ಪೋಪೆನೆಂದು ಪಾದಮಾರ್ಗದೊಳೆ ನಡೆಯುತುಮಚ್ಛೋದಕ್ಕೆ ಬಂದಾ ಪ್ರದೇಶದ ರಮಣೀಯತೆಗೆ ಸೋಲ್ತಲ್ಲಾ ದೆಸೆಯುಮಂ ನೋಡುತ್ತುಂ ಪೋಗಿ ಮುಂದೊಂದು ಲತಾಮಂಟಪಮಂ ಕಂಡು

ಕಂಡಱಿವಂತೆ ಮುನ್ನೆ ಶುಕನಾಸತನೂಭವನಾಗಳಾ ಲತಾ
ಮಂಡಪಮಂ ಕರಂ ಮನದೆ ಮತ ಮೊಱಲ್ದು ನೋಡುತುಂ
ಕಂಡರಿಸಿಟ್ಟರೋ ಕಡೆದರೋ ಕರುವಿಟ್ಟರೊ ನಿದ್ದೆ ಬಂದು ಕ
ಯ್ಕೊಂಡುದೊ ಪೇೞಿಮೆಂಬಿನೆಗಮಲ್ಲಿಯೆ ನಿಂದನದೊಂದು ಜಾವಮಂ ೩೦

ಇದು ದಲ್ ಚೈತ್ರರಥಾಹ್ವಯಂ ಬನಮಿದಚ್ಛೋದಂ ಸರಂ ನೋಳ್ಪೊಡೀ
ತ್ರಿದಶಾವಾಸಮಿದಿಂತುಟಲ್ತೆ ರಮಣೀಯಂ ಬೀಡುಮಂತೆತ್ತ ಪೋ
ದುದು ರಾಜಾತ್ಮಜರಿಂತು ನಿನ್ನ ಬರವಂ ಪಾರುತ್ತುಮಿರ್ದಪ್ಪರಂ
ತದಱಿಂ ಬೇಗಮೆ ಮಿಂದು ಕಾಣ ಭವನಂ ಸದ್ವಿಪ್ರವಿದ್ಯಾಧರಾ ೩೧

ಎಂಬುದುಂ ಮೂಗನಂತೇನುಮಂ ನುಡಿಯದೆ ಲತಾಮಂಟಪಮನೆ ನೀಡುಂ ನೋಡುತ್ತುಮಿರ್ಪುದುಂ ಮತ್ತಾವಗಳಡಿಗಡಿಗೆ ಸೈಪಿಸಲೆಮ್ಮನಿವಕ್ಕೆ ಸೈರಿಸದೆ ಚಂದ್ರಾಪೀಡಭುಜಪರಿರಕ್ಷಿತಮಪ್ಪ ತುರಂಗಬಲಂಬೆರಸು ನೀವೆಲ್ಲರವೇಡಿನ್ನೀ ಕಟಕಮಂ ಮುಂದಿಟ್ಟುಕೊಂಡು ಪೋಗಿಮಾಂ ಬರ್ಪುದಿಲ್ಲೆಂದು ಜಡಿದೆಮ್ಮಂ ಬೆಟ್ಟವೆಟ್ಟನಾಗಿ ಪೆಱಪಡೆ ನುಡಿದು ಮುನ್ನಿನಂದದೊಳೆ ಮೋನಂಗೊಂಡು ಜಾನಿಸುತ್ತಿರ್ದನನಿಂತೆಂದೆವು

ನಿನಗೀ ವೈರಾಗ್ಯಮೇಕೋ ವರ್ಗದಲೊಗೆದುದಿದೆಮ್ಮಿಂದವಾಯ್ತೋ ಭವನ್ಮಿ
ತ್ರನಿನಾಯ್ತೋ ನಿನ್ನನಾವೀ ತೆಱದೆ ನಿಲಿಸಿ ಪೋದಂದು ರಾಜ್ಯೇಂದ್ರಚಂದ್ರಾಂ
ಕನ ತ್ತಾರಾಪೀಡಭೂಪಾಲಕನ ಮುಳಿಸನಾರೆಂ ಪೆರೇಟ್ ಪೋಪಮೆಂದಿಂ
ತನಿವಂಗೆಯ್ಯುತ್ತಿರಲ್ಕಂ ನುಡಿಯನೆ ಶುಕನಾಸಾತ್ಮಜಂ ಮತ್ತಮೆಮ್ಮೊಳ್ ೩೨

ಮತ್ತಂ ಬರವಿಂಗಾಗ್ರಹಿಸಲಿನ್ ನುಡಿಯದಿರ್ದ ಚಂದ್ರಾಪೀಡನೊಳ್ ನೆರೆವ ಪುಣ್ಯಮೆನಗಿಲ್ಲೆನ್ನನಗಲ್ಚಿದ ಬಿದಿ ಬಲ್ಲಿದನೆಂದಲ್ಲಿಂದೆದ್ದು ಪೋಪನ ಬೆನ್ನೊಳಾವೆಲ್ಲಂ ಪೋಗೆ ಪೋಗೆ ನೀವೇಕೆ ಬಂದಪ್ಪಿರೆಂದೆಮ್ಮಂ ಬಿಡೆ ಜಡಿದು ಕಿಱಿದಂತರಂ ಪೋಗಿ

ತರುವೀಥೀವ್ರಾತದೊಳ್ ಕಟ್ಟಲೆವಿಡುವ ತಮಾಲಂಗಳೊಳ್ ಮಲ್ಲಿಕಾಮಂ
ದಿರದೊಳ್ ನಾನಾಲತಾಮಂಟಪದೊಳೆಸೆವ ಬೀಜ್ಜೊಂಪದೊಳ್ ದಿವ್ಯಪದ್ಮಾ
ಕರತೀರೋಪಾಂತ ಸಿದ್ಧಾಯತನದೊಳೆನಸುಂ ಭ್ರಾಂತಿಯಿಂ ಭಾವಿಸುತ್ತ
ಚ್ಚರಿವಟ್ಟೇನಾನುಮಂ ಕೆಟ್ಟುದನಱಸುವವೋಲ್ ಕೂಡೆ ನೋಡುತ್ತುಮಿರ್ದಂ ೩೩

ಅಂತದನನನ್ಯದೃಷ್ಟಿಯಾಗಿ ತೊೞಲುತ್ತುಂ ಪಲವು ದಿವಸಮುಣ್ಣದೆ ಕುಡಿಯದಿರ್ದನನಿಂತಾನುಮಾಹಾರಾಭಿಮುಖನಂ ಮಾಡೆ ಕಂದಮೂಲಫಲಂಗಳನಲ್ಲದೆ ಮೆಲ್ಲೆನೆಂದು ನಿಯಮಂ ಮಾಡಿರ್ದನಂ ನೋಡಿ

ಬರವಿನ ಮಾತು ಮಂತ್ರಿಸುತನೊಳ್ ಪಱಪಟ್ಟುದನೆಯ್ದೆ ಕಂಡು ದೇ
ವರ ಬಟೆಗಲ್ಲದಿನ್ ಬರವು ಕೂಡದು ನಿಕ್ಕುವಮೆಂದು ವಾಜಿಗಳ್
ವೆರಸು ಕೆಲಂಬರಂ ಪೆಱಗೆ ಕಾಪಿರಿಸಿಟ್ಟು ಸಮಸ್ತಸೇನೆಗ
ಳ್ಳರವಿದಯುಕ್ತಮೆಂದು ನಡೆತಂದೆವಿದಿಂತುಟು ವೃತ್ತಕಂ ನೃಪಾ ೨೪

ಎಂದು ಬಿನ್ನವಿಸೆ ಚಂದ್ರಾಪೀಡನದೆಲ್ಲಮಂ ಕೇಳ್ದು

ಜನಿಯಿಸಿದಂದು ತೊಟ್ಟುಗಲದಾತನನಿಂತಿರಗಲ್ದ ಪಾಪಕ
ರ್ಮನನವಿವೇಕಿಯಂ ಗುಣವಿಹೀನನನೆನ್ನ ನಿರೀಕ್ಷಕಮಿತ್ರನಂ
ನೆನೆಯದೆ ನಿಂದೊಡಂ ಗುರುಜನಂಗಳ ಮೇಗಣದೊಂದು ಭಕ್ತಿಯಂ
ನೆನೆದು ಮನೋರಮಾಪ್ರಿಯಸುತಂ ಬರವೇಟ್ಕುಮದೇಕೆ ನಿಂದನೋ ೨೫

ಪುರುಷಾರ್ಥತ್ರಿತಯಮನವ
ಧರಿಸದೆ ವೈರಾಗ್ಯಮೇಕೆ ಪುಟ್ಟಿದುದೋ ಚೆ
ಚ್ಚರಮೆಂಬುದನಾಂ ಪೋಗಿಯೆ
ನೆರೆದಲ್ಲಿಯಮಾತ್ಯಮುಖ್ಯಸುತನೊಳ್ ತಿಳಿವೆಂ ೨೬

ಅದಲ್ಲದೆಯುಂ ಪತ್ರಲೇಖೆಯುಂ ಪೋದಳಲ್ಲಿಯೆ ವೈಶಂಪಾಯನನು
ಮಿರ್ದಪನದಱನಾತನನೊಡಗೊಂಡು ಬಂದಪೆನೆಂದು ಬಗೆದು

ಜನನಿಗೆ ಪೇೞದಾರ್ಯ ಶುಕನಾಸನನೀಕ್ಷಿಸದಾದಮಾತ್ಯನಂ
ದನನ ವಿಯೋಗದಿಂ ಮಱುಗುತಿರ್ದ ಮನೋರಮೆಯಲ್ಲಿಗೆಯ್ದದಾ
ನನುನಯದಿಂದಮಾದರಿಸದಿತ್ತಣಿಂ ನಿತ್ತಲೆ ಪೋದೊಡಾನುಮಾ
ತನ ತೆಱನಪ್ಪ ನಿರ್ಮಡಿಸುಗುಂ ಗುರುಗಳ್ಗತಿದುಃಖಮೇವೆನೋ ೨೭

ಅದಱನಿವರನಾಶ್ವಾಸಿಸಿ ವೈಶಂಪಾಯನಪ್ರತ್ಯಾನಯನಕ್ಕೆ ತಂದೆ
ಯಂ ಬೇಡಿಕೊಂಡು ಪೋಗಲ್ವೇಟ್ಕುಮೆಂದು ಕಟಕಂಬೆರಸುಜ್ಜಯಿನಿಗೆ ವಂದು
ವೈಶಂಪಾಯನನ ವೃತ್ತಾಂತಮಂ ತಂದೆಗೆ ನಿವೇದಿಸಿ ಆಂ ಪೋಗದೆ
ಬಾರಂ ವೈಶಂಪಾಯನನದಱನೀಗಳ್ ನೀವೆನ್ನಂ ಪೋಗವೇಟ್ಕುವುದೆನೆ
ಮಗನೆ ಪರಿಣತವಯಸರುಮನುಭೂತ ಪುರುಷಾರ್ಥತ್ರಯರುಮೆನಿಸಿದೆ
ವಗೆ ನಿನ್ನನಧಿರಾಜಪದವಿಯೊಳ್ ನಿಲಿಸಿ ಪೂರ್ವರಾಜಸೇವಿತಮಾರ್ಗಮ

ನೆಯ್ದು ವೇೞ್ಪ ಮೊಂಬನ್ನಗಂ ತೊಟ್ಟನೆ ವೈಶಂಪಾಯನವೃತ್ತಾಂತವಂತರಾಯಹೇತುವಾದುದಱಿಂ ನೀಂ ತಡೆಯದೆ ಬಂದೆಮ್ಮ ಮನೋರಥಕ್ಕೆ ಸಾಫಲ್ಯಮಂ ಸಂದಿಪುದೆಂದು

ಹೃದಯಮನೆತ್ತಪನಾಸಮ
ಯದೊಳೆನೆ ಬಾಯ್ತಾಯೊಳೆತ್ತು ತಂಬುಲಮನಲಂ
ಪೊದವಲ್ಕೆ ಪರಸಿ ಬೀೞ್ಕೊಳಿ
ಸಿದನೆಂತಾನುಂ ನಿಜಾತ್ಮಜನನಧಿರಾಜಂ ೩೮

೭. ಚಂದ್ರಾಪೀಡನ ಪ್ರಾಣವಿಯೋಗ

ಅನಂತರಂ ಪುನಃಪ್ರಣಾಮಮಂ ಮಾಡಿ ಪೊಱಮಟ್ಟು ಬಂದು ಸುತ ವಿಯೋಗಚಿಂತಾಕ್ರಾಂತರಪ್ಪ ಶುಕನಾಸನುಮಂ ಮನೋರಮೆಯುಮ ನಾಶ್ವಾಸನುಡಿದು ಬೀೞ್ಕೊಂಡು ಬಂದು ವೈಶಂಪಾಯನ ದರ್ಶನತಾತ್ಪರ್ಯ ದೊಳಂ ಕಾದಂಬರೀಸಮಾಗಮೌತ್ಸುಕ್ಯದೊಳಮಕೃತಪರಿಲಂಬನಾಗಿ ಭವ ನಾಂಗಣದೊಳ್ ಸಾರ್ಚಿದಿಂದ್ರಾಯುಧಮಂ ಚಂದ್ರಾಪೀಡನೇಱಿ ದಿಗಂತ ರಂಗಳೆಲ್ಲಮನಂತಹಯಹೇಷಾರವಂಗಳಿಂ ತೆಕ್ಕನೆ ತೀವೆ ಭುವನತಳಮೆಲ್ಲಂ ತುರಂಗಮಯಮಾಗೆ ಪೊಱಮಟ್ಟು ಶಿಪ್ರಾನದಿಯಂ ದಾಂಟಿ ಯೋಜನತ್ರ ಯದನಿತಂ ಪೋಗಿ ತೃಣಜಲಸಮೃದ್ಧಮಾದೆಡೆಯೊಳ್ ಬೀಡುಗೆಯ್ದು ತನ್ನೊಳಿಂತೆಂದಂ

ಎನಗೆನಸುಂ ಲಜ್ಜಿಸಿ ಪೋ
ಪನ ಬೆನ್ನೊಳ್ ಪೋಗಿ ತೆಗೆದು ತಪ್ಪೈಸುತುಮಾ
ತನದೊಂದು ಲಜ್ಜೆಯಂ ಕಳೆ
ದನುಭವಿಪೆಂ ಮತ್ತು ಹೃತ್ಸಮಾಗಮಸುಖಮಂ ೧

ಆತನುಮಾನುಮಾಗಳೆ ಮದಾಗಮನೋದ್ಯತಹರ್ಷೆಯಂ ಮಹಾ
ಶ್ವೇತೆಯನೆಯ್ದೆ ಕಂಡು ಬೞಿಕಂತೆ ತದಾಶ್ರಮದೊಳ್ ತುರಂಗಸಂ
ಘಾತಮುಮಂ ನೃಪಾತ್ಮಜರುಮಂ ನಿಲಿಸಿಟ್ಟೊಲವಿಂದಮಾ ಮಹಾ
ಶ್ವೇತೆಯ ಬೇಗಮುಯ್ಯೆ ಪುಗದಿರ್ಪೆಮೆ ನಚ್ಚಿನ ಹೇಮಕೂಟಮಂ ೨

ಅಂತು

ಆಂ ಬಂದುದನಹಮಹಮಿಕೆ
ಯಿಂ ಬೇಗಂ ಪರಿದು ಪೋಗಿ ಪರಮೋತ್ಸವದಿಂ
ದಂ ಬಿನ್ನವಿಪ ಜನಂ ಕಾ
ದಂಬರಿಯಿಂ ಮೆಚ್ಚುಗೊಳ್ಳದಿರ್ಕುಮೆ ಪಿರಿದುಂ ೩

ಕಣ್ಣಡಿತೆಗಳಿಂದಾಕೆ ಪ
ವೆಣ್ಣಿಟಿದಾ ಬಾಷ್ಪವಾರಿಯಂ ಸುರಿಯುತ್ತುಂ
ಕಣ್ಗೊಳಿಸದಿರ್ಕುಮೇ ಪೇೞ್
ಮಾಣ್ಗನ್ ಮದನಾಗ್ನಿಯೆಂದು ನದಿಪ್ಪುವ ತೆಱದಿಂ ೪

ಆ ಸಮಯದೊಳ್ ಸಂಭ್ರಮಂಬೆರಸು ಮುನ್ನಿದರ್ಗೆ ಕುಸುಮಶಯನಮಂ ಪಿಂದಿಕ್ಕಿ ಕಂಪಿಸುತ್ತುಮೆೞನಗಿದಿರೆಟ್ಟ ಕಾದಂಬರೀದೇವಿಯಂ ಕಣ್ಣಾರೆ ನೋಡಿ ಕಣ್ಬಡೆದುದರ್ಕೆ ಸಾಫಲ್ಯಮಂ ಸಾಧಿಸುವೆನನಂತರಂ

ಚರಣನತೆ ಪತ್ರಲೇಖೆಯ
ನಿರದೆತ್ತುವ ವಿನಯವಿನತೆ ಮದಲೇಖೆಯನಾ
ದರಿಸುವ ಕೇಯೂರಕನಂ
ಬರೆತೆಗೆದಪ್ಪುವ ಸುಖಕ್ಕೆ ನೆಲೆಯೆನಿಸಿರ್ಪೆಂ ೫

ಮನದನ್ನಳೆನಿಸಿ ನೆಗಪ್ವೆ
ನ್ನಿನಿಯಳ್ಗಾಂ ಪೇಟ್ವನಂತರಂ ಮಾಡಿಸುವೆಂ
ಮನಮೊಸೆದಾ ವೈಶಂಪಾ
ಯನಂಗೆ ಮದಲೇಖೆಯೊಳ್ ವಿವಾಹೋತ್ಸವಮಂ ೬

ಎಂದಿಂತನಂತಚಿಂತಾಂತರಂಗಂ ಪಲುಂಬಿ ಪಂಬಲಿಸುತ್ತುಂ ನಿಚ್ಚ ವಯಣಂಗಳಿಂ ಯುವರಾಜನನೇಕ ಯೋಜನಂಗಳಂ ಪೆಱಗಿಕ್ಕಿ ಪೋಗುತ್ತೆ ಸುಹೃದ್ದರ್ಶನ ಕುತೂಹಲದೊಳಂ ಕಾದಂಬರೀ ಸಮಾಗಮೌತ್ಸುಕ್ಯದೊಳ ಮೆಲ್ಲಿಯುಂ ತಡೆಯದೆ ಪಲವು ಪಯಣಂಗಳಿಂ ಚಿತ್ರರಥಮನೆಯ್ದುವ

ವನಾಂತರದ ಪೆರ್ಮರಂ ಪೊದಱು ಪಳ್ಳಕೊಳ್ಳಂಗಳೆಂ
ಬಿನಿತ್ತೆಡೆಯೊಳಂ ತೊಟಲ್ದವನಿಪಾಲರುಂ ತಾನುಮಾ
ವನಾಂತರದೊಳೆತ್ತಲುಂ ಸುಟಿದು ಸುತ್ತಲುಂ ಸುತ್ತಿ ಕಂ
ಡನಿಲ್ಲ ಸಖನಿರ್ದ ಚಿಹ್ನಮುಮನಾ ನರೇಂದ್ರಾತ್ಮಜಂ ೭

ಅಂತು ವೈಶಂಪಾಯನನನೆಲ್ಲಿಯುಮಱಿಸಿ ಕಾಣದಾತನ ವೃತ್ತಾಂತಮಂ ಮಹಾಶ್ವೇತೆಯಾದೊಡಱಿಗುಮೆಂದು ಚಂದ್ರಾಪೀಡಂ ತದಾಶ್ರಮಮಂ ಪೊಕ್ಕು ಗುಹಾದ್ವಾರಮನೆಯ್ದೆ ವರ್ಪಲ್ಲಿ

ದೆಸೆಗೆಟ್ಟುದ್ಬಾಷ್ಪದಿಂದಂ ತರಳಿಕೆ ಪಿಡಿದೆತ್ತಾನುವಾಸ್ತಾಂಗಮಂ ನೆಮ್ಮಿಸೆ ಪೋಲ್ದಂತತ್ತ ಗುಹಾದ್ವಾರದ ಶಿಲೆಯೊಳ್ ಮನ್ಯೂದ್ಗಮೋಕ್ಷೋಭದಿಂ ಕಂಪಿಸುತುಂ ಪ್ರಾವರ್ಷಧಾರಾವಳಿವೊಲೊಗೆವ ಕಣ್ಣೀರ್ಗಳೊಳ್ ತೇಂಕುತುಂ ದುಃಖಸಹಸ್ರೋದ್ವೇಜನಾಧೋಮುಖಿಯೆನಿಪ ಮಹಾಶ್ವೇತೆಯಂ ಕಂಡನಾಗಳ್ ೮

ಅಂತು ಕಂಡು ಭೋಂಕೆನಲಾಶಂಕಿತಹೃದಯನಾಗಿ

ಪಿರಿದುಂ ಹರ್ಷಮನೆನ್ನಯ
ಬರವಿಂದಂ ಮಾಡದೀ ಮಹಾಶ್ವೇತೆಯದೊಂ
ದಿರವಿಂತಿದೇನೊ ಕಾದಂ
ಬರಿಗೇನಾನೊಂದನಿಷ್ಟಮಾಗಲೆ ವೇಳ್ಕುಂ ೯

ಎಂದು ತನ್ನೊಳ್ ಬಗೆಯುತ್ತುಮೊಯ್ಯನೊಯ್ಯನೆ ಪೋಗಿ ಶಿಲಾತಲದೊಳ್ ಕುಳ್ಳಿರ್ದು ಬಾಷ್ಪವಿಷಣ್ಣವದನನಾಗಿ ತರಳಿಕೆಯನಿದೇನೆಂದು ಬೆಸಗೊಳ್ವುದುಮಾಕೆ ಕುಮಾರಂ ಬಿಜಯಂಗೆಯ್ದನೆಂದತ್ತು ಮಹಾಶ್ವೇತೆಗುಸಿರ್ವುದುಮಾ ಕಾಂತೆಯುಮುಪಸಂಹೃತಮನ್ಯುವೇಗೆಯುಂ ಗದ್ಗದಿಕಾವಿಗೃಹ್ಯಮಾಣಕಂಠೆಯುಮಾಗಿ ಕುಮಾರನನಿಂತೆಂದಳ್

ನಿನಗೇವೇಳ್ದಪಳಿಕೆ ಕೇಳಿಸಿದೆನಾಂ ಮದ್ದುಃಖಮಂ ಮುನ್ನಂ ನಿ
ನ್ನನದುಃಖಶ್ರವಣಾರ್ಹನಂ ಸಕಲದುಃಖಾವಾಸೆಯೆಂ ಜೀವಿತ
ಕ್ಕೆ ನಿಬದ್ಧಾಶೆಯೆನತ್ರಪಾತ್ಮಿಕೆಯೆನೀಗಳ್ ಮತ್ತೆಯುಂ ಕೇಳಿಸ
ಲ್ಕನುಗೆಯ್ದಪ್ಪೆನಿದೊಂದು ದುಶ್ಶ್ರವಮುಮಂ ರಾಜಾಧಿರಾಜಾತ್ಮಜಾ ೧೦

ಅದೆಂತೆನೆ ನೀಮುಜ್ಜಯಿನಿಗೆ ಬಿಜಯಂಗೆಯ್ದೆಂಬುದನಾಂ ಕೇಯೂರಕನ ಪೇಳ್ಕೆಯಿಂದರಿದು ಭೋಂಕನೆ ವಿದೀರ್ಣಹೃದಯೆಯಾಗಿ ಚಿತ್ರರಥಮನೋರಥಮುಂ ಮದಿರಾಮಹಾದೇವಿಯ ಮನೋಭಿಲಷಿತಮುಂ ಮದೀಯಸಮೀಹಿತಮುಂ ಕಾದಂಬರಿಯ ಮನಃಪ್ರಿಯಸಮಾಗಮನನಿರ್ವೃತಿಯುಂ ಸಮನಿಸಿತಿಲ್ಲೆಂದು ಮನಂ ನೊಂದು ವೈರಾಗ್ಯದಿಂ ಮದೀಯ ಪ್ರಿಯಸಖಿಯ ಕೂರ್ಮೆಯ ತೊಡರ್ಪಂ ಪಱಿದು ಮಹಾಘೋರತರ ತಪಶ್ಚರಣಾರ್ಥಂ ಮತ್ತಮಿಲ್ಲಿಗೆ ವಂದಿರ್ದೆನನ್ನೆಗಮೊಂದುದಿವಸಂ

ನಸುದೋಱುತ್ತಿರ್ದ ನುಣ್ಮೀಸೆಗಳುಮತಿಮೃದುಸ್ನಿಗ್ಧಕೇಶಂಗಳುಂ ಕ
ಣ್ಸೆಯಲ್ ಮೂಲೋಕಮಂ ಯೌವನಚತುರತರಾಪಾಂಗದಿಂದೊಂದು
ಲ್ಗೆಸೇವನ್ನಂ ಮಾಡುತಂಗಪ್ರಭೆಯೊಳಖಿಳಕಾಂತಾರಮಂ ಕೂಡೆ ತೇಂಕಾ
ಡಿಸುತುಂ ವಿಪ್ರೋತ್ತಮಂ ನಿನ್ನಯ ಹರಯದ್ಧವಂ ಬಂದನೋರ್ವಂ
ಕುಮಾರಂ ೧೧

ಅಂತು ಬಂದು ಬನದೊಳೆಲ್ಲಿಗಲ್ಲಿಗೆ ಬದ್ಧಲಕ್ಷದೃಷ್ಟಿಯಿನೇನಾನುಂ ಕೆಟ್ಟುದನಱಸುವಂತೆನ್ನಂ ನೋಡುತ್ತುಮೆಯ್ದೆವಂದು ಕಂಡಱವನಂತೆಯುಮೇನಾನುಮಂ ಪ್ರಾರ್ಥಿಪನಂತೆಯುಂ ಬೆಸಗೊಳ್ಳದೆಯುಂ ನಿಜಾವಸ್ಥೆಯಂ ನಿವೇದಿಸುವಂತೆಯುಂ ಲಜ್ಜಿಸುವಂತೆಯುಮುಮ್ಮಳಿಸುವಂತೆಯುಮಾಗಿ

ಸುರಿತರೆ ಬಾಷ್ಪಪೂರಮೆಮೆಯಿಕ್ಕದೆ ಕೆನ್ನೆಯನೆಯ್ದೆ ನೀಳ್ದು ಬಿ
ತ್ತರಿಪ ಬಟಲ್ವೆಳರ್ವೆಗರಸು ಸುತ್ತುವ ಮುತ್ತುವಪಾಂಗವಾಲೆಯಿಂ
ಬರೆ ತೆಗೆದಪ್ಪನುಪ್ಪಿದಪನೆನ್ನೊಳವೊಕ್ಕಪನೆಯ್ದೆ ಪೀರ್ದಪಂ
ಪಿರಿದುಱೆನಲ್ಕೆ ತದ್ದ್ವಿಜಕುಮಾರಕನೆನ್ನನೆಱಿಲ್ದು ನೋಡಿದಂ ೧೨

ಅಂತು ನೀಡುಂ ನೋಡುತ್ತುಮೆನ್ನನಿಂತೆಂದಂ

ಭುವನದೊಳೆಲ್ಲಂ ತಂತ
ಮ್ಮ ವಯೋರೂಪಕ್ಕೆ ತಕ್ಕುದಂ ನೆಗಳ್ದೊಡೆ ಮೆ
ಚ್ಚುವರೆಳವೆಗಮಸದೃಶವೆನಿ
ಸುವನುಷ್ಠಾನದೊಳದೇಕೆ ನಿನ್ನಯ ಯತ್ನಂ ೧೩

ಸುಂದರಿ ಜೀವಲೋಕದ ಸುಖಕ್ಕೆ ಪರಾಙ್ಮುಖಿಯರ್ಕಳಾಗಿ ನಿ
ನ್ನೊಂದಿಗರೀ ತಪಕ್ಕೆಳಸಿದಂದು ಮನೋಜನ ಬಿಲ್ಲ ಬಲ್ಮೆ ಪೂ
ರ್ಣೇಂದುವಿನುಜ್ಜ್ವಳಿಕ್ಕೆ ಮಧುಮಾಸದ ಗೋಸನೆ ತುಂಬಿಯಿಂಚರಂ
ಬಂದೆಳಮಾವಿನೇಱ್ಗೆ ಬಗೆದಂದು ನಿರರ್ಥಕಮಾಗದಿರ್ಕುಮೇ ೧೪

ಎಂದಿವುಮೊದಲಾಗಿ ಮತ್ತಮನೇಕ ಚಾಟುಚಪಲವಚನಂಗಳಂ ನುಡಿಯುತ್ತುಮಿರೆ ಕೇಳ್ದು ಪುಂಡರೀಕದೇವನ ವೃತ್ತಾಂತದಿನಪೇತಕಾತುಕೆಯುಮಪಗತಸುಖೆಯುಮಾಗಿ

ನೀನಾರ್ಗೆ ಬಂದೆಯೆತ್ತಣಿ
ನೇನಂ ಬೆಸಗೊಳ್ವೆಯೆನ್ನನೆಂದಾತನನಂ
ತೇನುಮನಾಂ ಬೆಸಗೊಳ್ಳದೆ
ಮೌನದಿನೊಂದೆಸೆಗೆ ತೊಲಗಿದೆಂ ನೃಪತಿಲಕಾ ೧೪

ತರಳಿಕೆ ದೇವತಾರ್ಚನಕೆ ಪೂದಿಱಿಯುತ್ತಿರಲತ್ತಗಳ್ಕೆಯಂ
ಕರೆದೆನಗೀ ದ್ವಿಜಂ ನುಡಿವನೊಂದುವಗೆಯ್ತುವ ಕಾನನಕ್ಕೆ ವಂ
ಧಿರವಿದು ಬೇಱದೊಂದೆನಿಸದಿರ್ದಪುದೀ ಗುಹೆಯತ್ತ ಸಾರದಂ
ತಿರಲವನಂ ನಿವಾರಿಸುಟಿದಂದೆನಸುಂ ಬಟಿಸಂದು ಪೊರ್ದುಗುಂ ೧೫

ಎಂದು ಪೇೞ್ವುದುಮವಳೆನ್ನತ್ತಲಾ ದ್ವಿಜಕುಮಾರನಂ ಸಾರದಂತು ನಿವಾರಿಸುತುಮಿರೆಯಿರೆ

ಅದಯನೆನಿಪ್ಪ ಮನ್ಮಥನ ದುರ್ಜಯವೃತ್ತಿಯದೊಂದು ಪಾ
ಪದ ಫಲದಿಂ ವಿಧಾತೃವಶದಿಂ ಭವಿತವ್ಯತೆಯಿಂದಮಿಂತು ಮಾ
ಣದೆ ದಿವಸಕ್ಕಮಿಲ್ಲಿಗಸದಾಗ್ರಹದಿಂದಮೆ ಬಂದು ಪೊರ್ದಲ
ಣ್ಮದೆ ಮದನಾತುರಂ ಸುಟಿವನೆನ್ನಯ ಕಣ್ಬೊಲದೊಳ್ ನಿರಂತರಂ ೧೬

ಅಂತು ಸುಟಿಯುತುಮಿರಲೊರ್ಮೆ ಯಾಮಿನೀಯಾಮತ್ರಯಸಮಯದೊಳ್ ಚಂದ್ರಿಕಾಪಯಃಪೂರಮನಿಂದುಮಯೂಖಂಗಳ್ ಸುರಿಯೆ ತರಳಿಕೆ ಮಱೆದು ನಿದ್ರೆಗೆಯ್ದಿಳೆನಗೆ ನಿದ್ರೆ ಬಾರದೆ ಸಂತಪ್ತಶರೀರೆಯಾಗಿ ಗುಹೆಯಂ ಪೊಱಮಟ್ಟೆನನ್ನೆಗಂ

ಅಲರ್ದಚ್ಚೊಳೆದ ನವ್ಯೋತ್ಪಲಪ್ರಸರ ದಿವ್ಯಾಮೋದದೊಳ್ ಸಂದು ನಿ
ರ್ಮಲ ಚಂದ್ರದ್ಯುತಿಪರ್ಷಹರ್ಷಿತ ಚಕೋರಾನಂದ ವಾರ್ಬಿಂದು ಸಂ
ಕುಲದೊಳ್ ಮಿಂದು ಚಲಲ್ಲತಾವಳಿಗೆ ಲಾಸ್ಯಾರಂಭಮಂ ತಂದು ತ
ಣ್ಣೆಲರೂದತ್ತಿರಲಾನದರ್ಕೆಳಸಿ ಪಟ್ಟಿರ್ದೆಂ ಶಿಲಾಪಟ್ಟದೊಳ್ ೧೮

ಅಂತು ಪಟ್ಟಿರ್ದು

ಮಿಸುಗುವ ಚಂದ್ರಮಂಡಲದಿನಂದಿೞಿತಂದನ ದಿವ್ಯವಾಣಿಯುಂ
ಪ್ರಸನ್ನೆಯೆನಿಸಿತ್ತು ಮಾಯ್ದೆನಗೆ ಪಾಪಿಗೆ ಮೇಣ್ ದಯೆಯಿಂದೆ ಜೀವಿತ

ವ್ಯಸನಿನಿಯಂತೆ ಜೀವಿಸುತುಮಿರ್ಕೆಗವಳಿಂದು ಮಹಾತ್ಮನೆನ್ನನಾ
ಱಿಸಿದನದೆಂತುಮೆನ್ನಯ ಸಮಾಹಿತ್ವಮಿಂತು ವಿಳಂಬಿಸಿರ್ಕುಮೇ ೧೯

ತನುವನದೋರ್ವೆಯುಂ ಮಗುಟ್ದು ತೋಱಿಸಲಾಱನೆ ಪುಂಡರೀಕದೇ
ವನಿರದೆತ್ತಿಕೊಂಡು ಗಗನಕ್ಕೆ ಪರಾಸುವನಾವನಕ್ಕೆ ಭೋಂ
ಕನೆ ಪಿಡಿದುಯ್ದನೇವನೋ ಮನಃಪ್ರಿಯನಕ್ಕಟ ಜೀವಿಸೆತ್ತುಮೆಂ
ತೆನಗೆ ಕೃಪಾಬ್ಧಿ ತಾರನೆ ಕಪಿಂಜಲಕಂ ಪ್ರಿಯನೊಂದು ವಾರ್ತೆಯಂ ೨೦

ಎಂದಿವು ಮೊದಲಾಗಿ ಪಲವುಮಾಲಜಾಲಂಗಳನೆನ್ನೊಳ್ ಚಿಂತಿಸುತ್ತುಮಿರ್ಪನ್ನೆಗಮಾದ್ವಿಜಕುಮಾರಂ ಎನ್ನನಪ್ಪುವಟಿಯಾಸೆಯಿಂ ದೂರದೊಳ್ ನಿಮಿರ್ದ ಸಿಡುತೋಳ್ಗಳುಂ ತನ್ನೊಳ್ ತೋಱೆ ಯುಕ್ತಾಯುಕ್ತವಿವೇಕಕ್ಕೆ ಪಿಂತೆಗೆದುನ್ಮತ್ತನಂತೆಚ್ಚ ಬೆಳ್ದಿಂಗಳೊಳೊಯ್ಯನೊಯ್ಯನೆ ಬರುತಿರ್ದನನಾಂ ದೂರದೊಳ್ ಕಂಡು ಭಯಂಗೊಂಡು

ಎಲೆ ಕೇಡಾಯ್ತೆನಗೋವೊ ಮತ್ತಮಿವನೆನ್ನಂ ಕಯ್ಯೊಳಿ ಬಂದು ಮುಟ್ಟ
ಲೊಡಂ ಪತ್ತುವಿಡಲ್ಕೆವೇಟ್ಕುವೆಸುವಂ ಮೆಯ್ಯೊಡ್ಡಿದೆಂ ದುಃಖಸಂ
ಕುಲಕೋರಂತಿರೆ ಪುಂಡರೀಕನನೆ ಮತ್ತಂ ಕಾಣ್ಬೆನಾನೆಂದೆ ನಿ
ಷ್ಫಲಮಾಯ್ತಕ್ಕಟ ಮಂದಭಾಗ್ಯೆಗೆನಗಿಂತೀ ಪ್ರಾಣಸಂಧಾರಣಂ ೨೧

ಎಂದೆನ್ನೊಳೆ ಬಗೆಯುತ್ತಿರ್ದನನ್ನೆಗಮಾತನೆಯ್ದೆವಂದೆನ್ನನಿಂತೆಂದಂ

ಎಲೇ ಕುಮುದನೇತ್ರೆ ಮನ್ಮಥಸಹಾಯನೀ ಚಂದ್ರಮಂ
ಕೊಲಲ್ ಬಗೆದನೆನ್ನನಾರ್ತನನನಾಥನಂ ದುಃಖಿಯಂ
ಪಲುಂಬಿ ಮಱೆವೊಕ್ಕೆನಾಂ ನಿನಗಧೀನಮೀ ಜೀವಿತಂ
ವಿಲಂಬಿಸದೆ ರಕ್ಷಿಸೆನ್ನನಱಿಯೆಂ ಪ್ರತೀಕಾರಮಂ ೨೨

ಅದಂ ಕೇಳಲೊಡನೆನ್ನ ನೆತ್ತಿಯೊಳುರಿ ಮಸಗಿದಂತಾಗೆ ಕಿನಿಸು ಕಯ್ಗಣ್ಮೆ ಕಣ್ಗಳಿಂದುಗುತರ್ಪ ಕಣ್ಬನಿಗಿಡಿಗಳಿಂದುರಿಪುವಂತವನಂ ನೀಡುಂ ನೋಡುತ್ತಾವಿಷ್ಟೆಯಂತೆನ್ನನಾನಱಿಯದೆ

ನುಡಿವನ್ನವೆನ್ನನಿಲ್ಲೀ ಪರಿ
ಸಿಡಿಲೇತಕೆ ಕೆಡೆದುದಿಲ್ಲ ನಿನ್ನಯ ಸಿರದೊಳ್
ಉಡುಗಿದುದಿಲ್ಲವುಸಿರ್ ನಿನ್ನ
ಮರ್ಡಿಯೆನಲೀ ಜಿಹ್ವೆ ಬಿರಿದುದಿಲ್ಲ ದುರಾತ್ಮಾ ೨೩

ಎಂದು ನುಡಿದೊಡನಾಂ ಚಂದ್ರಾಭಿಮುಖಿಯಾಗಿ ಕಯ್ಗಳಂ ಮುಗಿದು ಮಹಾಭಾಗ ಸಕಲಭುವನಚೂಡಾಮಣಿಯಪ್ಪ ರೋಹಿಣೀರಮಣ ಪುಂಡರೀಕನನಾಂ ನೋಡಿದಂದಿನಿಂ ಮತ್ತೊರ್ವ ಪುರುಷನಂ ಮನದೊಳಾದೊಡಂ ಭಾವಿಸದಿರ್ದುದು ನನ್ನಿಯಪ್ಪೊಡೀ ಯಳೀಕಕಾಮಿ ಗಿಳಿಯಾಗಿ ಪುಟ್ಟುಗೆಂದು ಶಪಿಸಲೊಡನೆ

ಸಹಿಸಲಸಹ್ಯಮಪ್ಪ ಮದನಜ್ವರವೇಗದೆ ಮೇಣ್ ನಿಜಾಪ್ತದು
ರ್ವಹಪರಿಪಾಕದಿಂ ಬಗೆಯಲಲ್ಲದೊಡೆನ್ನಯ ತೀವ್ರಶಾಪದಾ
ಒ್ಮಹಿಮೆಯಿನಾತನಂದು ಕಡಿದಿಕ್ಕಿದ ಪೆರ್ಮರನಂತೆವೋಲದೇ
ನಹಹ ನಿರೂಪಿಪೆಂ ಕೆಡೆದು ಪೊರ್ದಿದನಾಯಿಳೆಯಲ್ಲಚೇತನಂ ೨೪

ಅದಂ ಕಂಡತಿದುಃಖಿತರಪ್ಪ ಪರಿಜನಂಗಳ ಮುಖದಿಂದೀತಂ ಭವತಿಯ ವಯಸ್ಯನೆಂದಱಿದೆನೆಂದು ಮಹಾಶ್ವೇತೆ ಕಡುದುಗುಡಂದಳೆದು ಕಣ್ಬನಿಗಳಂ ಬಿಡುತ್ತೆ ಲಜ್ಜಾವನತಮುಖಿಯಾಗಿರಲ್

ಪಿರಿದುಂ ನೀನೊಲವಿಂದೆ ಯತ್ನಿಸಿದೊಡಂ ಕಾದಂಬರೀದೇವಿಯಾ
ಚರಣೋಪಾಸನಸೌಖ್ಯಮಾದೊಡೆನಗಾದತ್ತಿಲ್ಲಮಿಾ ಪುಟ್ಟಿನೊಳ್
ದೊರೆಕೊಳ್ಳಂತದು ತಾನೊಡರ್ಚ ಮಱುವುಟ್ಟಲ್ಲಾದೊಡಂ ನೀನೆಯುಂ
ದೊರೆವನ್ನಂ ಬಿರಿದತ್ತು ಭೋಂಕನೆರ್ದೆ ತದ್ರಾಜೇಂದ್ರಚಂದ್ರಾಂಕನಾ ೨೫

ಆಗಳ್ ತರಳಿಕೆ ಭೋರನೆ ಚಂದ್ರಾಪೀಡಶರೀರಮಂ ಸಾರ್ದು ಹಾ ದೇವ ಚಂದ್ರಾಪೀಡ ಕಾದಂಬರಿಯನುಱಿದೆತ್ತ ಪೋಪೆಯೆಂದು ಬಾಯಱಿದು ಪಱಿವಿಸುತ್ತುಮಿರ್ದಳ್ ಮಹಾಶ್ವೇತೆಯುಂ ಚಂದ್ರಾಪೀಡಮುಖನಿಹಿತನಿಶ್ಚಲಸ್ತಬ್ಧದೃಷ್ಟಿಯಾಗಿ ಮರಣಸಮಾಸಾದಿತೆಯಾದಂತೆ ಮೂರ್ಛೆಗೆ ಸಂದಳಿತ್ತಲನಂತರಂ ತತ್ಸಮಾಸನ್ನಪರಿಜನಂ ಪ್ರಲಾಪಂಗೆಯ್ಯುತ್ತವನಿತಲದೊಳ್

ಕೆಡೆದುದು ವಿಗತಚೇತನನಾದ ಕುಮಾರನಂ ಕಂಡು ಕೆಟ್ಟೆವಿದೇನೆಂದು ರಾಜಪುತ್ರರುಮುದ್ಭ್ರಾಂತರಾಗಿ ಚಂದ್ರಾಪೀಡನನುಗಮನಮೇ ಕರಣೀಯವೆಂದು ನಿಶ್ಚೈಸಿರ್ದರನ್ನೆಗಮಿತ್ತಂ ಕಾದಂಬರಿಯ ಪರಿಜನಂ

ತಮತಮಗೊಲವಿಂ ಶ್ವೇತಾ
ಶ್ರಮಕ್ಕೆ ತಾಂ ಬಂದನಧಿಕಹರ್ಷದೆ ನೃಪಚಂ
ದ್ರಮನೆಂದು ಭೋಂಕನತಿಸಂ
ಭ್ರಮದಿಂ ಗಂಧರ್ವಕನ್ಯೆಗಳುಪಿದರಾಗಳ್ ೨೧

ಅಂತಱುಪೆ ಚಂದ್ರೋದಯೋಲ್ಲಸಿತೆಯಪ್ಪುದದಿವೇಲೆಯಂತೆ ಸಮಕರಧ್ವಜೆಯಾಗಿ ಮನದೊಳಗೆ ಗುಡಿಗಟ್ಟಿ ಮಹಾಶ್ವೇತೆಯಲ್ಲಿಗೆ ಪೋದಪ್ಪೆನೆಂದು ಜನನೀಜನಕರಿಂ ಕೃತಾನುಜ್ಞೆಯಾಗಿ ಕಾದಂಬರಿ ಕಯ್ಗೆಯ್ದು ಕೆಲಂಬರಾಪ್ತ ಪರಿಚಾರಿಕೆಯರ್ವೆರಸು ಕೇಯೂರಕೋಪದಿಶ್ಯಮಾನಮಾರ್ಗೆಯುಮನಿಸಿಪತ್ರಲೇಖಾಹಸ್ತಾವಲಂಬಿನಿಯುಮಾಗಿ ಮಹಾಶ್ವೇತಾಶ್ರಮಕ್ಕೆವಂದು ನೆರೆದಿರ್ದ ರಾಜಲೋಕದ ನಡುವೆ ಜಲಧರಪಟಲಾಂತರಿತೇಂದುವಪ್ಪ ನಿಶಾಪ್ರಬಂಧಮನನುಕರಿಸಿ ತಿರೋಭೂತಚೇತನನಾದ ಚಂದ್ರಾಪೀಡದೇವನಂ ಕಂಡು ಕೆಟ್ಟೆನಿದೇನೆಂದು ತೊಟ್ಟನೆ ಮುಗ್ಧೆ ಮೂರ್ಛೆಗೆ ಸಂದು ನೆಲಕ್ಕೆ ಬೀೞ್ವನ್ನೆಗಂ ಪತ್ರಲೇಖೆಯುಂ ಕಾದಂಬರೀದೇವಿಯ ಕರತಲಮಂ ಬಿಟ್ಟು ನಿಶ್ಚೇತನೆಯಾಗಿ ಬಿೞ್ದಳಿತ್ತಲನಂತರವೆತ್ತಾನುಂ ಕಿಱಿದು ಬೇಗಕ್ಕೆ ಕಾದಂಬರಿ ಲಬ್ಧಸಂಜ್ಞೆಯಾಗಿ

ಮರವಟ್ಟಂತೆ ವಿಮೂಢೆಯಂತೆ ಬರೆದಂತಾವಿಷ್ಟೆಯಾದಂತೆ ಕಂ
ಡರಿಸಿಟ್ಟಂತುಸಿರಿಕ್ಕಲುಂ ಮಱೆದು ಚಂದ್ರಾಪೀಡದೇವಾನನಾಂ
ಬುರುಹಸ್ತಂಭಿತದೃಷ್ಟಿ ಮೆಯ್ಯಱಿಯದಂತಿರ್ಮಾನ್ಯಭಾರಾತಿಯುಂ
ಧರೆ ಪೆಂಡಿರ್ಗಿದು ತಕ್ಕುದಲ್ತೆನಿಪವಸ್ಥಾಭೇದಮಂ ತಾಳ್ದಿದಳ್ ೨೨

ಅಂತು ತಾಳ್ದಿದ ಕಾದಂಬರಿಯ ಕಾಲ ಮೇಲೆ ಬಿಟ್ಟು ಮುಕ್ತಾರ್ತನಾದೆಯಾಗಿ ಮದಲೇಖೆಯಿಂತೆಂದಳ್

ಬಿಡು ನಿಜಘನ್ನು ಬಾಷ್ಪಬರವಂ ನುಡಿಗಂದುತುಮಿರ್ಪತು ದುಃಖಮಾಂ
ತೊಡೆ ಕಡೆಗೋಡಿಪೋಗದೆ ಪೊನಲ್ ಪುಗುತರ್ಪ ತಟಾಕದಂದದಿಂ
ದೊಡೆದಪುದಲ್ತೆ ನಿನ್ನ ಸುಮಕೋಮಲಮಪ್ಪೆರ್ದೆ ತಂದೆಯುಂ ತಾಯು ಬಾಷ್ಪದಿಂ
ಬಡಿನೊಳದಂತುಮಿಲ್ಲ ತಿಳಿ ನೀಂ ಬಟಿಕಿಲ್ಲ ನಿಜಾನ್ವಯದ್ವಯಂ

ಎಂದು ನುಡಿಯೆ ವಿಹಸಿತವದನೆಯಾಗಿ ಕಾದಂಬರಿ ಮದಲೇಖೆಯ
ನಿಂತೆಂದಳ್

ಮರುಳೆ ನಿನಗೆಂತಂಗೆ ಪೇಟ್ ಕಲ್ತೆರ್ದೆಯಿದೊಡೆಗುಮೆ ಮುಂದೆ ಮತ್ಕಾಂತನಿಂತಾ
ಗಿರೆಯುಂ ಪ್ರಾಣಂಗಳೆನ್ನಂ ಬಿಡವು ಬಿಡದೊಡೇನಾದುದೆಂತಾನು ಮಾಗಳ್
ದೊರೆಕೊಂಡತ್ತೀ ಮದೀಯಪ್ರಿಯತಮತನುವಿಂ ತಂದೆತಾಯ್ ಬಂಧುವರ್ಗಂ
ಪರಿವಾರಂ ತಾನದೇಕೀ ತನುವಿನ ಬಟಿಸಂದಾಗಂ ಕೃತಾರ್ಥಾತ್ಮೆಯಪ್ಪೆಂ ೨೯

ಅದಲ್ಲದೆಯುಂ

ಪಿಂದೆ ಸಮಸ್ತರಾಜ್ಯಪದಮಂ ಬಿಸುಟೆನ್ನಯ ದೂಸಱಿಂದವೆ
ಬ್ಬಂದೆನಗೊಪ್ಪುಗೊಟ್ಟು ನಿಜದೇಹಮನೀ ಮಹಿಪಂ ಗುರುತ್ವದಿಂ
ದೊಂದಿದನೀಗಳಾರ ಬಱಿದೆ ಕಣ್ಣನಿಯಂ ಸುರಿಯುತ್ತುಮಿರ್ದೊಡಂ
ಬಂದಪುದೇನೊ ಪೇಟ್ ಕೆಳದಿ ಕೆಮ್ಮನೆ ಲಾಘವದಿಂದಮೊಂದುವೆಂ ೩೦

ಅದು ಕಾರಣದಿಂ

ಸಾವುದೆ ಜೀವನಂ ದಲೆನಗೀ ಕಡುನಾಣ್ಗಿಡೆಯಾದ ಜೀವನ
ಸಾವೆಮು ತಂಗೆ ನೀನೆನಗೆ ಕೂರ್ಪುದು ನಿಕ್ಕುವಮಪ್ಪೊಡೆನ್ನ ಮೇ
ಲಾವರಿಸಿರ್ದ ಕೂರ್ಮೆಯನೆ ನಿನ್ನೊಳೆ ಮಾಡಿ ಮದೀಯ ಶೋಕದಿಂ
ಜೀವಮನಟ್ಟೆ ಪತ್ತುವಿಡದಂತಿರೆ ಮಾಡುವುದಾವುಪಾಯದಿಂ ೩೧

ಅದಲ್ಲದೆಯುಂ

ಅನುರಾಗದಿನಾನೆ ಕುಮಾ
ರನ ಪಟಮಂ ಬರೆದು ಸೆಜ್ಜವನೆಯೊಳ್ ಸಾರ್ಚಿ
ರ್ದೆನದರ ಪೂಜಿಸುತಿರು ಕಾ
ಮನ ಪಟಮಂ ನೀಳ್ದು ಕಳೆ ವೃಥಾಪೂಜಿತಮಂ ೩೨

ಚಿರಕಾಲಂ ನಮೆದುವುಪಂ
ಜರದೊಳ್ ಕಾಳಿಂದಿಯೆಂಬ ಸಾರಿಕೆಯುಂ ತ
ತ್ಪರಿಹಾಸನೆಂಬ ಗಿಳಿಯುಮ
ವೆರಡಂ ನೀಂ ತಂಗೆ ಬಿಟ್ಟು ಕಳೆ ಬಡವುಗಳಂ ೨೨

ಪದೆದೆನ್ನಯ ವೀಣೆಯನಿರಿ
ಪುದು ನಿನ್ನಯ ತೊಡೆಯ ಮೇಲೆ ಮತ್ತಂ ನಿನಗಾ
ವುದಪೇಕ್ಷಿತಮಾಗಿರ್ದ
ತ್ತದೆಲ್ಲಮಂ ನೀನೆ ಕೆಳದಿ ಕಯ್ಕೊಳ್ಳೀಗಳ್ ೨೪

ಆನಪ್ಪೊಡೆನ್ನ ಶರೀರಮಂ ಪ್ರಿಯತಮಶರೀರಸಂಯೋಗಾಹ್ಲಾದದಿನ್ನಾ ಱುಸಿದಪ್ಪೆನೆಂದು ತನ್ನಂ ಮದಲೇಖೆಯಿಂ ಬಿಡಿಸಿಕೊಂಡು ಲಬ್ಧಸಂಜ್ಞೆಯುಂ ಚಿಂತಾಸ್ತಿಮಿತನಯನೆಯುಮಪ್ಪ ಮಹಾಶ್ವೇತೆಯತಱೆಕ್ಕೈಸಿ ನಿರ್ವಿಕಾರ ವದನೆಯಾಗಿ

ಇನಿಯನ ಬರ್ಪುದಂ ನಿನಗೆ ಪಾರ್ದಿರವೇಟ್ಟುದು ಪುಂಡರೀಕದೇ
ವನೆ ಪತಿಯಪ್ಪನೆಂಬ ನುಡಿಯುಂ ಸಲೆ ಕಾರಣಮಾಗೆ ತಾಳ್ದು ನೀಂ
ತನುವನನೇಕಕಾಲಮಿದನೆನ್ನಯ ಚಿಂತೆಯನಕ್ಕ ಮಾಣ್ಬುದಿಂ
ತೆನಗನಿತೊಂದು ಮೂಡುಗೆ ಭವಾಂತರದಲ್ಲಿ ಭವತ್ಸಮಾಗಮಂ ೨೫

ಎಂದನಂತರಂ

ಸುರಿಯೆ ಕಚಭಾರಹಸ್ತದಿ
ನರಲ್ಗಳಾತ್ಮೋತ್ತಮಾಂಗದಿಂದರ್ಚಿಸಿದಳ್
ಸರಭಸಮಾಗಳ್ ಕಾದಂ
ಬರಿ ಚಂದ್ರಾಪೀಡದೇವ ಚರಣಾಂಬುಜಮಂ ೨೬

ಅಂತರ್ಚಿಸುತ್ತುಂ ವಿಗಳತ್ಸ್ವೇದಾರ್ದ್ರಂಗಳಪ್ಪ ಕರಕಮಲಂಗಳಿಂ ಪ್ರಿಯತಮನಂ ತೊಡೆಯ ಮೇಗಣ್ಗೆ ತೆಗೆದು ಮೊಗಮಂ ಬಿಡದೆ ನೋಡಿ ನಿಜಪ್ರಾಣಮಂ ಬಿಡಲುಜ್ಜುಗಂಗೆಯ್ವಾಗಳ್

ಅಮೃತಾಸಾರದಿನಾ ಪ್ರದೇಶಮನಿತುಂ ತೇಂಕಾಡಲಲ್ಲಿರ್ದರೆ
ಲ್ಲಮಿದೇನೋ ಕವಿತರ್ಪುದೀಗಳೆನುತುಂ ತಳ್ಪೊಯ್ವ ತಣ್ಪಿಂದಮೆ
ಯ್ದಿ ಮುಟ್ಟುಂಗುತ್ತಿರಲುಣ್ಮಿ ತೋರ್ಪುದಲೊಳವ್ಯಕ್ತಸ್ವರೂಪಂ ಸುಧಾಂ
ಶುಮಯೂಖೋಜ್ಜ್ವಲಮಂತರಿಕ್ಷತಲದೊಳ್ ಹೈಮಪ್ರಭಾಮಂಡಲಂ ೩೭

ಅಂತಾ ಪ್ರಭಾಮಂಡಲದ ದೆಸೆಯಿನಮೃತವೃಷ್ಟಿಯಂ ಪಸರಿಸುವಂತ ದೊಂದು ದಿವ್ಯನಿನದಂ

ಒಸೆದಿಂದಾಂ ನಿನ್ನನಾಶ್ವಾಸಿಸಿದೆನೆಲೆ ಮಹಾಶ್ವೇತೆ ಮತ್ತಿಂದುಮಾಶ್ವಾ
ಸಿಸಲೆಯ್ತಂದೆಂ ಮದೀಯಾಮೃತಮಯಕರಸಂದೋಹದಿಂ ನಿಚ್ಚಮಾನ
ರ್ಚಿಸುತಿರ್ದೆಂ ಪುಂಡರೀಕೋಜ್ಜ್ವಲವಪುವನದಿರ್ದತ್ತು ಮಲ್ಲೋಕದೊಳ್ ನಿ
ನ್ನ ಸಮಾಯೋಗಾರ್ಥಮಿನ್ನುಂ ತೊಳಗಿ ಬೆಳಗುತುಂ ನಿತ್ಯರೂಪತ್ವ
ದಿಂದಂ ೩೮

ಇದು ಬೇರ್ಮೆಯ್ಯುಕ್ಕ ಯೋಗೀಂದ್ರನ ತನುವಿನವೋಲ್ ಮುನ್ನಿನಂತಿರ್ಪುದಂತ
ಲ್ಲದೆಯುಂ ಕಾದಂಬರೀದೇವಿಯ ಕರತಲಸಂಸ್ಪರ್ಶಮಂ ತಾಳ್ದಿಕೊಂಡಿ
ರ್ದುದು ಬೇಱೊಂದೆನ್ನ ತೇಜೋಮಯಮಿದು ಪೆಱತೇಂ ನಿತ್ಯಮೀ ದೇಹಮೀ ದೇ
ಹದೆ ಚಂದ್ರಾಪೀಡದೇವಂ ಕತಿಪಯದಿನದಿಂದೀಕೆಯೊಳ್ ಕೂಡಿದಪ್ಪಂ ೩೯

ಅದಱಿನೀ ದೇಹಮನತಿಪ್ರಯತ್ನದಿನಾರಾಧಿಸುತ್ತಿರ್ಪುದೆಂದು ನುಡಿದು ಮಾಣ್ದುದುಮಿದೇನೆನುತ್ತುಂ ಕಾದಂಬರಿವೆರಸು ಸಕಲರಾಜಲೋಕಂ ವಿಸ್ಮಯಾಕ್ಷಿಪ್ತಹೃದಯರುಂ ಮಂದೀಕೃತಮರಣವ್ಯತಿಕರರುಮಾಗಿರ್ಪುದುಮನಂತರಂ ಪತ್ರಲೇಖೆ ತತ್ಪ್ರಭಾಮಂಡಲಗಳಿತಹಿಮಸ್ಪರ್ಶದಿಂ ಲಬ್ಧಸಂಜ್ಞೆಯಾಗಿ ಮರುಳ್ಗೊಂಡಂತಿಂದ್ರಾಯುಧಮಿರ್ಪೆಡೆಗೆ ಪರಿತಂದು ಪರಿವರ್ಧಕಹಸ್ತದಿಂದದಂ ತೆಗೆದು ವಾಹನಮಿಲ್ಲದೆ ಚಂದ್ರಾಪೀಡದೇವನೇಕಾಕಿಯಾಗಿಂತು ದೂರಮೆಯ್ದಲೆಮ್ಮನ್ನರಿರ್ಪುದನುಚಿತಮೆಂದು ನುಡಿದಾಯಿಂದ್ರಾಯುಧವನೊಡಗೊಂಡಚ್ಛೋದಸರದೊಳ್ ಮುಱುಂಗಲೊಡಂ

ಪೊರೆದು ಸರೋಜರೇಣುಗಳಿನೊಂದಱೊಳೊಂದು ತೊಡಂಕಿ ಧಾಃಕಣೋ
ತ್ಕರದೊಳ್ಗೊಡಗೂಡಿ ಕಣ್ಗೆ ಕವಿತರ್ಪ ಜಟಾಳಿಯನಿರ್ಕೆಲಕ್ಕಮೋ
ಸರಿಸುತುಮಬ್ಜತಂತುವಿನ ಜನ್ನಿವರಂ ಸುರಭೂಜವಲ್ಕಮೊ
ಪ್ಪಿರೆ ಪೊಱಮಟ್ಟನಾ ಕೊಳದಿನಾಗಳಪೂರ್ವಕುಮಾರತಾಪಸಂ ೪೦

ಅಂತು ಪೊಱಮಟ್ಟು ಸುಹೃದ್ವಿಯೋಗ ವಿಹ್ವಲಿತ ಹೃದಯನಪ್ಪ ಕಪಿಂಜಲನುದ್ಬಾಷ್ಪ ಪರ್ಯಾಕುಲ ವ್ಯಾಬದ್ಧಲಕ್ಷ್ಯದೃಷ್ಟಿಯಪ್ಪ ಮಹಾಶ್ವೇತೆಯನೆಯ್ದೆವಂದು

ಮಱುವುಟ್ಟಿಗನಾದನನೇ
ನಱಿವೋ ನೀನೆನ್ನ ನೆನೆ ಕಪಿಂಜಲಮುನಿಯಿಂ
ದಱಿದತಿಸಂಭ್ರಮದಿಂ ಬಂ
ದೆಱಗಿದಳಾ ಸತಿ ತದೀಯಚರಣದ್ವಯದೊಳ್ ೪೧

ಮುನಿಪತಿ ಲಜ್ಜೆಗೆಟ್ಟು ಬೆಸಗೊಂಡಪೆನೆಂತೆನೆ ಪುಂಡರೀಕದೇ
ವನ ಪೆಱಗಿರ್ತು ಜೀವಿಸುತುಮಿರ್ದವಳ್ಗೆಂ ಬೆಸಸಿಂ ಮಹಾನುಭಾ
ವನನಿರದುಯ್ದು ನಾವನಿರಿಸಿಟ್ಟನದೆಲ್ಲಿ ತದೀಯವಾರ್ತೆಯೋ
ನಿನಿತುವರಂ ವಿಲಂಬಿಸಿಯುಮೊರ್ವರೆ ಬಂದಿರಿದಾವ ಕಾರಣಂ ೪೨

ಎಂದ ಮಹಾಶ್ವೇತೆಗೆ ಕಪಿಂಜಲನಿಂತೆಂದಂ ನೀನಂದತ್ತು ಬಾಯೞಿದು ಪೞಿವಿಸುತ್ತಿರೆಯುಂ ನಿನ್ನನೇಕಾಕಿಯನೀಡಾಡಿ ವಯಸ್ಯಸ್ನೇಹದಿನಾಂ ಪುಂಡರೀಕನಂ ಕೊಂಡುಯ್ದ ಪುರುಷನ ಬೞಿಸಂದು ಮದೀಯಸಖನನೆತ್ತಲುಯ್ದಪೆಯೆಂಬುದುಮಾತನೆನಗೆ ಮಱುಮಾತುಗುಡದೆ ಗೀರ್ವಾಣಮಾರ್ಗದೊಳನೇಕ ವೈಮಾನಿಕಜನ ಪ್ರಣಮ್ಯಮಾನನುಂ ದಿವ್ಯಾಂಗನಾವಲೋಕ್ಯಮಾನನುಮಾಗಿ ಪೋಗುತ್ತುಮಂಬರಸರಃಕುಮುದಾಕರಮೆನಿಪ ತಾರಕಾಚಕ್ರಮನತಿಕ್ರಮಿಸಿ ಚಂದ್ರಲೋಕಮಂ ಪೊಕ್ಕು ಚಂದ್ರಕಾಂತಮಣಿಮಂಟಪದೊಳ್ ಪುಂಡರೀಕನ ಶರೀರಮನಿರಿಸಿ ಮಗುಳ್ದೆನ್ನಂ ನೋಡಿ

ಅಱಿಯಯ್ ಚಂದ್ರನೆನಾಂ ಕಪಿಂಜಲಕ ನೀನೀ ಪುಂಡರೀಕಾರ್ಥಮಾ
ತೆಱದಿಂ ಪಿಂದೆಯಿದೇಕೆ ಬಂದೆ ಗಡ ಲೋಕಾನುಗ್ರಹಂಗೆಯ್ವ ದೂ
ಸಱಿನಾಂ ಬಂದುದಯಂಗೆಯುತ್ತುಮಿರಲೀ ಕಾಮಾತುರಂ ಸಾಯುತುಂ
ಬಱಿದಿಂತೆನ್ನನದೋಷಿಯುಂ ಕುಱಿತು ಕೋಪೋದ್ರೇಕದಿಂ ನೋಡಿದಂ ೪೩

ಅಂತು ನೋಡಿ

ಎಲೆ ಚಂದ್ರಹತಕ ಮದನನ
ಬಲದಿಂದಂ ಮೇಲೆವರಿದು ಕೊಂದಿತೆನ್ನಂ
ನಿಲಲಱಿಯೆಯಿರ್ಪ್ಪೆ ನೀಂ ಮ
ರ್ತ್ಯಲೋಕದೊಳ್ ಪುಟ್ಟುತ್ತೆ ಶಾಪಂಗೊಟ್ಟಂ ೪೪

ಇವನೆನಗೆ ನಿರಪರಾಧಂ
ಗವಿಚಾರದೆ ಶಾಪಮಿತ್ತೆಯೆ ನೀನುಂ ಸುಖದುಃ
ಖವನೆನ್ನೊಡನನುಭವಿಸೆಂ
ದಿವಂಗೆ ಮುನಿದಾನುಮಂತು ಶಾಪಂಗೊಟ್ಟೆಂ ೪೫

ಅಂತು ಶಾಪವಿತ್ತಸ್ಮನ್ಮಯೂಖಸಂಭವೆಯರೆನಿಸಿದಚ್ಚರಸೆಯರೊಳು
ದಯಿಸಿದ ಗೌರೀತನೂಜೆಯಪ್ಪ ಮಹಾಶ್ವೇತೆಯಿಂ ಸ್ವಯಂವೃತನಾದ
ನೆಪ್ಪುದಱಿನಪಗತಾಮರ್ಷಣನಾಗಿ ಪುಂಡರೀಕನ ಶರೀರವಂ ಕಿಡದಂತು
ತಂದು ಮತ್ತೇಜದಿಂದಾಪ್ಯಾಯಮಾನವಾಗೆ ಶಾಪಮೋಕ್ಷಪರ್ಯಂತ
ಮಿರಿಸಿದಪ್ಪೆಂ ನೀನುಮೀತನ ವೃತ್ತಾಂತಮನವರ್ಯ್ಯನಪ್ಪ ಶ್ವೇತಕೇತು
ವಿಂಗೆ ನಿವೇದಿಸಾ ಮಹಾನುಭಾವನೀತಂಗಾಯುಷ್ಕಾಮ ಹೋಮಾದಿ
ಕಮನೊಡರ್ಚಿದಪನೆಂದೆನ್ನಂ ವಿಸರ್ಜಿಸುವುದುಮಾಂ ಸುಹೃಚ್ಛೋಕಾಂ
ಧನೆಂ ಮಗುಟ್ದು ಮರ್ತ್ಯಮಾರ್ಗದೊಳ್ ಪರಿಯುತ್ತುಮೊರ್ವ ವೈಮಾನಿ
ಕನಂ ಭರದಿಂ ದಾಂಟುವುದುಮಾತಂ ಕ್ರೋಧಾನಲದಿನೆನ್ನನುರಿಪುವಂತು
ಕೆಚ್ಚನಾಗೆ ಬೆಚ್ಚನೆ ಬಿಟ್ಟ ದಿಟ್ಟಿಗಳಿಂ ನೋಡಿ

ಎಲೆ ದುಶ್ಶಿಕ್ಷಿತ ನಿನ್ನ ಕಣ್ಣೊಡೆದುವೇ ವಿಸ್ತೀರ್ಣಮಪ್ಪೀ ನಭ
ಸ್ಸ್ಥಲದೊಳ್ ಪೋಗುತುಮೆನ್ನನಿಂತುಱಿದೆ ನೀಂ ನಿನ್ನೊಂದು ವಿದ್ಯಾತಪೋ
ಬಲದಿಂ ದಾಂಟಿದೆ ವಾಹದಂತಿರದಱಿಂ ವಾಹತ್ವಮಂ ತಾಳ್ದಿ ಭೂ
ತಲದೊಳ್ ಪೋ ನೆಲಸೆಂದು ಕೊಟ್ಟನೆನಗಾ ವೈಮಾನಿಕಂ ಶಾಪಮಂ ೪೬

ಅಂತು ಶಾಪಂಗುಡಲಾಂ ನಡುನಡುಗಿ ಕಯ್ಗಳಂ ಮುಗಿದು ಮಹಾ
ಪುರುಷಾ ನಿನ್ನನಾಂ ವಯಸ್ಯಶೋಕಾಂಧನೆಂ ಕಾಣದೆ ದಾಂಟಿದೆನಲ್ಲದವ
ಜ್ಞೆಯಿಂ ದಾಂಟಿದನಲ್ಲೆನಾದೊಡಮೆನಗೆ ಶಾಪಾಂತಕಾರಣಮಂ ಬೆಸ
ಸೆಂಬುದುಂ ನೀನಾವಂಗೆ ವಾಹನಮಾಗಿರ್ಪೆ ಯಾತಂ ಮಱುಮೆಯ್ಗೆ ಸಲ್ವ

ಸಮಯದೊಳಚ್ಛೋದ ಸರೋವರ ಸಲಿಲದೊಳ್ ಮುೞುಂಗೆ ವಿಗತಶಾಪನಪ್ಪೆಯೆಂದು ವೈಮಾನಿಕನೆನಗೆ ಪೇೞ್ವುದುಮಾತನಾತಂಗೆ ಮತ್ತಮಿಂತೆಂದೆಂ

ಜನಿಯಿಸಿದಪನೆನ್ನಯ ಕೆಳೆ
ಯನುಮಾ ಚಂದ್ರಮನುಮಿನ್ನಿಳಾತಳದೊಳವರ್
ಜನಿಯಿಸಿದಲ್ಲಿಯೆ ಜನಿಯಿಸು
ವಿನಿತಂ ನೀಂ ದಯೆಯಿನೆನಗೆ ಮಾಡಲೆವೇೞ್ಕುಂ ೪೭

ತುರಂಗತ್ವಮೆನಗೆ ಮೂಡಿದೊಡಮೆನ್ನ ಕೆಳೆಯನೊಡಗೂಡಿ ಕಾಲಮಂ ಕಟಿಪುವಂತು ನಿನ್ನ ದಿವ್ಯಚಕ್ಷುಗಳಿಂ ನೋಡಿ ಬೆಸಸೆಂಬುದುಂ ಸದಯನಾಗಿ ತನ್ನೊಳ್ ಕಿಱಿದು ಬೇಗಂ ವೈಮಾನಿಕಂ ಧ್ಯಾನಿಸಿ ತಿಳಿದೆನ್ನನಿಂತೆಂದನುಜ್ಜಯಿನಿಯೊಳಪತ್ಯಾರ್ಥವನೇಕ ವ್ರತನಿಚರಣತತ್ಪರನಪ್ಪ ತಾರಾಪೀಡನೆಂಬ ಚಕ್ರವರ್ತಿಗೆ ಸಕಲಕಲಾಭಿರಾಮನುಂ ವಿಬುಧಜನ ಸೇವ್ಯನುಂ ಕುವಲಯಾನಂದಕರನುಂ ಯಶಶ್ಚಂದ್ರಿಕಾಧವಳಿತಭುವನನುಮೆನಿಸಿ ಚಂದ್ರಾಪೀಡನೆಂಬ ಪೆಸರಿಂ ಚಂದ್ರಮನೆ ಬಂದುದಯಿಸಿದಪ್ಪನಾತನ ಮಂತ್ರಿ ಶುಕನಾಸನೆಂಬಂಗೆ ನಿನ್ನ ಕೆಳೆಯನಪ್ಪ ಪುಂಡರೀಕಂ ವೈಶಂಪಾಯನನೆಂಬ ಪೆಸರಿಂ ಪುಟ್ಟಿದಪ್ಪನಾ ಚಂದ್ರಾವತಾರನೆನಿಸಿದ ರಾಜಕುಮಾರಂಗೆ ನೀಂ ವಾಹನಮಾದಪ್ಪೆಯೆಂಬುದುಂ

ಅಂತಾ ವೈಮಾನಿಕ ವಚ
ನಾಂತದೊಳಾ ತುರಗರೂಪಮಂ ತಳೆದಾಕಾ
ಶಾಂತರದಿಂದಿೞಿದು ಸಮು
ದ್ರಾಂತರದೊಳ್ ಬಿೞ್ದೆನೆನ್ನ ಕರ್ಮಾಂತರದಿಂ ೪೮

ಅಂತು ಬೀೞ್ವುದುಂ ಪಾರಸೀಕಾಧಿರಾಜನೆನ್ನಂ ಕಂಡು ಪಿಡಿದುಯ್ದು ತಾರಾಪೀಡನರೇಂದ್ರಂಗೊಲ್ದೈಸೆ ತದೀಯನಂದನನೆನಿಸಿದ ಚಂದ್ರಮೂರ್ತಿಯಪ್ಪ ಚಂದ್ರಾಪೀಡಂಗೆ ವಾಹನಮಾಗಿರ್ದು ಕಿನ್ನರಮಿಥುನದ ಬಟಿಸಲ್ವೆ ನೆವದಿಂ ನಿನ್ನಂ ಕಾಣಿಸಲೆಂದೀ ಚಂದ್ರಾವತಾರನನೀ ಪ್ರದೇಶಕ್ಕೆ ತಂದೆನೆಂಬುದುಂ ಹಾ ಮನಃಪ್ರಿಯ ಪುಂಡರೀಕ ಜನ್ಮಾಂತರಾವಿಸ್ಮೃತಮದನುರಾಗ ಮತ್ಪ್ರತಿಬದ್ಧಜೀವಿತ ಮನ್ಮಯಸಕಲಜೀವಿತಲೋಕ ಎಂದುದ್ಗತಶೋಕೆಯಾಗಿ

ಮುನ್ನವದೋರ್ವೆ ಪಾತಕಿಯೆನಂತಿರೆ ಕೊಂದವಳೆಂ ಭವಾಂತರೋ
ತ್ಪನ್ನನೆಯಾಗಿಯುಂ ಮದನನುರಾಗದಿನೆಟ್ಟಿರೆ ಮತ್ತೆ ಕೊಂದೆನಾಂ
ನಿನ್ನನೆ ನಿನ್ನನಿರ್ತು ಮಗುೞ್ದುಂ ಮಗುೞ್ದುಂ ಕೊಲವೇೞ್ಪುದೆಂದು ಪೇ
ೞೆನ್ನನಿದೆಂತು ಪುಟ್ಟಿಸಿದನೇ ವಿಧಿ ರಕ್ಕಸಿಯಂ ಮನಃಪ್ರಿಯಾ ೪೯

ಎಂದಿವು ಮೊದಲಾಗಿ ಬಹುಪ್ರಕಾರದಿಂ ಪಟವಿಸುವ ಮಹಾಶ್ವೇತೆಯಂ ಕಪಿಂಜಲನಿಂತೆಂದಂ

ಹೃದಯಪ್ರಿಯನ ಸಮಾಗಮ
ನದೃಢಪ್ರತ್ಯಾಶೆಯಿಂದೆ ಘೋರತಪಃಕ್ಲೇ
ಶದಿನೊಂದಿ ನಿಂದೆಗೆಡೆಯ
ಲ್ಲದ ನಿನ್ನಂ ನೀನಿದೇಕೆ ನಿಂದಿಸಿದಪ್ಪಯ್ ೫೦

ಇದೆಲ್ಲಂ ಮದ್ವಯಸ್ಯಂಗಂ ಚಂದ್ರಾವತಾರಂಗಮೋರೊರ್ವರ ಶಾಪದಿಂದಮೆ ಸಮನಿಸಿದುದು ನಿನ್ನ ದೋಷವಲ್ಲೆಂಬುದನಾನುಂ ನಿನಗೆ ಪೇೞ್ದೆಂ ವಿಯತ್ತಳದೊಳಿರ್ದ ಚಂದ್ರನುಂ ತನ್ನ ದಿವ್ಯವಚನದಿನಾೞಿಸಿದುದುಮಂ ನೀನುಂ ಕಾದಂಬರಿಯುಂ ಕೇಳ್ದಿರದುಕಾರಣದಿನಶ್ರೇಯಸ್ಕರಮೆನಿಪ್ಪ ಶೋಕಾನುಬಂಧಮನಿರ್ವರುಂ ಮಾಡಲಾಗದಭಿಲಷಿತಸಿದ್ಧಿಗೆಂದಾವುದೊಂದು ಸದ್ವ್ರತಮನಾಚರಿಸುತ್ತಿರ್ದಿರದನೇ ನೀವನುಬಂಧಿಸುವುದದಲ್ಲದೆಯುಂ

ತಪದಿಂ ಸ್ಮರರಿಪುದೇಹಾ
ರ್ಧಪದದೊಳಿರೆ ಗೌರಿ ನಿಂದವೋಲ್ ನಿಲ್ವಯ್ ನೀಂ
ತಪದಿಂದಿನಿಯನ ತೊಡೆಯೊಳ್
ತಪದಿಂ ದೊರೆಕೊಳ್ಳದಿರ್ಪ ಫಲಮೊಂದುಂಟೇ ೫೧

ಎಂದು ತಿಳಿಯವೇೞ್ದು ಮಹಾಶ್ವೇತೆಯಂ ಸಮಾಶ್ವಾಸಿಸಿದ ಕಪಿಂಜಲನಂ ವಿಷಣ್ಣದೀನಮುಖಿಯಾಗಿ ಕಾದಂಬರಿಯಿಂತೆಂದಳ್

ಸಲಿಲಪ್ರವೇಶಮಂ ಪ
ತ್ರಲೇಖೆಯುಂ ನೀವುಮಲ್ತೆ ಮಾಡಿದಿರಂತಾ
ಲಲನೆಯುದೇನಾದಳದಂ
ಜಲಕ್ಕನಾಗೆನಗೆ ಬೆಸಸಿಮಾಗಳ್ ಮುನಿಪಾ ೫೨

ಎಂದು ಬೆಸಗೊಳ್ವುದುಂ ಕಪಿಂಜಲಕನೆಂದನಾಂ ಜಲಪ್ರವೇಶನಾ ನಂತರದ ವಾರ್ತೆಯನಱಿದೆನಿಲ್ಲದಱಿನೀ ಚಂದ್ರಾತ್ಮಕನಪ್ಪ ಚಂದ್ರಾ ಪೀಡನುಂ ಪುಂಡರೀಕಾತ್ಮಕನಪ್ಪ ವೈಶಂಪಾಯನನುಮೆತ್ತಿರ್ದಪೆಂಬುದುಂ ಪತ್ರಲೇಖಾವೃತ್ತಾಂತಮೇನೆಂಬುದುಮನಱಿಯಲೆಂದೀಗಳಾಂ ಪ್ರತ್ಯಕ್ಷ ಲೋಕತ್ರಯನೆನಿಪ ಶ್ವೇತಕೇತು ಮಹಾಮುನಿಗಳಲ್ಲಿಗೆ ಪೋದಪ್ಪೆನೆಂದು ಗಗನತಳಕ್ಕೆ ನೆಗೆದು ಪೋದನನ್ನೆಗಮಿತ್ತ ಕಾದಂಬರಿ ಚಂದ್ರಾಪೀಡ ದೇವನಂ ನೋಡಿ ಕಣ್ಬನಿಗಳಂ ತೀವುವುದಂ ಮಹಾಶ್ವೇತೆ ನೋಡಿ ತಂಗೆ ನೀನೇಟಲಂ ತಳೆಯದಿರಾವಿರ್ವರುಂ ಸಮಸುಖದುಃಖವೃತ್ತಿಗಳಾದೆವದಱಿಂ ಪ್ರಿಯತಮ ಸಮಾಗಮ ಪ್ರತ್ಯಾಶೆಯಿಂ ಕರಣೀಯಮಾವುದದನೆ ಮಾಡ ವೇೞ್ಪುದದಱಿಂ

ಎನಗಿದು ದೈವಮೆಂದು ಮನದೊಳ್ ಪರಿಭಾವಿಸಿ ಕಲ್ಲ ಮಣ್ಣ ರೂ
ಪನೆ ಗಡ ಪೂಜಿಸುತ್ತುಮಿರೆ ಸನ್ನಿದವಾದಪ್ಪುದೆಂದೊಡಕ್ಕ ನೆ
ಟ್ಟನೆ ಮನುಜೇಂದ್ರಚಂದ್ರವೆಸರಿಂದೆಸೆವಗ್ಗದ ಚಂದ್ರಮೂರ್ತಿಯಂ
ಮನವೊಸೆದರ್ಚಿಸುತ್ತುಮಿರೆ ಸನ್ನಿದನಪ್ಪುದಿದಾವ ಸಂದೆಗಂ ೫೩

ಎಂಬುದುಮದನೆ ಮನಂಗೊಂಡು ಶೀತವಾತಾತಪವರ್ಷಾದಿ ಸರ್ವ ದ್ವಂದ್ವ ದೋಷರಹಿತಮಪ್ಪುದೊಂದು ರತ್ನಶಿಲಾತಲದೊಳ್ ಚಂದ್ರಾ ಪೀಡದೇವನಂ ನಿಲಿಸಿ ದಿವ್ಯವಸನ ಕುಸುಮಧೂಪಾನುಲೇಪನಾಭರಣಂ ಗಳಿನಲಂಕರಿಸಿ ತದೀಯಚರಣಂಗಳಂ ತೊಡೆಯ ಮೇಲಿಕ್ಕಿಕೊಂಡು ಪರಿ ಜನಮುಂ ರಾಜಲೋಕಮುಂ ಬೆರಸಂದಿನ ಪಗಲುಮನಿರುಳುಮಂ ಕಳೆದು ಮಱುದಿವಸಂ ಕಣ್ದೆಱೆದ ಚಿತ್ರದಂತಿರ್ದ ಚಂದ್ರಾಪೀಡನವಯವಂಗಳು ಮನೆಲ್ಲಮನೆಟವಿನೋಡಿ ಕಾದಂಬರಿ ಕೆಲದೊಳಿರ್ದ ಮದಲೇಖೆಯಂ ನೀನುಂ ಭಾವಿಸಿ ನೋಡೆಂಬುದುಮಾಕೆ ತದ್ದಿವ್ಯಾಕೃತಿಯ ಸಕಲಾಂಗ ಪ್ರತ್ಯಂಗಂಗಳಂ ನೋಡಿ

ನಗುವಂತಿರ್ದಪ್ಪುದಿಂತೀ ವದನಮ್ಮುರುಳಿಗೊಂಡಿರ್ಪುದೀ ಕೇಶಮಿಾ ದೃ ಗ್ಯುಗಳಂ ಕರ್ನೆಯ್ದಿಲಂತಿರ್ದಪುದಧರಮಿದುಂ ಬೀಱುತಿರ್ದಪ್ಪುವೀ ಮಿಂ ಚುಗುರುಂ ಹಸ್ತಾಂಘ್ರಿಪದ್ಮಂಗಳುಮಧರಮುಮಿಾ ದೇಹಲಾವಣ್ಯಮಾದಂ ಮಿಗುತಿರ್ದತ್ತಾ ಮಹಾಭಾಗನ ನುಡಿಯಿದಱಿಂ ಸತ್ಯಮಾಗಿರ್ದುದಲ್ತೇ ೫೪

ಎಂದು ನುಡಿದ ಮದಲೇಖೆಯ ಮಾತಿನೊಳ್ ನಿರ್ಭರಾನಂದೆಯಾಗಿ ಕಾದಂಬರಿ ಮಹಾಶ್ವೇತೆಗಂ ಚಂದ್ರಾಪೀಡಚರಣತಳನಿಬದ್ಧಜೀವಿತಮಪ್ಪ ರಾಜಲೋಕಕ್ಕಂ ಪ್ರಿಯತಮಾಕೃತಿಯಂ ತೋಱಲೊಡಮವರ್ ವಿಸ್ಮಯೋತ್ಫುಲ್ಲಲೋಚನರುಮಾವಿಷ್ಕೃತಾನಂದರುಮಪ್ಪುದುಮನಂತರಂ ಸಖೀಜನಂಬೆರಸು ಚಂದ್ರಾಪೀಡದೇವನನಲಂಕರಿಸಿ ಶರೀರಸ್ಥಿತಿಕರಣಾರ್ಥಂ ಸಕಲರಾಜಲೋಕಮಂ ವಿಸರ್ಜಿಸಿ ಮಹಾಶ್ವೇತೆಯನುರೋಧದಿಂ ಕೃತಫಲಜಲಾಹಾರೆಯಾಗಿ ತದನಂತರಂ ಮದಲೇಖೆಗೆಂದಳೆನ್ನೆಗವೆನಗೀ ಮನೋಹರಂ ಸನ್ನಿದನಪ್ಪ ನನ್ನೆವರಮೀ ಶೆಱದಿಂದಿರಲ್ವೇಡಿರ್ದುದಱಿಂ ವಿಸ್ಮಯಮಪ್ಪೀ ವೃತ್ತಾಂತಮನತ್ಯಂತವಾಗಿ ತಾಯ್ತಂದೆಗಳ್ಗೆ ತಿಳಿಯವೇೞ್ದು ಸಮಾಧಾನಮಂ ಮಾೞ್ಪುದೆಂದಾಕೆಯಂ ಬೇಗಂ ಪೋಗಲ್ವೇೞ್ದಂದಿಸಂದದಿಂ ಚಂದ್ರಾಪೀಡಚರಣಕಮಲಂಗಳಂ ದೃಢಪ್ರತ್ಯಯದಿನಾರಾಧಿಸುತ್ತಿರ್ದಳನ್ನೆಗವೊಂದು ದಿವಸಂ ಚಂದ್ರಾಪೀಡ ಚರಣಮೂಲೋಪವಿಷ್ಟೆಯಾದ ಕಾದಂಬರಿಯಲ್ಲಿಗೆ ಮೇಘನಾದಂ ಬಂದು ತಡೆದುದರ್ಕುತ್ಕಂಠಿತರಾಗಿ ತಾರಾಪೀಡದೇವನುಂ ವಿಲಾಸವತೀಮಹಾದೇವಿಯುಮಾರ್ಯಶುಕನಾಸನುಂ ವಾರ್ತಾಹರರನಟ್ಟಿದೊಡವರುಮರಸನಂ ಕಾಣಲೆಂದು ಬಂದಿರ್ದಪರಿಲ್ಲಿಗೆ ತಕ್ಕುದಂ ದೇವಿಯರೆ ಬಲ್ಲಿರೆಂದು ಬಿನ್ನವಿಸುವುದುಂ ಕಾದಂಬರಿ ಕಿಱಿದುಬೇಗಂ ತನ್ನೊಳೆ ಚಿಂತಿಸುತ್ತುಮೆಂತಾನುಂ ವಾರ್ತಾಹರರಂ ಬರವೇೞೆಂಬುದುಂ ಮೇಘನಾದಂ ತಂದು ಕಾಣಿಸೆ ಚಂದ್ರಾಪೀಡಚರಣಂಗಳ್ಗೆ ದೂರದೊಳೆ ಸರ್ವಾಂಗಾಲಿಂಗಿತಮಹೀತಳರಾಗಿ ಪೊಡವಟ್ಟು ಕುಮಾರನಂ ಕಾಣುತ್ತೆ ಕೌತುಕದಿಂ ಖಿನ್ನವದನರಾದ ವಾರ್ತಾಹರರಂ ನೀಡುಂ ನೋಡಿ ಕಾದಂಬರಿಯಿಂತೆಂದಳ್

ಇದು ಖೇದಪ್ರದಮಲ್ತು ವೃತ್ತಕಮಿದಾಶ್ಚರ್ಯಪ್ರದಂ ಮರ್ತ್ಯನೆಂ
ಬುದು ಬೇಡೀ ವಿಭು ದೇವತಾತ್ಮನಿದನೀ ವಕ್ತ್ರೇಂದು ಪೇೞುತ್ತುಮಿ
ರ್ದಪೆದಲ್ ಪೇೞ್ವುದು ಪೋಗಿ ನೀವಿದಱಿನೀಗಳ್ ಬೇಗವಪ್ಠೋದತ್ರೀ
ರದೊಳಿರ್ದಂ ನೃಪಚಂದ್ರನೆಂಬಿದನೆ ರಾಜೇಂದ್ರಂಗೆ ನಿರ್ವ್ಯಾಕುಳಂ ೫೫

ಎಂಬುದುಮವರ್ ಕೆಲವಾನುಂ ದಿವಸಂಗಳಿನುಜ್ಜೈನಿಯನೆಯ್ದಿ ವಿಲಾಸವತೀಮಹಾದೇವಿವೆರಸಿರ್ದ ತಾರಾಪೀಡದೇವಂಗೆ ತಾಮಱಿದ

ವಾರ್ತೆಯಂ ಬಿನ್ನವಿಸಲೊಡಂ ನಿರತಿಶಯಶೋಕಕರಮುಂ ದುಶ್ರವಮುಂ ವಿಸ್ಮಯೋತ್ಪಾದಕಮುಮತಿಕೌತುಕಜನಕಮುಮಪ್ಪ ವೈಶಂಪಾಯನನ ವೃತ್ತಾಂತಮಂ ತಾರಾಪೀಡದೇವಂ ಕೇಳ್ದು ಕೆಲದೊಳ್ ನಿರ್ವಿಶೇಷಾವಸ್ಥನಾಗಿರ್ದ ಶುಕನಾಸನ ಮೊಗಮಂ ನೋಡುತ್ತುಮಾ ಮಂತ್ರಿಮುಖ್ಯಂ ತದವಸ್ಥನಾಗಿಯುಂ ಸುಹೃದ್ದುಃಖಾಪನೋದನಾರ್ಥಂ ಸ್ವಸ್ಥನಂದದಿಂ ನರೇಂದ್ರನಿಂತೆಂದಂ

ಉದಯಿಕ್ಕುಂ ಪರಮೇಶ್ವರೇಚ್ಛೆಯೊಳೆ ಮೇಣ್ ಪ್ರಾಧಾನ್ಯದಿಂ ಮೇಣ್ ಸ್ವಕ
ರ್ಮದೆ ಮೇಣ್ ವಸ್ತುನಿಜಸ್ವಭಾವದೊಳೆ ಮೇಣ್ ವೈಚಿತ್ರ್ಯಮಂ ಕೂಡೆ ತಾ
ಳ್ದಿದ ಸಂಸಾರದೊಳೆಂದುಮಿಂತೆ ಸುಖದುಃಖಾದಿಪ್ರಸಂಗಕ್ಕೆ ಪು
ಟ್ಟಿದ ನಾನಾವಿಧಮಪ್ಪ ಭೂತನಿವಹಕ್ಕಾರಬ್ಧಕಾರ್ಯೋದಯಂ ೫೬

ತ್ರಿಜಗದ್ವಂದಿತನೆನಿಸಿ
ರ್ದ ಜನಾ ಜಮದಗ್ನಿಗಖಿಳಭುವನ ಪ್ರಭು ಪಂ
ಕಜನಾಭಂ ದಶರಥ ಭೂ
ಭುಜಂಗೆ ಸುತರಾದರೆಂಬುದರ ಕೇಳೆಮೆ ದಲ್ ೫೭

ಜನಿಯಿಸುವರಲ್ತೆ ದೇವರ್
ಮನುಜರ್ಗದಱಿಂದೆ ಸಂದೆಯಂಬಡಲೇನಾ
ಮನುಜರ್ಗೇಂ ಕಿಱಿಯನೆ ನೀಂ
ವನರುಹನಾಭಂಗೆ ಚಂದ್ರನೇಂ ಕಿಱುಕುಳನೆ ೫೮

ಪಡೆದಾ ಕಾದಂಬರೀದೇವಿಗೆ ವರನೆ ಭವನ್ನಂದನಂ ಶಾಶ್ವತೈಶ್ವ
ರ್ಯದ ಪೆಂಪಂ ಲೋಕಪಾಲತ್ವದ ಮಹಿಮೆಯನುತ್ಸಾಹದಿಂ ತಾಳ್ದಿ ತದ್ದೇ
ಹದಿನಾದಂ ಭಕ್ತಿಯಿಂ ನಿನ್ನಡಿಗೆಱಗಿದಪಂ ತಾನೆ ಚಂದ್ರಂ ದಲೀ ಯೆಂ
ದುದಱಿಂ ಸೈಪಾವುದಾ ಶಾಪಮೆ ನಮಗೆ ವರಂ ಶೋಕಮಂ ಮಾಣ್ಬುದೀಗಳ್ ೫೯

ಎಂದು ಶುಕನಾಸರ್ ತಿಳಿಯವೇೞೆ ತಾರಾಪೀಡನರೇಂದ್ರಂ ಶುಕನಾಸಂ ಬೆರಸು ವಿಲಾಸವತೀಮನೋರಮೆಯರೊಡನೆ ಗಮನಸಂವಿಧಾ

ನಮಂ ಮಾಡಿಯುದೆಲ್ಲಿಯುಂ ನಿಲ್ಲದೆ ಕೆಲದಿವಸಕ್ಕಿಟ್ಟೋದಮನೆಯ್ದು ಮೇಘನಾದಸಹಿತಂ ಬರುತಿರ್ದ ಚಂದ್ರಾಪೀಡಚರಣತಳನಿಬದ್ಧ ಜೀವಿತರಪ್ಪ ನಿಖಿಳರಾಜಪುತ್ರರಂ ಕಂಡು

ಎಂತುಟು ಮೇಘನಾದ ತೊಡಕಿಲ್ಲದೆ ಪೇಳ್ ಮಗನಿರ್ದದೊಂದು ವೃ
ತ್ತಾಂತಮನೆಂಬುದುಂ ಪ್ರತಿದಿನಂ ನೃಪಚಂದ್ರನ ದಿವ್ಯದೇಹದಿಂ
ಕಾಂತಿ ಪೊದಳ್ದು ಪರ್ವಿ ಗಗನಾಂತರಮಂ ಪುದಿದಿರ್ಪುದೀಗಳೇ
ನುಂ ತಡವಿಲ್ಲ ಸನ್ನಿಹಿತನಾದಪನಕ್ತೆ ಭವತ್ತನೂಭವಂ ೬೦

ಎಂದು ಮೇಘನಾದಂ ಬಿನ್ನಪಂಗೆಯ್ಯೆ ಸಮುಪಜಾತ ಪ್ರತ್ಯಾಶೆಯಾಗಿರ್ದ ವಿಲಾಸವತೀಮಹಾದೇವಿಗಿಂತೆಂದಂ

ಅಮೃತಾಂಶುಮೂರ್ತಿಯೆನಿಸಿ
ರ್ದ ಮಗನನೀಕ್ಷಿಸಿ ಕೃತಾರ್ಥರಪ್ಪಂ ನಡೆ ಪೋ
ಪಮೆನುತ್ತೆ ಮಹಾಶ್ವೇತಾ
ಶ್ರಮಕ್ಕೆ ನಡೆತಂದನಂದು ತಾರಾಪೀಡಂ ೬೧

ಅನ್ನೆಗಮಿತ್ತ ಚಂದ್ರಾಪೀಡನ ಗುರುಜನದ ಬರವಂ ಮಹಾಶ್ವೇತೆ ಕೇಳ್ದು ಭೋಂಕನೆ ಕಣ್ಬನಿಗಳಂ ಸೂಸಿ

ಕರಗಿಸುತಿರ್ದಪೆಯೆನ್ನಂ
ಮರಣಮನೆನಗೇಕೆ ಮಾಡೆ ವಿಧಿಯೆನುತುಂ ನಿ
ತ್ತರಿಸದೆ ಲಜ್ಜಿಸಿ ಪೊಕ್ಕಳ್
ಪರಿದು ಮಹಾಶ್ವೇತೆ ನಿಜಗುಹಾಭ್ಯಂತರಮಂ ೬೨

ಗಂಧರ್ವರಾಜನಂದನೆಯುಂ ಮೋಹಾಂಧಕಾರಂ ಕವಿಯೆ ಚಂದ್ರಮೂರ್ತಿಯಪ್ಪ ಚಂದ್ರಾಪೀಡನ ಪಕ್ಕದೊಳ್ ಸಖೀಜನಹಸ್ತಾವಲಂಬಿತಶರೀರೆಯಾಗಿ ಮೂರ್ಛೆವೋಗಿರ್ದಳಿತ್ತ ಶುಕನಾಸಾವಲಂಬಿತಶರೀರನಾಗಿ ತಾರಾಪೀಡಂ ತದಾಶ್ರಮಮಂ ಪುಗುವುದುಮಲ್ಲಿ ತನ್ನ ಮಗನೆತ್ತವೋದನೆಂದು ನೀಡುಂ ನೋಡುತುಂ ಮನೋರಮಾವಲಂಬಿತಶರೀರೆಯಾಗಿ ವಿಲಾಸವತೀಮಹಾದೇವಿ ಪೊಕ್ಕು ಸಹಜಮಪ್ಪ ಕಾಂತಿಯೊಳೊಪ್ಪಂಬಡೆದು ಲೆಪ್ಪದಂತಿರ್ದ ಮಗನಂ ಕಂಡು

ಮಱುಮಾತಂ ಕುಡು ವತ್ಸ ನಿನ್ನ ವಿನಯಂ ಪೇೞೆತ್ತವೋಯಿತ್ತಗಳೀ
ತೆಱನೇಕಾದುದೊ ಕಂದ ಕಾಲ್ವಿಡಿದಪೆಂ ನಿಮ್ಮಯ್ಯನೀ ಬಂದನ
ಟ್ಟಱಿನೊಳ್ ನೀನಿದಿರೆಟ್ಟು ಕಾಲ್ಗೆಱಗು ಚಂದ್ರಾಪೀಡ ನೀಂ ಭಕ್ತಿಯಂ
ಮಱೆದಯ್ ನಿನ್ನಯ ಕೂರ್ಮೆಯೆಲ್ಲಿತೆನುತುಂ ಬಾಯ್ವಿಟ್ಟು
ಪುಯ್ಯಲ್ಚಿದಳ್ ೬೩

ಬಿಡದಾಲಿಂಗಿಸಿ ಪುತ್ರನಂ ಪದೆದು ಮೂರ್ಧಘ್ರಾಣಮಂ ಮಾಡಿ ಕ
ನ್ನಡಿಯಂತಿರ್ದ ಕದಂಪನೊತ್ತಿ ಕಡುಪಿಂದಿನ್ನೇವೆನಾನೆಂದು ಕ್ರೋ
ಸಡಿಯಂ ನೆತ್ತಿಯೊಳಿಟ್ಟುಕೊಂಡು ಪಿರಿದೊಂದಾಕ್ರಂದದಿಂ ಗಂಟಲೊ
ದೊಡೆವಂತಾಗಱ್ತಿರ್ದಳಿರ್ಪಿನೆಗವೆಟ್ಟಿಂದಂ ಧರಾಧೀಶ್ವರಂ ೬೪

ಅಂತು ಬಂಧಂತರಿತ ನಿಜಪೀಡನಪ್ಪ ತಾರಾಪೀಡಂ ಚಂದ್ರಾಪೀಡನಂ ಪ್ರಜಾಪೀಡಾಪಹರಣಕ್ಷಮಂಗಳಪ್ಪ ಬಾಹುದ್ವಯದಿನಪ್ಪಿ ವಿಲಾಸವತೀಮಹಾದೇವಿಗಿಂತೆಂದಂ

ಬಸಿಱೊಳ್ ಬಂದಂ ನಮ್ಮೊಂ
ದು ಸುಕೃತದಿಂ ದೇವತಾತ್ಮನೀ ಮಗನಂ ಮಾ
ನಿಸನೆಂದು ದೇವಿ ನೀಂ ಭಾ
ವಿಸಿ ಶೋಕಮನೇನನಪ್ಪುಕಯ್ಯದಿರೀಗಳ್ ೬೫

ಮತ್ತಂ ವೈಶಂಪಾಯನ ವಿಯೋಗದಿಂ ವಿಹ್ವಲತರಾದ ಮನೋರಮೆಯುಮಂ ಶುಕನಾಸನುಮಂ ನಾವೀಗಳಾವ ತೆಱದಿಂ ಸಂತೈಸಲ್ವೇಟ್ಪುದದಲ್ಲದೆಯುಂ ತ್ವದಾತ್ಮಜಾತಜೀವಿತ ಪ್ರಲಬ್ಧಾಭ್ಯುದಯ ಮಹೋತ್ಸವೆಯಪ್ಪ ಗಂಧರ್ವರಾಜತನೂಜೆ

ನಿನ್ನಯ ಸೊಸೆ ಕಾದಂಬರಿ
ಯುಂ ನಾಡೆಯುಮಾದ ಮನ್ಯುವಿಂದಂ ಮೂರ್ಛಾ
ಪನ್ನೆಯೆನಿಸಿರ್ಪಳಿಟ್ಟಱಿ
ಸನ್ನೆವರಂ ದೇವಿ ತೊಡೆಯ ಮೇಲಿಟ್ಟೀಗಳ್ ೬೬

ಎಂದು ತಾರಾಪೀಡಂ ನುಡಿಯೆ

ಅತಿಸಂಭ್ರಮದಿಂದಂ ಸತಿ
ಸುತನಂ ಬಿಟ್ಟಿಲ್ಲಿದಳ್ ಮದನ್ಯೆಯ ಜೀವ
ಪ್ರತಿಲಂಭನಹೇತುವೆನು
ತ್ತತಿಸಂಮೋಹದೊಳೆ ಹೃದಯಮಂ ತಾನೆಟಿವಿ ೭೭

ಮಗಳೆ ತೆಱೆ ನೀಂ ಕಣ್ಣಂ ನೀನಿಲ್ಲದನ್ನೆಗವಾಸೆಯಿ
ಲ್ಲ ಗಡ ಬೆಟೆಯಂ ಚಂದ್ರಾಪೀಡಾಂಕನಂ ಪಿಡಿದಟ್ಕಱಿಂ
ದಗಲದಿನಿತುಂ ಕಾಲಂ ಪೊರ್ದಿರ್ದೆ ನೀನಮೃತಾಂಗಿಯಯ್
ಮಗುಟ್ದುಮದಱಿಂ ಕಂಡೆಂ ರಾಜೇಂದ್ರಚಂದ್ರನ ವಕ್ತ್ರಮಂ ೭೮

ಎಂದು ವಿಲಾಸವತೀಮಹಾದೇವಿ ನುಡಿಯೆ ಚಂದ್ರಾಪೀಡ ನಾಮ ಗ್ರಹಣದೊಳಂ ಪ್ರಿಯತಮಸ್ಪರ್ಶನಿರ್ವಿಶೇಷಮಪ್ಪ ಕರಸ್ಪರ್ಶದೊಳಂ ಮೂರ್ಛೆಯಿಂದೆಟ್ಚತ್ತು ನೋಡಿ ನಮ್ರಮುಖಿಯಾದ ಕಾದಂಬರಿಯಂ ಮದಲೇಖೆ ಮೆಲ್ಲನೆತ್ತಿ

ಪ್ರತಿಪತ್ತಿಮೂಢೆಯೆನಿಸಿ
ರ್ದ ತರುಣಿಯಂ ಗುರುಜನಕ್ಕೆ ಪೊಡೆವಡಿಪುದುಮಾ
ಸತಿಯಂ ಪರಸಿದರಾಯು
ಷ್ಮತಿ ನೀಂ ನಿಟ್ಟೆಯ್ಪಿಯಾಗೆನುತ್ತವರಾಗಳ್ ೭೯

ಅಂತು ಪರಕೆಯಂ ಪರಸಿ ತಾರಾಪೀಡನರೇಂದ್ರಂ ಕಿಱಿದುಬೇಗಮಿರ್ದಲ್ಲಿಂ ಪೊಱಮಟ್ಟು ಮುನ್ನೆ ಕಲ್ಪಿತಮಾದ ನಿವಾಸಕ್ಕೆ ಪೋಗಿ ಪೆಱತೊಂದಾಶ್ರಮದೊಳೆಸೆವ ಶಿಲಾತಲಸನಾಥಮಪ್ಪ ತರುಲತಾಮಂಟಪದೊಳ್ ಕುಳ್ಳಿರ್ದು ಸಮದುಃಖಿಗಳಪ್ಪ ಮಂತ್ರಿಶುಕನಾಸನುಮನಖಿಲನಿಜಾನುಗತರಾಜಚಕ್ರಮುಮಂ ಕರೆದವರೆಲ್ಲರುಮನಿಂತೆಂದಂ

ಇದು ಶೋಕೋದ್ರೇಕದಿಂದಂ ನುಡಿದ ನುಡಿಯೆನಲ್ವೇಡ ಮುಚ್ಚಿತ್ತ
ದೊಳ್ ತಾ
ಳ್ದುದಂ ನಾನಾಡಿದಪ್ಪೆಂ ವಧುವೆರಸಿದ ಪುತ್ರಂಗೆ ಮದ್ರಾಜ್ಯಭಾರಾ
ಸ್ಪದಮಂ ಕೊಟ್ಟೊಂದು ಋಷ್ಯಾಶ್ರಮದೊಳೆ ತನುವಂ ಮುಪ್ಪಿನೊಳ್
ತೇದು ಮೋಕ್ಷಾ
ಸ್ಪದಮಂ ಕಯ್ಕೊಳ್ವೆನನೆಂದಿರೆ ವಿಧಿವಶದಿಂದಿಂತುಟೊಂದಾದುದೀಗಳ್ ೮೦

ಆರಿರ್ದೊಡದೇಂ ರಾಜ್ಯದ
ಭಾರಂ ನಿಮ್ಮಿಂದವಪ್ಪ ಕಯ್ಯುದು ನೀವಾ
ಭಾರಮನಾಂ ಸುಖರಹಿತಶ
ರೀರದೆ ಪರಲೋಕಸುಖಮನಿನ್ ಸಾಧಿಸುವೆಂ ೭೧

ಎಂಬುದುಮಾ ಸಕಲರಾಜಲೋಕಂ

ಇದನೇನೆಂದಪ್ಪಿರೆಟ್ಟಿತ್ತಖಿಲಭುವನಸಾಮ್ರಾಜ್ಯಮಂ ತಾನೆ ದಲ್ ತಾಳ್ದಿದಪಂ ರಾಜೇಂದ್ರಚಂದ್ರಂ ಪೆಱಗಿರ್ದು ತಳೆಯಲ್ಕಕ್ಕುಮೇ ದೇವ ನೀವಾದುದನಾವಾದಪ್ಪೆವೆಂದೆಲ್ಲರುಮೆನೆ ಪರಿವಾರಾನ್ವಿತಂ ರಾಜ್ಯದೊಳ್ ನಿಲ್ಲದೆ ನಾವಿರ್ಪಂತಿರಿರ್ದಂ ಮುನಿವಿನುತತಪೋರಾಜ್ಯದೊಳ್ ಸಾರ್ವಭೌಮಂ ೭೨

೮. ಚಂದ್ರಾಪೀಡ ಕಾದಂಬರಿಯರ ಪುನಸ್ಸಮಾಗಮ

ಎಂದಾ ಹಾರೀತನಾಮಪ್ರಮುಖಮುನಿಸಮೂಹಕ್ಕೆ ಜಾಬಾಲಿಗಳ್ ಪೇ
ೞ್ವಂದುಂ ಮಂದಸ್ಮಿತಾಸ್ಯರ್ ಕಥೆಯ ರಸದೊಳೋಲಾಡುತುಂ
[ಪೊಡೆ ನಿತಾ
ಯ್ತೆಂದುಂ ಮಚ್ಚಿತ್ತದೊಳ್ ಭಾವಿಸದೆ ಮಱೆದು ಪೇೞುತ್ತುಮಿರ್ದರ್ಪ್ರಮೇ
[ಪೇ
ೞೆಂದೆನ್ನಂ ನೋಡಿ ಕೇಳ್ ಶೂದ್ರಕನೃಪ ಕೆಲದೊಳ್ ಕೇಳ್ವವರ್ಗೆಂದ
ರಾಗಳ್ ೧

ಆವೊನ್ ಶ್ವೇತಕೇತುವ್ರತಿಗೆ ಸುತನೆನಲ್ ಸಂದು ಕಾಮಿತ್ವದಿಂ ದೇವತ್ವಂಗೆಟ್ಟು ಮರ್ತ್ಯೋದ್ಭವನೆನೆ ಶುಕನಾಸಂಗೆ ಪುಟ್ಟಿರ್ದನೋ ಆ ವೈಶಂಪಾಯನಂ ಮಹಾಶ್ವೇತಾವಾಕ್ಸಾಮರ್ಥ್ಯದಿಂ ಗಿಳಿಯ ಬಸಿಱೊಳೀಯಂದದಿಂ ಬಂದನತ್ತೇ

ಅಂತು ಮುನಿ ಪೇೞಲೆೞ್ಚ
ತ್ತಂತೆವೊಲಾನಾಗೆ ಬಾಲ್ಯದೊಳವೆನ್ನಯ ಜ
ನ್ಮಾಂತರದೊಳಾದ ವಿದ್ಯಾ
ಸಂತತಿ ಜಿಹ್ವಾಗ್ರದಲ್ಲಿ ನೆಲಸಿದ್ದುದಾಗಳ್

ಅದಲ್ಲದೆಯುಂ ವಿಜ್ಞಾತಸಕಲಾನ್ಯಜನ್ಮವೃತ್ತಾಂತನೆನ್ನಾಗಿ ತಾಯಂ ತಂದೆಯಂ ತಾರಾಪೀಡದೇವನುಮಂ ವಿಲಾಸವತೀಮಹಾದೇವಿಯುಮಂ ಚಂದ್ರಾಪೀಡದೇವನುಮಂ ಮುನ್ನಿನ್ನ ಕೆಳೆಯನಪ್ಪ ಕಪಿಂಜಲನುಮಂ ನೆನೆದೆಂ ಮಹಾಶ್ವೇತೆಯೊಳಾದ ಕೂರ್ಮೆ ನೂರ್ಮಡಿಸೆ ನೆನೆನೆನೆದೆನ್ನ ಕಾಮಪರತೆಗಾಂ ನೆಲದೊಳ್ ತಲೆಯಂ ಕುತ್ತಿ ಕಿಱಿದುಬೇಗಮಿರ್ದು ನಿಜಾವಿನಯಶ್ರವಣಲಜ್ಜೆಯಿಂ ಕರಗುವಂತೆಯುಂ ಪಾತಾಳಮಂ ಪುಗುವಂತೆಯುಮಾಗಿರ್ತೆಂದೆನದೆಂತೆನೆ

ಮುನ್ನಿನ ಭವಮಂ ಬಂಧುಗ
ಳಂ ನೆಱೆ ತಿಳಿವಱಿವಮಾಯ್ತು ಭವದೀಯಪದಾ
ಸನ್ನತೆಯಿಂದಾದೊಡಮೇಂ
ಬಿನ್ನವಿಸಿದಪೆಂ ಮುನೀಂದ್ರ ನಾಣ್ಚದೆ ಮತ್ತಂ ೨

ಜಾತಿಸ್ಮರತೆ ವಿರಕ್ತಿಗೆ
ಹೇತುವೆನುತ್ತಿರ್ಪರದುವೆ ಪುಸಿಯಾಗಿ ಮಹಾ
ಶ್ವೇತೆಯೊಳದೊಂದನುರಾ
ಗಾತಿಶಯಂ ಪೆರ್ಚಿದಪ್ಪುದು ಮುನ್ನಿಂದೀಗಳ್ ೪

ಅದಲ್ಲದೆಯುಂ ಮದ್ವಿಪತ್ತಿಶ್ರವಣಮಾತ್ರದಿಂ ಸ್ಫುಟಿತಹೃದಯನಾದ ಚಂದ್ರಾಪೀಡನೆಲ್ಲಿ ಪುಟ್ಟಿದನೆಂಬುದಂ ಬೆಸಸಲ್ವೇೞ್ಕುಮಾಗಂ ತಿರ್ಯಗ್ಜಾತಿಯಾದೊಡಮಾತನಂ ನೋಡಿ ಕೃತಾರ್ಥನಪ್ಪೆನೆಂಬುದುಮಾ ಮುನೀಂದ್ರನೆನ್ನಂ ಮುನ್ನಿನಂತೆ ನೋಡಿ ನಿಜಸ್ನೇಹವಚನದಿನೆನ್ನನಿಂತೆಂದಂ

ಮಱೆದಯ್ ತರಳತೆಯಿಂದೀ
ತೆಱನಾದುದನೆಲೆ ದುರಾತ್ಮ ಪಾಱಲ್ ಮತ್ತಂ
ಮಱುಗುತ್ತಿರ್ದಪೆಯಿನಿಸಂ
ಗಱಿ ಮೂಡಿದ ಬೞಿಕೆ ನೀನೆ ದಲ್ ಪೋದಪ್ಪಯ್ ೫

ಎಂದು ಜಾಬಾಲಿಗಳ್ ನುಡಿದು

ತವುತಿರ್ದತ್ತಲೆ ತಾರಕಾಸಮುದಯಮಿದೊ ಪಂಪಾಸರಸೀರಸುಪ್ತೋತ್ಥವಿಹಂಗಧ್ವಾನವೀ ಪೊಣ್ಮುವುದು ವನಲತಾಳಿಪ್ರಸೂನಾವಳೀಗಂಧವಹಂ ಮೆಲ್ಪಿಂದೆ ದಲ್ ಮತ್ತಿರದೆಸೆವ ನಿಶಾಸಂಘಸಂಮರ್ದದೊಂದುತ್ಸವದಿಂ ತಣ್ಣಂಪನೀ ಬೀಱಿದಪುದು ಬೆಳಗಾಯ್ತೇನನಿನ್ ಪೇೞ್ವೆನೀಗಳ್

ಎಂದು

ನಿಷ್ಠಾಪರಂ ಪ್ರಭಾತಾ
ನುಷ್ಠಾನನಿಮಿತ್ತಮೆೞ್ದನಲ್ಲಿಂದಂ ತ
ದ್ಗೋಷ್ಠಿಯನುೞಿದು ಮುನೀಂದ್ರಗ
ರಿಷ್ಠಂ ಜಾಬಾಲಿನಾಮಧೇಯ ಮುನೀಂದ್ರಂ ೬

ಸಕಲಮುನಿವ್ರಜಮಿರೆ ತಾ
ನೆ ಕರುಣದಿಂ ಕೊಂಡುಪೋಗಿ ಮೆಲ್ಲನೆ ಹಾರೀ
ತಕುಮಾರಂ ತನ್ನಯ ಪ
ರ್ಣಕುಟೀರದ ಶಯನತಳದೊಳಿರಿಸಿದನೆನ್ನಂ ೭

ಅನ್ನೆಗಂ ಪ್ರಾಭಾತಿಕಕ್ರಿಯಾನಿಮಿತ್ತಂ ಹಾರೀತಂ ಪೋದನಿತ್ತ ಸಕಲ ಕಾರ್ಯಾಕ್ಷಮಮಪ್ಪ ತಿರ್ಯಗ್ಜಾತಿಯೊಳ್ ಬಿದ್ದು ಚಿಂತಾಪೀಡಿತನಾಗಿ

ಪಡೆಯಲ್ ಬಾರದು ಮುನ್ನನಂತಭವದೊಳ್ ಮಾನುಷ್ಯಮಂ ಮತ್ತೆಯುಂ
ಪಡೆಯಲ್ ಬರ್ಕುಮೆ ವಿಪ್ರಜಾತಿಯನದಂ ಪೆತ್ತುಂ ಮುನೀಂದ್ರತ್ವಮಂ
ಪಡೆಯಲ್ ಬರ್ಕುಮೆ ಮತ್ತಮಾರ್ಗೆ ಪಡೆಯಲ್ ದೇವತ್ವಮಂ ನೋಡದಂ
ಪಡೆದಾನಿಂತಿರೆ ಶಾಪದಿಂದ ಕಟ್ಟ ತಿರ್ಯಗ್ಜಾತಿಯೊಳ್ ಬಿದ್ದನೇ ೯

ಶೋಕಶತಾಕುಲಮುಂ ದುಃ
ಖಾಕರಮುಮೆನಿಪ್ಪ ಮಾಯ್ದ ಮತ್ಕಾಯಮನಿ
ನ್ನೇಕೆ ಗಡ ಪಿಡಿದಪೆಂ ನಿ
ರ್ವ್ಯಾಕುಲದಿಂ ಬಿಡುವೆನೆಂದು ಚಿಂತಿಸುವಿನೆಗಂ ೧೦

ಚಿಂತಾಕುಲಿತನನಾಱಿಸು
ವಂತಿರೆ ಮೊಗಮಲರ್ದು ನಸುನಗುತ್ತುಂ ಹಾರೀ
ತಂ ತೊಟ್ಟನೆ ಪರ್ಣಕುಟೀ
ರಾಂತರಮಂ ಪೊಕ್ಕು ಪದಪಿನಿಂದಿಂತೆಂದಂ ೧೧

ಎಲೆ ವೈಶಂಪಾಯನ ತ
ನ್ನೊಲವಿಂದಂ ಬಂದನೀಗಳಱಸುತ್ತೆ ಕಪಿಂ
ಜಲನಿಲ್ಲಿಗೆ ನಿನ್ನಂ ಪಂ
ಬಲಿಸುತ್ತುಂ ಶ್ವೇತಕೇತುಯತಿಗಳ ಕೆಲದಿಂ ೧೨

ಎಂಬುದುಮಾಕ್ಷಣದೊಳುತ್ಪನ್ನಪಕ್ಷನಾದಂತೆಗೆಯ್ದು ನೋಡಲುತ್ಕಂಠಿತನಾಗಿ ಮದ್ವಯಸ್ಯನೆಲ್ಲಿರ್ದನಾವೆಡೆಯೆನೆ ಹಾರೀತಂ ಮತ್ಪಿತಪಾದಮೂಲದಲ್ಲಿಗೆ ವಂದನೆಂಬುದುಮತ್ತಲೆ ಕಣ್ಣಾಗಿರೆ

ಬಱಿಲೆ ಪೆಗ್ಗಲಿಂ ಚಂಚದ್ವಲ್ಕಲಾಂಚಲರ ಪೆಗಲಿಂಗೆ ಬಂ
ದಱಿಲೆ ಜಡೆಗಳ್ ಪುಯ್ಯಿಂ ಯಜ್ಞೋಪವೀತಮದೊಯ್ಯನಾ
ದಿಱಿಯೆ ಪರಿಪಟ್ಟೋರಂತಾಕಾಶಮಾರ್ಗದೆ ಬಂದು ಪಾ
ಡಱಿದ ಸಖನಂ ಮುಂದಾಂ ಕಂಡೆಂ ಕಪಿಂಜಲನಂ ನೃಪಾ ೧೩

ಅಂತು ಕಂಡು ಕಣ್ಣನೀರ್ಗಳ್ತುಣ್ಕೆ ಭೋಂಕನೆದಿರೇೞಲುಜ್ಜುಗಂಗೆಯ್ವೆನ್ನ ಕೆಳೆಯನಪ್ಪ ಕಪಿಂಜಲನಿಂತೆಂದಂ

ದೊರೆಕೊಂಡತ್ತು ಭವದ್ವ್ಯಯಾಂತರದೊಳೀಗಳ್ ಕಾಣ್ಕೆ ಕಂಡೇನೊ ಚೆ
ಚ್ಚರಮೆಟ್ದಪ್ಪುವ ಕುಳ್ಳಿರಲ್ ಸುಡುವ ನಿನ್ನೀ ಸ್ವೇದವಟ್ಟಂಗಮಂ
ಕರದಿಂದೆತ್ತಿ ಬೞಲ್ಕೆಯಂ ಕಳೆವುದಕಾರ್ಗಂ ನೋಂತೆನಿಲ್ಲಣ್ಣ ನೀಂ
ಬರೆಯುಂ ಪಾಪಿಯೆನ್ನಿನ್ನೇವೆನೆಂದು ಪಿರಿದುಂ ಶೋಕಾಂಧನಾಗಿರ್ಪಿನಂ ೧೪

ಎತ್ತಿ ಕರಂಗಳಿಂದೆ ನಿಜಬಾಷ್ಪನಿರುದ್ಧಮೆನಿಪ್ಪ ಕಣ್ಗಳಿಂ
ದೊತ್ತಿ ಶರೀರದೊಳ್ ಪುಗಿಸಿಕೊಂಡಪೆನೆಂಬಿನವಾದಮಪ್ಪುತುಂ
ಚಿತ್ತದಲಂಪಿನಿಂ ಕಿಱುಳನಂತಿರಲೆನ್ನಯ ವಾಯ್ದ ಕಾಲ್ಗಳಂ
ನೆತ್ತಿಯೊಳಿಟ್ಟುಕೊಂಡೞುತುಮಿರ್ದನೞಲ್ದೆನಸುಂ ಕಪಿಂಜಲಂ ೧೫

ಅಂತೞುತಿರ್ದನಂ ವಾಙ್ಮಾತ್ರಪ್ರತೀಕಾರನೆನಿಂತೆಂದಂ

ಮೊದಲೊಳ್ ಪಱಿದಯ್ ಸಂಸಾ
ರದ ತೊಡರಂ ನಿಂದೆ ಮುಕ್ತಿಪದದೊಳ್ ನಿನಗಂ
ತಿದು ತಕ್ಕುದೆ ಮೂಢರ ಮಾ
ರ್ಗದಿನೆನಗೆ ಜಡಂಗಿದೇಕೆ ಶೋಕಂಗೆಯ್ವಯ್ ೧೬

ಜನಕಂ ಕುಶಲದಿನಿರ್ದನೆ
ನೆನೆವನೆ ಮಾಯ್ದ್ವೆನ್ನ ವಾರ್ತೆಗೇಳ್ದೆನೆಂದಂ
ಮನದೊಳ್ ಖೇದಿಸಿದನೆ ಮುನಿ
ದನೆ ಪೇೞೆಂದೆನ್ನ ಕೆಳೆಯನಱ ಬೆಸಗೊಂಡಂ ೧೭

ಅನ್ನೆಗಂ ಹಾರೀತಶಿಷ್ಯೋಪನೀತಪಲ್ಲವಾಸನದೊಳ್ ಕುಳ್ಳಿರ್ದು ತನ್ನ ತೊಡೆಯ ಮೇಲೆನ್ನನಿರಿಸಿ

ತಂದೆಗೆ ಕುಶಲಂ ನಮಗಾ
ದ್ವಂದಮುಮಱ ದಿವ್ಯಚಕ್ಷುವೆಱದಿರ್ದಂ ನೀ
ನೊಂದರ್ಕಂ ಚಿಂತಿಸಬೇ
ಡೆಂದು ಕಪಿಂಜಲಕನೆನಗೆ ಮಗುಟ್ದುಂ ನುಡಿದಱ ೧೮

ಆಂ ತುರಂಗತ್ವಮಂ ಪತ್ತುವಿಟ್ಟು ತಂದೆಯಲ್ಲಿಗೆ ವಂದೆನನ್ನೆಗಮನತಿ ದೂರದೊಳ್ ಬಾಷ್ಪದೃಷ್ಟಿಯುಂ ವಿಷಣ್ಣದೀನವದನನುಂ ಸಭಯನುಮಾಗಿ ಪೊರ್ದ್ದಲ್ಲೆನ್ನಂ ಕಂಡು

ಬಿಡು ನೀನಂಜಿಕೆಯಂ ಕಪಿಂಜಲಕ ದೋಷಂ ನಿನ್ನದಲ್ತೇಕೆ ಪೇಳ್
ಸೆಡೆವಯ್ ದೋಷಮಿದೆನ್ನದೆಂದು ಮಱುಗುತ್ತಿರ್ದುಂ ಮಗಂ ಪುಟ್ಟಿದಾ
ಗಡೆ ಮಾಡಲ್ ಬಗೆದಂದೆನಿಲ್ಲನಿಸುವಾಯುಷ್ಕಾಮಮಂ ಯಜ್ಞಮಂ
ತಡವಂ ಮಾಡಿದೆನೀಗಳಿಂದೆ ಬಗೆ ನೀಂ ತತ್ಕಾರ್ಯಸಂಸಿದ್ಧಿಯಂ ೧೯

ಇದಱಿಂ ನೀನೊಂದುಮಂ ಚಿಂತಿಸದಿರೆಂದು ತಂದೆ ಬೆಸಸೆ ಭಯಮಂ ಪತ್ತುವಿಟ್ಟು

ಎನಗೆ ಪ್ರಸಾದಿಪೊಡೆ ಸಖಂ
ಜನಿಯಿಸಿದೆಡೆಯತ್ತಲೆಯ್ದುವಂತೆನಗಾಜ್ಞಾ
ಪನಮೀವುದೊಲವಿನಿಂ ನೀ
ಮೆನೆ ಜನಕಂ ಕೇಳ್ದು ಮುಗುಳ್ದು ಬೆಸಸಿದನಾಗಳ್ ೨೦

ಮಗನೆ ಶುಕಜಾತಿಯೊಳಗಿವ
ನೊಗೆದಿರ್ದಪನವನನಱಿಯಲಾಱಿಯ್ ನಿನ್ನಂ
ಮಿಗೆ ತಿಳಿಯಲಾಱನವನುಂ
ತೆಗೆಯುದಱಿಂ ಗಮನಚಿಂತೆಯಂ ನೀನೀಗಳ್ ೨೧

ಎಂದು ನುಡಿದಿರ್ದೊಂದಿನ ಪೊಟಱೆಯೊಳಯ್ಯನೆನ್ನಂ ಕರೆದು

ಕೇಳೆಲೆ ನೀಂ ಕಪಿಂಜಲ ಭವತ್ಸುಹೃದಂ ವಿಧಿಯೋಗದಿಂದೆ ಜಾ
ಬಾಲಿಮುನೀಂದ್ರನಾಶ್ರಮವನಾ ಶುಕದೇಹದೆ ಸೇರ್ದನೆಂದು ಮೇಣ್
ಮೇಳಿಸಿತಯ್ ಸಮಂತು ಜನನಾಂತರಸಂಸ್ಮರಣಂ ದಲತ್ತನೊಳ್
ತಾಳುತನೂನಹರ್ಷಮನೆ ಪೋಗವನಂ ನಡೆ ನೋಡಲೊಪ್ಪದಿಂ ೨೨

ಭರದಿಂದಂ ಸಾರ್ದು ಪುಣ್ಯಾಶ್ರಮವನಿರದೆ ಮತ್ಸ್ವಸ್ತಿವಾದಂಗಳಂ ಬಿ
ತ್ತರಿಸುತ್ತುಂ ದೀರ್ಘಕಾಲಂ ಬರ್ದುಕೆ ಪ ಬಗೆಯಿಂದೀಗಳಾಂ ಮಾಡುವಾಯು
ಷ್ಕರಯಜ್ಞಂ ಪೂರ್ಣಮಪ್ಪನ್ನೆವರಮೊಸೆದು ಜಾಬಾಲಿ ಸಾಮೀಪ್ಯದೊಳ್ ಸಾ
ದರಮಿರ್ ಬೇಱೊಂದನಾಲೋಚಿಸದಿರೆನುತೆ ಪೇಳ್ ನೀನವಂಗೆಂದರಾಗಳ್ ೨೩

ಇದಲ್ಲದೆ ಭವದೀಯವಿಯೋಗದುಃಖ ಸಮಾಕುಲಿತೆಯಾಗಿರ್ಪ ನಿನ್ನ ಜನನಿಯೆನಿಸಿದ ಲಕ್ಷ್ಮಿಯುಮಾಕಜ್ಜದೊಳ್ ಪರಿಚಾರಿಣಿಯಾಗಿರ್ದಪಳಾಕೆಯುಮೆನ್ನಂ ಮುದ್ದಿಸಿ ಜನಕನೊರೆದುದನೆ ಮಗುಳ್ದು ಮಗುಳ್ದು ಬೆಸಸಿದಳ್.

ಇಂತೊರೆದು ಮೃದುಶಿರೀಷಸು
ಮಾಂತದವೋಲ್ ಸೂಕ್ಷ್ಮಮೆನಿಪ ತುಪ್ಪುಳತತಿಯಿಂ
ದಂತುರವಾದೆನ್ನಂಗಮ
ನಂತರಿಸದೆ ಕರದಿನೆಟ್ಟವಿದಂ ಮನದಟಲಿಂ ೨೪

ಆಗಳಾತನ ಮನದ ಸಂತಾಪಮನಱಿದಾನುಂ ದುಃಖಿತಹೃದಯನಾಗಿ ಮಿತ್ರನಪ್ಪ ಕಪಿಂಜಲ ನೀಂ ನಿರ್ಭಾಗ್ಯನಾದೆನಗೋಸುಗಂ ಕುದುರೆವರಿಜಂ ತಳೆದು ಪರಾಧೀನನಾಗಿ ಪಲಕೋಟಲೆಗಳನನುಭವಿಸಿದೆ ಸೋಮಪಾನೋಚಿತಮಪ್ಪ ಮೊಗದೊಳ್ ನೊರೆವೆರೆದ ನೆತ್ತರುಗುವ ಬೆಟ್ಟಿತಪ್ಪ ಕಡಿಯಾಣದೇರ್ಗಳುಮಂ ಪೂಗೊಯ್ವ ಪದದೊಳ್ ಮೇಲೆ ಕಡೆವಳವಳ್ಳಿಯ ಸೋಂಕಿಂಗಂ ಬಟಲ್ವೊಡಲೊಳ್ ಚಮ್ಮಟ್ಟಿಗೆಗುತ್ತುಗಳುಮಂ ಚೆಂದಳಿರ ಮೆಲ್ವಾಸಿನೊಳ್ ಮಲಂಗುತಿರ್ದ ನಿನ್ನೀ ಬೆನ್ನೆಲ್ವಿನೊಳಾವಗಂ ಬಿಗಿದಿರ್ದ ಪಲ್ಲಣದೊತ್ತಿನಿಂದೊಗೆದ ದಡ್ಡುಗಳುಮಂ ಜನ್ನಿವಾರಮಂ ತಳೆವೀ ಮೆಯ್ಯೊಳ್ ತೊವಲ್ವೊರಜೆಗಳ ಕಟ್ಟಿಂ ಪುಟ್ಟಿದ ಬೇನೆಯುಮನೆಂತು ಸೈರಿಸಿದೆಯೆಂದೀ ತೆಱದ ಪೂರ್ವವೃತ್ತಾಂತಾಲಾಪಂಗಳಿಂದಾಗಳಾಂ ತಿರ್ಯಗ್ಜಾತಿದುಃಖಮಂ ಮಱೆದು ಸಂತಸದಿನಿರ್ಪನ್ನೆಗಂ

ಗಗನಾಂಗಣಸೌಧಾಗ್ರದೊ
ಳೊಗುಮಿಗೆಯಿಂ ರಾಜಿಸಿರ್ಪ ಮಣಿಕಲಶಂಬೋಲ್
ಸೊಗಯಿಸಿದುದು ಮಿಗೆ ಮಧ್ಯಾ
ಹ್ನಗತಂ ರವಿಬಿಂಬಮಾಗಳಂಬರತಲದೊಳ್ ೨೫

ಆಗಳಾ ಹಾರೀತಂ ಕಪಿಂಜಲಂಗಮೆನಗಮುಚಿತಮಾದಾಹಾರದಿಂ ತಣಿಪಿದನಂತರಂ ಕಪಿಂಜಲಂ ಕಿಱಿದು ಪೊೞ್ತಂ ಕಳೆದೆನ್ನಂ ಕೂರ್ತು ಕೆಳೆಯನೆ ತಾತಂ ತಾನೆಸಗುವಾಯುಷ್ಕರಯಜ್ಞಂ ಪೂರ್ಣಮಪ್ಪನ್ನೆಗಮಾ

ಪೂಜ್ಯನಪ್ಪ ಜಾಬಾಲಿಯಾಶ್ರಮದಿಂ ಚಲಿಸದಿರಾನುಮಾ ಕರ್ಮದೊಳೆ ವ್ಯಗ್ರನಾಗಿರ್ಪನದಱಿಂದೀಗಳಾಂ ಪೋಪೆನೆಂದೆನ್ನಂ ತಪ್ಪೆಕ್ಕೆಸಿ ವಿಸ್ಮಯಾವಿಷ್ಟರಾದ ಮುನಿಕುಮಾರರನ್ನೆಮಿತ್ತಾನನರಾಗಿ ನೋಡುತ್ತಿರೆ ಗಗನಕ್ಕೊಗೆದದೃಶ್ಯನಾದಂ ಬಳಿಕ್ಕಂ ಹಾರೀತನೆನ್ನಂ ಕೆಲವಾನುಂ ದಿವಸಂ ಪೋಷಿಸುತ್ತಿರಲೆನಗೆ ಗಱಿಗಳೊಗೆದು ಪಾಱುವನಿತು ಬಲಮುದಯಿಸೆ ಮನದೊಳಿಂತಾಲೋಚಿಸಿದೆಂ

ಕ್ಷಮನಾತೆಂ ನಭದಲ್ಲಿ ಪಾಱಲಱೆ ಚಂದ್ರಾಪೀಡನುತ್ಪತ್ತಿಯಾ
ಕ್ರಮಮುಮಂ ಮೇಣ್ ತಿಳಿವಿಂಗೆ ಬಂದುದದಱಿಂದಾ ರಾಜಚ್ಚಂದ್ರಾಂಕನಂ
ನಿಮಿಷಂ ನೋಡದಿರಲ್ಕಮಾಱೆನಹಹಾ ಏನಾನುಮಕ್ಕೀಗಳಾಂ
ಗಮಿಪೆಂ ತಾನೆವನಲ್ಲಿಗೆಂದು ಮನದೊಳ್ ನಿಶ್ಚೈಸಿದೆಂ ಭೂಪತೀ

ಅಂತು ನಿಶ್ಚೈಸಿ ಬಳಿಕೊಂದು ದಿನಂ ಪ್ರಾತರ್ವಿಹಾರಾರ್ಥಮುತ್ತರಾಭಿಮುಖನಾಗಿ ಮೆಲ್ಲನೆ ಪೋಱಮಟ್ಟು ಬಳಲ್ಕೆಯಿಂ ಬಸವಟ್ಟಿದು ಪಾಱಲಳವಿಲ್ಲದೆ ಸಮೀಪದೊಳಿರ್ದ ಹರಿತಪಲ್ಲವಭರಾವನಮ್ರಮಾದೊಂದು ಜಂಬೂವೃಕ್ಷಮನಡರ್ದು ಕಿಱಿದು ಬೇಗಮಿರ್ದು ಚೇತರಿಸಿಕೊಂಡಲ್ಲಿಂ ತಳರ್ದು

ಕುಳಿರುತ್ತುಂ ಸುತ್ತಲುಂ ಕಟ್ಟಲಪ ತರುತಲಚ್ಛಾಯೆಯಂ ಸಾರ್ದು ಸಾರ್ದು
ತ್ಪಲಗಂಧೋದ್ಗಾರಿ ಪಂಪಾಸರದ ಸಲಿಲಮಂ ಪೀರ್ದು ಪೀರ್ದಬ್ಜಬೀಜಾ
ವಳಿಯಂ ತೀರದ್ರುಮಾಂದೋಳಿತ ಫಲತತಿಯಂ ಕಾರ್ದು ಕಾರ್ದೊಯ್ಯನಲ್ಲಿಂ
ತಳರ್ದೆಂ ಮತ್ತೊಂದು ತಣ್ಪಂ ತಳೆದ ತರುತಲಸ್ಕಂಧದೊಳ್ ನಿಂದೆನಾಗಳ್ ೭೭

ಅಂತು ನಿಂದು

ಇನ್ನುಮುಪರಾಹ್ಣದೊಳ್ ಕಿಱಿ
ದುಂ ನಡೆನೋಡುತ್ತೆ ಮನದೊಳಾಂ ಚಿಂತಿಸುತಿ
ರ್ಪನ್ನೆಗಮಧ್ವಶ್ರಮದಿಂ
ದಂ ನಡೆ ಮಾಯ್ದ್ದನಗೆ ನಿದ್ರೆ ಬಂದತ್ತಾಗಳ್ ೭೮

ಅಂತು ನಿದ್ರೆಗೆಯ್ದು ಕಿಱಿದುಬೇಗಕ್ಕೆಂತಾನುಮೆಚ್ಚತ್ತು ನೇಣ್ಬಲೆಯೊಳ್ ಸಿಲುಕಿರ್ದೆನ್ನಂ ಕಂಡೆದೆತ್ತಣಿಂ ಬಂದುದೆಂದು ನೋಟ್ಟಪ್ನೆಗಂ

ಕೇವಲ ಕಾಲಾಯಸಪರಮಾಣುಗಳಿಂ ನಿರ್ಮಿಸಿದಂತೆ ರೌದ್ರಾಕಾರನಾದ ಕಾಲಪುರುಷನೊರ್ವನಂ ಕಂಡು ಭಯಂಗೊಂಡು ಮೆಲ್ಲನಿಂತೆಂದೆಂ

ಎಲೆ ನೀನಾರೇಕಿಕ್ಕಿದೆ
ಬಲೆಯಂ ಪೇಟಣ್ಣ ನಿನಗೆ ಮಾಂಸದೊಳಾದೊಂ
ದೊಲವರಮೆ ಪಿಡಿದೊಡಲ್ಲಿಯೆ
ಕೊಲಲೊಲ್ಲದೆ ಮಾಣ್ದಿಯೇನಿದಚ್ಚರಿಯಲ್ತೇ ೧೯

ಕರುಣಿಸಿ ಬಿಡು ವಲ್ಲಭಜನ
ನಿರೀಕ್ಷಣೋತ್ಸುಕನೆನ್ನೆನಗೆ ಪೋಪೆಡೆ ದೂರಾಂ
ತರಮುಂತುಂ ಪ್ರಾಣಿಗಳೆ
ಲ್ಲರಾಸೆಯುಂ ಬಗೆವೊಡೊಂದೆ ನೀನಱಿಯದುದೇ ೨೦

ಎಂಬುದುಮೆನ್ನನಾತನಿಂತೆಂದನಾಂ ಕ್ರೂರಕರ್ಮಜಾತಿಯಪ್ಪ ಚಂಡಾಲನೆನ್ನಪ್ಪೆನಾದೊಡಂ ಮಾಂಸಲೋಭಚಿತ್ತದೊಳ್ ಪಿಡಿದೆನಲ್ಲಿಲ್ಲಿಗನತಿದೂರದೊಳ್ ಮಾತಂಗರ ಪಳ್ಳಿಯಿರ್ಪುದಲ್ಲಿಗೆನ್ನಾಳ್ದನೊಡೆಯನಾತನ ಮಗಳ್ ಕೌತುಕದಿಂ ನಿನ್ನಂ ಪಿಡಿದು ತರಲೆಂದು ಪಲಂಬರನಟ್ಟಿದೊಡೆನ್ನ ಪುಣ್ಯದಿಂ ನೀನೆನಗೆ ದೊರೆಕೊಂಡೆ ನಿನ್ನನೆನ್ನಾಳ್ದಿತಿಯಲ್ಲಿಗೊಪ್ಪಿಸುವೆನಲ್ಲಿಂ ಮೇಲೆ ಬಿಡುಗೆ ಬಿಡದಿರ್ಕೆ ನಿನಗಾಯೆಬ್ಬೆಯೊಡೆಯಳೆಂಬುದಂ ಪೇೞ್ವುದುಮದಂ ಕೇಳ್ದು ತೊಟ್ಟನೆ ನೆತ್ತಿಯಂ ಸಿಡಿಲ್ ಪೊಡೆದಂತಾಗೆ

ಪಡೆದಳನೇಕಲೋಕಜನವಂದಿತೆ ಲಕ್ಷ್ಮಿಯೆನಲ್ಕೆ ಮೋಹದಿಂ
ನಡಪಿದನೆನ್ನನಾ ತ್ರಿಭುವನಾರ್ಚಿತನಪ್ಪ ಮುನೀಂದ್ರನೆಂದುಮಿ
ರ್ಪೆಡೆ ಸುರಲೋಕಮಕ್ಕಟೆನಗೀ ಪೊಲೆವಟ್ಟಿನ ಮೇಲೆ ಬೀೞ್ವುದೊ
ದ್ದಡಸಿದುದಾವ ಪಾಪಮನೆ ಮಾಡಿದೆನಿಂತಿರೆ ಮಂದಭಾಗ್ಯನೆಂ ೨೧

ಎಲೆ ಪುಂಡರೀಕ ಬಿಡು ಜ
ನ್ಮಲೋಭಮಂ ನಿನ್ನ ಗೆಯ್ದ ಕರ್ಮಂ ವಿಹಿತಂ
ತಲೆಯೊಳನುಭವಿಸುಪೀ ಕೋ
ಟಲೆಯಿಂ ಗರ್ಭದೊಳೆ ಕರಗನೇಕೆಯೊ ಮೊದಲೊಳ್ ೨೨

ರಕ್ಷಿಸಲತ್ತಗದೆ ಜಗದಭೀಷ್ಟಫಲಪ್ರದೆ ತಾಯೆ ಲಕ್ಷ್ಮಿ ಪೇ
ಳಕ್ಷಮೆಯೆನ್ನದೆ ನಿನ್ನ ಮಗನಂ ಪರಿರಕ್ಷಿಪುದಿಲ್ಲ ವಿಶ್ವರ
ಕ್ಷಾಕ್ಷಮ ತಾತ ನೀಂ ಮುಗುಟ್ಟಿ ಬಂದು ಕಪಿಂಜಲ ಮಾಟ್ಪುದೆನ್ನ ಕ
ರ್ಮಕ್ಷಯಮಂ ಭವಾಂತರದೊಳಾದೊಡಮಕ್ಕುಮೆ ಮತ್ಸವಿಾಹಿತಂ ೩೩

ಎಂದಿವು ಮೊದಲಾಗಿ ಪಲವುಮಂ ಪ್ರಲಾಪಿಸುತ್ತುಮಾ ಮಾತಂಗನ
ನಿಂತೆಂದೆಂ

ಜಾತಿಸ್ಮರನಾದೆಂ ಮುನಿ
ಜಾತಿಯೆನ್ನಾಂ ಮುನ್ನ ಶಾಪದಿಂದಂ ತಿರ್ಯ
ಗ್ಜಾತಿಗೆ ಬಿಟ್ಟೆಂ ಬಿಡು ದುಃ
ಖಾತುರನೆಂ ನಿನಗೆ ಪುಣ್ಯಮಕ್ಕುಮಗಣ್ಯಂ ೩೪

ಎಂದಡಿಗಡಿಗೆ ಕಾಲಮೇಲೆ ಬೀಳ್ವುದುಮವಂ ಬೆಟ್ಟವೆಟ್ಟನಿಂತೆಂದಂ

ಮುನಿಯೋ ಯಕ್ಷನೊ ಗಂಧ
ರ್ವನೊ ರಾಕ್ಷಸನೋ ಪಿಶಾಚನೋ ನೀನಿನ್ನಾ
ವನುಮೆಂದಱಿಯೆಂ ಮತ್ಸ್ವಾ
ಮಿನಿಗೞ್ಯೊಪ್ಪಿಸುವೆನೀಗಳಿನಿತನೆ ಬಲ್ಲೆಂ ೩೫

ಎಂದೆನ್ನಂ ಪಿಡಿದುಕೊಂಡು ದಕ್ಷಿಣಾಭಿಮುಖನಾಗಿ ಪೋಪುದುಂ
ಬೇಡವಟ್ಟಮಂ ಕಂಡು ಕಣ್ಗೆಟ್ಟಣಿಸುತ್ತುಂ

ಬರುತಿರೆ ಕಂಡು ದೂರದೊಳೆ ತನ್ನಯ ಜಾತಿಗೆ ತಕ್ಕುದಲ್ತೆ ನಲ್
ಕರುಣಮನಪ್ಪುಕಯ್ದು ಮನದೊಳ್ ಬಿಡುವಂತುಟದೊಂದವಳ್ಗೆ ಪೇೞ್
ದೊರೆಕೊಳಲಾರ್ಕುಮೇಂ ಪೊಲತಿಗೆನ್ನಯ ಪುಣ್ಯದೊಳೆಂದು ಭಾವಿಸು
ತ್ತಿರಲಿರದೆಯ್ದಿದಂ ಪೊಲೆಯನಾ ಪೊಲೆವಟ್ಟಿನೊಳಿರ್ದ ಕನ್ನೆಯಂ ೩೬

ಅಂತೆಯ್ದಿ ಗೆಂಟಱೊಳೆ ಪೊಡವಟ್ಟು ಮೆಲ್ಲನೆ ನೀಡೆ ಲೇಸುಗೆಯ್ದೆ
ಯೆಂದೆನ್ನಂ ಕರತಲದೊಳ್ ತಳೆದು

ಎಯ್ದುದೆಡೆಯೆಲ್ಲಮಂ ನೀ
ನೆಯ್ದಿದೆ ಮತ್ತಿರದೆ ಮಗನೆ ಮಾಣದೆ ಪೇಟಿ
ನ್ನೆಯ್ದಿದಪೆಯೆಲ್ಲಿಗಟ್ಕಱಿ
ನೆಯ್ದಪೆನಾಂ ಕಾಮಪರತೆಯಿಂದಂ ಕೆಟ್ಟಯ್ ೩೭

ಎಂದಾ ಚಂಡಾಲಕನ್ನಿಕೆ ರೋಮಂಬೊರೆದ ಪಂದೊವಲ ಪಂಜರದೊಳಿಕ್ಕಿ ಮಹಾಶ್ವೇತಾವಲೋಕನಕ್ಕೆ ತಗೆಯಂ ಮಾಟ್ಟಂತೆ ಪಡಿಯುಂ ಕೆತ್ತುಗುಟಿಯನಿಕ್ಕಿ ನೀನಿಂತಿರೆಂದು ನಿರ್ವೃತಾಂತರಾತ್ಮೆಯಂತೆ ನುಡಿದು ಸಿರದಿರ್ದೊಡಾನುಮಾ ಪಂಜರದ ಪಡಕೆಯೊಳಿರ್ದೆನ್ನೊಳಿಂತೆಂದೆಂ.

ನುಡಿದೆನಪ್ಪೊಡೆ ಲೇಸಾಗಿ ನುಡಿಯಲ್ಕೆ ಬಲ್ಲುದೀಗಿಳಿಯೆಂದು ಕನ್ನೆಯೆನ್ನಂ ಬಿಡದಿರ್ಕುವಂದಱುಂದವಾ ಕನ್ನಿಕೆ ನುಡಿಯಿಸಿದೊಡಮೆಂತುಂ ನುಡಿಯುದಿರ್ಪೆಂ ನುಡಿಯದಿರ್ದೆನಪ್ಪೊಡೆ ಕಡುಮುಳಿಸಿಂದಂ ಪಿರಿದಪ್ಪವಸ್ಥೆಯನೆಯ್ದಿಸುಗುಂ ನುಡಿಯದೆಂತುಮೇಂಬಾರ್ತೆಯೆಂದು ಮೇಣ್ ಬಿಡುಗುಮೋ ಪೇಟೆನುತೆ ಬಗೆಯುತ್ತಿರ್ದೆಂ. ೩೮

ಸುರಲೋಕಭ್ರಷ್ಟನೆಂ ಮರ್ತ್ಯರೊಳುದಯಿಪ ತಿರ್ಯಕ್ತ್ವದೊಳ್ ನಿಲ್ವ ಚಂಡಾಲರ ಕಯ್ಯೊಳ್ ಬೀಟ್ವ ತೋಲ್ಪಂಜರದ ಪಡಕೆಯೊಳ್ ನಿಲ್ವ ದುರ್ವಾರದುಃಖೋತ್ತರವೆಲ್ಲಂ ನೋಡಲೆನ್ನಿಂದ್ರಿಯನಿವಹದ ದೋಷಂ ದಲೆನ್ ಮಿಾಱದಂತಾಗಿರಿಸಲ್ವೇಟ್ಕೆಂದವಂ ನಿಗ್ರಹಿಪ ನಿಯಮದಿಂ ಮೌನದಿಂದಿರ್ದೆನಾಗಳ್. ೩೯

ಅಂತು ನಿಖಿಲೇಂದ್ರಿಯನಿಗ್ರಹಕ್ಕೆ ನಿಶ್ಚಯಂಗೆಯ್ದೆನಗೆ ಮರಣಮೆ ಶರಣಮೆಂದಾ ದಿವಸಮನನಶನದೊಳ್ ಕಳೆಯಲಾ ಕನ್ನೆ ಕಂಡು ಪಲತೆಱದ ಪಕ್ವ ಫಲಂಗಳುಮಂ ಸುರಭಿಶೀತಲ ಜಲಂಗಳುಮಂ ತಾನೆ ತಂದು ನೀಡೆಯುಮೊಲ್ಲದಿರಲೆನ್ನನಿಂತೆಂದಳ್ ನಿರ್ವಿಕಾರಚಿತ್ತವೃತ್ತಿಗಳಪ್ಪ ಪಕ್ಷಿಗಳ್ ಪಸಿವುಂ ನೀರಡ್ಕೆಯುಮಾಗಲುಪಯೋಗಿಸದುದೊಂದುವಿಲ್ಲ ತಾನುಂ ಭೋಜ್ಯಾಭೋಜ್ಯವಿವೇಕನೆನಾಂ ಜಾತಿಸ್ಮರನಾಹಾರಮಂ ಪರಿಹರಿಸುವೆನೆಂಬೆಯಪ್ಪೊಡೆ ಭಕ್ಷ್ಯಾಭಕ್ಷ್ಯರಹಿತಮಪ್ಪ ತಿರ್ಯಗ್ಜಾತಿಯೊಳ್ ಪುಟ್ಟಿದ ನಿನಗೆಯುಮಭಕ್ಷ್ಯಮೊಂದುಮಿಲ್ಲಂ ಮೊದಲೊಳುತ್ಕೃಷ್ಟಜಾತಿಯೊಳ್ ಪುಟ್ಟಿ ತಿರ್ಯಗ್ಜಾತಿಗೆ ಬಿಟ್ದಂದೇ ನಿನ್ನ ವಿವೇಕಮಱದಂತುಟೆ ವಲಮಿನ್ ನಿನಗೆ ಜಾತಿಗೆ ತಕ್ಕಂತಾಹಾರಮನಾಚರಿಸೆ ದೋಷಮಿಲ್ಲಮಲ್ಲದೆಯುಂ ಭಕ್ಷ್ಯಾಭಕ್ಷ್ಯನಿಯಮಿತಗಾರ್ಪದ್ವಿಷಯದೊಳ್ ಪ್ರಾಣಸಂಧಾರಣಾರ್ಥಮಭೋ

ಜ್ಯೋಪಭೋಗಮುಂಟೀಗಳೆಂತಾನುಮಾನಿತು ದನೊಲ್ಲೆನೆಂಬೆಯಪ್ಪೊಡೆ ಚಂಡಾಲಭಾಂಡದಿಂ ಭೂಮಿಪತಿತಮಾದಂಬುವುಂ ಪವಿತ್ರಮೆಂಬುದುಂಟದ ಱಿಂ ಕ್ಷುತ್ಪಿಪಾಸೆಗಳಿನಾಯಾಸಂಬಡದೆ ಮುನಿಜನೋಚಿತಮಪ್ಪ ನವಫಲಂಗ ಳನುಪಭೋಗಿಸೆಂದು ನುಡಿಯೆ |

ನಯದಿಂದಂ ತಿಳಿವುಟ್ಟಿರಲ್ಕೆನಗೆ ಪೇೞಲ್ ಕೇಳ್ದು ಚಂಡಾಲಜಾ
ತಿಯೊಳೀ ವ್ವಾಕ್ಯಮುಮೀ ವಿವೇಕಮುಮದೆಂತಾದತೊ ಪೇೞೆಂದು ವಿ
ಸ್ಮಯಮುತ್ತಿಂದುದುಗೆಯ್ವನೆಂಬ ಬಗೆಯೊಳ್ ಬಾಡಬ್ಬಸೆಯಿಂ ಕ್ಷುತ್ಪಿಪಾ
ಸೆಯುಮಂ ತಾಳ್ದಿರಲಾಱದಱಿಸಿದೆನಾಂ ತ [ದ್ಭಕ್ಷ್ಯ] ಪಾನಂಗಳಿಂ ೪೦

ಅಂತು ಕೆಲವುದಿವಸಮಿರ್ಪನ್ನೆಗಂ

ಇನ್ನೋದಯದೊಳೊರ್ಮೆ ಕಣ್ದೆಱೆದು ನೋಡುತುಂ ಕಂಡೆನಾಂ
ಕನತ್ಕನಕಪಂಜರಸ್ಥಿತನನೆನ್ನನಾ ಕನ್ನೆ ಮು
ನ್ನಿನಂತೆ ನಿಜರೂಪದಿಂದಮೆಸೆದಿರ್ದಳಿಂತಿಲ್ಲ ಕೇ
ಳನಂತರಮೆ ತೋಱಿತಿಂದ್ರಪುರದಂತಿರಾ ಪಕ್ಕಣಂ ೪೧

ಅಂತದಂ ಕಂಡು ವಿಸ್ಮಿತಾಂತರಂಗನಾಗಿ ಮೌನಮಂ ಬಿಟ್ಟು ಕನ್ನೆಯಂ ಬೆಸಗೊಳಲುಜ್ಜುಗಂಗೆಯ್ವನ್ನಮೆನ್ನನೊಡಗೊಂಡು ದೇವರ ಶ್ರೀಪಾದಂಗಳಂ ಕಾಣಲೆಂದು ಬಂದಳ್

ಈ ಕನ್ನೆಯಾರ್ಗೆ ಪೆಸರೇ
ನೇಕೆನ್ನಂ ಪಿಡಿದು ತರಿಸಿದಳ್ ಸೆಱೆಯೊಳ್ ಮ
ತ್ತೇಕಕ್ಕಿದಳಾಗಳ್ ತಾ
ನೇಕಿಲ್ಲಿಗೆ ತಂದಳೆಱಿಯೆನಿದನವನಿಪತೀ | ೪೨

ಎಂದು ಶೂದ್ರಕಮಹಾರಾಜಂಗಾ ಪ್ರಪಂಚಮೆಲ್ಲಮಂ ಪೇೞೆ ಕೇಳ್ದತಿಕುತೂಹಲಿತನಾಗಿ ಚಂಡಾಲಕನ್ಯೆಯನೊಡಗೊಂಡು ಬಾಯೆಂದು ಮುಂದಿರ್ಪ ಪಡಿಯಱಿತಿಗೆ ಬೆಸಸುವುದುಮವಳ್ ಪೋಗಿ ಬೇಗದಿನೊಡಗೊಂಡು ಬರೆ |

ಮಾಣ್ದುಟಿದರ ಮೆಯ್ವೆಳಗೆಸೆ
ಕಣ್ಗಳ್ ಕೋರಯ್ಸೆ ತೊಳಗಿ ಬೆಳಗುತ್ತುಂ ಮುಂ
ದಣ್ಣಾಗಿ ನಡೆದು ನೃಪನ್ಗಂ
ಜಾಣ್ಗೊಂಡ ನಿಜಪ್ರಗಲ್ಭ ವಚನದೆ ನುಡಿದಳ್ ೪೩

ವಿದಿತಾಶೇಷಕಲಾಕಲಾಪ ಭುವನಾಲಂಕಾರ ಕಾದಂಬರೀ ಹೃದಯಾನಂದನ ರೋಹಿಣೀರಮಣ ತನ್ನಾತ್ಮೀಯ ವೃತ್ತಾಂತಮಂ ವಿದಿತಂ ಪೇಟುತುಮಿಾ ದುರಾತ್ಮನಿರೆ ಕೇಳುತ್ತಿರ್ದೆ ನೀಂ ಕೇಳ್ದೆ ದಲ್ ಮೊದಲಿಂ ಪೂರ್ವಭವಾಂತರೋದ್ಧಿತ ಭವದ್ವೃತ್ತಾಂತ ಸಂತಾನಮಂ ೪೪

ಮತ್ತಮಿಾ ದುರ್ಬುದ್ಧಿಯಿಾ ಜನ್ಮದೊಳಂ ಗುರುಗಳಿಂ ನಿಷಿದ್ಧನಾಗಿಯುಂ ತಂದೆಯ ಮಾತಂ ಮಿಾಱಿ ವಧೂನಿರೀಕ್ಷಣೋತ್ಸುಕತೆಯಿಂ ಪಾಱಿ ಪೋಗುತ್ತುಮಿರೆ

ಮಗನಿಂತೀ ಶುಕನೀ ದುರಾತ್ಮಕನ ತಾಯ್ತುಂ ಶ್ರೀಯೆನ್ನುತುಂ ದಿವ್ಯ ಚ
ಕ್ಷುಗಳಿಂದೀತನ ತಂದೆ ಪೋಗಱಿದಿವಂ ತಿರ್ಯಕ್ತ್ವದೊಳ್ ನಿಲ್ವನೆ
ನ್ನಿಗಮಾಯುಷ್ಕರಮಾದ ಯಜ್ಞಮನಿದಂ ಪೂರೈಸದಾನಿರ್ಪನ
ನ್ನೆಗಮಿಾಗಳ್ ಸೆಱೆಯಿಕ್ಕಿಯಿನ್ ನಿಲಿಪುದೆಂದೆನ್ನಲ್ಲಿಗಿಂತಟ್ಟಿದಂ ೪೫

ಅದಱಿನೀತಂಗೆಂತೆಂತು ವಿರಕ್ತಿ ಪುಟ್ಟುಗುಮಂತಂತೆ ವಿನಯವೃತ್ತಿನಿಮಿತ್ತಂ ವಿನಿತುಮಂ ಮಾಡಿದೆನೀಗಳಾ ಯಜ್ಞಾವಸಾನಸಮಯಮಾಗಿರ್ದುದಱಿನೀ ಸಮಯದೊಳ್ ಸಮಸುಖದುಃಖಿಗಳಾಗಲೆವೇೞ್ಕುಮದಱಿಂದೀತನ ಜನ್ಮಾಂತರಸಹಾಯನಪ್ಪ ನಿನ್ನಲ್ಲಿಗೊಡಗೊಂಡು ಬಂದೆಂ ನೀಪಿರ್ವರುಂ ಜನ್ಮ ಜರಾಮರಣ ವ್ಯಾಧಿದುಃಖಹುಳಂಗಳಪ್ಪ ತನುಗಳಂ ಬಿಟ್ಟು ದಿವ್ಯದೇಹಂಗಳಂ ಕಯ್ಕೊಂಡು ಇಷ್ಟಜನಸಮಾಗಮ ಸುಖಮನನುಭವಿಸಿಂ ಮರ್ತ್ಯಲೋಕಸಂಪರ್ಕಪರಿಹಾರಾರ್ಥಮಿಾ ಚಂಡಾಲವೇಷಮಂ ತಳೆದಿರ್ದೆನಿನ್ ಪೋಪೆನೆಂದು

ಝಣಝ್ಝಣಿತ ಮೇಖಲಾಕಲಿತಹಾರಕೇಯೂರಭೂ
ಷಣಪ್ರಭೆ ದಿಗಂತಮಂ ಬೆಳಗೆ ರಾಜರಾಜದ್ಗ್ರುಹಾಂ

ಗಣಸ್ಥಿತಜನಕ್ಕೆ ವಿಸ್ಮಯಮನಾಗಿಸುತ್ತುಂ ನಭೋಂ
ಗಣಕ್ಕೊಗೆದಳೆಂದು ಲಕ್ಷ್ಮಿ ಕಡುಮಿಂಚಿದೊಂದೆನಿಬಿನಂ ೪೬

ಅನಂತರಮಾ ಶೂದ್ರಕಮಹಾರಾಜನಾ ವಚನಮಂ ಕೇಳ್ದು ಜಾತಿ
ಸ್ಮರನಾಗಿ ಗಿಳಿಯು ಮೊಗಮಂ ನೋಡಿ

ನೀಂ ಪುಂಡರೀಕನಯ್ ವೈ
ಶಂಪಾಯನ ಪೂರ್ವಜನ್ಮಸಂಬಂಧಯ್ ಕಂ
ಡೆಂ ಪುಣ್ಯದಿಂದಮಿರ್ವರು
ಮಿನ್ ಪಡೆದಪಮೊಡನೆ ಶಾಪಮೋಕ್ಷದ ಫಲಮಂ ೪೭

ಎನ್ನನಿತ್ತು ಸುಖಮಂ ಸಖಂಗೆ ಮಾ
ಡ್ಪೆಂ ನಿರಾಕುಳಮೆನುತ್ತುಮೊಗಳಿ
ತ್ತಂ ನೃಪಂ ಪದಪಿನಿಂ ಮಹಾತ್ಮನಾಂ
ಕಿಂ ನ ದೇಯಮೆನೆ ತನ್ನ ಜೀವಮಂ ೪೮

ಗಿಳಿಯಿತ್ತ ಮಹಾಶ್ವೇತಾ
ವಳೋಕನೋತ್ಕಂಠೆಯಿಂದೆ ಜೀವಂ ಬಿಟ್ಟ
ತ್ತೆಳಸುತಿರಲಮೃತಕರ ಮಂ
ಡಳಮಧ್ಯದ ಪುಂಡರೀಕ ದೇಹಮದಾಗಳ್ ೪೯

ಉದಯಂ ರಾಜೇಂದ್ರಚಂದ್ರಾತ್ಮಕನೆನಿಸಿದ ಚಂದ್ರಂಗೆ ಸಾರ್ತಂದುದಿನ್ನ
ಭ್ಯುದಯಂ ಲೋಕತ್ರಯಕ್ಕೆಂಬುದನಱಿಪುವೆನಾಂ ರಾಗದಿಂದೀಗಳೆಂಬಂ
ದದೆ ರಕ್ತಾಶೋಕಚೂತದ್ರುಮ ಸಮುದಿತಬಾಲಪ್ರವಾಳಧ್ವಜಂ ಬಂ
ದುದು ಚಂಚಚ್ಚಂಚರೀಕಪ್ರಕರ ಶುಕಕುಲಾಲಾಪ ಕಾಂತಂ ವಸಂತಂ ೫೦

ಬಿರಯಿಗಳಂ ಬೆರ್ಚಿಸಲಿದೆ
ಪರಮಾಸ್ತ್ರಂ ಮನುಮತಂಗೆನಿಪ್ಪ ವಸಂತಂ
ಬರಲೊಡನೊರ್ಮೆಯೆ ಗಂಧ
ರ್ವರಾಜಸುತೆ ಮನದೊಳಾಗಳಾಕುಲೆಯಾದಳ್ ೫೧

ಸುರಭಿಜಲಂಗಳಿಂದಮಭಿಷಿಕ್ತನನಾ ನೃಪರೂಪಚಂದ್ರನಂ
ತರದೊಳೆ ಮಾಡಿ ಕೇಸಡಿಗಳಂ ಹರಿಚಂದನದಿಂದಮೊಡಿ ಕೇ
ಸರದ ತುಱುಂಬನಿಕ್ಕಿ ಸಿರಿಕಂಡಮನೊಯ್ಯನೆ ಪೂಸಿ ಕಂಪಿನೊಳ್ ಪೊ
ರೆದ ವಸಂತದೊಳ್ಮುಗುಳ ತಣ್ಣೊತ್ತೆಡವೆ ತುಡಿಸಲ್ಕೊಡರ್ಚಿದಳ್ ೫೨

ಅಳಿಪಿನೊದವಿಂ ನೀಡುಂ ಪೀರ್ವಂದದಿಂ ನಡೆ ನೋಡಿ ಸಂ
ಗಳಿಸೆ ನಿಡುಸುಯ್ ರೋಮಾಂಚಂ ಪೊಣ್ಮೆ ಘರ್ಮಜಲಂ ಪೊದ
ಳ್ದಿಟಿಯೆ ನಡುಗುತ್ತಕ್ಕಂ ಕಂಡಪ್ಪಳೆಂದು ಮೃಗಾಕ್ಷಿ ಪೆ
ಳ್ಪಳಿಸಿ ದೆಸೆಯಂ ನೋಡುತ್ತುಂ ಪೊರ್ದಿದಳ್ ನೃಪಚಂದ್ರನಂ ೫೩

ಅದಲ್ಲದೆಯುಂ

ಉಟಿಯಲೆನಸುಂ ಲಜ್ಜಾಭಾರಂ ಸಮಂಚಿತ ಸಾಧ್ವಸಂ
ಕಟಿಯಲೆಡೆವತ್ತಾಗಳ್ ಸಾರಾರುಮಿಲ್ಲದಿರಲ್ಕೆ ಕಂ
ಡೆಳಸಿ ನಿಲಿಸಲ್ ತನ್ನಂ ತಾನಾಱದೊಯ್ಯನೆ ಕಣ್ಮಲರ್
ಮಲರೆ ನೃಪನಂ ಭೋಂಕಲ್ ಮೇಲ್ವಾಯ್ದು ತಳ್ತಿರದಪ್ಪಿದಳ್ ೫೪

ಆಗಳ್ ತದಾಲಿಂಗನಾಮೃತವರ್ಷದಿಂ ಜೀವಂ ಬಂದು ರಾಜೇಂದ್ರಚಂದ್ರಂ ಪಸೆಯೊಳ್ ಮುನ್ ನಿದ್ರೆಗೆಯ್ದೆಟ್ಟುಱುವರಸನವೊಲೆಟ್ಟುತ್ತೆನ್ನೆವರಂ ನಿನ್ನ ಕರತಲಸ್ಪರ್ಶದಿನಾಪ್ಯಾಯಿತಶರೀರನಾಗಿಯುಂ ಶಾಪದೋಷದಿಂ ಪ್ರತ್ಯುಜ್ಜೀವಿತನಾಗದಾಗಳ್ ಮಹಾಶ್ವೇತೆಯ ಪ್ರಿಯತಮನಪ್ಪ ಮದೀಯವಯಸ್ಯಂಬೆರಸು ವಿಗತದೋಷನಾಗಿ ನಿನ್ನ ದೊಸಟ್ಟೊಳಿಲ್ಲಿ ನಿಲಿಸಿದ ಮದೀಯ ದೇಹಕ್ಕವತರಿಸಿದೆನೆಂದು ಚಂದ್ರಮನನುಭೂತಪೂರ್ವಮಪ್ಪ ಗಂಭೀರ ಪೂರ್ವವಚನದಿಂ ನುಡಿದು ಗಂಧರ್ವರಾಜನಂದನೆಯನಾನಂದಿಸುತ್ತುಮಿರ್ಪುದಂ

ಕುಳಿರುತ್ತಿರ್ಪಮೃತಾಂಶುಮಂಡಲದೊಳಿರ್ದಾದಂ ಸುಧಾಮೋದಮಂ
ತಳೆದಂಗಂ ಬೆಳರ್ಗಂಪನಾಳ್ದಿರೆ ಮಹಾಶ್ವೇತಾಂಗನಾ ಮೌಕ್ತಿಕಾ
ವಳಿ ವಕ್ಷಸ್ಥಲದೊಳ್ ತೆಱಿಂಬೊಳೆಯಲಾಗಳ್ ಪುಂಡರೀಕಂ ಕಪಿಂ
ಜಳಕಂ ಕಯ್ಗುಡಲಿಷ್ಟಮಿತ್ರನೆ ಬರುತ್ತಿರ್ದಂ ಮರುನ್ಮಾರ್ಗದಿಂ ೫೫

ಮನದೊಂದಾಹ್ಲಾದದಿಂದಂ ಗಗನತಲದಿನೆಯ್ತಂದು ರಾಜೇಂದ್ರಚಂದ್ರಾಂ
ಕನ ಪಾದಾಂಭೋಜಯುಗ್ಮಕ್ಕೆಱಗಿ ತೆಗೆದು ತಪ್ಕೈಸುತಂ ಪುಂಡರೀಕಾ
ಖ್ಯ ನಿಜಪ್ರಾಗ್ಜನ್ಮಸಂಬಂಧದಿನೊಗೆದ ಸುಹೃತ್ಸ್ನೇಹದಿಂ ಮತ್ತೆಯುಂ ಪಿಂ
ತನೆಬಂದಯ್ ನೀನೆನುತ್ತಕ್ಕಱೊಳೆ ಕೆಳೆಯನೊಳ್ ಮಾತನಾಡುತ್ತುಮಿರ್ದಂ ೫೬

ಅನ್ನೆಗಂ ಕೇಯೂರಕಂ ಚಿತ್ರರಥಹಂಸರ್ಗೆ ತನ್ಮಹೋತ್ಸವಮಂ ಪೇೞಲ್ಕೆ ಪೋದನಿತ್ತ ಮೃತ್ಯುಂಜಯಜಪವ್ಯಗ್ರನಾಗಿ ವಿಲಾಸವತೀಮಹಾದೇವಿವೆರಸಿರ್ದ ತಾರಾಪೀಡನಲ್ಲಿಗೆ ಮದಲೇಖೆ ಪರಿತಂದು ವೈಶಂಪಾಯನಂಬೆರಸು ಯುವರಾಜಂ ಪ್ರತ್ಯುಜ್ಜೀವಿತನಾದನೆಂದು ಪೇೞ್ವುದುಮತ್ಯಾನಂದರಭಸದಿಂ ಬರುತ್ತಿರ್ದ ತನ್ನ ತಂದೆಯಂ ಕಂಡು ರಾಜೇಂದ್ರಚಂದ್ರಂ ಸಾಷ್ಟಾಂಗಪ್ರಣಾಮಪುರಸ್ಸರಂ ಪಾದಾರವಿಂದಕ್ಕೆಱಗಿದಾಗಳ್

ನಿನಗಾಂ ತಂದೆಯೆನಾದೆನೆಮ್ಮ ಬಸಿಱಿಂದಂ ಬಂದೆ ನೀನೆಂಬ ಪೆಂ
ಪೆನಗೇಂ ಸಾಲದೆ ಕಂದ ಚಂದ್ರನೆನಲುಂ ತ್ರೈಲೋಕ್ಯದಿಂ ವಂದನೀ
ಯನೆ ಬಂದಂದೆಮಗಲ್ತೆ ವಂದ್ಯನಪೊಲೆಂದಾನಂದದಿಂದಾತ್ಮನಂ
ದನನಂ ಚಂದ್ರನನಪ್ಪಿದಂ ತೆಗೆದು ತಾರಾಪೀಡಚಕ್ರೇಶ್ವರಂ ೫೭

ಅಂತು ತಪ್ಕೈಸೆ ನಿರ್ಭರಹರ್ಷಪರವಶೆಯಪ್ಪ ತಾಯುಂ ಚಂದ್ರಾಪೀಡಂ ನೋಡಿ

ಪೊಡವಡೆ ತಾಯ್ ಬಸಿಱೊಳಗಿಡ
ಲೊಡರಿಸಿದಪಳ್ಬರದೆ ಮಗುಟ್ದು ಮೆನೆ ಮೊಲೆವಾಲ್ಗಳ್
ಬಿಡದೆಚ್ಚುಪಾಯೆ ಪದಪಿಂ
ದಡಿಗಡಿಗಾತ್ಮಜನನಾದವಪ್ಪಿದಳಾಗಳ್ ೫೮

ಅನಂತರಂ ಮನೋರಮಾಸಮೇತನಪ್ಪ ಶುಕನಾಸನಲ್ಲಿಗೆ ವಂದು

ವಿನಯಭರದಿಂದೆ ನಮಿತಾ
ನನನೆನಿಸಿದ ಪುಂಡರೀಕನಂ ವೈಶಂಪಾ
ಯನನೆಂದವಧರಿಸಿಂ ನೀ
ವೆನುತುಂ ಕಾಣಿಸಿದನಂದು ಚಂದ್ರಾಪೀಡಂ ೫೯

ಅಂತಾ ಸಮಯದೊಳ್ ಕಪಿಂಜಲಕಂ ಶುಕನಾಸನನಿಂತೆಂದಂ

ನಡಪಲ್ ಮುಂ ಪೆತ್ತವಾವಿರ್ತನನಿನಿತೆಡರಿಂ ಪುಂಡರೀಕಾಖ್ಯನಂ ಪೇ
ೞ್ದೊಡೆ ವೈಶಂಪಾಯನಂ ತನ್ನಯ ಮಗನದಱಿಂ ಸ್ನೇಹಮೊಟ್ಟೈಸೆ ತಮ್ಮಿ
ರ್ದೆಡೆಗೀಗಳ್ ಮುಕ್ತಶಾಪಂ ನಿಜತನುವೆರಸಾನಂದದಿಂ ಬಂದನೀತಂ
ಗೊಡೆಯರ್ ತಾವೆಂದು ಪೇೞ್ದಟ್ಟಿದನಿದನೊಲವಿಂ ಶ್ವೇತಕೇತುವ್ರತೀಶಂ ೨೦

ಎಂಬುದುಂ ವಿನಯವಿನಮಿತನಪ್ಪ ಪುಂಡರೀಕನ ಮೇಲೆ ಕಯ್ಯನಿಕ್ಕಿ ಶುಕನಾಸನಿಂತೆಂದಂ

ಸಕಲಾರಾಧ್ಯರ್ ತಾವಿಂ
ತು ಕರುಣದಿಂದೆನಗೆ ಬೆಸಸಿಯಟ್ಟಿದರೆಂದಂ
ದು ಕಪಿಂಜಲ ಪೇೞ್ದನ್ನಿಂ
ದೆ ಕೃತಾರ್ಥರುಮೊಳರೆ ಮತ್ತೆ ಭುವನತ್ರಯದೊಳ್ ೨೧

ಎಂದಿವು ಮೊದಲಾಗಿ ಪೂರ್ವಜನ್ಮಸ್ಮರಣಾಲಾಪಂಗಳಿಂದಂ ಪರಸ್ಪರಾಲೋಕನಸುಖೋತ್ಫುಲ್ಲಲೋಚನರಾಗಿರಲತ್ತ ಕಣ್ಗೊಳಿ ಬೆಳಗಪ್ಪದುಂ ಪ್ರಭಾತಸಮಯದೊಳಖಿಲಗಂಧರ್ವಲೋಕಮೊಡನೆ ಬರೆ ಮದಿರಾಮಹಾದೇವಿವೆರಸು ಚಿತ್ರರಥನುಂ ಗೌರಿವೆರಸು ಹಂಸನುಂ ಬಂದು ಜಾಮಾತೃದರ್ಶನೋತ್ಫುಲ್ಲವದನರ್ ತಾರಾಪೀಡಶುಕನಾಸರೊಳತಿಶ್ಲಾಘ್ಯಸಂಬಂಧಬಂಧುರವಚನಂಗಳಂ ನುಡಿಯುತ್ತುಮಾನಂದಪರಂಪರೆಯನೆಯ್ದಿ ಕಿಱಿದುಬೇಗಮಿರ್ದು ರಾಜಾಧಿರಾಜನಂ ಗಂಧರ್ವರಾಜನಿಂತೆಂದಂ

ಇವರ್ಗಾತ್ಮೋಚಿತಮಾಗಿ ಮುನ್ನಮೆ ವಿವಾಹಂ ಸಂದುದಿನ್ ಲೌಕಿಕ
ವ್ಯವಹಾರಕ್ಕೆಸಗಲ್ಕೆ ವೇೞ್ಪುದದಱಿಂದಂ ಹೇಮಕೂಟಕ್ಕೆ ವಂ
ದು ವಿವಾಹೋತ್ಸವಮಂ ನೆಗೞ್ಚಿ ಪಿರಿದೊಂದುತ್ಸಾಹಮಂ ಮಾೞ್ಪುದಿ
ನ್ನೆವಗೆಂದಟ್ಕಱೊಳಿಂತಿದಂ ನುಡಿದನಾ ಗಂಧರ್ವಲೋಕೇಶ್ವರಂ ೨೨

ಅಂತು ನುಡಿಯೆ ತಾರಾಪೀಡನರೇಂದ್ರನಿಂತೆಂದಂ

ಭವದೀಯಶ್ಲಾಘ್ಯಸಂಬಂಧಮೆ ದಲಿದುವೆ ಕ್ಕೈಸಾರ್ದುದಿಂದೆಂದು ಪೇಳ್ದ
ನ್ನೆವಗಿಲ್ಲ ಬಿಟ್ಟು ಮತ್ತಂ ಸುಖವೆನಿಪುದದೇಂ ಪುತ್ರನಿಕ್ಷಿಪ್ತರಾಜ್ಯ
ರ್ಗೆವಗಿನ್ ಮತ್ತೆಳ್ತರಲ್ಕಾಗದು ಸದನ ಸುಖಾವಾಪ್ತಿಯಂ ಮಾಡು ನೀನೆ
ಲ್ಲವನತ್ಯುತ್ಸಾಹದಿಂ ನಿನ್ನಳಿಯನನೊಡಗೊಂಡೆಯ್ದು ಗಂಧರ್ವರಾಜಾ ೬೩

ಎಂಬುದುಂ ನಿಮಗೆಂತು ಸಂತಸಮಂತೆ ನೆಗಳ್ವೆನೆಂದು ರಾಜೇಂದ್ರ ಚಂದ್ರಂ ಬೆರಸುತ್ಸಾಹಾನ್ವಿತನಾಗಿ ಹೇಮಕೂಟಕ್ಕೆ ಬಂದು ಮಂಗಳಾನಕರವಂಗಳಿನೆಸೆವ ವಿವಾಹಮಂಟಪಕ್ಕೆಯ್ತಂದು

ಎಱೆಯ್ಯುಂ ತ್ರೈಲೋಕ್ಯರಾಜ್ಯಕ್ಕೆನಿಸಿದ ವಿಭುವಂಗೇನನಿತ್ತೀಗಳೊಲ್ದಾ
ನೆಱೆವೆಂ ಕಾದಂಬರೀದೇವಿಗೆ ಬಳಿವಳಿ ಗಂಧರ್ವರಾಜ್ಯಂ ದಲೆಂದ
ಳ್ಕುಱಿನಿನ್ ಕಯ್ಕೊಳ್ವುದೆಂದಾತ್ಮಜೆಯನೊಲವಿನಿಂದಿತ್ತು ಸಾಕ್ಷ್ಯಕ್ಕೆ ಕಯ್ನೀ
ರೆಱೆದಂ ರಾಜೇಂದ್ರಚಂದ್ರಂಗೊದವಿದ ಪದಪಿಂದಂದು ಗಂಧರ್ವರಾಜಂ
೬೪

ಪಿರಿದುಂ ವಿಭೂತಿಯಿಂ ಚಿ
ತ್ರರಥಾನುಜನೆನಿಪ ಹಂಸನುಂ ನಿಜರಾಜ್ಯಂ
ಬೆರಸು ಮಹಾಶ್ವೇತೆಯನಾ
ದರದಿಂದಂ ಪುಂಡರೀಕದೇವಂಗಿತ್ತಂ ೬೫

ಅನಂತರಮಭಿವಾಂಛಿತಪ್ರಾಣೇಶ್ವರಪ್ರಾಪ್ತಿಸಮುತ್ಸುಕೆಯುಮಖಿಲಪರಿವಾರಪರಿವೃತೆಯುಮಪ್ಪ ಕಾದಂಬರಿ ವಿಷಾದಮನಪ್ಪುಕಯ್ದು ಮನುಜೇಂದ್ರಚಂದ್ರನಂ ನೋಡಿ

ಜೀವಂ ಬಂದುದು ಸಕಲ
ರ್ಗೀವೇಳ್ವೆಂ ಪತ್ರಲೇಖೆಯಂ ಕಂಡಪೆವಿ
ಲ್ಲಾ ವಧುವೊರ್ವಳದೆಲ್ಲಿದ
ಳಾವಡೆಯೊಳ್ ನಿಂದಳರಸ ಪೇಳೆನಗೀಗಳ್ ೬೬

ಎನೆ ಮನುಜೇಂದ್ರಚಂದ್ರನಿಂತೆಂದಂ

ಸಮಸುಖದುಃಖಮಂ ತಳೆವ ರೋಹಿಣಿ ತಾನಿವನಿತ್ತ ಶಾಪದಾ
ಕ್ರಮವನೆ ಕೇಳ್ದು ಮಾಣಿಸೆಯುಮೆನ್ನಯ ಮೋಹದೆ ಮರ್ತ್ಯರೂಪದಿಂ
ದಮೆ ಬಱಿಸಂದಳೆಲ್ಲು ಮಗುೞ್ದುಂ ಬರೆ ಪಿಂತೆಯೆ ಮತ್ತೆ ಬಲ್ಪಿನಿಂ
ದಮೆ ನಿಲಿಸಿಟ್ಟೆನೆಯ್ದೆ ನಿಜಲೋಕದೊಳತ್ತಕೆಯನ್ನಲ್ಲಿ ಕಂಡಪಯ್ ೭೭

ಎಂದು ನರೇಂದ್ರಚಂದ್ರನುಸಿರಲ್ ವಧು ರೋಹಿಣಿ ಬೆನ್ನೊಳಂತೆ ಬಂ
ದರ್ದಿದಮನಾತ್ಮವಲ್ಲಭನೊಳಾದನುರಕ್ತೆಯುಮ ಮಹತ್ತ್ವಮಂ
ಸಂದ ಪತಿವ್ರತಾಚರಣಮಂ ಋಜುವೃತ್ತಿಯನೆಂದು ಭಾವಿಸು
ತ್ತೊಂದುಮನೆಂದಳಿಲ್ಲ ಬಱಿಯಂ ಪಿರಿದುಂ ತನಗಾದ ಲಜ್ಜೆಯಿಂ ೭೮

ತದನಂತರಂ ರಾಜೇಂದ್ರಚಂದ್ರಂ ಮೂಱುದಿವಸಂ ಮಾವಂದಿರಂ ಬೀಳ್ಕೊಂಡು ವಧೂಸಮೇತಂ ಪರಿತ್ಯಕ್ತ ಸಕಲಕಾರ್ಯರಪ್ಪ ಮಾತಾಪಿತೃಗಳಲ್ಲಿಗೆ ವಂದು ತತ್ಪಾದಪ್ರಣತನಾಗಿ ತದಿಯಾಶೀರ್ವಾದಶತಸಹಸ್ರಂಗಳಂ ತಲೆಯೊಳಾಂತು ನಿಜಸಮಾನೀಕೃತ ಸಕಲರಾಜಲೋಕ ಸಮನ್ವಿತನುಜ್ಜಯಿನ್ಯಭಿಗಮನಕೃತಾಭ್ಯನುಜ್ಞನಾಗಿ

ನಯದಿಂ ಗಂಧರ್ವರಾಜಾತ್ಮಜೆಯೆಡದೊಳಿರಲ್ ಪುಂಡರೀಕಂ ಮಹಾಶ್ವೇ
ತೆಯ ಸೋಂಕಿಂದಾದಲಂಪಿಂ ಬಲದೊಳಗಿರೆ ಪೌರಾವನೀಪಾಲಪುತ್ರ
ಪ್ರಯುತಂ ನಾನಾವಿಮಾನಾವಳಿ ಮಣಿಕಿರಣವ್ಯಾಪ್ತದಿಕ್ಚಕ್ರನುಜ್ಜೆ
ನಿಯನಂದೆಯ್ತಂದು ಪೊಕ್ಕಂ ವಿಬುಧಕುವಲಯಾನಂದಚಂದ್ರಂ ನರೇಂದ್ರಂ ೭೯

ಅವಿಭಕ್ತಸ್ನೇಹೆಯಂ ರೋಹಿಣಿಯನೊಸೆಯಿಸಲ್ ಸೋಮಲೋಕಕ್ಕದೊರ್ಮೊ
ರ್ಮೆ ವಯಸ್ಯಂ ಪುಂಡರೀಕಂ ಬೆರಸಮಳಸರಃಪಂಕಜಾಮೋದ ಲಕ್ಷ್ಮೀ
ಭವನಕ್ಕೊರ್ಮೊರ್ಮೆ ಕಾದಂಬರಿಯೊಲವಿನೊಳಂ ಹೇಮಕೂಟಕ್ಕದೊರ್ಮೊ
ರ್ಮೆ ವಿಶೇಷಸ್ನೇಹಮಂ ಮಾಡುವನನುದಿನಮೆಯ್ತಂದು ರಾಜೇಂದ್ರಚಂದ್ರಂ ೮೦

ಪ್ರಿಯದಿಂ ರಾಜೇಂದ್ರಚಂದ್ರಂ ಪ್ರಿಯತಮೆಯೆನೆ ಸಂದಿರ್ದ ಕಾದಂಬರೀ
ಕಾಂ
ತೆಯೊಳಾ ಕಾದಂಬರೀಕಾಂತೆಯುಮೊಸೆದು ಮಹಾಶ್ವೇತೆಯೊಳ್ ತನ್ಮ
ಹಾಶ್ವೇ
ತೆಯನೊಲ್ದಾ ಪುಂಡರೀಕಾಹ್ವಯನಮಲತರ ಪ್ರೇಮದಿಂ ಪುಂಡರೀಕಾ
ಹ್ವಯನಂ ರಾಜೇಂದ್ರಚಂದ್ರಾಂಕನುಮಗಲದೆ ಕೂಡಿರ್ದರುತ್ಸಾಹದಿಂದಂ
೨೧

ಕ್ಷಿತಿಯೊಳ್ ಸೌವರ್ಣಕಾಂತಿಪ್ರಸರಮಸೆದಳಲ್ ಪರ್ವೆ ಸಂದಿರ್ದುದತ್ರಾ
ಕೃತಿ ಮುನ್ನಂ ಬಾಣವಾಣೀಪ್ರಿಯನ ವಚನದಿಂ ಮತ್ತೆ ಕರ್ಣಾಟಭಾಷಾ
ಚತುರತ್ವಂಬೆತ್ತಿರ್ದೀ ಕಾದಂಬರಿ ಪಸರಿಸಿ ರಾಜೇಂದ್ರಚಂದ್ರಾಂಕನೊಳ್ ಸಂ
ಗತಿವೆತ್ತಾದಿಂ ತ್ರಿಲೋಕೀಸಹಚರಿಯೆನೆ ತಾಂ ಸಂದುದಾಚಂದ್ರತಾರಂ ೨೨

ಇದು ಚೋದ್ಯಂ ಕವಿಹೃದ್ಗತಂ ನವರಸಂ ನಿರ್ದೋಷಮೆಂದೀಗಳಾ
ದುದು ಕಾದಂಬರಿ ಸೇವ್ಯಮಾದುದನಿತುಂ ತಾನೆಯ್ದೆ ಭೂಭಾಗದೊಳ್
ವಿದಿತ ಶ್ರೀಕವಿನಾಗವರ್ಮನ ವಚಃಸಂದೋಹದಿಂ ದೋಷಮೊಂ
ದದಲಂಕಾರದ ವಸ್ತುಬಂಧಮಿದು ತಾನೇಂ ಮಾಡದೇಂ ಗೆಯ್ಯದೋ ೨೩

ಸಂಪೂರ್ಣ

ಶಬ್ದಕೋಶ

ಅ

ಅಕ್ಷಮ	೮-೮ ಗದ್ಯ	ಅಸಮರ್ಥ
ಅಕ್ಷಮಣಿ	೧-೭೧	ಜಪಸರದ ಮಣಿ
ಅಕ್ಷವಲಯ	೩-೨೭	ಜಪಸರ
ಅಕ್ಷಾವಳಿ	೪-೪೫ ಗದ್ಯ	,,
ಅಗರು	೪-೬೮	ಸುಗಂಧವುಳ್ಳ ಒಂದು ಗಿಡದ ಚಕ್ಕೆ
ಅಗಿ	೨-೫೦	ಹೆದರು
ಅಗುರ್ವು	೪-೮೮	ಆಧಿಕ್ಯ, ಹೆಚ್ಚಿಕೆ
ಅಗ್ಗ	೭-೫೩	ಶ್ರೇಷ್ಠ
ಅಗ್ಗಲಿಸು	೧-೪೧, ೪-೭೮, ೪-೯೧	ಹೆಚ್ಚಾಗು
ಅಗ್ಗಳ	೩-೪೪, ೪-೩ ಗದ್ಯ	ಆಧಿಕ್ಯ, ಹೆಚ್ಚು
ಅಗ್ಗಳಿಸು	೧-೧೭, ೪-೯೨ ಗದ್ಯ	ಹೆಚ್ಚಾಗು
ಅಘಮರ್ಷಣ	೧-೬೮ ಗದ್ಯ. ೪-೮ ಗದ್ಯ	ಪಾಪಪರಿಹಾರಕವಾದ ಪ್ರಾರ್ಥನೆ
ಅಚ್ಚರಸಿ	೪-೦ ಗದ್ಯ	ಅಪ್ಸರಃ ಸ್ತ್ರೀ
ಅಚ್ಚರಸೆ	೭-೪೫ ಗದ್ಯ	,,
ಅಚ್ಛ	೪-೬೧	ಸ್ವಚ್ಛವಾದ, ಶುದ್ಧವಾದ
ಅಜಿನ	೧-೭೧	ಚರ್ಮ
ಅಟ್ಟಹಾಸ	೩-೧೨	ಗಟ್ಟಿಯಾದ ನಗು
ಅಡಕಿಲ್	೫-೩೭	ಪೇರಿಸುವುದು, ಒಂದರಮೇಲೊಂದನ್ನಿಡುವುದು
ಅಡಗು	೧-೪೯	ಮಾಂಸ
ಅಡಪ	೪-೩೬	ಸಂಚಿ, ಚೀಲ
ಅಡಪವಳಿತಿ	೫-೯೦	ಸಂಚಿಯ ಊಳಿಗದವಳು
ಅಡಸು	೧-೫೫, ೬-೧೫, ೮-೩೧	ಮೇಲೆಬೀಳು, ಒದಗು, ಉಂಟಾಗು
ಅಡು	೪-೬೭	ಬೇಯಿಸು
ಅಣಂ	೧-೯, ೪-೨೦	ಸ್ವಲ್ಪವೂ
ಅಣ್ಪು	೪-೯೬ ಗದ್ಯ	ಲೇಪನ
ಅತನು	೩-೨೩	ಮನ್ಮಥ, ಕಾಮ
ಅತ್ರಪಾತ್ಮಿಕೆ	೭-೧೦	ನಾಚಿಕೆ ಇಲ್ಲದವಳು
ಅದವಟಿಲ್	೪-೯೨ ಗದ್ಯ	ವ್ಯಥೆ
ಅಧಿಗತ	೨-೨ ಗದ್ಯ	ಪಾಠಮಾಡಿದ, ಕಲಿತ
ಅಧಿಗಮನ	೨-೨೮ ಗದ್ಯ	ಅಭ್ಯಾಸ, ಕಲಿಯುವಿಕೆ
ಅಧ್ಯಾರೋಪಣ	೫-೧೦೩	ಆರೋಪಿಸುವುದು
ಅಧ್ವ	೮-೨೮	ಮಾರ್ಗ, ದಾರಿ
ಅಧ್ವರ	೧-೭೪	ಯಜ್ಞ
ಅನೇ	೧-೬೯	ಅಗ್ನಿ

ಅನಾರತ	೫-೯೬	ಅನವರತ, ಯಾವಾಗಲೂ
ಅನಿಲ	೨-೩೭	ವಾಯು
ಅನಿವ	೬-೩೧ ಗದ್ಯ, ೬-೩೨	ಬಲಾತ್ಕಾರ
ಅನಿವಿಸು	೬-೩೧ ಗದ್ಯ	ಬಲಾತ್ಕರಿಸು
ಅನೀಕ	೧-೪೬	ಸಮೂಹ
ಅನು	೫-೬	ಸಿದ್ಧತೆ
ಅನುಗೆಯ್	೪-೫೦, ೭-೧೦	ಸಿದ್ಧಪಡಿಸು, ಹವಣಿಸು
ಅನುರೋಧ	೭-೫೪ ಗದ್ಯ	ಬಲಾತ್ಕಾರ
ಅನುವಿಸು	೪-೧೨೪, ೫-೧೦೪	ಸಿದ್ಧಪಡಿಸು
ಅನ್ನಳ್	೭-೬	ಅಂಥವಳು (ಮನದನ್ನಳ್-ಪ್ರಿಯಳು)
ಅನ್ನರ್	೬-೨೨	ಅಂಥವರು (ಮನದನ್ನರ್-ಪ್ರಿಯರು)
ಅನ್ವಯ	೭-೨೮	ವಂಶ
ಅಪಗತ	೭-೧೪ ಗದ್ಯ, ೭-೪೫ ಗ.	ಕಳೆದುಹೋದ
ಅಪತ್ಯ	೧-೬೫, ೪-೩ ಗದ್ಯ	ಮಗ
ಅಪನೀತ	೫-೫೮ ಗದ್ಯ	ತೆಗೆದುಹಾಕಿದ, ತೆಗೆದ
ಅಪನೋದ	೨-೧೧ ಗದ್ಯ, ೭-೫೫ ಗ.	ಪರಿಹಾರ
ಅಪವರ್ಗ	೪-೬೩	ಮೋಕ್ಷ
ಅಪಾಂಗ	೫-೨೫	ಕಡೆಗಣ್ಣು
ಅಪೇತ	೭-೧೪ ಗದ್ಯ	ಕಳೆದುಹೋದ, ಇಲ್ಲದ
ಅಪ್ಪುಕಯ್	೧-೭೨, ೨-೨೯ ಗದ್ಯ	ಅಂಗೀಕರಿಸು, ಹೊಂದು
ಅಪ್ರಾಕೃತ	೫-೨	ಅಸಾಮಾನ್ಯ
ಅಬ್ಜಾಕರ	೧-೬೭	ಸರೋವರ
ಅಬ್ಬೆ	೫-೯೮	ತಾಯಿ
ಅಬ್ರಹ್ಮಣ್ಯಂ	೪-೮೯	ಬ್ರಾಹ್ಮಣನು ವಿಪತ್ತೊದಗಿತೆಂದು ಕೂಗಿಕೊಳ್ಳುವುದು
ಅಭಿಧಾನ	೧-೩೫	ಹೆಸರು
ಅಭಿಷವ	೩-೩೬	ಅಭಿಷೇಕ
ಅಭ್ಯರ್ಹಿತ	೫-೬೫ ಗದ್ಯ	ಮಾನ್ಯ, ಗೌರವಾರ್ಹ
ಅಭ್ಯಂತರ	೧-೪೨	ಒಳಗೆ
ಅಭ್ರಾಳಿ	೧-೨೮	ಮೋಡಗಳ ಗುಂಪು
ಅಭ್ರಂಕಷ	೧-೪೯ ಗದ್ಯ	ಮುಗಿಲುಮುಟ್ಟುವ
ಅಮರ್ತ್ಯ ಮಾರ್ಗ	೪-೧೦೩	ಆಕಾಶ ಮಾರ್ಗ (ಅಮರ್ತ್ಯ—ದೇವತೆ)
ಅಮರ್ದು	೪-೪೦	ಅಮೃತ
ಅಮರ್ಷಣ	೭-೪೫ ಗದ್ಯ	ಕೋಪ
ಅಮೃತಾಂಶು	೮-೫೫	ಚಂದ್ರ
ಅಮೇಯ	೧-೩೮	ಅಳತೆಗೆ ಮೀರಿದ
ಅಮ್ಮ	೧-೫೩	ತಂದೆ
ಅರಲ್	೭-೩೬	ಹೂವು
ಅರಿದು	೫-೧೦೩	ಅಸಾಧ್ಯ

ಅರ್ಣವ	೨-೧೯	ಸಮುದ್ರ
ಅಱಗುಲಿ	೧-೫೧, ೪-೫೭	ಧರ್ಮಘಾತುಕ, ಪಾಪಿ
ಅಲಕ್ತ	೫-೪೧	ಅರಗು
ಅಲರ್	೧-೬೦ ಗದ್ಯ	ಹೂವು
ಅಲರ್ವಸೆ	೫-೮೯	ಹೂವಿನ ಹಸೆ
ಅಲೆ	೪-೯೧	ಪೀಡಿಸು
ಅಲಂಪು	೫-೯೨	ಸಂತೋಷ
ಅಲುಂಬು	೧-೭೧	ತೊಳೆ
ಅವಕುಂಠಿತ	೪-೯೬ ಗದ್ಯ	ಮುಸುಕು ಹಾಕಿದ
ಅವಗೃಹ್ಯಮಾಣ	೭-೯ ಗದ್ಯ	ಹಿಡಿಯಲ್ಪಡುವ
ಅವಜ್ಞೆಗೆಯ್	೪-೧೧ ಗದ್ಯ, ೭-೪೬ ಗ.	ಕಡೆಗಣಿಸು, ಅಲಕ್ಷ್ಯಮಾಡು
ಅವತರಿಸು	೨-೪೨ ಗದ್ಯ	ಇಳಿ
ಅವತಂಸ	೪-೧೪	(ಕಿವಿಯ) ಆಭರಣ
ಅವಧಾರಿಸು	೫-೪೦ ಗದ್ಯ, ೫-೫೦	ಭಾವಿಸು, ತಿಳಿ
ಅವನತ	೫-೮ ಗದ್ಯ	ಬಾಗಿದ
ಅವನಮ್ರ	೮-೨೬ ಗದ್ಯ	,,
ಅವಸರ	೪-೭೩ ಗದ್ಯ, ೫-೮	ಸಮಯ
ಅವಿತಥ	೨-೧೬ ಗದ್ಯ, ೪-೧೨೩	ಸತ್ಯ, ನಿಜ
ಅವಿನ್ನಾಣ	೫-೭೮ ಗದ್ಯ	ಸಂ.-ಅಭಿಜ್ಞಾನ, ಗುರುತು
ಅಸಮಾಸ್ತ್ರ	೪-೯೧	ಮನ್ಮಥ
ಅಸಿ	೪-೬೪	ಕತ್ತಿ
ಅಸಿತ	೧-೫೫	ಕಪ್ಪಾದ
ಅಸಿಯಳ್	೨-೫೧	ಕೋಮಲೆ
ಅಸು	೧-೬೧	ಪ್ರಾಣ
ಅಸ್ಖಳಿತ	೧-೨೪	ದೃಢವಾದ
ಅಹಮಹಮಿಕೆ	೭-೩	ನಾನು ಮುಂದು ತಾನು ಮುಂದು ಎಂದು ಬರುವಿಕೆ
ಅಳವಿ	೧-೪೩ ಗದ್ಯ, ೩-೪೬	ಅಳತೆ
ಅಳವು	೩-೧೪	ಸಾಮರ್ಥ್ಯ
ಅಳಿನಿ	೪-೮	ಹೆಣ್ಣು ದುಂಬಿ
ಅಳಿಪು	೮-೫೩	ಲೋಲುಪತೆ, ಗೀಳು
ಅಳೀಕ	೬-೩೫	ಸುಳ್ಳು
ಅಳುರ್	೧-೬೦, ೧-೮೧, ೪-೩೫, ೪-೫೭	ವ್ಯಾಪಿಸು, ಹರಡು
ಅಳ್ಕು	೫-೩೨	ಹೆದರು
,,	೪-೩೯	ಶಕ್ತಿಗುಂದು, " ಸುಸ್ತಾಗು
ಅೞಲ್	೧-೫೭, ೧-೬೦, ೬-೧೭ ಗದ್ಯ, ೭-೫೨ ಗದ್ಯ	ವ್ಯಥೆ, ವ್ಯಥೆಪಡು
ಅೞಿ	೧-೪೪	ನಾಶವಾಗು

ಅಟಿಯಾಸೆ	೭-೨೦ ಗದ್ಯ	ಹೀನವಾದ ಆಸೆ
ಅಱ್ಕಱು	೧-೪೫	ಅಕ್ಕರೆ, ಪ್ರೀತಿ
ಅಱ್ತಿ	೧-೩೧	ಪ್ರೀತಿ, ಆಸಕ್ತಿ
ಅಟ್ತಿಗೆ	೨-೧೦	ಪ್ರೀತಿಯುಳ್ಳವಳು
ಅಱ್ದು	೬-೧೮	ಅದ್ದು
ಅಂಗ	೫-೧೦೪, ೪-೧೦೨	ರೀತಿ
ಅಂಗಚಿತ್ತ	೬-೧೧ ಗದ್ಯ	ಬಹುಮಾನ
ಅಂಗಯಷ್ಟಿ	೬-೪	ಯಷ್ಟಿ-ಹಾರ; ಯಷ್ಟಿಯಂತಿರುವ ಅಂಗ
ಅಂಘ್ರಿಪ	೪-೧೪	ಮರ
ಅಂಚಲ	೨-೪೩ ಗದ್ಯ, ೪-೪೬	ಸೆರಗು
ಅಂಚಿತ	೧-೧೦	ಸ್ಪಷ್ಟವಾದ, ಸುಂದರವಾದ
ಅಂಚೆ	೩-೧೬	ಹಂಸೆ
ಅಂಜಲಿ	೪-೧೨೪	ಬೊಗಸೆ
ಅಂಜುಳಿ	೩-೪೫ ಗದ್ಯ	,,
ಅಂತರಾಯ	೬-೩೭ ಗದ್ಯ	ಅಡ್ಡಿ, ವಿಘ್ನ
ಅಂತರಿತ	೭-೬೪ ಗದ್ಯ	ದೂರವಾದ
ಅಂತರಿತೆ	೩-೪೭	ದೂರವಾದವಳು
ಅಂತರಿಸು	೮-೨೪	ತಡಮಾಡು
ಅಂತು	೪-೩೪	ಕೊನೆ, ಸಂ..ಅಂತ
ಅಂಶು	೩-೨೩	ಕಿರಣ, ಕಾಂತಿ
ಅಂಶುಕ	೧-೧೮, ೪-೪೭	ವಸ್ತ್ರ

ಆ

ಆಕಲಿತ	೧-೬೮ ಗದ್ಯ, ೮-೪೬	ಕೂಡಿದ
ಆಕುಲ	೬-೧೯	ವ್ಯಥೆ
ಆಕುಲೆ	೮-೫೧	ವ್ಯಥೆಯನ್ನು ಹೊಂದಿದವಳು
ಆಕೇಕರ	೨-೪೨	ಅರೆತೆರೆದ ಕಡೆಗಣ್ಣ ನೋಟ
ಆಕ್ಷಿಪ್ತ	೨-೫೫ ಗದ್ಯ, ೭-೩೯ ಗದ್ಯ, ೪-೧೨೪ ಗದ್ಯ	ಕೂಡಿದ
ಆಗಡೆ	೪-೪೮	ಆಗಲೆ
ಆತಪ	೭-೫೩ ಗದ್ಯ	ಬಿಸಿಲು
ಆತಪತ್ರ	೨-೫೯	ಕೊಡೆ
ಆತುರ	೨-೪೪, ೮-೩೪	ಪೀಡಿತ
ಆದಂ	೧-೧೩	ಹೆಚ್ಚಾಗಿ
ಆನಕ	೮-೬೩ ಗದ್ಯ	ಭೇರಿ
ಆಪಗಾ	೨-೫೭	ನದಿ
ಆಪೀಡ	೨-೨೭	ಶಿರೋಭೂಷಣ
ಆಪೂರ	೫-೪೨	ತುಂಬುವಿಕೆ
ಆಪ್ಯಾಯಮಾನ	೭-೪೫ ಗದ್ಯ	ಹಿತ

ಆಭೋಗ	೧-೭೪	ವಿಸ್ತಾರ
ಆಮಳಕ	೧-೩೨, ೧-೭೫	ನೆಲ್ಲಿಯಕಾಯಿ
ಆಯತನ	೩-೨೧, ೬-೨೯ ಗದ್ಯ	ಮನೆ, ಆಲಯ
ಆರ್	೨-೪೬, ೭-೪ ಗದ್ಯ	ತುಂಬು
ಆರೋಗಿಸು	೫-೮೫	ಊಟಮಾಡು
ಆರ್ದ್ರ	೧-೩೨, ೭-೩೬ ಗದ್ಯ	ಒದ್ದೆಯಾದ
ಆರ್ಯೆ	೧-೨೧, ೪-೩೮ ಗದ್ಯ	ಒಂದು ಪದ್ಯಜಾತಿ
ಆಱುಸು	೭-೧೯	ಸಮಾಧಾನಪಡಿಸು
ಆಱು	೪-೨೮	ಸಮರ್ಥನಾಗು
ಆಲಜಾಲ	೭-೨೦ ಗದ್ಯ	ಆಗದ ಹೋಗದ ಕಲ್ಪನೆ
ಆಲಿ	೪-೨೯	ಕಣ್ಣು
ಆವಿಷ್ಟೆ	೭-೨೨ ಗದ್ಯ	ಆವೇಶವನ್ನು ಹೊಂದಿದವಳು
ಆವಿಳ	೨-೩	ಕಲುಷಿತವಾದ
ಆಶ್ವಾಸಿಸು	೪-೧೨೩	ಸಮಾಧಾನಪಡಿಸು
ಆಸತ್ತು	೪-೨೭	ಆಯಾಸಪಟ್ಟು (ಧಾ.-ಆಸಱು)
ಆಸನ್ನತೆ	೮-೩	ಸಾಮೀಪ್ಯ
ಆಸವ	೪-೮	ಮದ್ಯ
ಆಸಾರ	೭-೩೭	ಜಡಿಮಳೆ
ಆಸ್ಫಾಲನ	೩-೩೮	ತಟ್ಟುವಿಕೆ
ಆಸ್ವಾದಿಸು	೧-೩೨	ರುಚಿನೋಡು
ಆಹ್ವಯ	೨-೧, ೩-೧೫ ಗ., ೫-೮೩	ಹೆಸರು
ಆೞ್	೪-೧೦೪	ಹೊಂದು
ಆಳವಾಳ	೧-೭೩	ಪಾತಿ
ಆಂದೋಳಿತ	೮-೨೭	ತೂಗಾಡಿಸಲ್ಪಟ್ಟ

ಇ

ಇಕ್ಕುವಡು	೫-೮೫ ಗದ್ಯ	ಪೆಟ್ಟುತಾಳು
ಇಡಿ	೩-೪೩, ೪-೩೧	ದಟ್ಟವಾಗು
ಇತರೆ	೫-೫೮ ಗದ್ಯ	ಹೀನಗುಣವುಳ್ಳವಳು, ಸಾಮಾನ್ಯೆ
ಇನಿವಿರಿದು	೫-೮೦	ಇನಿತು+ಪಿರಿದು
ಇನ್ನರ್	೪-೧೦೮	ಇಂಥವರು
ಇರುಳ್	೫-೬೪	ರಾತ್ರಿ
ಇರ್ಪು	೫-೪೩, ೫-೭೮ ಗದ್ಯ, ೬-೧೬	ದ್ರವ
ಇರ್ಮೆ	೭-೪೪	ಎರಡು ಬಾರಿ
ಇಱುಂಬು	೧-೪೦, ೧-೭೩	ಇಕ್ಕಟ್ಟು, ಒತ್ತು, ಗುಂಪು
ಇಳಿಸು	೨-೨	ಹೀಯಾಳಿಸು
ಇಂಗಡಲ್	೪-೧	ಕ್ಷೀರಸಮುದ್ರ
ಇಂಚರ	೩-೧೬	ಇಂಪಾದ ಸ್ವರ

ಇಂದೂಪಲ	೫-೮೫	ಚಂದ್ರಕಾಂತ ಶಿಲೆ
ಇಂಧನ	೪-೧೦೦	ಕಟ್ಟಿಗೆ, ಸೌದೆ

ಈ

ಈಡಾಡು	೭-೪೨ ಗದ್ಯ	ಬಿಡು, ಬಿಸುಡು
ಈಷದಾವಲಿತ	೧-೭೬ ಗದ್ಯ	(ಈಷತ್+ಆವಲಿತ) ಸ್ವಲ್ಪ ತಿರುಗಿದ
ಈಟುಕೊಳ್	೧-೧೩	ಸೆಳೆದುಕೊಳ್ಳು
ಈಂಟು	೧-೩೧	ಕುಡಿ

ಉ

ಉಕ್ಕೆವ	೪-೧೧೧	ಠಕ್ಕು, ಮೋಸ
ಉಗು	೧-೭೦	ಸ್ರವಿಸು, ಸುರಿ
ಉಗ್ಗಡ	೧-೭೭	ಆಧಿಕ್ಯ
ಉಗ್ಘಡಿಸು	೫-೪೩ ಗದ್ಯ	ಪರಾಕು ಹೇಳು (ನೆಲನನುಗ್ಘಡಿಸು= ಪಾದಾವಧಾನವನ್ನು ಹೇಳು)
ಉಜ್ಜಳಿಕ್ಕೆ	೭-೧೪	ಪ್ರಕಾಶ, ಉಜ್ಜ್ವಲವಾದ ಕಾಂತಿ
ಉಜ್ಜುಗ	೫-೫, ೫,೨೮ ಗದ್ಯ	ಉದ್ಯೋಗ
ಉಣ್ಮು	೧-೪೯, ೧-೬೭	ಉಂಟಾಗು
ಉತ್ಕ	೪-೭೮	ಮೈಮರೆತ
ಉತ್ಕರ	೮-೩೯	ಸಮೂಹ
ಉತ್ಕಲಿಕೆ	೫-೭೪	ಆತ್ಯೌತ್ಸುಕ್ಯ
ಉತ್ಕಂಠ	೫-೩೦ ಗದ್ಯ	,,
ಉತ್ತಮಾಂಗ	೭-೩೬	ತಲೆ
ಉತ್ತವಳಿಕೆ	೪-೧೨೦	ಔತ್ಸುಕ್ಯ
ಉತ್ತು	೮-೪೦	ಹೊಂದಿ (ಧಾ.-ಉಱು=ಹೊಂದು, ಸೇರು)
ಉತ್ತುಂಗ	೪-೧	ಉನ್ನತ, ಶ್ರೇಷ್ಠ
ಉತ್ಥ	೧-೪೬	ಎದ್ದ
ಉತ್ಸಾರಿತ	೬-೩ ಗದ್ಯ	ದೂರಕ್ಕೆ ಕಳುಹಲ್ಪಟ್ಟ
ಉತ್ಸೃಷ್ಟ	೪-೫೬ ಗದ್ಯ	ಬಿಡಲ್ಪಟ್ಟ
ಉತ್ಸೇಧ	೧-೪೯ ಗದ್ಯ	ಔನ್ನತ್ಯ, ಎತ್ತರ
ಉದಗ್ರ	೨-೩೯	ಎತ್ತರವಾದ
ಉದಧಿ	೫-೮೪ ಗದ್ಯ	ಸಮುದ್ರ
ಉದಾರತೆ	೧-೨	೧. ವಿಸ್ತಾರ, ೨. ಔದಾರ್ಯ
ಉದ್ಗತ	೧-೧೮, ೨-೨೬, ೭-೪೮ಗ.	ಹೊರಹೊಮ್ಮಿದ, ಮೇಲಕ್ಕೆದ್ದ
ಉದ್ಗಾರಿ	೫-೫೮, ೬-೧೧ ಗ., ೮-೨೭	ಹೊರಸೂಸುವ
ಉದ್ಘೃಷ್ಟ	೨-೨	ಉಜ್ಜಲ್ಪಟ್ಟ
ಉದ್ದೇಸ	೪-೧೫	ಉದ್ದೇಶ

ಉದ್ವೇಗ	೩- ೯	ವ್ಯಥೆ, ಕಳವಳ
ಉದ್ವೇಜನ	೭- ೮	,,
ಉದ್ಭೇದ	೫-೭೬	ಹೊರಹೊಮ್ಮುವುದು
ಉನ್ನಮಿತ	೧-೨೦ ಗದ್ಯ	ಎತ್ತಿದ
ಉಪಕರಣ	೫-೬೨	ಸಾಧನ
ಉಪದಿಶ್ಯಮಾನ	೨-೪೫ ಗದ್ಯ	ತೋರಿಸಲ್ಪಡುವ
ಉಪಧಾನ	೫-೫೮	ದಿಂಬು
ಉಪನೀತ	೮-೧೭ ಗದ್ಯ	ತರಲ್ಪಟ್ಟ
ಉಪಪ್ಲವ	೨- ೩ ಗದ್ಯ	ಪೀಡೆ, ತೊಂದರೆ
ಉಪರತ	೪-೫೬ ಗದ್ಯ, ೪-೧೦೪ ಗ.	ಸತ್ತ
ಉಪರೋಧಿಸು	೩-೪೫ ಗದ್ಯ	ತಡೆ, ಅಡ್ಡಿಮಾಡು
ಉಪಲ	೨-೫೭	ಕಲ್ಲು
ಉಪಶಮ	೪-೨೧	ಶಾಂತಿ
ಉಪಹಾರ	೧-೭೩ ಗದ್ಯ	ಪೂಜೆ, ಬಲಿ
ಉಪಾರೂಢ	೨-೩೫ ಗದ್ಯ, ೫-೫ ಗದ್ಯ	ಬೆಳೆದ, ಹೆಚ್ಚಿದ
ಉಪಾಲಂಭನ	೪-೯೭ ಗದ್ಯ	ನಿಂದೆ
ಉಪ್ಪವಡಿಸು	೫-೬೫ ಗದ್ಯ	ಏಳು
ಉಬ್ಬೆಗ	೩-೩೪, ೪-೫೨	ಉದ್ವೇಗ, ಕಳವಳ
ಉಮ್ಮಳ	೩-೪೫	ವ್ಯಥೆ, ಕಳವಳ
ಉರುಳಿಗೊಳ್	೭-೫೪	ಉಂಡೆಯಾಗು
ಉಱದೆ	೭-೪೬	ಲಕ್ಷ್ಯಮಾಡದೆ (ಧಾ.-ಉಱು)
ಉಲಿ	೫-೮೪	ಧ್ವನಿಮಾಡು
ಉಳಿ	೧-೫೬, ೪-೩೧	ಅಡಗು, ಬಚ್ಚಿಟ್ಟುಕೊಳ್ಳು
ಉಂತೆ	೫-೧೧	ಸುಮ್ಮನೆ, ಹಾಗೆ

ಊ

ಊಡು	೧-೩೩	ಊಟಮಾಡಿಸು, ತಿನ್ನಿಸು
,,	೮-೫೨	ಲೇಪಿಸು
ಊದು	೭-೧೮	ಬೀಸು

ಋ

ಋಜು	೫-೪೬, ೮-೬೮	ಸರಳವಾದ

ಎ

ಏಕಾವಳಿ	೪-೯೬	ಒಂಟೆಳೆಯ ಮುತ್ತಿನಹಾರ
ಎಗ್ಗ	೪-೬೪	ದಡ್ಡ
ಎಡರ್	೮-೬೦	ಪ್ರತಿಬಂಧಕ, ತೊಂದರೆ
ಎನಸುಂ	೧-೮೧, ೨-೩೪, ೫-೩೦, ೫-೯೧	ಹೆಚ್ಚಾಗಿ

ಎನ್ನಂ	೫-೬೩	ಎಂಥವನು
ಎನ್ನೊಂದಿಗರ್	೪-೬೬	ನನ್ನಂಥವರು
ಎವೆ	೬-೧೩	ರೆಪ್ಪೆ
ಎಯ್ತರ್	೪-೧೧೦	ಬರು
ಎಯ್ದೆ	೧-೪೯ ಗದ್ಯ, ೪-೬೭	ಚೆನ್ನಾಗಿ, ಪೂರ್ತಿಯಾಗಿ
ಎರಳೆ	೪-೫೩	ಜಿಂಕೆ
ಎರೆ	೧-೫೫	ಆಹಾರ (ತಿರ್ಯಗ್ಜಂತುಗಳ ಗ್ರಾಸ)
ಎಱಕೆ	೧-೪೭	ರೆಕ್ಕೆ
ಎಱೆಯ	೧-೬, ೮-೬೪	ಒಡೆಯ
ಎಱಂಕೆ	೧-೫೬ ಗದ್ಯ	ರೆಕ್ಕೆ
ಎಲರ್	೪-೩೦	ಗಾಳಿ
ಎಲವ	೧-೪೧	ಬೂರುಗದ ಮರ
ಎಸಕ	೬-೯	ಕೆಲಸ
ಎಸಗು	೬-೨೦	ಧ್ವನಿ ಕೇಳಿಸು
ಎಸೆ	೩-೨೦, ೩-೩೩, ೪-೩೦	,,
ಎಳವೆ	೧-೫೭, ೪-೩೩	ಬಾಲ್ಯ
ಎಳಸು	೧-೯, ೮-೪೯	ಬಯಸು, ಅಪೇಕ್ಷಿಸು
,,	೩-೪೬, ೫-೬೭	ವ್ಯಾಪಿಸು
ಎಱಲ್	೧-೫೬ ಗದ್ಯ, ೩-೧೮	ನೇತಾಡು, ಜೋಲು ಬೀಳು
ಎಱವು	೪-೪೧, ೫-೮೯, ೫-೯೨	ತಡವು, ಸವರು
ಎಱ್ತರ್	೧-೧೫, ೫-೮೩	ಬರು
ಎಱ್ಬಟ್ಟು	೩-೪	ಓಡಿಸು

ಏ

ಏಗಂ	೬-೨೪	ನಿಶ್ಚಯವಾಗಿಯೂ
ಏಣ	೧-೭೩	ಜಿಂಕೆ
ಏಱು	೮-೨೪ ಗದ್ಯ	ಪೆಟ್ಟು, ಗಾಯ
ಏವರ್	೪-೧೧೪	ಯಾರು, ಏನು ಮಾಡುವರು
ಏವುದು	೫-೬೦, ೬-೧	ಯಾವುದು, ಏನುಮಾಡುವುದು, ಏನುಫಲ
ಏವೆಂ	೮-೧೪	ಏನು ಮಾಡಲಿ

ಐ

ಐಕಿಲ್	೪-೭೯	ಮಂಜುಗಡ್ಡೆ

ಒ

ಒಗುಮಿಗೆ	೮-೨೫	ಆಧಿಕ್ಯ
ಒಗೆ	೧-೪೯	ಹುಟ್ಟು, ಉಂಟಾಗು
ಒಟ್ಟೈಸು	೮-೬೦	ಒಟ್ಟುಗೂಡು
ಒಡರಿಸು	೨-೧೨, ೬-೫	ಪ್ರಯತ್ನಿಸು

ಒಡರ್ಚು	೮-೫೨	ಪ್ರಯತ್ನಿಸು
ಒತ್ತಂಬ	೧-೪೯	ಬಲಾತ್ಕಾರ
ಒದವು	೧-೨೧	ಒದಗು, ಉಂಟಾಗು
ಒಯ್ಯನೆ	೧-೬೮	ಮೆಲ್ಲಗೆ
ಒರೆ	೭-೨೫	ಹೇಳು
ಒರ್ವೊದಲ್	೫-೨೦	ಒಂದೇ ಸಲ
ಒಱಲ್	೬-೩೦	ಪ್ರೀತಿಸು
ಒಲವರ	೮-೨೯	ಪ್ರೀತಿ, ಪಕ್ಷಪಾತ
ಒಲವು	೫-೨೩	ಪ್ರೀತಿ
ಒಸಗೆ	೨-೨೫ ಗದ್ಯ	ಉತ್ಸವ
ಒಸರ್	೫-೬೬	ಸ್ರವಿಸು, ಸುರಿ
ಒಸೆ	೮-೨೩	ಪ್ರೀತಿಸು
ಒಸೆಯಿಸು	೮-೭೦	ಸಂತೋಷಗೊಳಿಸು
ಒಂದು	೧-೯, ೫-೩೦	ಹೊಂದು, ಸೇರು

ಓ

ಓಜೆ	೩-೧೯	ರೀತಿ, ಕ್ರಮ
ಓಪ	೪-೭೬	ಪ್ರಿಯ
ಓರಂತೆ	೪-೬೭	ಒಂದೇ ಸಮನಾಗಿ
ಓರಂದದೆ	೧-೭೫	,,
ಓಲೈಸು	೭-೪೮ ಗದ್ಯ	ಸೇವೆ ಸಲ್ಲಿಸು
ಓಷಧಿ	೨-೫೭	ವನಸ್ಪತಿ, ಮೂಲಿಕೆ
ಓಸರಿಸು	೪-೪೧	ಓರೆಮಾಡು
ಓಳಿ	೬-೨೮	ಸಮೂಹ

ಕ

ಕಕ್ಷ್ಯ	೫-೧೫ ಗದ್ಯ	ತೊಟ್ಟಿ
ಕಟಕ	೨-೩೯	ಕಡಗ
,,	೫-೭೪ ಗದ್ಯ	ಸೈನ್ಯ
ಕಟೀಸೂತ್ರ	೧-೩೬ ಗದ್ಯ	ಒಡ್ಯಾಣ, ಡಾಬು
ಕಡುಪು	೩-೩, ೭-೬೪	ಬಲ
ಕಡೆಪ	೧-೪೮	ಕಡೆಯುವಿಕೆ
ಕಣಿ	೪-೫೯	ಗಣಿ
ಕಣ್ಬೊಲ	೭-೧೭	ಕಣ್ಣಿಗೆ ಕಾಣುವಷ್ಟು ಪ್ರದೇಶ
ಕತಿಪಯ	೬-೧೫ ಗದ್ಯ	ಕೆಲವು
ಕದರ್ಥನೆ	೫-೮೦	ಕಾಡುವಿಕೆ
ಕದಂಪು	೪-೧೮	ಕೆನ್ನೆ
ಕದಂಬಕ	೪-೭೮	ಸಮೂಹ
ಕದಿರ್	೩-೨೮, ೫-೮೧	ಕಿರಣ

ಕನ್ನಡವಕ್ಕಿ	೧-೨೯	ಗಿಳಿ
ಕನ್ನವಾಡ	೫-೩೧ ಗದ್ಯ,೫-೬೩ಗದ್ಯ	ಅಂತಃಪುರ
ಕಪ್ಪುರ	೫-೭೮	ಪಚ್ಚಕರ್ಪೂರ
ಕಯ್ಗಣ್ಮು	೫-೭೪ ಗದ್ಯ	ಹೆಚ್ಚಾಗು
ಕಯ್ಗಯ್	೭-೨೬ ಗದ್ಯ	ಅಲಂಕರಿಸು
ಕಯ್ವಾರ	೫-೧೦೩	ಹೊಗಳಿಕೆ
ಕರುಮಾಡ	೨-೪೭	ಉಪ್ಪರಿಗೆ
ಕರುವಿಡು	೬-೩೦	ಎರಕ ಹೊಯ್ಯು
ಕರಂ	೧-೩೨	ಹೆಚ್ಚಾಗಿ
ಕರಂಕ	೧-೨೭ ಗದ್ಯ	ಸಣ್ಣ ಪೆಟ್ಟಿಗೆ
ಕರ್ಪುರ	೧-೭, ೩-೨೪	ತೊಳೆ
ಕರ್ಣಪೂರ	೪-೧೨	ಕಿವಿಯ ಆಭರಣ
ಕಱುತ್ತು	೪-೧೧೯	ಕೋಪಿಸಿ, ಧಿಕ್ಕರಿಸಿ
ಕಱಂಗು	೪-೩೫	ಕೆಪ್ಪಾಗು
ಕಲ	೧-೧೦, ೫-೮೪	ಇಂಪಾದ, ಮಧುರಾಸ್ಪುಟವಾದ
ಕಲಾಪ	೨-೩೪	ನವಿಲಿನ ಪುಚ್ಛ
,,	೫-೮೪, ೮-೪೪	ಸಮೂಹ
ಕವಲ್ಗಣೆ	೧-೪೦	ಕೊಂಬೆ ಕವಲೊಡೆದಿರುವ ಸ್ಥಳ
ಕವಿ	೧-೨	೧. ನೀರು ಹಕ್ಕಿ, ೨. ಕಾವ್ಯಕರ್ತೃ
ಕಳ್	೪-೩೯	ಮದ್ಯ
ಕಳಕಂಠ	೧-೩೧	ಕೋಗಿಲೆ
ಕಳೆದುಕೊಳ್	೪-೩೬ ಗದ್ಯ, ೬-೧೧ ಗ.	ತೆಗೆದುಕೊಳ್ಳು, ಇಸುಕೊಳ್ಳು
ಕಟಲ್	೧-೪೪	ಶಿಥಿಲವಾಗು
ಕಟಿ	೧-೪೩ ಗದ್ಯ	ಸಾಯಿ
ಕಾಕಲಿ	೩-೧೯	ಮೃದುಗಾನ
ಕಾಪು	೬-೩೪	ಕಾವಲು, ರಕ್ಷಣೆ
ಕಾರ್	೮-೨೭	ಅಗಿ, ಮೆಲ್ಲು
ಕಾರ್ಗಾಲ	೧-೪೮	ಮಳೆಗಾಲ
ಕಾಲಾಯಸ	೮-೨೮ ಗದ್ಯ	ಕಬ್ಬಿಣ
ಕಿನಿಸು	೭-೨೨ ಗದ್ಯ	ಕೋಪ
ಕಿಱುಕುಳ	೭-೫೮	ಅಲ್ಪ
ಕಿಱುಳ	೮-೧೫	,,
ಕಿಶೋರಕ	೨-೨೮	ಮರಿ
ಕಿಸಲಯ	೧-೭೦	ಚಿಗುರು
ಕಿಲ್ಪ್ವಾಳವಳ್	೧-೨೮	ಬಿಚ್ಚುಕತ್ತಿಯನ್ನು ಹಿಡಿದ ರಾಜನ ಅಂಗ ರಕ್ಷಕಳು
ಕೀರ	೧-೧೨	ಗಿಳಿ
ಕೀಲ್	೧-೫೫	ಘೀಳಿಡು, ಶಬ್ದಮಾಡು
,,	೨-೩೯	ಕಡಿವಾಣ

ಕೀಲ್ಪಡು	೫-೬೨ ಗದ್ಯ	ಹೀನ್ಯೈಸಿಕೊಳ್ಳು
ಕುಜಾತ	೪-೪	ಮರ
ಕುಟ್ಟಿಮ	೧-೧೭ ಗದ್ಯ	ನೆಲಗಟ್ಟು
ಕುಡಿತೆ	೧-೬೮, ೭-೪	ಬೊಗಸೆ
ಕುಡುಮಿಂಚು	೮-೪೬	ಕೊಂಕಾದ ಮಿಂಚು, ಬಳ್ಳಿಮಿಂಚು
ಕುತ್ತು	೮-೨ ಗದ್ಯ, ೮-೨೪ ಗದ್ಯ	ಬಡಿ, ಹೊಡೆತ
ಕುಭೃತ್	೧-೭	ರಾಜ
ಕುರುಳ್	೪-೪೧	ತಲೆಯ ಕೂದಲು
ಕುಳಿರ್	೫-೮೭, ೮-೫೫	ತಣ್ಣಗಿರು
ಕುಳಿ	೧-೪೪	ಗುಂಡಿ, ತಗ್ಗು, ಗುಳಿ
ಕೂರ್	೫-೪೬, ೭-೩೧	ಪ್ರೀತಿಸು
ಕೂರ್ಮೆ	೪-೮೭	ಪ್ರೀತಿ
ಕೃಪಣ	೪-೯೬ ಗದ್ಯ	ದೀನ
ಕೆಚ್ಚನೆ	೭-೪೫ ಗದ್ಯ	ಕೆಂಪಗೆ
ಕೆಡೆ	೭-೨೩	ಬೀಳು
ಕೆತ್ತು	೪-೮೨, ೬-೧೩	ಅದಿರು, ನಡುಗು
ಕೆಮ್ಮಗೆ	೪-೬೪	ಸುಮ್ಮನೆ, ನಿಷ್ಫಲವಾಗಿ
ಕೆಮ್ಮನೆ	೩-೪೫	,,
ಕೆಳೆಯ	೭-೪೭ ಗದ್ಯ	ಗೆಳೆಯ, ಸ್ನೇಹಿತ
ಕೇಯೂರ	೮-೪೬	ತೋಳು ಬಂದಿ
ಕೇಸಡಿ	೭-೬೪, ೮-೫೨	ಕೆಂಪಾದ ಅಡಿ
ಕೈರಾತ	೧-೪೬	ಕಿರಾತರಿಗೆ ಸಂಬಂಧಪಟ್ಟ
ಕೊಳ್	೩-೩೪	ತಾಗು, ಆಕ್ರಮಿಸು
ಕೋಟರ	೧-೪೨	ಪೊಟ್ಟರೆ
ಕೋಡು	೧-೪೦	ಕೊಂಬೆ
ಕೋರಯ್ಸು	೮-೪೩	ಕುಕ್ಕು
ಕೌಳುಡೆ	೫-೧೮, ೫-೩೭	ಮೆತ್ತೆ, ದಿಂಬು
ಕಂಟಣಿಸು	೮-೩೫ ಗದ್ಯ	ಕುಗ್ಗು, ಎದೆಗೆಡು
ಕಂಡರಿಸು	೨-೪೭. ೪-೫೬ ಗದ್ಯ	ಕೊರೆ, ಕಡೆತಕ್ಕೆಕೊಡು
ಕಂತು	೧-೯	ಮನ್ಮಥ
ಕಂಧರ	೧-೭೬ ಗದ್ಯ	ಕುತ್ತಿಗೆ
ಕಾಂತ	೮-೫೦	ಮನೋಹರ
ಕುಂಚ	೪-೩೯, ೫-೩೯	ನವಿಲುಗರಿಯ ಕಟ್ಟು
ಕುಂಚಿಗೆ	೩-೨೪	ತೂಲಿಕೆ, "ಬ್ರಷ್ಷು"
ಕೊಂಡು	೧-೪೭	ಧಾ.-ಕೊಳ್; ಮಳೆ ಕೊಂಡು ಬಿಟ್ಟ ತೆಱಂ = ಮಳೆ ಬಂದು ಬಿಟ್ಟರೀತಿ
ಕ್ರಂದನ	೪-೮೮	ಅಳು
ಕ್ರಾಂತಿ	೬-೧೮	ತಳಮಳ
ಕ್ಷಪಿತ	೫-೨೩ ಗದ್ಯ	ಕ್ಷೀಣವಾದ

ಕ್ಷಪಿಯಿಸು	೪-೧೧೫	ಕ್ಷೀಣವಾಗುವಂತೆ ಮಾಡು
ಕ್ಷಮ	೭-೬೪ ಗದ್ಯ	ಸಮರ್ಥ
ಕ್ಷುಣ್ಣ	೨-೨೧	ತುಳಿಯಲ್ಪಟ್ಟ, ಅನುಸರಿಸಿದ
ಕ್ಷುಭಿತ	೧-೨೭ ಗದ್ಯ	ತಳಮಳ ಹೊಂದಿದ, ಅಲ್ಲಕಲ್ಲೋಲವಾದ
ಕ್ಷ್ಮಾಧರ	೧-೭೪	ಬೆಟ್ಟ

ಖ

ಖಲೀನ	೨-೩೯	ಕಡಿವಾಣ
ಖುರ	೨-೩೯	ಗೊರಸು

ಗ

ಗದ್ಗದಿಕಾ	೭-೯ ಗದ್ಯ	ಅಸ್ಪಷ್ಟ ಧ್ವನಿ
ಗಭೀರ	೧-೨	೧. ಆಳ, ೨. ಗಂಭೀರ
ಗರಿಷ್ಠ	೮-೭	ಶ್ರೇಷ್ಠ
ಗರ್ಹಿತ	೧-೧೬	ನಿಂದಾಸ್ಪದ
ಗವ್ಯೂತಿ	೬-೨೯ ಗದ್ಯ	ಸುಮಾರು ಎರಡು ಮೈಲಿ
ಗಹನ	೧-೮೩, ೪-೮೪	ಅಡವಿ
ಗಟಿಗಟ್ಟಿಸು	೧-೫೮	ತ್ವರೆಗೊಳ್ಳು
ಗಟಿಪು	೧-೩೩, ೩-೪೧	ಹರಟು
ಗಾಡಿ	೫-೯	ಸೌಂದರ್ಯ
ಗಾತ್ರ	೨-೧೫	ದೇಹ
ಗಾವರ	೩-೧೯	ಧ್ವನಿ
ಗುಡಿಗಟ್ಟು	೭-೨೬ ಗದ್ಯ	ಉತ್ಸಾಹಹೊಂದು (ಗುಡಿ =ಬಾವುಟ)
ಗುಣಪಣ	೫-೫೫	ಸದ್ಗುಣವೆಂಬ ಹಣ
ಗುಣ್ಪು	೧-೩೭	ಆಳ
ಗುಲ್ಮ	೪-೮೮	ಪೊದೆ
ಗೆತ್ತು	೪-೨೫	ಭಾವಿಸಿ, ಭ್ರಮಿಸಿ (ಧಾ.-ಗಿಱು)
ಗೇಯ	೩-೨೦	ಗಾನ, ಸಂಗೀತ
ಗೋಣ್	೧-೫೬ ಗದ್ಯ	ಕುತ್ತಿಗೆ
ಗೋರಿ	೪-೫೩	ಮೃಗಗಳನ್ನು ಮೋಹಿಸುವ ಗಾನ
ಗೋಷ್ಠಿ	೮-೭	ಸಭೆ
ಗೋಸನೆ	೭-೧೪	ಸಂ.-ಘೋಷಣ, ಸಾರುವುದು
ಗಂಧವಹ	೮-೬	ವಾಯು, ಗಾಳಿ
ಗೆಂಟು	೬-೧೧ ಗದ್ಯ, ೬-೨೯ ಗ.	ದೂರ

ಘ

ಘನ	೧-೪೬	ಮೋಡ
ಘರ್ಮೋದ	೫-೨೫	ಬಿಸಿ ನೀರು
ಘಟಿಲನೆ	೪-೮೯	ಬೇಗ
ಘೂರ್ಣಿಸು	೨-೧೯	ಮೊರೆ, ಭೋರೆಂದು ಶಬ್ದವಾಗು

ಚ

ಚಕ್ರವಾಳ	೧-೩೮	ಮಂಡಲ, ಸುತ್ತುವಳಯ
ಚಮ್ಮಟಿಗೆ	೮-೨೪ ಗದ್ಯ	ಸಂ.-ಚರ್ಮಪಟ್ಟಿಕಾ, ಬಾರುಕೋಲು
ಚರ್ಚೆ	೪-೭೯ ಗದ್ಯ	ಲೇಪನ
ಚಾಟು	೪-೯೬ ಗದ್ಯ	ಕುಶಲೋಕ್ತಿ, ಪ್ರಿಯವಚನ
ಚುಬುಕ	೨-೪೫	ಗಲ್ಲ
ಚೆಚ್ಚರ	೩-೭	ಬೇಗ
ಚಂಚತ್	೧-೧	ಚಲಿಸುವ, ಅಲ್ಲಾಡುವ
ಚಂಚರೀಕ	೮-೫೦	ದುಂಬಿ
ಚಂಚು ಪುಟ	೧-೪೫	ಕೊಕ್ಕು
ಚಂಡಿಕೆ	೧-೧೫	ತಲೆಯ ಕೂದಲು
ಚಂದ್ರಾತಪ	೫-೪೫	ಬೆಳ್ದಿಂಗಳು

ಛ

ಛನ್ನ	೧-೨೮	ಮುಚ್ಚಿದ
ಛಲ	೫-೭ ಗದ್ಯ	ವ್ಯಾಜ, ನೆವ
ಛವಿ	೧-೩೧	ಬಣ್ಣ, ಕಾಂತಿ

ಜ

ಜಕ್ಕವಕ್ಕಿ	೫-೬೫	ಚಕ್ರವಾಕಪಕ್ಷಿ
ಜಡಿ	೬-೩೧ ಗದ್ಯ	ಗದರಿಸು
ಜರಠ	೧-೩೮	ಮುದಿ
ಜರ್ಜರಿತ	೧-೩೭ ಗದ್ಯ	ಶಿಥಿಲವಾದ, ಒಡೆದ, ಚೂರಾದ
ಜಲಕ್ಕನೆ	೭-೫೨	ಬೇಗ
ಜವ	೧-೫೩	ಯಮ
,,	೧-೬೪	ವೇಗ
ಜಾನಿಸು	೭-೪೭ ಗದ್ಯ	ಧ್ಯಾನಿಸು
ಜಾಮಾತೃ	೮-೬೧ ಗದ್ಯ	ಅಳಿಯ
ಜಾಯಾ	೧-೪೨	ಹೆಂಡತಿ
ಜೀವನ	೧-೨	೧. ನೀರು, ೨. ಬದುಕು
ಜೀವೊಡೆ	೧-೫೧	ಹೆದೆಯ ಪೆಟ್ಟು
ಜೊನ್ನ	೫-೪೪	ಸಂ.-ಜ್ಯೋತ್ಸ್ನಾ, ಬೆಳ್ದಿಂಗಳು
ಜೋಗವಟ್ಟಿಗೆ	೩-೩೯	ಸಂ.-ಯೋಗಪಟ್ಟಿಕಾ, ಧ್ಯಾನಕಾಲದಲ್ಲಿ ಯೋಗಿಗಳು ಬೆನ್ನು ಮೊಳಕಾಲುಗಳನ್ನು ಸೇರಿಸಿ ಕಟ್ಟುವ ಬಟ್ಟೆ
ಜಂಬೂ	೮-೨೬ ಗದ್ಯ	ನೇರಿಳೆ
ಜ್ಯಾ	೩-೧೯	ಬಿಲ್ಲಿನ ಹೆದೆ

ಝ

ಝೋಂಪಿಸು	೫-೬೪	ತೂಕಡಿಸು

ಡ

ಡಾವರ	೪-೨೦	ದಗೆ, ದಾಹ
ಡೋಲಾಯಮಾನ	೫-೩೭ ಗದ್ಯ	ತೂಗಾಡುವ

ತ

ತಗುಳ್	೧-೩೬ ಗದ್ಯ, ೪-೭	ಆರಂಭಿಸು, ಮೊದಲು ಮಾಡು
ತಗೆ	೫-೭೪	ತಡೆ ಮಾಡು
,,	೮-೩೭ ಗದ್ಯ	ಅಡ್ಡಿ
ತಣಿ	೧-೩೧	ತೃಪ್ತಿಹೊಂದು
ತನಿ	೬-೧೩	ಹೆಚ್ಚಾಗಿ
ತನಿಗಂಪು	೪-೧೦೪	ಹೆಚ್ಚಾದ ಸುಗಂಧ
ತಮಾಲ	೪-೩೫	ಹೊಂಗೆಮರ
ತರ	೧-೭೩	ಕ್ರಮ
ತರಳ	೫-೨೨	ಚಂಚಲವಾದ
ತರಳತೆ	೯-೫	ಚಾಂಚಲ್ಯ
ತರಂಗಿಣಿ	೫-೮೭	ನದಿ
ತವು	೮-೬	ಕ್ಷೀಣವಾಗು
ತಳರ್	೪-೨೫ ಗದ್ಯ	ಹೊರಡು
ತಳವೆಳಗಾಗು	೪-೫೮	ಬೆರಗಾಗು
ತಳಿರ್	೧-೪೦	ಚಿಗುರು
ತಳೆ	೭-೫೨ ಗದ್ಯ	ಹೊಂದು
ತಳ್ವೊಯ್	೨-೩೧	ತಾಗು
ತಳ್ವು	೬-೧೦	ಸಾವಕಾಶ, ತಡ
ತೞ್ಕೈಸು	೨-೨೫	ಆಲಿಂಗಿಸು
ತೞ್ಪಲ್	೩-೨೦	ತಪ್ಪಲು
ತಾಣ	೧-೪೦	ಸ್ಥಾನ
ತಾರಕ	೪-೧೭	ನಕ್ಷತ್ರ
ತಾರಹಾರ	೪-೩೮, ೫-೪೫	ಮುತ್ತಿನ ಹಾರ
ತಾರಾಚಲ	೩-೪	ತಾರ(ಬೆಳ್ಳಿ) + ಅಚಲ=ಕೈಲಾಸಪರ್ವತ
ತಾರೆ	೬-೫	ಕಣ್ಣುಗುಡ್ಡೆ
ತಾಳವೃಂತ	೧-೮೪, ೫-೯೬	ಬೀಸಣಿಗೆ
ತಾಳ್ದು	೭-೫೬	ತಾಳ್ದು, ಹೊಂದು
ತಾಟಿವಣ್	೧-೪೫	ತಾಳೆಯಹಣ್ಣು
ತಿಣ್ಣ	೧-೬೩	ದುರ್ಭರ, ಹೆಚ್ಚು
ತಿರೋಹಿತ	೫-೮೪ ಗದ್ಯ	ಮರೆಯಾದ

ತಿರ್ಯಕ್	೧-೨೧, ೮-೪ ಗದ್ಯ	ಪಶುಪಕ್ಷಿ
ತಿಱು	೭-೧೬	ಹೂ ಕೊಯ್ಯು
ತಿಳಿಪು	೧-೧೯	ಮುನಿಸು, ತಿಳುಹು
ತೀವು	೧-೩೭, ೩-೪೦	ತುಂಬು
ತುಡುಗೆ	೬-೧೧ ಗದ್ಯ	ಆಭರಣ
ತುಱುಗಲ್	೬-೧೩	ಸಮೂಹ
ತುಹಿನಗಿರಿ	೧-೨೮	ಹಿಮಾಲಯ ಪರ್ವತ
ತೆಕ್ಕನೆ	೭-೦ ಗದ್ಯ	ಹೆಚ್ಚಾಗಿ
ತೆರಳ್	೧-೫೬ ಗದ್ಯ	ಒಟ್ಟುಗೂಡು
ತೆಱಂಬೊಳೆ	೪-೧೨, ೮-೫೫	ಸ್ಪಷ್ಟವಾಗಿ ಹೊಳೆ
ತೊಟ್ಟಗೆ	೬-೨೧	ಬೇಗ
ತೊಟ್ಟನೆ	೧-೫೧ ಗದ್ಯ	,,
ತೊಟ್ಟು	೪-೫೪, ೬-೩೫	ಹಿಡಿದು, ತೊಡಗಿ, (ಧಾ. ತುಡು); ಅಂದು ತೊಟ್ಟು = ಅಂದಿನಿಂದ
ತೊಡರ್ಪು	೭-೧೦ ಗದ್ಯ	ಸಿಕ್ಕು, ತೊಡರು
ತೊಡವು	೮-೫೨	ಆಭರಣ
ತೊರೆ	೧-೫೫	ಸುರಿ, ಸ್ರವಿಸು
ತೊೞಲ್	೬-೩೩ ಗದ್ಯ	ಸುತ್ತಾಡು
ತೊೞ್ತು	೪-೯೪	ತೊತ್ತು, ಸೇವಕ
ತೋರ	೬-೧೪	ದೊಡ್ಡ
ತೋರ್ಕೆಗೊಡು	೫-೩೦	ನಜರಾಗಿ ಕೊಡು, ಕಾಣಿಕೆ ಒಪ್ಪಿಸು
ತೋಲ್	೮-೩೯	ತೊಗಲು
ತಂಬುಲ	೫-೨೭	ತಾಂಬೂಲ
ತಾಂಡವ	೧-೩೮	ಕುಣಿತ
ತೇಂಕಾಡು	೪-೯೬ ಗದ್ಯ	ತೇಲು
ತೇಂಕು	೫-೪೨	,,
ತೊಂಗಲ್	೪-೯೬ ಗದ್ಯ	ಗುಂಪು, ಸಮೂಹ
ತ್ರಾಣ	೬-೧೯ ಗದ್ಯ	ರಕ್ಷಣೆ
ತ್ರಿದಶ	೧-೧೨, ೬-೩೧	ದೇವ

ದ

ದಕ್ಷಿಣ	೧-೨೦	ಬಲಗಡೆಯ
ದಡ್ಡ	೮-೨೪ ಗದ್ಯ	ಜಡ್ಡು, ಕಾಯಿಗಟ್ಟಿಕೊಳ್ಳುವುದು
ದಲ್	೫-೩೯	ನಿಶ್ಚಯವಾಗಿ
ದಳತ್	೫-೫೮	ಬಿರಿಯುವ
ದಾನ	೨-೧೭	ಮದಜಲ
ದಾಮ	೫-೪೫ ಗದ್ಯ	ಹಾರ
ದಾವ	೪-೬೫	ಅಡವಿ
ದಿಟ್ಟಿ	೫-೨೦	ದೃಷ್ಟಿ, ನೋಟ

ದಿವ	೪-೧೬	ಸ್ವರ್ಗ, ಆಕಾಶ
ದುಗುಲ	೪-೧೧೭	ಸಂ..ದುಕೂಲ, ರೇಷ್ಮೆಯ ಬಟ್ಟೆ
ದುಗ್ಧ	೫-೮೪ ಗದ್ಯ	ಹಾಲು
ದುರಾರೋಹ	೧-೪೯ ಗದ್ಯ	ಹತ್ತುವುದಕ್ಕೆ ಕಷ್ಟವಾದ
ದುರೋದರ	೫-೩೧ ಗದ್ಯ	ಪಗಡೆ
ದುರ್ವಾರ	೮-೩೯	ತಡೆಯಲಾಗದ
ದೂವೆ	೧-೬೪	ಸಂ..ಧೂಮ, ಹೊಗೆ
ದೂಸಬ್	೭-೩೦, ೭-೪೩	ಕಾರಣ
ದೇಗುಲ	೬-೧೬ ಗದ್ಯ	ದೇವಾಲಯ
ದೇಶ	೧-೪೦	ಪ್ರದೇಶ, ಸ್ಥಳ
ದೊರೆ	೬-೨೮	ಸಮಾನ
ದೊರೆಕೊಳ್	೧-೩೬	ಸಿಕ್ಕು
ದೌವಾರಿಕೆ	೧-೨೮ಗದ್ಯ, ೨-೩೫ ಗ.	ಬಾಗಿಲು ಕಾಯುವವಳು
ದಂತುರ	೮-೨೪	ಉಬ್ಬುತಗ್ಗಾದ
ದಂಶ	೪-೭೯	ಕಡಿಯುವಿಕೆ
ದಾಂಗುಡಿ	೨-೫೮	ಉದ್ದವಾದ ಕುಡಿ

ಧ

ಧಾರಾ	೧-೭	ಕತ್ತಿಯ ಬಾಯಿ
ಧೃತಿ	೪-೫೫	ಧೈರ್ಯ
ಧೌತ	೧-೭೧	ಶುಭ್ರವಾದ, ಬೆಳ್ಳಗಿರುವ
ಧ್ವಾನ	೧-೪೬	ಧ್ವನಿ

ನ

ನಚ್ಚು	೭-೨	ಪ್ರೀತಿ, ನಂಬಿಕೆ
ನಟ	೧-೩೮	ಶಿವ, ನಟರಾಜ
ನಡಪಾಡು	೬-೧೬	ತಿರುಗಾಡು
ನಡಪು	೧-೬೨	ಸಾಕು, ಸಲಹು
ನಣ್ಪು	೫-೮೦	ಪ್ರೀತಿ
ನದಿಪು	೭-೪	ನಂದಿಸು, ಆರಿಸು
ನನ್ನಿ	೪-೩೪	ಸತ್ಯ
ನಲವು	೪-೭	ಸಂತೋಷ
ನಸು	೫-೭೭	ಸ್ವಲ್ಪ
ನಾಗ	೨-೧೭	ಆನೆ
ನಾಡಾಡಿ	೫-೯	ಸಾಮಾನ್ಯ
ನಾಡೆ	೨-೨೬	ಚೆನ್ನಾಗಿ
ನಾಣ್	೪-೧೨	ನಾಚಿಕೆ
ನಾನ್	೪-೯೮	ಒದ್ದೆಯಾಗು
ನಿಕಾಯ	೧-೫೦	ಸಮೂಹ

ನಿಕೇತನ	೨-೨೮ ಗದ್ಯ	ಮನೆ
ನಿಕ್ಕುವ	೬-೬	ನಿಶ್ಚಯ
ನಿಚ್ಚ	೨-೩೦	ನಿತ್ಯ
ನಿಚ್ಚೆಯೈದ	೭-೬೯	ದೀರ್ಘಸುಮಂಗಲಿ
ನಿತಂಬಿನಿ	೧-೯	ಹೆಂಗಸು
ನಿತಾಂತ	೧-೨	ಹೆಚ್ಚು
ನಿಸ್ತರಿಸು	೬-೯	ಸಹಿಸು, ದಾಟು
ನಿಧಾನ	೪-೨೯	ನಿಧಿ
ನಿಬದ್ಧ	೭-೫೪ ಗದ್ಯ	ಕಟ್ಟಲ್ಪಟ್ಟ
ನಿಭ	೪-೦ ಗದ್ಯ	ಸಮಾನ
ನಿಮಿತ್ತ	೪-೮೨	ಶಕುನ
ನಿಮಿರ್	೨-೫೭	ಪ್ರಸರಿಸು, ಹರಡು
ನಿಮಿರ್ಕೆ	೫-೫೩ ಗದ್ಯ	ಪ್ರಸರಣ
ನಿಮಿರ್ಚು	೪-೩೬ ಗದ್ಯ	ಪ್ರಸಾರಮಾಡು
ನಿಮೀಲಿತ	೬-೧೭ ಗದ್ಯ	ಮುಚ್ಚಿದ
ನಿಮೇಷ	೪-೫೬ ಗದ್ಯ	ರೆಪ್ಪೆ ಬಡಿಯುವುದು
ನಿಯಮಿಸು	೩-೧೫	ಕಟ್ಟು
ನಿಯೋಗ	೬-೧೧ ಗದ್ಯ	ಕೆಲಸ
ನಿರವಿಸು	೬-೧೭	ಸಂ.—ನಿರೂಪಿಸು, ತಿಳಿಸು
ನಿರಾಕುಳಂ	೮-೪೨	ತೊಂದರೆಯಿಲ್ಲದೆ
ನಿರ್ಘೃಣ	೧-೫೫	ಕರುಣೆಯಿಲ್ಲದವನು
ನಿರ್ಝರ	೩-೩೮	ಬೆಟ್ಟದ ಝರಿ, ಅಬ್ಬಿ
ನಿರ್ಧೌತ	೧-೬೮ ಗದ್ಯ	ತೊಳೆಯಲ್ಪಟ್ಟ
ನಿರ್ಭರ	೭-೫೪ ಗದ್ಯ	ಹಿಡಿಸಲಾರದ
ನಿರ್ವರ್ತಿತ	೧-೬೮ ಗದ್ಯ	ಮಾಡಿದ, ನೆರವೇರಿಸಿದ
ನಿರ್ವರ್ತಿಸು	೨-೪೯ ಗದ್ಯ	ಮಾಡು, ನೆರವೇರಿಸು
ನಿರ್ವೃತ	೮-೩೭ ಗದ್ಯ	ಸಮಾಧಾನಹೊಂದಿದ
ನಿರ್ವೃತಿ	೭-೧೦ ಗದ್ಯ	ಸಂತೋಷ
ನಿರ್ವ್ಯಾಕುಳಂ	೮-೧೦	ವ್ಯಥೆಯಿಲ್ಲದೆ, ಸಂತೋಷವಾಗಿ
ನಿಱಿಸು	೨-೩	ನಿಲ್ಲಿಸು, ಸ್ಥಾಪಿಸು
ನಿವಹ	೫-೭೮	ಸಮೂಹ
ನಿಶಿತ	೨-೫	ಹರಿತವಾದ, ಚುರುಕಾದ
ನಿಸದಂ	೪-೧೧೦	ನಿಶ್ಚಯವಾಗಿ
ನಿಸರ್ಗ	೬-೨೮	ಸ್ವಾಭಾವಿಕ, ನೈಜ
ನಿಸ್ತ್ರಪ	೪-೧೦೧	ನಾಚಿಕೆಯಿಲ್ಲದ
ನಿಸ್ತ್ರಿಂಶ	೪-೮೫, ೪-೧೧೬	ಕ್ರೂರ
ನಿಹಿತ	೨-೩೫ ಗದ್ಯ	ಇಡಲ್ಪಟ್ಟ
ನಿಳಿಂಪ	೩-೪೫ ಗದ್ಯ	ದೇವತೆ (ಭೂಪನಿಳಿಂಪ=ರಾಜಶ್ರೇಷ್ಠ)
ನಿಳ್ಕು	೧-೪೮ ಗದ್ಯ	ನಿಲುಕು, ಮೆಟ್ಟುಂಗಾಲಿಕ್ಕು

ನೀಡ	೧-೫೦	ಗೂಡು
ನೀಡುಂ	೭-೬೨ ಗದ್ಯ	ವಿಶೇಷವಾಗಿ
ನೀಹಾರ	೫-೯೫	ಮಂಜು
ನುಣ್ಣಿಸು	೩-೨೩	ನುಣ್ಣಗೆಮಾಡು, ನಯಗೊಳಿಸು
ನುಱುವೋಗು	೫-೩೩	ನುರಿತಿರು, ಕಷ್ಟಾನುಭವಮಾಡು
ನುಸುಳ್	೫-೧೫ ಗದ್ಯ	ತೂರಿಕೊಂಡುಹೋಗು
ನೃಶಂಸ	೧-೫೬	ಕ್ರೂರ
ನೆಗೞ್	೫-೨೪	ಮಾಡು
,,	೧-೬೫, ೨-೫೫	ಪ್ರಖ್ಯಾತಿಪಡೆ
ನೆಗೞ್ಚು	೨-೫೫, ೮-೬೭	ಮಾಡು
ನೆನಸು	೨-೧೩	ಜಾಗ್ರದವಸ್ಥೆ, ಸತ್ಯ
ನೆಮ್ಮು	೩-೩೪ ಗದ್ಯ, ೬-೪ ಗ.	ಒರಗು
ನೆರಪು	೪-೯೧	ಕೂಡಿಡು
ನೆರವಿ	೪-೭೨ ಗದ್ಯ	ಜನರ ಗುಂಪು
ನೇಱುದುದು	೩-೩೯	ತೂಗುಹಾಕಿರುವುದು
ನೇಸಱು	೩-೨೫	ಸೂರ್ಯ
ನೇಹ	೪-೧೧೯	ಸಂ. ಸ್ನೇಹ
ನೊಸಲ್	೪-೯೬ ಗದ್ಯ	ಹಣೆ
ನೋನ್	೪-೩೪, ೫-೧೯	ವ್ರತಮಾಡು
ನೋಂಪಿ	೫-೧೯	ವ್ರತ

ಪ

ಪಕ್ಕಗೂಡಾಗು	೧-೬೦	ಮಗ್ಗಲು ಮೇಲಾಗು
ಪಕ್ಕಣ	೮-೪೧	ಕೀಳುಜನರು ವಾಸಿಸುವ ಹಳ್ಳಿ
ಪಕ್ಷ	೧-೪೬	ರೆಕ್ಕೆ
ಪಗಿಲ್	೪-೯೬	ಅಂಟಿಕೊಳ್ಳು
ಪಚ್ಚುಗೊಳ್	೪-೪೪	ಹಂಚಿಕೊಳ್ಳು
ಪಟಲ	೫-೯೪	ಸಮೂಹ
ಪಟ್ಟಿರು	೩-೧೭	ಮಲಗಿರು
ಪಡಕೆ	೮-೩೭ ಗದ್ಯ, ೮-೩೯	ಹಾಸಿಗೆ
ಪಡಿ	೮-೩೭ ಗದ್ಯ	ಬಾಗಿಲು
ಪಡಿಯಱ	೫-೭೫ ಗದ್ಯ	ಸಂ.—ಪ್ರತೀಹಾರ, ಬಾಗಿಲು ಕಾಯುವವನು
ಪಡಿಯಱತಿ	೧-೨೯	ಬಾಗಿಲು ಕಾಯುವವಳು
ಪಡು	೪-೭೩	ಬೀಳು, ಮುಳುಗು
ಪಡುಶಿಲೆ	೫-೫೮	ಮಲಗುವ ಕಲ್ಲು
ಪತ್ತುವಿಡು	೨-೧೧ಗದ್ಯ, ೨-೨೮ ಗ. ೮-೧೮	ಬಿಡು
ಪದ	೧-೫೩	ಸಮಯ, ಹದ

ಪದಪು	೧-೧೬, ೫-೧೬	ಉತ್ಸಾಹ, ಸಂರಂಭ
,,	೨-೩೩	ಪ್ರೀತಿ
ಪದೆ	೪-೨೯, ೭-೬೪	ಅಪೇಕ್ಷಿಸು, ಪ್ರೀತಿಸು
ಪರಭೃತ	೪-೫೬ ಗದ್ಯ	ಕೋಗಿಲೆ
ಪರಾಸು	೭-೨೦	ಜೀವ ಹೋದವನು
ಪರಿ	೩-೨ ಗದ್ಯ	ಓಡು
,,	೮-೧೩	ಪಾಡು, ಸ್ಥಿತಿ
ಪರಿಗ್ರಹ	೩-೩	ಪರಿವಾರ
ಪರಿಜು	೮-೨೪ ಗದ್ಯ	ಆಕಾರ
ಪರಿಭವ	೬-೭	ಅಪಮಾನ
ಪರಿಭೂತೆ	೪-೯೩	ತಿರಸ್ಕಾರವನ್ನು ಹೊಂದಿದವಳು
ಪರಿಲಂಬ	೭-೦ ಗದ್ಯ	ಸಲಕರಣೆ
ಪರಿವರ್ಧಕ	೭-೩೯ ಗದ್ಯ	ಸಾಕುವವನು, ಚಾಕರ
ಪರಿವ್ರಾಜಿಕಾ	೫-೬೫ ಗದ್ಯ	ಸಂನ್ಯಾಸಿನಿ
ಪರಿಷ್ವಂಗ	೨-೯	ಆಲಿಂಗನ
ಪರೆ	೪-೪೧	ಹರಡು, ಚೆದರು
ಪರ್ಯಂಕ	೫-೧೮	ಮಂಚ
ಪರ್ವ	೨-೩೬	ಹಬ್ಬ
ಪರ್ವು	೮-೭೨	ಹಬ್ಬು
ಪಱಿ	೭-೧೦ ಗದ್ಯ	ಕತ್ತರಿಸು, ಹರಿ
ಪಱಿಪಡು	೬-೩೧ ಗದ್ಯ	ಕತ್ತರಿಸಿಹೋಗು, ಛಿನ್ನವಾಗು
ಪಲುಂಬು	೪-೮೬	ಹಲುಬಿಕೊಳ್ಳು
ಪವಣ್	೩-೨೯	ಸಂ.—ಪ್ರಮಾಣ, ಅಳತೆ
ಪಸದನ	೪-೨೯	ಸಂ..ಪ್ರಸಾಧನ, ಅಲಂಕಾರ
ಪಸಲೆ	೫-೮೬	ಗರುಕೆ ಹುಲ್ಲು
ಪಸಾದ	೫-೧೦೨	ಪ್ರಸಾದ
ಪಸಾಯಿತೆ	೬-೨೬	ವಸ್ತ್ರಗಳ ಮೇಲ್ವಿಚಾರಕಳು
ಪಸಿಯ	೧-೧೩	ಹಚ್ಚನೆಯ
ಪಳುಕು	೫-೭೮ ಗದ್ಯ	ಹಳುಕು
ಪಳಂಚಲೆ	೩-೧೯	(ಪಳಂಚು+ಅಲೆ), ತಾಗು, ಬಡಿ
ಪಟುವಿಸು	೪-೮೯	ಪ್ರಲಾಪಿಸು, ಅಳು
ಪಱ್ಕ	೫-೬೪	ಹಾಸಿಗೆ
ಪಾಟಳ	೧-೩೧	ಎಳಗೆಂಪುಬಣ್ಣ
ಪಾಡಿವ	೨-೨೮ ಗದ್ಯ	ಪಾಡ್ಯ
ಪಾದಪ	೪-೩೫	ಮರ
ಪಾದೂಯುಗ್ಮ	೩-೨೬	ಎರಡು ಪಾದಗಳು
ಪಾಪೆ	೫-೨೫	ಹಾಹೆ, ಗೊಂಬೆ
ಪಾರ್	೩-೩೪ ಗದ್ಯ	ನಿರೀಕ್ಷಿಸು
ಪಾರದ	೩-೨೪	ಪಾದರಸ

ಪಾವುಡ	೫-೬೨	ಸಂ.-ಪ್ರಾಭೃತ, ಕಾಣಿಕೆ
ಪಾಸು	೫-೩೭	ಹಾಸಿಗೆ
ಪಾಟ್ಮಸಗು	೪-೮೬	ಹಾಳಾದಂತೆ ಕಾಣು, ಹಾಳುಹೊಡೆ
ಪಿಡಿ	೪-೧೯	ಹೆಣ್ಣಾನೆ
ಪಿಪಾಸಾ	೧-೫೯	ದಾಹ
ಪಿಷ್ಟಚರ್ಚೆ	೧-೭೩	ರಂಗವಲ್ಲಿ
ಪಿಹಿತ	೬-೧೯	ಮುಚ್ಚಿದ, ಮರೆಯಾದ
ಪಿಟಿ	೪-೩೫	ಹಿಂಡು
ಪೀಯೂಷ	೪-೨೯	ಅಮೃತ
ಪುಗುಳ್	೪-೭೯	ಗುಳ್ಳೆ, ಬೊಬ್ಬೆ
ಪುಟ	೧-೬೮	ದೊನ್ನೆ
ಪುತ್ರಿಕೆ	೧-೧೩	ಬೊಂಬೆ
ಪುದಿ	೧-೪೬, ೩-೧೯	ತುಂಬು, ವ್ಯಾಪಿಸು
ಪುಯ್ಯಲ್ಚು	೪-೮೯	ಕೂಗಿಕೊಳ್ಳು
ಪುಲಕ	೫-೨೨	ರೋಮಾಂಚ
ಪುಳಿನ	೫-೫೮	ಮರಳುದಿಣ್ಣೆ
ಪುಳಿಂದ	೧-೪೯	ಬೇಡರವನು
ಪುಱುಲ್	೬-೧೬	ತೋಪು (?)
ಪೂರ	೩-೨೩, ೪-೨೯	ಪ್ರವಾಹ
ಪೂರ್ಣಪಾತ್ರ	೨-೨೫	ಒಳ್ಳೆಯ ಸುದ್ದಿಯನ್ನು ತಂದವನಿಗೆ ಸಲ್ಲುವ ಬಹುಮಾನ
ಪೆರ್ಬಂದಿ	೧-೩೭	ದೊಡ್ಡ ಹಂದಿ (ವರಾಹಾವತಾರ)
ಪೆಱಗೆ	೧-೧೪ ಗದ್ಯ	ಹಿಂದೆ
ಪೆಱತು	೫-೬೦	ಬೇರೊಂದು
ಪೆಱೆ	೩-೨೮	ಚಂದ್ರ
ಪೆಳಱು	೭-೧೨	ಭಯ
ಪೆಳ್ಪಳಿಸು	೧-೪೮ ಗದ್ಯ	ಪಿಳಿಪಿಳಿ ನೋಡುವುದು
ಪೊಡರ್	೧-೬೪, ೪-೪೯	ನಡುಗು, ಅದಿರು
ಪೊಡಮಡು	೧-೧೭ ಗದ್ಯ	ನಮಸ್ಕಾರ ಮಾಡು
ಪೊಡವಡಿಕೆ	೬-೩ ಗದ್ಯ	ನಮಸ್ಕಾರ
ಪೊಣರ್	೨-೨೨	ಜೊತೆ, ಜೋಡಿ
ಪೊಣ್ಮು	೧-೨೭, ೧-೪೯	ಹೊಮ್ಮು, ಪ್ರಕಟವಾಗು
ಪೊದಳ್	೧-೪೧, ೧-೬೭	ವ್ಯಾಪಿಸು
ಪೊನಲ್	೪-೬೪ ಗದ್ಯ, ೫-೧೭	ಪ್ರವಾಹ
ಪೊರಜೆ	೮-೨೪ ಗದ್ಯ	ಹಗ್ಗ, ಹೊರಜಿ
ಪೊರೆ	೪-೬೦	ಸಮೀಪ
,,	೩-೧೧, ೪-೬೪ ಗದ್ಯ	ಕೂಡು, ವ್ಯಾಪಿಸು
,,	೧-೪೦	ಪೊರೆ (ಹಾವಿನ ಪೊರೆಯಂತೆ ತೆಳುವಾದ ಚೀಲ)

ಪೊರ್ದು	೭-೧೭, ೭-೬೮	ಸೇರು
ಪೊಱೆ	೫-೫೨	ಹೊರೆ, ಭಾರ
ಪೊಲ್	೧-೭೧	ಹೊಲಿ
ಪೊಲೆವಟ್ಟು	೮-೩೬	ಹೊಲೆಯರ ಹಟ್ಟಿ
ಪೊಲ್ಲದು	೪-೨೮	ಕೆಟ್ಟದ್ದು
ಪೊಱಲ್	೧-೪೮ ಗದ್ಯ	ಪೊಟ್ಟರೆ
ಪೊಱ್ತು	೮-೨೧ ಗದ್ಯ	ಹೊತ್ತಾರೆ, ಮುಂಜಾನೆ
ಪೋಱ್	೧-೪೦	ಬರುಕು, ನಂದು
ಪಾಂಗು	೪-೯೮	ರೀತಿ
ಪಾಂಡುರ	೨-೫೯	ಬಿಳುಪು
ಪಾಂಸು	೨-೩೨	ದೂಳು
ಪಿಂಗು	೧-೪೮	ನಿಂತುಹೋಗುವುದು
ಪಿಂಬಡು	೭-೨೮	ಹಿಂಭಾಗ
ಪೆಂಪು	೧-೮	ಆಧಿಕ್ಯ
ಪೊಂದು	೭-೨೪	ಸಾಯಿ, ಮರಣಹೊಂದು
ಪ್ರಕರ	೧-೨೫	ಸಮೂಹ
ಪ್ರಗಲ್ಭ	೧-೧೮	ಪ್ರೌಢ
ಪ್ರಚ್ಛದ	೧-೨೭	ಹೊದಿಕೆ
ಪ್ರಣಾಳ	೪-೮೩	ಕಾಲುವೆ
ಪ್ರತಾನ	೪-೩೧	ಸಮೂಹ
ಪ್ರತಿಪತ್ತಿ	೭-೬೯	ಸತ್ಕಾರ, ಗೌರವ
ಪ್ರತಿಮ	೩-೨೩	ಸಮಾನ
ಪ್ರತಿಲಂಭನ	೭-೬೭	ಮರಳಿ ಪಡೆಯುವುದು
ಪ್ರತೀಹಾರಿ	೧-೧೧ ಗದ್ಯ	ಬಾಗಿಲುಕಾಯುವವಳು
ಪ್ರತ್ಯಯ	೭-೫೪	ನಂಬಿಕೆ, ವಿಶ್ವಾಸ
ಪ್ರತ್ಯಾಶೆ	೭-೫೨ ಗದ್ಯ	ಭರವಸೆ
ಪ್ರತ್ಯಾಸನ್ನ	೧-೬೫	ಸಮೀಪ
ಪ್ರತ್ಯುದ್ಗಮನ	೬-೨೯ ಗದ್ಯ	ಎದುರುಗೊಳ್ಳುವುದು
ಪ್ರದ್ಯೋತ	೨-೪೯	ಕಾಂತಿ
ಪ್ರವಾಳ	೮-೫೦	ಚಿಗುರು
ಪ್ರಸರ	೫-೧೭	ಹರಡುವಿಕೆ
ಪ್ರಸೂನ	೨-೩೪	ಹೂವು
ಪ್ರಾಗ್ಭಾಗ	೨-೧೬	ಮೊದಲ ಭಾಗ
ಪ್ರಾಣನ	೧-೪೩ ಗದ್ಯ	ಬದುಕಿಸುವುದು ಕಾಪಾಡುವುದು
ಪ್ರಾಭಾತಿಕ	೫-೮ ಗದ್ಯ, ೮-೮ ಗದ್ಯ	ಪ್ರಾತಃಕಾಲದ
ಪ್ರಾಸಾದ	೧-೩೯; ೫-೩೧ ಗದ್ಯ	ಉಪ್ಪರಿಗೆ ಮನೆ
ಪ್ರೋದ್ಯತ್	೧-೧	ಮೇಲಕ್ಕೆ ಏಳುವ

ಫ

ಫೇನ	೫-೪೧	ನೊರೆ

ಬ

ಬಗೆ	೮-೩೮	ಯೋಚಿಸು
ಬಚ್ಚೆ	೧-೪೯	ಹಾದಿ
ಬದ್ಧಾಂಜಲಿ	೬-೨೭ ಗದ್ಯ	ಮುಗಿದ ಕೈ
ಬಯ್	೧-೫೩	ಬಚ್ಚಿಟ್ಟುಕೊಳ್ಳು
ಬಯ್ಗುಂಬೊಟ್ತು	೬-೦ ಗದ್ಯ	ಸಾಯಂಕಾಲ
ಬರ	೩-೩೬	ವರ
ಬ಼ರೆತೆಗೆದು	೭-೫	ಎಳಕೊಂಡು, ಗಾಢವಾಗಿ
ಬಲವರ್‌	೨-೬೦	ಪ್ರದಕ್ಷಿಣೆ ಮಾಡು
ಬವಸೆ	೬-೨೩ ಗದ್ಯ	ಸಂ.-ವ್ಯವಸಾಯ, ಪ್ರಯತ್ನ
ಬಸ	೪-೬೧, ೫-೮೦	ವಶ, ಸ್ವಾಧೀನ
ಬಸವಟಿ	೧-೫೨, ೮-೨೬ ಗದ್ಯ	ಶಕ್ತಿಗುಂದು
ಬಟಲ್	೭-೧೨	ಜೋಲು
ಬಟಿಸಲ್	೧-೬೭, ೬-೨೦	ಹಿಂಬಾಲಿಸು
ಬಟಿಯ ಟ್ಟು	೨-೩೬	ದೂತನನ್ನು ಕಳುಹಿಸು
ಬಾಚಿಸು	೫-೯೯	ಓದು
ಬಾಜಿಸು	೩-೨೧	ಬಾರಿಸು, ಧ್ವನಿಮಾಡು
ಬಾಣಿ	೧-೩	ವಾಣಿ, ಸರಸ್ವತಿ
ಬಾಯಟಿ	೭-೨೫ ಗದ್ಯ, ೭-೪೨ ಗ.	ಬಾಯಿಸೋಲು
ಬಾರ್ತೆ	೮-೩೮	ಪ್ರಯೋಜನ
ಬಾಸಣಿಗೆ	೫-೭೮ ಗದ್ಯ	ಹೊದಿಕೆ
ಬಾಸಣಿಸು	೫-೪೩ ಗದ್ಯ	ಮುಚ್ಚು
ಬಾಸೆ	೬-೨೨	ಸಂ.-ಭಾಷೆ
ಬಾಡ್ಕೊಂಪ	೫-೪೧	ಹಸುರು ಗೊಂಚಲು
ಬಿಚ್ಚನೆ	೭-೪೫ ಗದ್ಯ	ಅಗಲವಾಗಿ
ಬಿಜ್ಜಣಿಗೆ	೫-೫೮	ಬೀಸಣಿಗೆ
ಬಿಟ್ಟಿರ್	೫-೭೪ ಗದ್ಯ	ಬೀಡುಬಿಡು, ತಂಗು
ಬಿಡೆ ನುಡಿ	೪-೫೨	ನಿಷ್ಠುರವಾಗಿ ಮಾತನಾಡು
ಬಿಡೆ ನೋಡು	೪-೬	ದೃಷ್ಟಿಯಿಟ್ಟು ನೋಡು
ಬಿತ್ತರಿಸು	೩-೪೧, ೪-೭	ವಿಸ್ತರಿಸು
ಬಿದಿ	೪-೮೨	ವಿಧಿ
ಬಿರಯಿ	೮-೫೧	ವಿರಹಿ
ಬಿಸ	೪-೩೮	ಕಮಲದ ದಂಟು
ಬಿಸರುಹ	೫-೮೬	ಕಮಲ
ಬಿಸು	೪-೬೦ ಗದ್ಯ	ಬೆಸಗೆ ಹಾಕು

ಬಿಕ್ಕೆ	೪-೪೯	ಬಿಕ್ಕೆ ಕಾಯಿ
ಬೀೞುಜೊಂಪ	೬-೩೩	ಇಳಿಬಿದ್ದಿರುವ ಗೊಂಚಲು
ಬೃಂದ	೬-೨೯	ಸಮೂಹ
ಬೆಟ್ಟವೆಟ್ಟನಾಗಿ	೬-೩೧ಗದ್ಯ,೮-೩೪ ಗ.	ಕಠಿನವಾಗಿ
ಬೆಟ್ಟಿತು	೧-೬೦, ೮-೨೪ ಗದ್ಯ	ಕಠಿನ, ಕರ್ಕಶ
ಬೆನ್ನನೆ	೪-೬	ಹಿಂದೆಯೇ
ಬೆರಂಟು	೨-೪೨	ಗೊರಸಿನಿಂದ ಕೆರೆ
ಬೆಱು	೧-೫೬	ಸೆಡೆ, ಭಯಪಡು
ಬೆಸ	೬-೨೦	ಆಜ್ಞೆ
ಬೆಸಕಯ್	೫-೬೧	ಕೆಲಸಮಾಡು, ಸೇವಿಸು
ಬೆಸೆ	೪-೨೪	ಗರ್ವಿಸು
ಬೆಳರ್	೮-೫೫	ಕಾಂತಿ, ಪ್ರಕಾಶ
ಬೆಳ್ಕುಱು	೫-೩೨	ಭಯಪಡು
ಬೆಳ್ಕುಱಿಸು	೪-೯೬ ಗದ್ಯ	ಬಿಳುಪಾಗು
ಬೇಗ	೩-೪೩ ಗದ್ಯ, ೪-೪೨	ಹೊತ್ತು, ಕಾಲ
ಬೇಟ	೪-೧೦	(ಧಾ.-ಬೇಡು), ಕಾಮಪರವಶತೆ
ಬೇಡವಟ್ಟ	೮-೩೫ ಗದ್ಯ	ಬೇಡರ ಹಟ್ಟಿ
ಬಂಚ	೫-೬೬	ಸಂ.-ವಂಸ, ಬಿದಿರಿನ ಕೊಳಲು
ಬಂದ	೭-೧೪	ಫಲಕ್ಕೆ ಬಂದ
ಬಂಧಕೀ	೬.೧೧	ಪತಿವ್ರತೆಯಲ್ಲದವಳು
ಬಂಭ್ರಮಾತ್	೩-೧೧	ಸುತ್ತುತ್ತಿರುವ
ಬಿಂಜ	೧-೪೬	ವಿಂಧ್ಯ
ಬ್ರಹ್ಮಸೂತ್ರ	೩-೨೮	ಯಜ್ಞೋಪವೀತ, ಹಾರ

ಭ

ಭವ	೩-೨೬	ಶಿವ
,,	೧-೩೫, ೭-೪೯	ಜನ್ಮ
ಭಾಜನ	೧-೨೦	ಪಾತ್ರ
ಭೂರುಹ	೧-೭೩	ಮರ
ಭೋಗ	೧.೧	ಹೆಡೆ
ಭೋರನೆ	೭-೨೫ ಗ.	ಬೇಗ
ಭಂಗಿ	೫-೫೯, ೫-೬೬	ರೀತಿ
ಭಾಂಡ	೮-೩೯ ಗ.	ಪಾತ್ರೆ
ಭೋಂಕನೆ	೪-೨೦	ಬೇಗ

ಮ

ಮಗುಳ್ಚು	೩-೯ ಗದ್ಯ, ೫-೭೪ ಗ.	ಹಿಂದಿರುಗಿಸು
ಮಗುಳ್ದು	೪-೪೩, ೭-೪೯	ಮತ್ತೆ
ಮಚ್ಚು	೬-೩ ಗದ್ಯ, ೨-೨೫ ಗ.	ಬಹುಮಾನ

ಮಡಲ್	೧-೪೧, ೩-೨೫	ವೃದ್ಧಿಹೊಂದು
ಮಡಿ	೧-೨೭	ಮಡಿಸು, ಮುದುರು
ಮದಿರೇಕ್ಷಣೆ	೫-೧	(ಮದಿರ+ಈಕ್ಷಣ) ಮೋಹಜನಕವಾದ ದೃಷ್ಟಿಯುಳ್ಳವಳು
ಮನುಮಥ	೮-೫೧	ಮನ್ಮಥ
ಮನ್ಯು	೭-೮, ೭-೨೭	ದುಃಖ
ಮಯೂಖ	೭-೪೫ ಗದ್ಯ	ಕಿರಣ
ಮರವಡು	೪-೫೬ ಗದ್ಯ	ನಿಶ್ಚೇಷ್ಟಿತವಾಗು
ಮರೀಚಿ	೨-೫೧	ಕಿರಣ
ಮರುತ್	೮-೫೫	ವಾಯು, ಗಾಳಿ
ಮರುಳ್ಗೊಳ್	೭-೩೯ ಗದ್ಯ	ಮರುಳಾಗು
ಮರ್ವು	೪-೩೯	ಮಬ್ಬು
ಮಱುಮಾತು	೫-೪೪, ೫-೫೩	ಪ್ರತ್ಯುತ್ತರ
ಮಱುವುಟ್ಟು	೬-೯, ೭-೨೫	ಮತ್ತೊಂದು ಜನ್ಮ
ಮಲರ್	೧-೬೦	ಹೂವು
ಮಹಾಪ್ರಾಣತೆ	೨-೪೦	ಹೆಚ್ಚಾದ ಶಕ್ತಿ
ಮಟ್ಗಿಸು	೩-೪೪, ೪-೧೨೦	ಅಡಗಿಸು, ಆರಿಸು
ಮಾಗಧಿ	೫-೨೫ ಗದ್ಯ	ಸ್ತುತಿಪಾಠಕಿ
ಮಾಟ	೫-೧೦೨	ಕಾರ್ಯ
ಮಾಡ	೪-೪೩	ಮಹಡಿ
ಮಾಣ್	೫-೬೯	ಬಿಡು
ಮಾತಂಗ	೧-೧೪	ಚಂಡಾಲ
ಮಾಯ್ದು	೧-೫೧, ೮-೧೦, ೫-೧೫	ಕೆಟ್ಟು (ಧಾ.-ಮಾಯ್-ಕೆಡು)
ಮಾರ್ಪೊಳೆ	೫-೪೪	ಪ್ರತಿಬಿಂಬಿಸು
ಮಾಜಿವೋಗು	೫-೫೫, ೫-೧೦೪	ಬರೆಯಾಗಿಹೋಗು
ಮಿಡಿ	೪-೧೦೦ ಗದ್ಯ	ಬೆರಳಿನಿಂದ ಮೀಟು
ಮಿಥುನ	೩-೪, ೭-೪೮ ಗದ್ಯ	ಜೊತೆ
ಮಿಸುಗು	೨-೫೧, ೪-೪	ಹೊಳೆ, ಪ್ರಕಾಶಿಸು
ಮಿಳಿರ್	೩-೪೪	ಅಲ್ಲಾಡು
ಮುಕುರ	೩-೧೨	ಕನ್ನಡಿ
ಮುಕುಳಿತ	೪-೬೦	ಮುಚ್ಚಿದ
ಮುಗಿ	೪-೪೫	ಮುಚ್ಚು
ಮುಗುಳ್	೪-೬೪	ಮೊಗ್ಗು
ಮುಯ್ವು	೧-೪೪, ೮-೧೫	ಹೆಗಲು
ಮುರಿ	೧-೪೯	ತಿರುಗಿಸು
ಮುಱು	೧-೫೧	ತುಂಡುಮಾಡು
,,	೫-೪೪	ತುಂಡು
ಮುೞ್ಕಾಡು	೨-೬ ಗದ್ಯ	ಮುಳುಗಾಡು
ಮೂಗುವಡು	೧-೪೮	ನಿಶ್ಯಬ್ದವಾಗು

ಮೂಡು	೨-೬ ಗದ್ಯ	ಹುಟ್ಟು
ಮೂರ್ಧಘ್ರಾಣ	೭-೬೪	ತಲೆಯನ್ನು ಮೂಸುವುದು
ಮೃಗಯಾ	೧-೧೦	ಬೇಟೆ
ಮೃಣಾಳ	೩-೧೫ ಗದ್ಯ	ತಾವರೆದಂಟು
ಮೆಯ್ಗರೆ	೪-೫೩	ಅವಿತುಕೊಳ್ಳು, ಅದೃಶ್ಯವಾಗು
ಮಯ್ಯಱಿ	೪-೬೮ ಗದ್ಯ	ಸ್ಮೃತಿಯನ್ನು ಹೊಂದು, ಎಚ್ಚರವಾಗು
ಮೆಯ್ಯಟಿ	೪-೧೧೨	ಅನುಸರಣೆ
ಮೇಖಲಾ, ಮೇಖಲೆ	೧-೬, ೧-೭೧	ಒಡ್ಯಾಣ, ಡಾಬು
ಮೇಲುದು	೪-೮೮, ೫-೮೯	ಮೇಲುಮುಸುಕು, ಉತ್ತರೀಯ
ಮೇಳಿಸು	೮-೨೨	ಸೇರು
ಮೊಱ್ಗು	೬-೦ ಗದ್ಯ	ನಮಸ್ಕಾರಮಾಡು
ಮೌಕ್ತಿಕ	೫-೫೭	ಮುತ್ತು
ಮೌಹೂರ್ತಿಕ	೨-೨೦	ಜೋಯಿಸ
ಮಂಜರಿ	೪-೧೬ ಗದ್ಯ	ಗೊಂಚಲು
ಮಂಜೀರಕ	೨-೪೯	ಕಾಲ ರುಳಿ, ಕಾಲಂದಿಗೆ
ಮಂಥರೆ	೭-೨೭	ಆಲಸ್ಯವನ್ನು ಹೊಂದಿದವಳು
ಮುಂದ್ಯೆಸು	೪-೯೬ ಗದ್ಯ	ಗುಂಪುಕೂಡು
ಮೂಂಕರಿಸು	೫-೪೧	ತಿರಸ್ಕರಿಸು

ಯ

ಯಾಮಿನೀ	೭-೧೭ ಗದ್ಯ	ರಾತ್ರಿ
ಯೂಥ	೨-೫೯	ಸಮೂಹ
ಯೋಷಿತ್	೫-೪೧	ಹೆಂಗಸು

ರ

ರಜ	೪-೭೪ ಗದ್ಯ	ದೂಳು
ರಣರಣಕ	೫-೭೫	ಪ್ರೇಮಕಾತರತೆ
ರಥಾಂಗ	೬-೧೬	ಚಕ್ರವಾಕಪಕ್ಷಿ
ರಶನ	೩-೧೦	ಒಡ್ಯಾಣ
ರಸಭಾವ	೧-೨	೧. ನೀರು ಇರುವಿಕೆ ೨. ನವರಸಗಳೂ ಭಾವಗಳೂ
ರಸೆ	೩-೪೫	ಭೂಮಿ
ರಾಗ	೫-೭೫, ೫-೧೦೩	೧. ಪ್ರೀತಿ. ೨. ಕೆಂಪುಬಣ್ಣ
ರಾಜತ್	೮-೪೬	ಪ್ರಕಾಶಮಾನವಾದ
ರಾಜಿ	೧-೩೨	ಸಮೂಹ
ರುಚಿ	೪-೪೪, ೫-೪೫	ಕಾಂತಿ
ರುಚಿರ	೧-೨೪	ಮನೋಹರವಾದ
ರುಜೆ	೪-೨೮	ರೋಗ

ರೋದೋಂತ	೫-೪೨	ಭೂವ್ಯಾಕಾಶಗಳ ಕೊನೆ
ರೋಮೋದ್ಗಮ	೨-೪೩	ರೋಮಾಂಚ
ರೋಮಂಥ	೫-೪೧	ಮೆಲುಕು

ಲ

ಲಘುವಾಗು	೪-೧೧	ಹಗುರವಾಗು, ಅಲ್ಪವಾಗು
ಲತಾಂತ	೧-೨೮	ಹೂವು
ಲಹರೀ	೪-೨೯	ಅಲೆ, ತರಂಗ
ಲಾಜ	೨-೪೨	ಅರಳು
ಲಾಸ್ಯ	೭-೧೮	ಲಲಿತನರ್ತನ
ಲುಬ್ಧಕ	೧-೫೦	ಬೇಡ
ಲುಳಿತ	೪-೯೬ ಗದ್ಯ, ೫-೮೪ ಗ.	ಮಿಶ್ರಿತವಾದ
,,	೫-೮೪ ಗದ್ಯ	ಕೆದರಿದ
ಲೆಪ್ಪ	೭-೬೨ ಗದ್ಯ	ಸಂ.–ಲೇಪ್ಯ, ಗೊಂಬೆ
ಲಾಂಛನ	೫-೭ ಗದ್ಯ	ಗುರುತು

ವ

ವಕ್ತ್ರ	೭-೫೫	ಮುಖ
ವಯಸ್ಯ	೪-೫೪ ಗದ್ಯ	ಸ್ನೇಹಿತ
ವರ್ಷವರ	೫-೮೪ ಗದ್ಯ	ಅಂತಃಪುರವನ್ನು ಕಾಯುವವನು,ಖೋಜ
ವಲಂ	೧-೩	ನಿಶ್ಚಯವಾಗಿ
ವಲ್ಕ	೮-೧೩	ನಾರುಬಟ್ಟೆ
ವಲ್ಕಲ	೧-೭೧, ೭-೪೦	,,
ವಲ್ಲಕೀ	೩-೩೫	ವೀಣೆ
ವಲ್ಲಭ	೮-೩೦	ಪ್ರಿಯ
ವಸನ	೪-೩೫	ಬಟ್ಟೆ
ವಾರುಣೀ	೨-೪೯	೧. ಪಶ್ಚಿಮದಿಕ್ಕು. ೨. ಹೆಂಡ
ವಾರುವ	೬-೧೬ ಗದ್ಯ	ಕುದುರೆ
ವಾರ್ತಾಹರ	೭-೫೪ ಗದ್ಯ	ಬೇಹುಗಾರ, ಸುದ್ದಿ ತರುವವನು
ವಾಸ	೧-೧೪	ಬಟ್ಟೆ
ವಾಹ	೭-೪೬	ಕುದುರೆ
ವಾಃಕಣ	೩-೧೧	ನೀರಿನ ಹನಿ
ವಿಗಳತ್	೭-೩೬ ಗದ್ಯ	ಸುರಿಯುವ
ವಿಜೃಂಭಿತ	೪-೧೨೪ ಗದ್ಯ	ಆಟ, ಕಾರ್ಯ
ವಿಡಂಬಿಸು	೫-೭ ಗದ್ಯ, ೫-೩೬	ಹಾಸ್ಯಮಾಡು
ವಿತತ	೧-೧೮	ತಂತಿಯ ವಾದ್ಯ
ವಿದಗ್ಧ	೧-೧೧	ಕಲಾಕೋವಿದ
ವಿದೀರ್ಣ	೭-೧೦ ಗದ್ಯ	ಒಡೆದ, ಸೀಳಿದ

ವಿಪಂಚಿಕಾ	೧-೧೦	ವೀಣೆ
ವಿಪಂಚೀ	೩-೧೯	,,
ವಿಪ್ರಲಂಭ	೫-೩೫	ವಿರಹ, ಅಗಲುವಿಕೆ
ವಿಭೂತಿ	೮-೬೫	ಐಶ್ವರ್ಯ
ವಿಭ್ರಮ	೫-೩೨	ತಪ್ಪು ತಿಳಿವಳಿಕೆ, ಭ್ರಾಂತಿ
ವಿಲುಳಿತ	೫-೧೨	ಚಲಿಸುವ, ಅಲ್ಲಾಡುವ
ವಿವರ	೪-೮೯ ಗದ್ಯ	ಬಿಲ
ವಿಶ್ವಂಭರಾ	೨-೮	ಭೂಮಿ
ವಿಷಯ	೨-೧, ೫-೬೩ ಗದ್ಯ	ದೇಶ
ವಿಸ್ರಂಭ	೨-೩೨	ವಿಶ್ವಾಸ, ನಂಬಿಕೆ
ವಿಹಗ	೧-೨೫	ಪಕ್ಷಿ
ವಿಹಂಗ	೧-೧೭ ಗದ್ಯ	,,
ವಿಹಂಗಮ	೧-೩೫	,,
ವಿಹ್ವಲ	೭-೬೫ ಗದ್ಯ	ಕಳವಳ
ವೀಧಿ	೪-೫೬	ಬೀದಿ
ವೃತ್ತಕ	೭-೫೫	ಚರಿತ್ರೆ, ನಡೆವಳಿ
ವೃಂದಾರಕ	೧-೭೪	ಶ್ರೇಷ್ಠ, (ದೇವತೆ)
ವೇತ್ರ	೧-೮೪ ಗದ್ಯ	ಬೆತ್ತ
ವೇದಿಕೆ	೫-೬೫ ಗದ್ಯ	ಜಗಲಿ
ವೇರಾ	೫-೬೪	ಮೇರೆ
ವೇಷ್ಟಿಸು	೧-೭೪	ಸುತ್ತುಗಟ್ಟು
ವೇಟ್ಕುಂ	೧-೯	(ಧಾ..ಬೇಡು) ಬೇಕು
ವೈಮಾನಿಕ	೭-೪೨ ಗದ್ಯ	ವಿಮಾನ ಸಂಚಾರಿ
ವ್ಯಗ್ರ	೩-೪೫, ೪-೫೨	ಕಳವಳ ಹೊಂದಿದ
,,	೮-೨೫ ಗದ್ಯ, ೮-೫೬ ಗ.	ಆಸಕ್ತ
ವ್ಯತಿಕರ	೪-೧೮ ಗದ್ಯ, ೫-೬	ಸಂದರ್ಭ
ವ್ಯಸನ	೧-೩, ೨-೨೮ ಗದ್ಯ	ಅತ್ಯಾಸಕ್ತಿ
ವ್ಯಾಬದ್ಧ	೭-೪೦ ಗದ್ಯ	ನಟ್ಟ, ಕಟ್ಟಿದ
ವ್ರಾತ	೨-೫೭	ಸಮೂಹ

ಶ

ಶಕ್ರ	೧-೧೨	ಇಂದ್ರ
ಶಕ್ರಧನು	೨-೩೪	ಕಾಮನ ಬಿಲ್ಲು
ಶಾಡ್ವಲ	೩-೧೫	ಹಸುರು ಹುಲ್ಲು
ಶಾಬ	೧-೭೩	ಮರಿ
ಶಾಬಕ	೧-೫೦	,,
ಶಾರದ	೫-೪೪	ಬಿಳಿಯ ಕಮಲ
ಶಾರಿಕಾ	೧-೨೫	ಕೊರವಂಕೆ ಹಕ್ಕಿ

ಶಾಲೀನತೆ	೫-೯೩ ಗದ್ಯ	ಲಜ್ಜೆ
ಶಾಲ್ಮಲೀ	೧-೩೮	ಬೂರಗ
ಶಿಖರಿ	೨-೪೯	ಬೆಟ್ಟ
ಶಿಖಂಡ	೫-೯೯ ಗದ್ಯ	ಮುಡಿ
ಶಿಶಿರೋಪಚಾರ	೪-೭೯ ಗದ್ಯ	ಶೈತ್ಯೋಪಚಾರ
ಶೀಕರ	೧-೧	ತುಂತುರು ಹನಿ
ಶೀತೋಷ್ಣಭವನ	೫-೭೯ ಗದ್ಯ	ಧಾರಾಗೃಹ, ಹಿಮಗೃಹ (೬-೪ ಗದ್ಯ)
ಶೀರ್ಯಮಾಣ	೪-೬೨	ಒಡೆದ
ಶುದ್ಧಾಂತ	೧-೯	ಅಂತಃಪುರ
ಶೃಂಖಲೆ	೩-೧೫	ಸಂಕೋಲೆ, ಸರಪಳಿ
ಶ್ರಾಂತಿ	೩-೧೦	ದಣಿವು

ಷ

ಷಂಡ	೧-೩೭ ಗದ್ಯ	ಸಮೂಹ

ಸ

ಸಕ್ಕಿ	೪-೯೪	ಸಾಕ್ಷಿ
ಸದ್ಭಾವ	೧-೨೦, ೪-೧೧೮	ಒಳ್ಳೆಯ ಮನಸ್ಸು, ಒಳ್ಳೆಯತನ
ಸನ್ನಿಧ	೬-೧೨, ೭-೫೪ ಗದ್ಯ	ಸಮೀಪಸ್ಥ
ಸನ್ನಿಹಿತ	೭-೬೦	,,
ಸಪ್ತತಂತು	೨-೨ ಗದ್ಯ	ಯಜ್ಞ
ಸಮನಿಸು	೨-೨೫	ಉಂಟಾಗು
ಸಮಂಚಿತ	೮-೫೪	ಕೂಡಿದ
ಸಮಾಗಮ	೭-೬ ಗದ್ಯ	ಸೇರುವಿಕೆ
ಸಮಾಶ್ವಾಸಿಸು	೭-೫೧ ಗದ್ಯ	ಸಮಾಧಾನಪಡಿಸು
ಸಮಾಸಾದಿತೆ	೭-೨೫ ಗದ್ಯ	ಹತ್ತಿರಕ್ಕೆ ಬಂದವಳು
ಸಮಿತಿ	೧-೨೭	ಸಮೂಹ
ಸಮೀರ	೫-೯೬	ವಾಯು
ಸಮೀಹಿತ	೭-೧೦ ಗದ್ಯ	ಅಪೇಕ್ಷೆ
ಸಮುಪಜಾತ	೭-೬೦ ಗದ್ಯ	ಹುಟ್ಟಿದ
ಸಮೆ	೧-೭೧, ೫-೫೭	ಮಾಡು
ಸಯ್ಪು	೧-೭೫	ಪುಣ್ಯ
ಸರ್ಗ	೫-೧೬	ಸೃಷ್ಟಿ
ಸಸಿ	೪-೧೧೭	ಸಂ.—ಶಶಿ, ಚಂದ್ರ
ಸಾಧ್ವಸ	೮-೫೪	ಭಯ
ಸಾರಿಕೆ	೭-೩೩	ಹೆಣ್ಣು ಗಿಳಿ, ಗೊರವಂಕದ ಹಕ್ಕಿ
ಸಾರೆ	೫-೧೩, ೫-೬೩ ಗದ್ಯ	ಸಮೀಪದಲ್ಲಿ
ಸಾರ್ಚು	೩-೧೫, ೫-೭೩ ಗದ್ಯ	ಸೇರಿಸು

ಸಾಷಾಢ	೧-೮೩	೧. ಪೂರ್ವಾಷಾಢ ಉತ್ತರಾಷಾಢ ನಕ್ಷತ್ರಗಳಿಂದ ಕೂಡಿದ್ದು ೨. ಋಷಿಗಳು ಹಿಡಿಯತಕ್ಕ ಮುತ್ತುಗದ ದಂಡ
ಸಿಕ್ತ	೧-೩೨	ಒದ್ದೆಯಾದ
ಸಿಗ್ಗು	೪-೫೫	ನಾಚಿಕೆ
ಸಿತ	೧-೨೮	ಬೆಳ್ಳಗಿರುವ
ಸಿಪ್ಪು	೫-೪೩ ಗದ್ಯ	ಚಿಪ್ಪು
ಸಿರಿಕಂಡ	೫-೭೮ ಗದ್ಯ	ಶ್ರೀಗಂಧ
ಸೀರೆ	೪-೫೦	ಸಂ.-ಚೀರ, ಬಟ್ಟೆ
ಸೀರ್ಪುರ್	೭-೧೧	ಸಣ್ಣ ಹುಲ್ಲು ಕಡ್ಡಿ
ಸುಟ್ಟುರೆ	೧-೫೬ ಗದ್ಯ	ಸುಂಟರಗಾಳಿ
ಸುಧಾ	೮-೫೫	ಅಮೃತ
ಸುಧಾಸೂತಿ	೫-೫೧	ಚಂದ್ರ
ಸುಪ್ತ	೮-೬	ಮಲಗಿದ
ಸುರಭಿ	೮-೩೯ ಗದ್ಯ	ಸುಗಂಧ
ಸುಲಿಪಲ್	೫-೬೭	ಶುಭ್ರವಾದ ಹಲ್ಲು
ಸುಹೃತ್	೪-೬೯	ಸ್ನೇಹಿತ
ಸೂಟ್	೫-೨೨	ಬಾರಿ, ಸಲ
ಸೃಕ್ವ	೨-೧೩	ಕಟವಾಯಿ
ಸೆಜ್ಜೆವನೆ	೫-೮೫ ಗದ್ಯ, ೭-೩೨	ಮಲಗುವ ಮನೆ (ಶಯ್ಯಾ—ಸೆಜ್ಜೆ)
ಸೆಡೆ	೮-೧೯	ಭಯಪಡು
ಸೆರೆ	೧-೪೯	ರಕ್ತನಾಳ
ಸೇದೆ	೧-೫೯	ಆಯಾಸ
ಸೋಲ್	೪-೯	ಮೋಹ
ಸೌಧ	೮-೨೫	ಮಹಡಿಯ ಮನೆ
ಸೌವಿದಲ್ಲ	೫-೭	ಅಂತಃಪುರವನ್ನು ಕಾಯುವವನು
ಸಂಗತಿ	೧-೩೬	ಸಹವಾಸ
ಸಂಗಳಿಸು	೮-೫೩	ಉಂಟಾಗು
ಸಂಘಾತ	೭-೨	ಸಮೂಹ
ಸಂಛನ್ನ	೧-೭೦	ಮುಚ್ಚಿದ
ಸಂತಾನ	೮-೪೪	ಸಮೂಹ
ಸಂತ್ರಾಸ	೧-೪೬	ಭಯ
ಸಂದೆಗ	೧-೧೦೮	ಸಂದೇಹ
ಸಂಪುಟ	೧-೪೮ ಗದ್ಯ	ಭರಣಿ
ಸಂವರಿಸು	೫-೧೦೪ ಗದ್ಯ	ಒಟ್ಟುಗೂಡಿಸು
ಸಾಂತ್ವ	೪-೧೨೩	ಸಮಾಧಾನ
ಸಿಂಧು	೫-೪೪	ನದಿ
ಸಿಂಧುವಾರ	೫-೫೮	ನಿರ್ಗುಂಡಿ, ಒಂದು ಜಾತಿಯ ಮರ

ಸಿಂಪಿಸು	೫.೪೩	ಚಿಮುಕಿಸು, ಸೂಸು
ಸ್ಕಂಧ	೧.೩೮, ೮.೨೭	ಮರ ಕವಲೊಡೆಯುವ ಸ್ಥಳ
ಸ್ಕಂಧಾವಾರ	೫.೭೪ ಗದ್ಯ	ಸೈನ್ಯ
,,	೫.೯೭ ಗದ್ಯ	ಬೀಡು, ಪಾಳೆಯ
ಸ್ತಬ್ಧ	೬.೧೮ ಗದ್ಯ	ನೆಟ್ಟ, ಸ್ಥಿರವಾದ
ಸ್ನಿಗ್ಧ	೭.೧೧	ನಯವಾದ, ನುಣುಪಾದ
ಸ್ನೇಹ	೫.೩೯	೧. ಮೈತ್ರಿ. ೨. ಜಿಡ್ಡು
ಸ್ಫುಟಿತ	೮.೪ ಗದ್ಯ	ಒಡೆದ, ಬಿರಿದ
ಸ್ವನ	೧.೪೬	ಧ್ವನಿ
ಸ್ವಾಂತ	೧.೪೬	ಮನಸ್ಸು, ಹೃದಯ
ಸ್ವೇದ	೭.೩೬ ಗದ್ಯ	ಬೆವರು


ಹ

ಹನನ	೪.೧೧೬	ಕೊಲೆ
ಹರಿ	೩.೭	ಕುದುರೆ
,,	೧.೩೨	ಸಿಂಹ
ಹರಿಚಂದನ	೮.೫೨	ಹಳದಿ ಬಣ್ಣದ ಗಂಧ
ಹರಿತ	೮.೨೬ ಗದ್ಯ	ಹಸುರು
ಹರಿತಶಿಲಾ	೫.೪೧	ಪಚ್ಚೆಯ ಬಂಡೆ
ಹಸ್ತ	೭.೩೬	ಸಮೂಹ
ಹಾರೀತಕ	೫.೪೧	ಒಂದು ಜಾತಿಯ ಪಾರಿವಾಳ
ಹಾಸ	೩.೨೨	ನಗು
ಹುತವಹ	೧.೭೪	ಅಗ್ನಿ
ಹೃದಯಭವ	೫.೮೪	ಮನ್ಮಥ
ಹೇತು	೮.೪	ಕಾರಣ
ಹೇಷಾ	೭.೦ ಗದ್ಯ	ಕೆನೆಯುವ ಶಬ್ದ

[illegible]

WD 381—GPB—2000—11-9-44




D. No. D-(C)-665

Electronic Mos